ಶನಿವಾರ, ಡಿಸೆಂಬರ್ 18, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಹೊಸ ಅತಿಥಿ**

ಮೈಸೂರಿನ ಚಾಮರಾಜೇಂದ್ರ ಮೃಗಾಲಯಕ್ಕೆ ಹೊಸ ಅತಿಥಿ ಸೇರ್ಪಡೆಯಾಗಿದ್ದು, ಪ್ರಾಚಿ ಹೆಸರಿನ ಜೀಬ್ರಾ ಹೆಣ್ಣು ಮರಿಗೆ ಜನ್ಮ ನೀಡಿದೆ

ಶನಿವಾರ, ಡಿಸೆಂಬರ್ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 349 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**
ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಸ್ವಯಂರಕ್ಷಣೆ ಜ್ಞಾನ ಹಾಗೂ ತಂತ್ರಗಳನ್ನು ಕಲಿಸುವುದರಿಂದ ಮನೋಬಲವನ್ನು ಹೆಚ್ಚಿಸಿ, ವ್ಯಕ್ತಿತ್ವವಿಕಸನಕ್ಕೆ ದಾರಿ ಮಾಡಿಕೊಡಬಹುದು


ಚರ್ಚೆ
ಬಹುರೂಪಿ ರಂಗಾಯಣವನ್ನು ಏಕರೂಪಕ್ಕೆ ಇಳಿಸುವ ಪ್ರಯತ್ನ ಆಗುತ್ತಿದೆಯೇ? 7
ಏಷ್ಯಾ ಹಾಕಿ ಚಾಂಪಿಯನ್‌ಷಿಪ್: ಭಾರತಕ್ಕೆ ಮಣಿದ ಪಾಕ್ 13
‘ಓಮೈಕ್ರಾನ್: ಅನಗತ್ಯ ಜನಸಂಚಾರ ತಪ್ಪಿಸಿ’ 10


| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 57,011 | 16,985 | 76.06 |

19-10-1925 - 17-12-2021

## ಕೇಂದ್ರದ ಮಾಜಿ ಸಚಿವ ಜಾಲಪ್ಪ ವಿಧಿವಶ

ಕೋಲಾರ: ಹಿಂದುಳಿದ ವರ್ಗಗಳ ಮುಖಂಡ, ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪ (97) ಅವರು ಶುಕ್ರವಾರ ರಾತ್ರಿ 7.30ಕ್ಕೆ ನಗರದ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ವಯೋಸಹಜ ಆರೋಗ್ಯ ಸಮಸ್ಯೆಯ ಜತೆಗೆ ಮೂತ್ರಪಿಂಡ ವೈಫಲ್ಯ ಹಾಗೂ ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ತಿಂಗಳ ಹಿಂದೆ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3D, 4

### ರಮೇಶ್ ಕುಮಾರ್ ಮಾತಿಗೆ ದೇಶದ ವಿವಿಧೆಡೆ ಖಂಡನೆ

# ಅತ್ಯಾಚಾರ ಹೇಳಿಕೆಗೆ ಆಕ್ರೋಶ

ನವದೆಹಲಿ (ಪಿಟಿಐ): ‘ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಿದ್ದರೆ ಅತ್ಯಾಚಾರವನ್ನು ಆನಂದಿಸಿ ಎಂಬ ಮಾತಿದೆ’ ಎಂದು ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರು ವಿಧಾನಸಭೆಯಲ್ಲಿ ಗುರುವಾರ ಆಡಿದ್ದ ಮಾತಿಗೆ ದೇಶದಾದ್ಯಂತ ಶುಕ್ರವಾರ ಭಾರಿ ಆಕ್ರೋಶ ವ್ಯಕ್ತವಾಗಿದೆ.

ರಮೇಶ್ ಕುಮಾರ್

ಕೇಂದ್ರ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಲೋಕಸಭೆಯಲ್ಲಿ ವಿಷಯ ಪ್ರಸ್ತಾಪಿಸಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು), ಬಿಜೆಪಿ ಮತ್ತು ಕಾಂಗ್ರೆಸ್‌ನ ಕೆಲವು ಶಾಸಕಿಯರು ರಮೇಶ್ ಕುಮಾರ್ ಹೇಳಿದ್ದನ್ನು ಖಂಡಿಸಿದ್ದಾರೆ.

ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮ ಪಕ್ಷದ ಮುಖಂಡನ ಹೇಳಿಕೆಯ ಬಗ್ಗೆ ಮೌನವಾಗಿದ್ದಾರೆ ಎಂದು ಬಿಜೆಪಿ ಮುಖಂಡರು ಮಾಧ್ಯಮಗೋಷ್ಠಿಯಲ್ಲಿ ಪ್ರಶ್ನಿಸಿದ್ದಾರೆ.

‘ಸ್ತ್ರೀದ್ವೇಷಿಗಳು ಮತ್ತು ಮಹಿಳೆಯರ ಬಗ್ಗೆ ಕ್ರೂರ ಮನಸ್ಥಿತಿಯ ಜನಪ್ರತಿನಿಧಿಗಳು ಇನ್ನೂ ಇದ್ದಾರೆ ಎಂಬುದು ಅತ್ಯಂತ ಬೇಸರ ಮತ್ತು ದುರದೃಷ್ಟಕರ ವಿಚಾರ’ ಎಂದು ಎನ್‌ಸಿಡಬ್ಲ್ಯು ಅಧ್ಯಕ್ಷೆ ರೇಖಾ ಶರ್ಮಾ ಟ್ವೀಟ್ ಮಾಡಿದ್ದಾರೆ.

ಸ್ಮೃತಿ ಇರಾನಿ ಅವರು ಲೋಕಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಸಂದರ್ಭದಲ್ಲಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಲಖಿಂಪುರ ಖೇರಿ ಹಿಂಸಾಚಾರಕ್ಕೆ ಸಂಬಂಧಿಸಿ ವಜಾ ಮಾಡಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದರು. ಫಲಕಗಳನ್ನು ಪ್ರದರ್ಶಿಸುತ್ತಿದ್ದ ಅವರು ಸ್ಮೃತಿ ಅವರಿಗೆ ಅಡ್ಡವಾಗಿ ನಿಂತಿದ್ದರು.

ನಿರ್ದಿಷ್ಟ ಪಕ್ಷವೊಂದಕ್ಕೆ ಸೇರಿದ ಶಾಸಕರೊಬ್ಬರು ಮಹಿಳೆಯರ ಬಗ್ಗೆ ಗುರುವಾರ ನೀಡಿದ ಹೇಳಿಕೆಯನ್ನು ಕರ್ನಾಟಕದ ಎಲ್ಲ ಜನಪ್ರತಿನಿಧಿಗಳು ಖಂಡಿಸುವ ಅಗತ್ಯವಿದೆ ಎಂದು ಸ್ಮೃತಿ ಹೇಳಿದರು. ‘ಮಹಿಳೆಯರ ಪರವಾಗಿ ನಿಜವಾದ ಕಾಳಜಿ ಇದ್ದರೆ, ಮೊದಲು ಇಲ್ಲಿ ನಿಂತು, ದೇಶದ ಮಹಿಳೆಯ ಮೇಲೆ ಅತ್ಯಾಚಾರವಾದರೆ ಅದನ್ನು ಅವರು ಆನಂದಿಸಬೇಕು ಎಂಬ ಹೇಳಿಕೆಯನ್ನು ಖಂಡಿಸಿ’ ಎಂದು ಸ್ಮೃತಿ ಆಕ್ರೋಶ ವ್ಯಕ್ತಪಡಿಸಿದರು.

8ನೇ ಪುಟ ನೋಡಿ

ರಮೇಶ್ ಕುಮಾರ್ ಕ್ಷಮೆ 8

### ಪ್ರಿಯಾಂಕಾ ಅಸಮಾಧಾನ

ಕಾಂಗ್ರೆಸ್ ಮುಖಂಡರಾದ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಅವರು ಟ್ವೀಟ್ ಮಾಡಿ, ರಮೇಶ್ ಕುಮಾರ್ ಹೇಳಿಕೆಯನ್ನು ಖಂಡಿಸಿದ್ದಾರೆ. ‘ರಮೇಶ್ ಕುಮಾರ್ ಅವರ ಹೇಳಿಕೆಯನ್ನು ನಾನು ಖಂಡಿಸುತ್ತೇನೆ. ಹೇಳಲಾಗದ ಇಂತಹ ಪದಗಳನ್ನು ಯಾರಾದರೂ ಹೇಗೆ ಉಚ್ಚರಿಸುತ್ತಾರೆ. ಇದು ಸಮರ್ಥನೀಯ ಅಲ್ಲವೇ ಅಲ್ಲ’ ಎಂದು ಪ್ರಿಯಾಂಕಾ ಟ್ವೀಟ್ ಮಾಡಿದ್ದಾರೆ.

‘ಸದನದ ಪಾಲಕರಾಗಿರುವ ಸ್ಪೀಕರ್ ಮತ್ತು ಹಿರಿಯ ಶಾಸಕರು ಎಲ್ಲರಿಗೂ ಮಾದರಿ ಆಗಬೇಕು ಎಂದು ನಿರೀಕ್ಷಿಸಲಾಗುತ್ತಿದೆ. ಅಂಥವರು ಈ ರೀತಿಯ ಸ್ವೀಕಾರಾರ್ಹವಲ್ಲದ ವರ್ತನೆಯಿಂದ ದೂರ ಇರಬೇಕು’ ಎಂದು ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

**ಕರ್ನಾಟಕ ವಿಧಾನಸಭೆಯ ಸ್ಪೀಕರ್ ಮತ್ತು ಹಿರಿಯ ಶಾಸಕರ ನಡುವೆ ಸದನದಲ್ಲಿ ನಡೆದ ಅತ್ಯಂತ ಆಕ್ಷೇಪಾರ್ಹ ತಮಾಷೆಯನ್ನು ಕಾಂಗ್ರೆಸ್ ಪಕ್ಷ ಒಪ್ಪುವುದಿಲ್ಲ**
**ರಣದೀಪ್ ಸುರ್ಜೇವಾಲಾ**
ಕಾಂಗ್ರೆಸ್ ವಕ್ತಾರ

**ವಿಧಾನಸಭೆಯಲ್ಲಿ ಮಹಿಳೆಯರ ವಿಚಾರಗಳನ್ನು ಪ್ರತಿನಿಧಿಸಲು ಇಂಥವರನ್ನು ಆಯ್ಕೆ ಮಾಡಲಾಗುತ್ತಿದೆ. ಇಂತಹ ಹೇಳಿಕೆಗೆ ಪ್ರತಿಯೊಬ್ಬ ಮಹಿಳೆಯ ಕ್ಷಮೆ ಯಾಚಿಸಬೇಕು**
**ರೇಖಾ ಶರ್ಮಾ,** ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ

### ಚಿನಕುರಳಿ

ಪ್ರಕಾಶ್ ಶೆಟ್ಟಿ




### ಭೂಕಬಳಿಕೆ ಆರೋಪ: ಉಭಯ ಸದನಗಳಲ್ಲೂ ಕಾಂಗ್ರೆಸ್ ಧರಣಿ

# ಬೈರತಿ ರಾಜೀನಾಮೆಗೆ ‘ಕೈ’ ಪಟ್ಟು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮತ್ತು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಆರ್.ಶಂಕರ್ ಅವರ ಮೇಲಿರುವ ಭೂಕಬಳಿಕೆಯ ಆರೋಪದ ವಿಷಯವನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅವಕಾಶ ನಿರಾಕರಿಸಿದ್ದನ್ನು ವಿರೋಧಿಸಿ ವಿಧಾನಮಂಡಲದ ಎರಡೂ ಸದನಗಳಲ್ಲಿ ಕಾಂಗ್ರೆಸ್ ಸದಸ್ಯರು ಶುಕ್ರವಾರ ಧರಣಿ ನಡೆಸಿದರು.

ಸಚಿವ ಬೈರತಿ ಬಸವರಾಜ ಅವರು ರಾಜೀನಾಮೆಗೆ ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದರು. ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಮಾತಿನ ಸಮರ ನಡೆದು ಕಾವೇರಿದ ವಾತಾವರಣ ನಿರ್ಮಾಣವಾಯಿತು. ಗದ್ದಲದಿಂದ ಕಲಾಪ ನಡೆಸಲು ಸಾಧ್ಯವಾಗದಿದ್ದರಿಂದ ಉಭಯ ಸದನಗಳ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಬೈರತಿ ಬಸವರಾಜ

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಷಯವನ್ನು ಪ್ರಸ್ತಾಪಿಸಿದರು. ‘ಈ ವಿಷಯ ನ್ಯಾಯಾಲಯದಲ್ಲಿ ಇರುವುದರಿಂದ ಇಲ್ಲಿ ಪ್ರಸ್ತಾಪಿಸಲು ಅವಕಾಶ ಇಲ್ಲ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನಿಯಮಾವಳಿ ಉಲ್ಲೇಖಿಸಿ ಹೇಳಿದರು.

ಇದನ್ನು ಒಪ್ಪದ ಸಿದ್ದರಾಮಯ್ಯ, ‘ಹಿಂದೆ ಡಿವೈಎಸ್‌ಪಿ ಗಣಪತಿ ಅವರ ಆತ್ಮಹತ್ಯೆ ಪ್ರಕರಣದಲ್ಲಿ, ನ್ಯಾಯಾಲಯದಲ್ಲಿ ಪ್ರಕರಣ ಇದ್ದರೂ ನಿಲುವಳಿ ಸೂಚನೆ ಅಡಿ ಪ್ರಸ್ತಾಪಿಸಲು ಆಗ್ರಹಿಸಿ ನೀವು ಧರಣಿ ಮಾಡಿದಿರಿ. ಈಗ ಸಚಿವರ ಮೇಲೆ ಎಫ್‌ಐಆರ್ ದಾಖಲಾಗಿದೆ, ಸಮನ್ಸ್ ನೀಡಲಾಗಿದೆ. ಆದ್ದರಿಂದ ನಮಗೂ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡಬೇಕು’ ಎಂದು ಪಟ್ಟು ಹಿಡಿದರು. ಸಿದ್ದರಾಮಯ್ಯ ಅವರ ಆಗ್ರಹಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್ ಸದಸ್ಯರು ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

8ನೇ ಪುಟ ನೋಡಿ

## ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ಡಿ.18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ನಾಗರಬಾವಿ 4ನೇ ಬ್ಲಾಕ್, ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಹರ್ಷ ಬಡಾವಣೆ, ಬಿಜಿಎಸ್ ಆಸ್ಪತ್ರೆ ರಸ್ತೆ, ಮೈಸೂರು ಹೆದ್ದಾರಿ, ಹೊಸಹಳ್ಳಿ ರಸ್ತೆ, ರೈಲ್ವೆ ನಿಲ್ದಾಣ ರಸ್ತೆ, ಭುವನೇಶ್ವರಿ ನಗರ, ದೊಡ್ಡಬಸ್ತಿ ಮುಖ್ಯ ರಸ್ತೆ, ಕಲ್ಯಾಣಿ ಬಡಾವಣೆ, ಉಪಾಧ್ಯಾಯ ಬಡಾವಣೆ, ಉಪಕಾರ್ ಬಡಾವಣೆ, ಆರ್‌ಟಿಒ ಮುಖ್ಯ ರಸ್ತೆ, ಆರ್.ಆರ್. ರೆಸಿಡೆನ್ಸಿ ಹಾಗೂ ಎಲೆಕ್ಟ್ರಾನಿಕ್ಸ್ ಸಿಟಿ, ಶೋಭಾ ಅಪಾರ್ಟ್‌ಮೆಂಟ್, ಕೋನಪ್ಪನ ಅಗ್ರಹಾರ, ಚಿಕ್ಕಬೇಗೂರು ಗೇಟ್ ಸುತ್ತಮುತ್ತ ಪ್ರದೇಶಗಳು.

### ವೈವಿಧ್ಯಮಯ ಗೋಷ್ಠಿಗಳು: ರಾಷ್ಟ್ರೀಯ, ಅಂತರರಾಷ್ಟ್ರೀಯ ಸಾಹಿತಿಗಳು ಭಾಗಿ

# ಬೆಂಗಳೂರು ಸಾಹಿತ್ಯ ಉತ್ಸವ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯದ ವಿವಿಧ ಆಯಾಮಗಳನ್ನು ಅನಾವರಣಗೊಳಿಸುವ ಬೆಂಗಳೂರು ಸಾಹಿತ್ಯ ಉತ್ಸವಕ್ಕೆ ಮತ್ತೊಮ್ಮೆ ವೇದಿಕೆ ಸಜ್ಜಾಗಿದೆ.

ವೈವಿಧ್ಯಮಯ ಸಾಹಿತ್ಯ ಮತ್ತು ಸಂಸ್ಕೃತಿ ಬಿಂಬಿಸುವ 10ನೇ ಆವೃತ್ತಿಯ ಈ ಉತ್ಸವ ಇದೇ 18 ಮತ್ತು 19ರಂದು ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ನಡೆಯಲಿದೆ. ಸಾಹಿತ್ಯ ಪ್ರಪಂಚದ ಮನಸ್ಸುಗಳೊಂದಿಗೆ ನಡೆಯುವ ಚರ್ಚೆಗಳು ಚಿಂತನೆಗೆ ಕೊಂಡೊಯ್ಯಲಿವೆ.

ಸಾಹಿತಿಗಳು, ಓದುಗರು, ಪ್ರಕಾಶಕರು, ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರನ್ನು ಒಂದೇ ಸೂರಿನ ಅಡಿಯಲ್ಲಿ ಈ ಉತ್ಸವ ಸೇರಿಸಲಿದೆ. ಅಂತರರಾಷ್ಟ್ರೀಯ ಲೇಖಕರು ಸೇರಿದಂತೆ 160ಕ್ಕೂ ಹೆಚ್ಚು ಸಾಹಿತಿಗಳು, ಭಾಷಣಕಾರರು ಉತ್ಸವದ ಮೆರುಗು ಹೆಚ್ಚಿಸಲಿದ್ದಾರೆ. ನಾಲ್ಕು ವೇದಿಕೆಗಳಲ್ಲಿ ಗೋಷ್ಠಿಗಳು ನಡೆಯಲಿವೆ. ಸಾಹಿತ್ಯದ ಜತೆಗೆ, ಭಾರತೀಯ ಸಿನಿಮಾ, ಸಂಗೀತ ಮತ್ತು ಕಲೆ, ಕ್ರೀಡೆ, ಇತಿಹಾಸ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚಿಂತಕರು ಗೋಷ್ಠಿಗಳಲ್ಲಿ ಚರ್ಚೆ ನಡೆಸಲಿದ್ದಾರೆ.

ಉತ್ಸವದಲ್ಲಿ ಡೇವಿಡ್ ಬಾಲ್ಡಾಚಿ, ಚೇತನ್ ಭಗತ್, ಶಶಿ ದೇಶಪಾಂಡೆ, ಲೋರಿ ಗಾಟ್ಲೀಬ್, ಆಂಡಿ ಗ್ರಿಫಿತ್ಸ್, ವೈರಾಣು ತಜ್ಞ ಗಗನ್‌ದೀಪ್ ಕಾಂಗ್, ಪ್ರಣಯ್ ಲಾಲ್, ರಾಕೇಶ್ ಓಂಪ್ರಕಾಶ್ ಮೆಹ್ರಾ, ಮನೀಶ್ ಮುಂದ್ರಾ, ರಾಬ್ ರೀಚ್, ಬೀರೌಲಟ್, ವಿವೇಕ ಶಾನಭಾಗ್, ಮಾ ಆನಂದ ಶೀಲಾ, ಸಮಂತ್ ಸುಬ್ರಮಣಿಯನ್, ರವಿ ವೆಂಕಟೇಶನ್, ಜೀತ್ ಥೈಲ್ ಸೇರಿದಂತೆ ಹಲವು ಸಾಹಿತಿಗಳು, ಕಲಾವಿದರು ಮತ್ತು ಚಿಂತಕರು ಪಾಲ್ಗೊಳ್ಳಲಿದ್ದಾರೆ.

ಸಾನಿಯಾ ಮಿರ್ಜಾ, ಚಿತ್ರಾ ಬ್ಯಾನರ್ಜಿ ದಿವಾ ಕರುಣಿ, ರೆಮೊ ಫೆರ್ನಾಂಡಿಸ್ ಸೇರಿದಂತೆ ಸುಮಾರು 40 ಲೇಖಕರು ಉತ್ಸವದಲ್ಲಿ ವರ್ಚುವಲ್ ವ್ಯವಸ್ಥೆ ಮೂಲಕ ಭಾಗವಹಿಸಲಿದ್ದಾರೆ. ಪುಸ್ತಕ ಪ್ರದರ್ಶನ ಮತ್ತು ಮಾರಾಟವೂ ಉತ್ಸವದ ಭಾಗವಾಗಿದೆ.

**ಮಾಹಿತಿಗೆ:** www.bangaloreliteraturefestival.org ವೆಬ್‌ಸೈಟ್ ವೀಕ್ಷಿಸಬಹುದು.

ನಗರದಲ್ಲಿ ಆರಂಭವಾಗಲಿರುವ ಬೆಂಗಳೂರು ಸಾಹಿತ್ಯ ಉತ್ಸವದ ಅಂಗವಾಗಿ ಸ್ವಯಂ ಸೇವಕರು ಪುಸ್ತಕ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದರು –ಪ್ರಜಾವಾಣಿ ಚಿತ್ರ

**ಮುಖ್ಯಾಂಶಗಳು**
- ಬೆಳಿಗ್ಗೆ 10ಕ್ಕೆ ಉತ್ಸವಕ್ಕೆ ಚಾಲನೆ
- ಪ್ರವೇಶ ಉಚಿತ
- ಗೋಷ್ಠಿಗಳ ನೇರಪ್ರಸಾರ ಇಲ್ಲ

## ‘ಕರ್ನಾಟಕದ ಬಹುಭಾಷಿಕ ಜಗತ್ತು’

ಉತ್ಸವದಲ್ಲಿ ಈ ಬಾರಿ ನಾಡಿನ ಬಹುಭಾಷೆಗಳ ಕುರಿತ ವಿವಿಧ ಗೋಷ್ಠಿಗಳು ಗಮನ ಸೆಳೆಯಲಿವೆ.

ಉತ್ಸವದ ಮೊದಲ ದಿನವಾದ ಶನಿವಾರ ‘ಭಾರತೀಯ ಬಹುಭಾಷಿಕತ್ವದ ಭವಿಷ್ಯ’ ಕುರಿತು ಗೋಷ್ಠಿ ಏರ್ಪಡಿಸಲಾಗಿದೆ. ಹಿರಿಯ ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಹಾಗೂ ಶಕೀರಾ ಜಬೀನ್. ಬಿ ಅವರು ಚರ್ಚೆ ನಡೆಸಿಕೊಡಲಿದ್ದಾರೆ.

ಕೊರಗ, ಕೊಂಕಣಿ ಭಾಷೆಗಳ ಕುರಿತು ಚರ್ಚೆಗಳು ನಡೆಯಲಿವೆ. ‘ಕೊಂಕಣಿ: ಒಂದು ಭಾಷೆ, ಹಲವು ಲಿಪಿ’ ಗೋಷ್ಠಿ ಆಯೋಜಿಸಲಾಗಿದೆ. ಈ ಗೋಷ್ಠಿಯಲ್ಲಿ ಈ ಸಾಲಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ ಮಾವಜೊ, ಮೆಲ್ವಿನ್ ರೋಡ್ರಿಗಸ್ ಹಾಗೂ ವಿವೇಕ ಶಾನಭಾಗ್ ಪಾಲ್ಗೊಳ್ಳಲಿದ್ದಾರೆ. ಕೊಡಗು, ತುಳುನಾಡಿನ ಪರಂಪರೆ ಕುರಿತ ಗೋಷ್ಠಿ ನಡೆಯಲಿದೆ ಕಲ್ಯಾಣ ಕರ್ನಾಟಕದಲ್ಲಿ ಬಳಕೆಯಲ್ಲಿರುವ ದಖನಿ ಉರ್ದು ಭಾಷೆ ಗೋಷ್ಠಿಯನ್ನು ಎಂ.ಎನ್. ಸಯೀದ್ ಮತ್ತು ಕಾರ್ತಿಕ್. ಎಂ ನಡೆಸಿಕೊಡಲಿದ್ದಾರೆ.

‘ಡಿಜಿಟಲ್ ಸಾಹಿತ್ಯ ಕ್ರಾಂತಿ’ ಕುರಿತ ಚರ್ಚೆಯೂ ಗಮನ ಸೆಳೆಯಲಿದೆ. ಬನಶಂಕರಿ ಕುಲಕರ್ಣಿ, ಎಸ್.ಶ್ರೀನಿವಾಸ ಶೆಟ್ಟಿ, ರೋಹಿಣಿ ರಂಗನಾಥನ್, ಕೆ.ವಿ. ಕಸ್ತೂರಿ ರಾಮ್ ಮತ್ತು ಪ್ರತಿಭಾ ನಂದಕುಮಾರ್ ಈ ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.

ವಿಮರ್ಶಕ ರಾಜೇಂದ್ರ ಚೆನ್ನಿ ಅವರು ‘ಸಕಲ ಜೀವಾತ್ಮಗಳ ಲೇಸನ್ನೇ ಬಯಸುತ್ತಾ’ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಲಕ್ಕಿ ಕನ್ನಡದ ವೈಶಿಷ್ಟ್ಯವನ್ನು ಅಕ್ಷತಾ ಕೃಷ್ಣಮೂರ್ತಿ ಹಾಗೂ ಫಲ್ಗುಣ ಗೌಡ ತೆರೆದಿಡಲಿದ್ದಾರೆ.

ಭಾನುವಾರದ ಮೊದಲ ಗೋಷ್ಠಿಯಲ್ಲಿ ‘ಕತೆಯೆಂಬುದು ಆತ್ಮಕತೆಯೂ ಹೌದು’ ಎಂಬ ವಿಷಯವಾಗಿ ಕತೆಗಾರರಾದ ಜೋಗಿ ಮತ್ತು ಜಿ.ಎನ್. ಮೋಹನ್ ನಡುವೆ ಸಂವಾದ ನಡೆಯಲಿದೆ.

ಹವ್ಯಕ ಕನ್ನಡದ ಸೊಗಡು– ಸೊಲ್ಲು ಕುರಿತು ತಾಳ್ತಜೆ ವಸಂತಕುಮಾರ್ ಮತ್ತು ಪಾದೆಕಲ್ಲು ವಿಷ್ಣುಭಟ್ಟ ವಿಚಾರ ಮಂಡಿಸಲಿದ್ದಾರೆ.

‘ಎಲ್ಲೆ ಇಲ್ಲದ ಕಲ್ಪನೆ’ ಕುರಿತ ಗೋಷ್ಠಿಯಲ್ಲಿ ಶಾಂತಲಾ ಅನಿಲ್ ಮತ್ತು ವಿಠ್ಠಲ ಶೆಣೈ, ಬ್ಯಾರಿ ಕುರಿತು ಬಿ.ಎಂ. ಹನೀಫ್ ಮತ್ತು ಎನ್.ಎ.ಎಂ. ಇಸ್ಮಾಯಿಲ್, ಕುಂದಾಪ್ರ ಕನ್ನಡ ಕುರಿತು ಪಂಜು ಗಂಗೊಳ್ಳಿ, ಎಸ್.ಎ. ಕೃಷ್ಣಯ್ಯ ಮತ್ತು ಸುಶೀಲಾ ಪುನೀತ್, ಸಂಕೇತಿ ಕುರಿತು ದೀಪಾ ಗಣೇಶ್, ನವಾಯತಿ ಕುರಿತು ಸೈಯದ್ ಜಮೀರುಲ್ಲಾ ಷರೀಫ್, ಸೈಯದ್ ಗೌಸ್ ಚರ್ಚೆ ನಡೆಸಲಿದ್ದಾರೆ.

## ಬೆಂಗಳೂರು ಚಲನಚಿತ್ರೋತ್ಸವ; ಫೆಬ್ರುವರಿಯಲ್ಲಿ ಮುಹೂರ್ತ

ಬೆಂಗಳೂರು: ಬೆಂಗಳೂರು 13ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮುಂದಿನ ವರ್ಷ ಫೆಬ್ರವರಿಯಲ್ಲಿ ನಡೆಯಲಿದೆ.

ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಈ ಚಿತ್ರೋತ್ಸವ ನಡೆಯುತ್ತಿದೆ. ಈ ವರ್ಷವೇ ಚಿತ್ರೋತ್ಸವ ನಡೆಸಲು ಸಿದ್ಧತೆ ನಡೆದಿತ್ತಾದರೂ ಕೋವಿಡ್ ಕಾರಣದಿಂದಾಗಿ ಚಿತ್ರೋತ್ಸವ ಮುಂದಕ್ಕೆ ಹೋಗಿತ್ತು.

ಹೊಸ ವೇಳಾಪಟ್ಟಿಯಂತೆ ಚಲನಚಿತ್ರೋತ್ಸವದ ಸಿದ್ಧತೆಗಳು ಆರಂಭವಾಗಿದೆ. ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ. ಚಿತ್ರೋತ್ಸವದ ಸ್ಪರ್ಧಾತ್ಮಕ ವಿಭಾಗಕ್ಕೆ ಚಲನಚಿತ್ರಗಳನ್ನು (ಫೀಚರ್‌ಫಿಲ್ಮ್) ಆಹ್ವಾನಿಸಲಾಗಿದೆ. ಏಷ್ಯಾದ ಎಲ್ಲ ಭಾಷೆ, ಉಪಭಾಷೆಗಳ ಚಿತ್ರಗಳನ್ನು ಈ ವಿಭಾಗದಲ್ಲಿ ಪ್ರದರ್ಶಿಸಲು ಅವಕಾಶವಿದೆ. ವಿಜೇತ ಚಿತ್ರಗಳಿಗೆ ನಗದು ಬಹುಮಾನ, ಫಲಕ ಮತ್ತು ಪ್ರಮಾಣಪತ್ರನೀಡಲಾಗುತ್ತದೆ.

**ಅರ್ಹತೆ:** ಚಿತ್ರಗಳು 2021ರ ಜ. 1ರಿಂದ ಇದೇ ವರ್ಷ ನ. 30ರ ಒಳಗೆ ನಿರ್ಮಾಣಗೊಂಡಿರಬೇಕು ಮತ್ತು 70 ನಿಮಿಷ ಅವಧಿಯದ್ದಾಗಿರಬೇಕು. ನಿರ್ಮಾಣ ದಿನಾಂಕವನ್ನು ಚಲನ ಚಿತ್ರ ಪ್ರಮಾಣೀಕರಣ ಮಂಡಳಿಯ ಪ್ರಮಾಣ ಪತ್ರದ ಆಧಾರದಲ್ಲಿ ಪರಿಗಣಿಸಲಾಗುತ್ತದೆ. ಡಿ. 27ರ ಒಳಗೆ ಚಿತ್ರಗಳನ್ನು ಸ್ಪರ್ಧಾ ವಿಭಾಗಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅಧಿಕೃತ ವೆಬ್ ಸೈಟ್ Biffes.orgಗೆ ಭೇಟಿ ನೀಡಬಹುದು.

ಬೆಂಗಳೂರಿನ 4 ಕಡೆಗಳಲ್ಲಿ 14 ತೆರೆಗಳಲ್ಲಿ 200ರಷ್ಟು ಚಿತ್ರಗಳು ಪ್ರದರ್ಶನ ಕಾಣಲಿವೆ. ವಿವಿಧ ಚಿತ್ರಗಳ 400ಕ್ಕೂ ಹೆಚ್ಚು ಪ್ರದರ್ಶನಗಳು ನಡೆಯಲಿವೆ ಎಂದು ಚಿತ್ರೋತ್ಸವದ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

## ಇಂದು ವೈದ್ಯರಿಂದ ಉಪನ್ಯಾಸ

ಬೆಂಗಳೂರು: ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರವು ‘ಕಿವಿ, ಮೂಗು, ಗಂಟಲು ಸಮಸ್ಯೆ ಹಾಗೂ ಪರಿಹಾರಗಳು’ ಕುರಿತು ಉಪನ್ಯಾಸವನ್ನು ವಿದ್ಯಾರಣ್ಯಪುರದ ವಿದ್ಯಾಗಣಪತಿ ದೇವಸ್ಥಾನದಲ್ಲಿ ಡಿ.18ರಂದು ಸಂಜೆ 7.30ಕ್ಕೆ ಆಯೋಜಿಸಿದೆ.

ಕಿವಿ, ಮೂಗು ಹಾಗೂ ಗಂಟಲು ತಜ್ಞ ಡಾ.ಕೃಷ್ಣ ಪ್ರಸಾದ್ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದ ನಂತರ ವಿದ್ಯಾಗಣಪತಿ ದೇವಸ್ಥಾನದ ವತಿಯಿಂದ ನೂತನ ಕ್ಯಾಲೆಂಡರ್ ಬಿಡುಗಡೆ ನಡೆಯಲಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷ ಎ.ರವಿ ಕ್ಯಾಲೆಂಡರ್ ಬಿಡುಗಡೆ ಹಾಗೂ ಉಚಿತ ವಿತರಣೆ ಮಾಡಲಿದ್ದಾರೆ.

‘ರಾತ್ರಿ 8 ಗಂಟೆಗೆ ನಡೆಯುವ ಸತ್ಯನಾರಾಯಣ ಸ್ವಾಮಿ ಪೂಜೆಯಲ್ಲಿ ಭಕ್ತಾದಿಗಳು ಭಾಗವಹಿಸಬಹುದು’ ಎಂದು ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್.ಅಶ್ವತ್ಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ**



# ಸಂಘಟನಾ ಚತುರ ತಿಬ್ಬೇಗೌಡ

ಸಮಾಜ ಸೇವೆಗೆ ಜೀವ ಮುಡಿಪಾಗಿಟ್ಟು, ಸಮಾಜಕ್ಕೆ ಏನಾದರೂ ಕೊಡುಗೆ ನೀಡಲೇಬೇಕೆಂಬ ಹಠ, ಪಣತೊಟ್ಟು ನಿರಂತರ ಸಕ್ರಿಯವಾಗಿ ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಾಂಗ್ರೆಸ್ ಪಕ್ಷದ ಕಟ್ಟಾಳು ಎಂ.ತಿಬ್ಬೇಗೌಡ.

ತಿಬ್ಬೇಗೌಡ ಅವರ ಸಮಾಜಮುಖಿ ಜನಸೇವೆಯನ್ನು ಗುರುತಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡಿದ್ದಾರೆ.

ರಾಜರಾಜೇಶ್ವರಿ ನಗರದ ಗಲ್ಲಿ, ಗಲ್ಲಿಗಳಲ್ಲಿಯೂ ಚಿರಪರಿಚಿತರಾಗಿರುವ ತಿಬ್ಬೇಗೌಡ ಅವರು ಜನಪರ ಸೇವಾ ಕಾರ್ಯಗಳಿಂದಲೇ ಪ್ರಸಿದ್ಧರು. ಕಷ್ಟ ಹೇಳಿಕೊಂಡು ಬರುವ ಜನರಿಗೆ ಬರಿ ಕೈಯಲ್ಲಿ ಕಳುಹಿಸದ ಕೊಡುಗೈ ದಾನಿ.

ಬೆಂಗಳೂರು ಸೇರಿದಂತೆ ಕರ್ನಾಟಕದ ನಾನಾ ಮೂಲೆಗಳಲ್ಲಿ ಪಕ್ಷದ ಸಂಘಟನೆಯ ಮೂಲಕ ಕಾರ್ಯಕರ್ತರನ್ನು ಹುರಿದುಂಬಿಸಿ ಕರ್ನಾಟಕ ಹಾಗೂ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಬೇಕು ಎಂಬ ಮನೋಸಂಕಲ್ಪದಿಂದ ಹಗಲಿರುಳು ಶ್ರಮಿಸಿದ ಅನೇಕ ನಾಯಕರಲ್ಲಿ ಎಂ.ತಿಬ್ಬೇಗೌಡ ಅವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಎಂ.ತಿಬ್ಬೇಗೌಡರು ಕೆಪಿಸಿಸಿ ರಾಜ್ಯ ಪ್ರಚಾರ ಸಮಿತಿ ಸಂಚಾಲಕರಾಗಿ, ಚುನಾವಣೆ ಸಮಿತಿ ಸದಸ್ಯರಾಗಿ, ಕೆಪಿಸಿಸಿ ರಾಜ್ಯ ಸಮಿತಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಜರಾಜೇಶ್ವರಿ ನಗರದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಓಟು ಕೇಳಲು, ಚುನಾವಣೆಯಲ್ಲಿ ಕೆಲಸ ಮಾಡಲು ಕಾರ್ಯಕರ್ತರೇ ಇಲ್ಲದ ಸಮಯದಲ್ಲಿ ಸ್ವತಃ ಬಾವುಟ ಕಟ್ಟುವ ಮೂಲಕ ಪಕ್ಷದ ಕೆಲಸ ಮಾಡಿದ್ದಾರೆ. ಹೋರಾಟದ ಮೂಲಕ ಎಲ್ಲರ ಮನಸೆಳೆದು, ಪ್ರತಿ ಮನೆಮನೆಗೂ ತೆರಳಿ ಕಾಂಗ್ರೆಸ್ ಪಕ್ಷದ ಬಗ್ಗೆ ಅರಿವು ಮೂಡಿಸಿ, ಹುರಿದುಂಬಿಸಿ ಪಕ್ಷ ಕಟ್ಟುವ ಕಾಯಕ ಮಾಡಿದ್ದಾರೆ.

**ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್**

ಕೋವಿಡ್ ಮೊದಲನೇ ಮತ್ತು ಎರಡನೇ ಅಲೆಯ ಲಾಕ್‌ಡೌನ್ ವೇಳೆ ಬಡವರು, ಕೂಲಿ ಕಾರ್ಮಿಕರು, ಶ್ರಮಿಕರು, ಕೊಳಗೇರಿ ನಿವಾಸಿಗಳು, ಜನಸಾಮಾನ್ಯರು, ಗಾರ್ಮೆಂಟ್ಸ್, ಆಟೋರಿಕ್ಷಾ, ಟೆಂಪೊ ಚಾಲಕರು ಹಾಗೂ ಮಧ್ಯಮ ವರ್ಗದವರು ಸಂಕಷ್ಟಕ್ಕೀಡದರು. ಆಗ ಅವರ ನೆರವಿಗೆ ಧಾವಿಸಿ ಪ್ರತಿನಿತ್ಯ ಸಾವಿರಾರು ಜನರಿಗೆ ಆಹಾರ ಪೊಟ್ಟಣಗಳನ್ನು ವಿತರಿಸಿದ್ದಾರೆ. ಜೊತೆಗೆ ನೂರಾರು ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ ಮಾಡಿದ್ದಾರೆ. ಇಂದಿಗೂ ಪ್ರತಿನಿತ್ಯ ಅವಶ್ಯಕತೆ ಇರುವ ಕಡುಬಡವರಿಗೆ ದಿನಸಿ ಕಿಟ್ ವಿತರಣೆ ಮಾಡಿಕೊಂಡು ಬರುತ್ತಿದ್ದಾರೆ. ಸಂಕಷ್ಟಕ್ಕೆ ಸಿಲುಕಿದ ಕೂಲಿ ಕಾರ್ಮಿಕರೇ ಇರುವ ಸ್ಥಳಕ್ಕೆ ತೆರಳಿ ಊಟ, ಟ್ಯಾಂಕರ್ ಮೂಲಕ ನೀರಿನ ಸೌಲಭ್ಯ ಕಲ್ಪಿಸಿದ್ದಾರೆ.

ಕ್ಷೇತ್ರದಲ್ಲಿ ತೊಂದರೆಗೊಳಗಾಗಿರುವ ಮಹಿಳೆಯರು, ಯುವತಿಯರಿಗೆ ಮಾರ್ಗದರ್ಶಕರಾಗಿ ಟೈಲರಿಂಗ್, ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಆರ್ಥಿಕ ಸಹಾಯ ನೀಡುತ್ತಿದ್ದಾರೆ. ನೂರಾರು ಮಹಿಳೆಯರಿಗೆ ಹೊಲಿಗೆ ಯಂತ್ರ, ಅಂಗವಿಕಲರಿಗೆ ತ್ರಿಚಕ್ರದ ಬೈಸಿಕಲ್, ಕೃತಕ ಕಾಲು ಜೋಡಣೆ, ಹತ್ತಾರು ಜನರಿಗೆ ಆಟೋಗಳನ್ನು ವೈಯಕ್ತಿಕವಾಗಿ ಕೊಡಿಸಿದ್ದಾರೆ.

## ಬಡವರಿಗೆ ಸಹಾಯಹಸ್ತ

ಕೋವಿಡ್ ಮತ್ತು ಇತರೆ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಕೋವಿಡ್ ಸಂದರ್ಭದಲ್ಲಿ ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ. ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ ಸಾವಿರಾರು ಜನರಿಗೆ ಮಾಸ್ಕ್, ಸ್ಯಾನಿಟೈಸರ್ ವಿತರಿಸಿದ್ದಾರೆ. ಐದು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಅಕ್ಕಿ, ಬೇಳೆ, ಎಣ್ಣೆ, ಗೋಧಿ, ರವೆ, ಸಕ್ಕರೆ, ಮಸಾಲೆ ಪದಾರ್ಥಗಳು, ಸೋಪು, ತರಕಾರಿಗಳನ್ನು ಒಳಗೊಂಡ ದಿನಸಿಕಿಟ್ ವಿತರಣೆ ಮಾಡಿದ್ದಾರೆ. ಪ್ರತಿ ನಿತ್ಯ ನಿರ್ಗತಿಕರಿಗೆ ದಿನಸಿಕಿಟ್, ಔಷಧಿ ವಿತರಣೆ ಮಾಡಿಕೊಂಡು ಬರುತ್ತಿದ್ದಾರೆ.

ಕುಸುಮಾ ಎಚ್.

ಬಡವರಿಗೆ ನೆರವು ವಿತರಣೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಹನುಮಂತರಾಯಪ್ಪ, ಎಚ್. ಕುಸುಮಾ, ತಿಬ್ಬೇಗೌಡ, ಎಂ. ರಾಜ್‌ಕುಮಾರ್, ಬಿ.ಎಚ್. ಚಂದ್ರಶೇಖರ್ ಹಾಗೂ ಇತರರು ಇದ್ದಾರೆ

## ಹುಟ್ಟೂರಿಗೆ ಕೊಡುಗೆ

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ತೊರೆಬೊಮ್ಮನಹಳ್ಳಿ ಮಾದೇಗೌಡ, ಗೌರಮ್ಮ ದಂಪತಿಯ ಮೂರನೇ ಮಗನಾಗಿರುವ ತಿಬ್ಬೇಗೌಡ ಅವರು ಬಿ.ಇ ಪದವೀಧರರು. ಸ್ವರ್ಣಭಾರತಿ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾಗಿ, ಅನ್ನಪೂರ್ಣ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕರಾಗಿ, ರಾಜ್ಯ ವಸತಿ ಮಹಾಮಂಡಲದ ನಿರ್ದೇಶಕರಾಗಿದ್ದಾಗ ಸಾವಿರಾರು ಜನರಿಗೆ ಸಾಲ ಸೌಲಭ್ಯ ದೊರಕಿಸಿಕೊಡುವ ಮೂಲಕ, ಸ್ವಯಂ ಉದ್ಯೋಗ ಕಟ್ಟಿಕೊಳ್ಳಲು ಸಹಾಯ ಮಾಡಿದ್ದಾರೆ.

ಮದ್ದೂರು ತಾಲ್ಲೂಕಿನ ಜನತೆಗೆ ಏನಾದರೂ ಸಹಾಯ ಮಾಡಬೇಕೆಂಬ ಹಂಬಲ ಇಟ್ಟುಕೊಂಡಿರುವ ತಿಬ್ಬೇಗೌಡರು ಕೊತ್ತನಹಳ್ಳಿ ಕೆರೆಗೆ ನೀರು ತುಂಬಿಸುವ ಕೆಲಸ ಮಾಡಿದ್ದಾರೆ. ಇದರಿಂದಾಗಿ, ಎರಡು ಸಾವಿರ ಎಕರೆಯಲ್ಲಿ ಬೆಳೆ ಬೆಳೆಯಲು ಸಾಧ್ಯವಾಗಿದೆ.

## ದೇಗುಲ ಅಭಿವೃದ್ಧಿಗೆ ನೆರವು

ತಿಬ್ಬೇಗೌಡ ಅವರು ತಮ್ಮ ಮೂವರು ಸ್ನೇಹಿತರ ಜೊತೆಗೂಡಿ ರಾಜರಾಜೇಶ್ವರಿನಗರದ ಮುಳಕಟ್ಟಮ್ಮ ದೇವಾಲಯಕ್ಕೆ ಜಮೀನು ಖರೀದಿಸಿ ನೀಡಿದ್ದಾರೆ. ಅಲ್ಲದೇ ಹಲವಾರು ದೇವಾಲಯಗಳ ಅಭಿವೃದ್ಧಿ ಕಾರ್ಯಗಳಲ್ಲಿ ಕೈಜೋಡಿಸಿದ್ದಾರೆ. ಹಲವು ದೇವಸ್ಥಾನಗಳಿಗೆ ಗೋಪುರ ನಿರ್ಮಾಣ, ಜೀರ್ಣೋದ್ದಾರ, ಅಭಿವೃದ್ಧಿ ಕಾರ್ಯಗಳಿಗೆ ನೆರವು, ಶಾಲೆ ಕಟ್ಟಡಗಳ ದುರಸ್ತಿ, ಹೆಚ್ಚುವರಿಯಾಗಿ ಕೊಠಡಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಅಲ್ಲದೇ ಶಾಲಾ-ಕಾಲೇಜುಗಳ ನೂರಾರು ಮಕ್ಕಳ ಶುಲ್ಕ ಭರಿಸಿದ್ದಾರೆ. ಜತೆಗೆ, ಸಮವಸ್ತ್ರ, ಲೇಖನ ಸಾಮಗ್ರಿಗಳು, ನೋಟ್ ಬುಕ್, ಬ್ಯಾಗ್ ವಿತರಣೆ ಮಾಡಿದ್ದಾರೆ.

## ತಳಮಟ್ಟದಿಂದ ಪಕ್ಷ ಕಟ್ಟುವ ಸಂಘಟಕ

ತಿಬ್ಬೇಗೌಡ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಸಂಸದ ಡಿ.ಕೆ.ಸುರೇಶ್ ಅವರುಗಳ ಸಲಹೆ, ಮಾರ್ಗದರ್ಶನ ಹಾಗೂ ಸಹಕಾರದೊಂದಿಗೆ ಪಕ್ಷ ಸಂಘಟನೆಗೆ ಪಣತೊಟ್ಟು ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬೇರೂರುವಂತೆ ಮಾಡುತ್ತಿರುವ ಚತುರ ಎಂದರೆ ತಪ್ಪಾಗಲಾರದು. ಕಾಂಗ್ರೆಸ್ ಪಕ್ಷದ ನಿಷ್ಠಾವಂತ, ಇವರನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳಬೇಕು, ಇಂತಹವರು ಪಕ್ಷಕ್ಕೆ ಅವಶ್ಯಕ. ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಪಕ್ಷದ ಏಳಿಗೆ, ಅಭಿವೃದ್ಧಿಗಾಗಿ, ನಾಯಕತ್ವ ಬೆಳಸಲು ಎಲೆ ಮರೆಕಾಯಿಯಂತೆ ದುಡಿಯುತ್ತಿರುವ ತಿಬ್ಬೇಗೌಡ ಅವರು ಒಬ್ಬ ಸಮಾಜ ಸೇವಕ. ಬಲಗೈಯಲ್ಲಿ ಕೊಟ್ಟಿರುವುದು, ಎಡಗೈಗೆ ಗೊತ್ತಾಗಬಾರದಂತೆ ನಿರಂತರ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷ ಸಂಘಟನೆಗಾಗಿ ಸೈಕಲ್ ಜಾಥಾ

**ಸಂಸದ ಡಿ.ಕೆ.ಸುರೇಶ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು**

# ಬ್ರಾಹ್ಮಣ ಮಹಾಸಭಾ: ಕೊನೆಯ ಹಂತದ ಚುನಾವಣೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೊನೆಯ ಹಂತದ ಚುನಾವಣೆ ಇದೇ 19ರಂದು ನಗರದಲ್ಲಿ ನಡೆಯಲಿದೆ.

ಈಗಾಗಲೇ ಮೈಸೂರು, ಹಾಸನ, ಶಿವಮೊಗ್ಗ, ಹುಬ್ಬಳ್ಳಿ, ರಾಯಚೂರು ಕೇಂದ್ರಗಳಲ್ಲಿ ಡಿ.12ರಂದು ಮತದಾನ ನಡೆದಿದೆ.

ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆಯುತ್ತಿದೆ. ಅಧ್ಯಕ್ಷ ಸ್ಥಾನಕ್ಕೆ ಅಶೋಕ್ ಹಾರನಹಳ್ಳಿ, ಎಸ್. ರಘುನಾಥ್ ಮತ್ತು ಆರ್.ಲಕ್ಷ್ಮೀಕಾಂತ್ ಅವರು ಸ್ಪರ್ಧಿಸಿದ್ದು, ಮೂವರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ.

ಪ್ರಸ್ತುತ ಜಾರಿಯಲ್ಲಿರುವ ಅಧ್ಯಕ್ಷೀಯ ಮಾದರಿ ಚುನಾವಣೆಯನ್ನು ಅಂತ್ಯಗೊಳಿಸಿ ಸಮುದಾಯದ ಎಲ್ಲರನ್ನು ಒಳಗೊಂಡಂತೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮಹಾಸಭಾವನ್ನು ಮುನ್ನಡೆಸುವುದೇ ಈ ಬಾರಿಯ ಚುನಾವಣೆಯ ಪ್ರಮುಖ ವಿಷಯವಾಗಿದೆ.

ಎಸ್.ರಘುನಾಥ್

ಆರ್. ಲಕ್ಷ್ಮೀಕಾಂತ್

ಅಶೋಕ್ ಹಾರನಹಳ್ಳಿ

ಅಧ್ಯಕ್ಷರಾಗಿ ಆಯ್ಕೆಯಾದವರು ತಮ್ಮ ಆಪ್ತರನ್ನು ಮಹಾಸಭಾದ ಪದಾಧಿಕಾರಿಗಳ ಹುದ್ದೆಗೆ ನೇಮಕ ಮಾಡುವುದು ಸಾಮಾನ್ಯವಾಗಿದೆ. ಈ ವ್ಯವಸ್ಥೆ ಬದಲಾವಣೆಯಾಗಬೇಕು ಎನ್ನುವ ಚರ್ಚೆಯು ಚುನಾವಣೆ ಸಂದರ್ಭದಲ್ಲಿ ನಡೆದಿದೆ. ಅಧ್ಯಕ್ಷ ಹುದ್ದೆಗೆ ಮಾತ್ರವಲ್ಲ, ಎಲ್ಲ ಪದಾಧಿಕಾರಿಗಳ ಹುದ್ದೆಗಳಿಗೂ ಚುನಾವಣೆ ನಡೆಸುವ ವ್ಯವಸ್ಥೆ ಜಾರಿಗೊಳಿಸುವುದು ಮತ್ತು ಬೈಲಾ ತಿದ್ದುಪಡಿ ವಿಷಯವನ್ನು ಅಭ್ಯರ್ಥಿಗಳು ಮತದಾರರ ಮುಂದೆ ಪ್ರಸ್ತಾಪಿಸಿದ್ದಾರೆ.

ಜತೆಗೆ, ಶ್ರೀ ಗುರು ರಾಘವೇಂದ್ರ ಮತ್ತು ವಶಿಷ್ಟ ಬ್ಯಾಂಕ್‌ಗಳಲ್ಲಿ ನಡೆದಿರುವ ವಂಚನೆ ಪ್ರಕರಣಗಳು ಸಹ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಪ್ರಮುಖ ವಿಷಯವಾಗಿ ಚರ್ಚೆಯಾಗಿವೆ.

ರಾಜ್ಯದಲ್ಲಿ ಒಟ್ಟು 41 ಸಾವಿರ ಮಂದಿ ಮತದಾರರಿದ್ದಾರೆ. ಇದರಲ್ಲಿ 27 ಸಾವಿರ ಮತದಾರರು ಬೆಂಗಳೂರಿನಲ್ಲೇ ಇದ್ದಾರೆ.

ಡಿ.19ರಂದು ನಡೆಯುವ ಕೊನೆಯ ಹಂತದ ಮತದಾನಕ್ಕೆ ನಗರದ ಪಂಪ ಮಹಾಕವಿ ರಸ್ತೆಯ ಶಂಕರಪುರದಲ್ಲಿನ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಮತದಾನಕ್ಕೆ ಸಮಯ ನಿಗದಿಪಡಿಸಲಾಗಿದೆ. ಇದೇ ದಿನ ಮತ ಎಣಿಕೆಯೂ ನಡೆಯಲಿದೆ.

## ಸರ್ಕಾರಿ ಶಾಲೆ: ಒಂದೇ ದಿನ ₹ 1 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

**ಹೊಳಲ್ಕೆರೆ:** ತಾಲ್ಲೂಕಿನ ಸರ್ಕಾರಿ ಶಾಲೆಗಳಿಗೆ ಶುಕ್ರವಾರ ಒಂದೇ ದಿನ ಸುಮಾರು ₹ 1 ಕೋಟಿ ದೇಣಿಗೆ ಸಂಗ್ರಹವಾಗಿದೆ!

ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಶುಕ್ರವಾರ ಏಕಕಾಲದಲ್ಲಿ 'ನಮ್ಮ ಶಾಲೆ, ನಮ್ಮ ಕೊಡುಗೆ' ಕಾರ್ಯಕ್ರಮ ನಡೆಸಲಾಯಿತು. ಪ್ರತಿ ಗ್ರಾಮದ ಶಾಲೆಗಳಲ್ಲೂ ದಾನಿಗಳು, ಶಿಕ್ಷಣಾಸಕ್ತರನ್ನು ಕರೆಸಿ ಕಾರ್ಯಕ್ರಮ ನಡೆಸಲಾಯಿತು. ಪೋಷಕರು, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪರಿಕರಗಳನ್ನು ದಾನವಾಗಿ ನೀಡಿದರು.

ತಾಲ್ಲೂಕಿನ ಎಚ್.ಡಿ. ಪುರ ಸರ್ಕಾರಿ ಶಾಲೆಗೆ ಗ್ರಾಮಸ್ಥರು ₹ 4.2 ಲಕ್ಷ ದೇಣಿಗೆ ನೀಡಿ ಗಮನ ಸೆಳೆದರು. ಚೀರನಹಳ್ಳಿ ಸರ್ಕಾರಿ ಶಾಲೆಗೆ ಅರೇನಹಳ್ಳಿ ತಿಪ್ಪೇಸ್ವಾಮಿ 40 ಇಂಚಿನ ಸ್ಮಾರ್ಟ್ ಟಿ.ವಿ., ಮಲ್ಲಿಕಾರ್ಜುನ್ ಎಂಬುವರು ಮ್ಯೂಸಿಕ್ ಸಿಸ್ಟಂ ನೀಡಿದರು. ಟಿ. ನುಲೇನೂರು ಶಾಲೆಗೆ ₹ 1 ಲಕ್ಷ ಮೌಲ್ಯದ ಸ್ಮಾರ್ಟ್ ಪ್ರೊಜೆಕ್ಟರ್, ಪಟ್ಟಣದ ಬಸ್ ನಿಲ್ದಾಣ ಶಾಲೆಗೆ ₹ 50 ಸಾವಿರ ಮೌಲ್ಯದ ಪರಿಕರ ನೀಡಲಾಯಿತು. ಕೋಟೆಹಾಳ್ ಶಾಲೆಗೆ ಗ್ರಾಮಸ್ಥರು ಸುಮಾರು ₹ 70 ಸಾವಿರ ಮೌಲ್ಯದ ಸ್ಮಾರ್ಟ್ ಟಿ.ವಿ, ಲ್ಯಾಪ್‌ಟಾಪ್ ಕೊಡುಗೆಯಾಗಿ ನೀಡಿದರು.

ಶಾಲೆಗಳಿಗೆ ದಾನಿಗಳ ನೆರವು ಪಡೆಯಲು ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿರುವ ವಿದ್ಯಾಂಜಲಿ 2.0 ಪೋರ್ಟಲ್‌ಗೆ ಪೂರಕವಾಗಿ ತಾಲ್ಲೂಕಿನ 227 ಪ್ರಾಥಮಿಕ ಹಾಗೂ 46 ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

## 'ಮೆಕ್ಯಾನಿಕಲ್ ವರ್ಕ್‌ಶಾಪ್ ನಿರ್ಮಿಸಿ'

**ಬೆಂಗಳೂರು:** 'ಶತಮಾನ ಪೂರೈಸಿರುವ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಕಟ್ಟಡಗಳ ನವೀಕರಣ ಹಾಗೂ ಮೂಲಸೌಕರ್ಯ ಅಭಿವೃದ್ಧಿ ವೇಳೆ ಮೆಕ್ಯಾನಿಕಲ್ ವಿಭಾಗದ ವರ್ಕ್‌ಶಾಪ್ ಕಟ್ಟಡಗಳ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ' ಎಂದು ಯುವಿಸಿಇ ವೆಲ್‌ವಿಷರ್ಸ್ ಫೋರಂ ಆರೋಪಿಸಿದೆ.

'ಯುವಿಸಿಇ ಅಭಿವೃದ್ಧಿಗೆ ಸರ್ಕಾರ 2017–18ರ ಬಜೆಟ್‌ನಲ್ಲಿ ₹ 25 ಕೋಟಿಗಳ ಅನುದಾನ ಘೋಷಿಸಿತ್ತು. ಈಗಾಗಲೇ ₹ 16.80 ಕೋಟಿ ಮಂಜೂರು ಮಾಡಿದೆ. ಮೆಕ್ಯಾನಿಕಲ್ ವಿಭಾಗದ ವರ್ಕ್‌ಶಾಪ್ ಕಟ್ಟಡಗಳನ್ನು ಹೊಸ ಕಟ್ಟಡ ನಿರ್ಮಿಸುವ ಉದ್ದೇಶದಿಂದ 2018ರಲ್ಲಿ ಕೆಡವಲಾಗಿತ್ತು. ಆದರೆ, ಈವರೆಗೂ ನಿರ್ಮಿಸಿಲ್ಲ. ಆದಷ್ಟು ಬೇಗ ವರ್ಕ್‌ಶಾಪ್ ಕಟ್ಟಡವನ್ನು ನಿರ್ಮಿಸಬೇಕು' ಎಂದು ಫೋರಂನ ಸಂಚಾಲಕ ಎಚ್. ಸುರೇಶ್, ಸದಸ್ಯ ಶ್ರೀಧರ್ ಅಗಳಾಯ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಐಎನ್‌ಎಸ್ ಅಧ್ಯಕ್ಷರಾಗಿ ಮೋಹಿತ್ ಜೈನ್ ಆಯ್ಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಎಕನಾಮಿಕ್ಸ್ ಟೈಮ್ಸ್‌ನ ಮೋಹಿತ್ ಜೈನ್ ಅವರು ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ (ಐಎನ್‌ಎಸ್) ನೂತನ ಅಧ್ಯಕ್ಷರಾಗಿ ಶುಕ್ರವಾರ ಆಯ್ಕೆಯಾದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಐಎನ್‌ಎಸ್‌ನ 82ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಡೆಪ್ಯುಟಿ ಪ್ರೆಸಿಡೆಂಟ್ ಆಗಿ ಕೆ.ರಾಜಪ್ರಸಾದ್ ರೆಡ್ಡಿ (ಸಾಕ್ಷಿ), ಉಪಾಧ್ಯಕ್ಷರಾಗಿ ರಾಕೇಶ್ ಶರ್ಮಾ (ಆಜ್ ಸಮಾಜ್), ಗೌರವ ಖಜಾಂಚಿಯಾಗಿ ತನ್ಮಯ್ ಮಹೇಶ್ವರಿ (ಅಮರ್ ಉಜಾಲಾ) ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮೇರಿ ಪಾಲ್ ಆಯ್ಕೆಯಾದರು.

ಕಾರ್ಯಕಾರಿ ಸಮಿತಿಗೆ ಕೆ.ಎನ್. ತಿಲಕಕುಮಾರ್ (ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸಮೂಹದ ಮಾತೃ ಸಂಸ್ಥೆಯಾದ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ), ಜಯಂತ್ ಎಂ.ಮ್ಯಾಥ್ಯೂ (ಮಲಯಾಳ ಮನೋರಮಾ), ಶಿವೇಂದ್ರ ಗುಪ್ತಾ (ಬಿಸಿನೆಸ್ ಸ್ಟ್ಯಾಂಡರ್ಡ್), ವಿವೇಕ್ ಗೋಯೆಂಕಾ (ದಿ ಇಂಡಿಯನ್ ಎಕ್ಸ್‌ಪ್ರೆಸ್), ಮಹೇಂದ್ರ ಮೋಹನ್ ಗುಪ್ತಾ (ದೈನಿಕ್ ಜಾಗರಣ್), ಎಂ.ವಿ. ಶ್ರೇಯಾಂಶ್‌ಕುಮಾರ್ (ಮಾತೃಭೂಮಿ) ಹಾಗೂ ಎಚ್.ಎನ್.ಕಾಮಾ (ಬಾಂಬೆ ಸಮಾಚಾರ್ ವೀಕ್ಲಿ) ಸೇರಿದಂತೆ 41 ಜನರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

## ಪೆಗಾಸಸ್: ಪ. ಬಂಗಾಳ ಆಯೋಗದ ವಿಚಾರಣೆಗೆ ಸುಪ್ರೀಂಕೋರ್ಟ್ ತಡೆ

**ನವದೆಹಲಿ(ಪಿಟಿಐ):** ಪೆಗಾಸಸ್ ಗೂಢಚರ್ಯೆ ಪ್ರಕರಣದ ಆರೋಪಗಳ ತನಿಖೆಗಾಗಿ ಪಶ್ಚಿಮ ಬಂಗಾಳ ಸರ್ಕಾರವು ನೇಮಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಂ.ಬಿ. ಲೋಕೂರ್ ನೇತೃತ್ವದ ಆಯೋಗದ ವಿಚಾರಣೆಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಮುಖ್ಯನ್ಯಾಯಮೂರ್ತಿ ಎನ್. ವಿ.ರಮಣ ನೇತೃತ್ವದ ನ್ಯಾಯಪೀಠವು, ಲೋಕೂರ್ ಆಯೋಗವು ತನಿಖೆಯನ್ನು ನಡೆಸುವುದಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರವು ಭರವಸೆ ನೀಡಿದ್ದರೂ, ಆಯೋಗವು ತನ್ನ ಕಾರ್ಯವನ್ನು ಮುಂದುವರಿಸಿದೆ ಎಂದು ಆರೋಪಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.







## ನಾಳೆಯಿಂದ 'ಊರ್ಮನೆ ಹಬ್ಬ' ಕಿರುಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಊರ್ಮನೆ ಪ್ರೊಡಕ್ಷನ್ಸ್ ವತಿಯಿಂದ 'ಊರ್ಮನೆ ಹಬ್ಬ' ಕಿರುಚಿತ್ರ ಉತ್ಸವ ಇದೇ 19ರಂದು ಸಂಜೆ 4ಕ್ಕೆ ನಗರದ ಚಾಮರಾಜಪೇಟೆಯ ಕಲಾವಿದರ ಸಂಘದಲ್ಲಿ ನಡೆಯಲಿದೆ.

'ಸಣ್ಣ ಪಟ್ಟಣಗಳಲ್ಲಿ ಸಿನಿಮಾಸಕ್ತ ಯುವಕರ ತಂಡ ಸೇರಿ ನಿರ್ಮಿಸಿದ ಕಿರುಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಮಹಾನಗರ ಹೊರತಾದ ಊರುಗಳಲ್ಲಿರುವ ಪ್ರತಿಭೆಗಳು ಪುಟ್ಟ ಬಜೆಟ್‌ನಲ್ಲಿ, ಗುಣಮಟ್ಟದಲ್ಲಿ ರಾಜೀಯಾಗದೇ ನಿರ್ಮಿಸಿದ ಚಿತ್ರಗಳನ್ನು ರಾಜಧಾನಿಯಲ್ಲಿ ಪ್ರದರ್ಶಿಸುವುದು ತಮ್ಮ ಉದ್ದೇಶ' ಎಂದು ಊರ್ಮನೆ ಪ್ರೊಡಕ್ಷನ್ಸ್‌ನ ಮುಖ್ಯಸ್ಥ ಅನೀಶ್ ಶರ್ಮಾ ತಿಳಿಸಿದ್ದಾರೆ.

ಅನೀಶ್ ಶರ್ಮಾ ನಿರ್ದೇಶನದ 'ಶಬರಿ', 'ಅಪ್ಪನ್ ಡೈರೆಕ್ಷನ್' (ದೀಪಕ್ ರಾಮ್ ನಿರ್ದೇಶನ), 'ಡೋನಟ್' (ಶ್ರೀಕರ ಭಟ್), 'ಕಲರ್ ಕನ್ನಡಕ' (ಅಶ್ವತ್ಥ್ ಕೆ.ಆರ್.), 'ಕಾಯಿಸರ' (ಶರತ್ ರೈಸದ್), 'ಹಬ್ಬ ಹರಿದಿನ ಸುದ್ದಿ ಶಿವರಾತ್ರಿ' (ನವೀನ್ ತೇಜಸ್ವಿ) ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ನಿರ್ದೇಶಕ ಸತ್ಯಪ್ರಕಾಶ್ ಹಾಗೂ ಪ್ರಯೋಗ್ ಸ್ಟುಡಿಯೊ ಪ್ರಾಯೋಜಕತ್ವದಲ್ಲಿ ಈ ಉತ್ಸವ ನಡೆಯುತ್ತಿದೆ.

## ಪತ್ರಕರ್ತನಿಗೆ ವಿಧಿಸಿರುವ ಶಿಕ್ಷೆ ರದ್ದುಪಡಿಸಲು 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ವಕೀಲರ ವಿರುದ್ಧ ಮಾನಹಾನಿ ವರದಿಗಳನ್ನು ಪ್ರಕಟಿಸಿದ ಕನ್ನಡ ವಾರಪತ್ರಿಕೆಯ ಸಂಪಾದಕ ಡಿ.ಎಸ್ ವಿಶ್ವನಾಥ ಶೆಟ್ಟಿ ಅವರಿಗೆ ವಿಧಿಸಿರುವ ಜೈಲು ಶಿಕ್ಷೆಯನ್ನು ರದ್ದುಪಡಿಸಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿದೆ.

2008ರಲ್ಲಿ 'ತುಂಗಾ ವಾರ್ತೆ' ಪತ್ರಿಕೆಯಲ್ಲಿ ವಕೀಲ ಟಿ.ಎನ್. ರತನ್‌ರಾಜ್ ವಿರುದ್ಧ ಸರಣಿ ವರದಿಗಳು ಪ್ರಕಟವಾಗಿದ್ದವು. ಅದರಲ್ಲಿ ರತನ್‌ರಾಜ್ ಅವರನ್ನು ಗೂಂಡಾ ಎಂದು ಕರೆಯಲಾಗಿತ್ತು. ಅದಲ್ಲದೇ, ಹಲವು ಮಾನಹಾನಿ ವರದಿಗಳನ್ನು ಪ್ರಕಟಿಸಿದ್ದವು. ಈ ಸಂಬಂಧ ವಿಚಾರಣಾ ನ್ಯಾಯಾಲಯವು ಒಂದು ವರ್ಷ ಸಜೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಪತ್ರಿಕೆಯ ಸಂಪಾದಕ ವಿಶ್ವನಾಥ ಶೆಟ್ಟಿ, ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಅವರ ಶಿಕ್ಷೆ ಅವಧಿಯನ್ನು 1 ತಿಂಗಳಿಗೆ ಇಳಿಸಿತ್ತು. ಬಳಿಕ, ಈ ಆದೇಶವನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

GRT JEWELLERS
Since 1964

**RR ನಗರ್, ಬೆಂಗಳೂರು ಷೋರೂಂಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ.**

| ಸ್ಥಾನ | ಕನಿಷ್ಠ ಅರ್ಹತೆ | ವಯಸ್ಸು |
|---|---|---|
| ಸೇಲ್ಸ್ ಮನ್ | 10ನೇ ತರಗತಿ, PUC ಅಥವಾ ಪದವೀಧರರು | 22 ರಿಂದ 27 |
| ಸೇಲ್ಸ್ ಗರ್ಲ್ಸ್ | 10ನೇ ತರಗತಿ, PUC ಅಥವಾ ಪದವೀಧರರು | 22 ರಿಂದ 27 |
| ಸೇಲ್ಸ್ ಅಸಿಸ್ಟೆಂಟ್ಸ್ | 10ನೇ ತರಗತಿ, PUC (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು) | 17 ರಿಂದ 22 |

ದಿನಾಂಕ ಮತ್ತು ಸಮಯ:
19-12-2021, ಭಾನುವಾರ, 20-12-2021, ಸೋಮವಾರ
(10.00 AM to 5.00 PM)
ಸ್ಥಳ :
ಹೋಟೆಲ್ ರಾಯಲ್ ಇಂದ್ರಪ್ರಸ್ಥ
# 202, 4ನೇ ಹಂತ, BEML ಲೇಔಟ್, ಕಾರ್ಯಪ್ಪ ಪಾರ್ಕ್ ಎದುರು,
ರಾಜ ರಾಜೇಶ್ವರಿ ನಗರ, RR ನಗರ ಪೊಲೀಸ್ ಠಾಣೆ ಹತ್ತಿರ, ಬೆಂಗಳೂರು – 560 098.

ದಿನಾಂಕ ಮತ್ತು ಸಮಯ:
21-12-2021, ಮಂಗಳವಾರ (10.00 AM to 5.00 PM)
ಸ್ಥಳ :
GRT ಜ್ಯುವೆಲರ್ಸ್ (ಇಂಡಿಯಾ) PVT. LTD.,
ನಂ. 529, 11ನೇ ಮುಖ್ಯ ರಸ್ತೆ, 33ನೇ ಕ್ರಾಸ್, 4ನೇ ಬ್ಲಾಕ್,
ಜಯನಗರ, ಬೆಂಗಳೂರು – 560 011.

ಸಂಪರ್ಕ ಸಂಖ್ಯೆಗಳು : 96869 05786, 96867 99888

Email: recruitment@grtjewels.com

ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.

ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.

## ‘ವಿಪಕ್ಷಗಳು ಕೆಲವೇ ಜಾತಿಗಳಿಗಾಗಿ ಕೆಲಸ ಮಾಡಿವೆ’

ಅಮಿತ್ ಶಾ

ಲಖನೌ (ಪಿಟಿಐ): ‘ಉತ್ತರ ಪ್ರದೇಶದಲ್ಲಿ ವಿಪಕ್ಷಗಳು ಅಧಿಕಾರದಲ್ಲಿ ಇದ್ದಾಗ ನಿರ್ದಿಷ್ಟ ಜಾತಿಗಳಿಗಾಗಿ ಕೆಲಸ ಮಾಡಿದವು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಆರೋಪಿಸಿದರು.

ಇತ್ತೀಚೆಗಷ್ಟೇ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡ ನಿಶಾದ್ ಪಕ್ಷದ ಜೊತೆ ಆಯೋಜಿಸಿದ್ದ ‘ಸರ್ಕಾರ್ ಬನಾವೊ, ಅಧಿಕಾರ್ ಪಾವೊ’ (ಸರ್ಕಾರ ಮಾಡಿ, ಅಧಿಕಾರ ಪಡೆಯಿರಿ) ರ‍್ಯಾಲಿಯಲ್ಲಿ ಹೀಗೆ ಹೇಳಿದರು. ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷ ಆಡಳಿತ ನಡೆಸಿದ ವೇಳೆ ಅವರು ತಮ್ಮ ಸಮುದಾಯಗಳಿಗಾಗಿ ಮಾತ್ರ ಕೆಲಸ ಮಾಡಿದ್ದರು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲಾ ಹಿಂದುಳಿದ ವರ್ಗಗಳಿಗಾಗಿ ಮತ್ತು ಬಡವರ ಹಿತಾಸಕ್ತಿ ಪರವಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವಧಿಯಲ್ಲಿ ಅಪರಾಧ ಮತ್ತು ಮಾಫಿಯಾಗಳನ್ನು ಬುಡಮೇಲು ಮಾಡಲಾಗಿದೆ. ಹಿಂದಿನ ಸರ್ಕಾರಗಳು ಇದ್ದಾಗ ರಾಜ್ಯದಲ್ಲಿ ಮಾಫಿಯಾ ಆಡಳಿತ ಇತ್ತು ಮತ್ತು ಬಡವರ ಅಭಿವೃದ್ಧಿ ಆಗಲಿಲ್ಲ ಎಂದರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ತಿದ್ದುಪಡಿ

ದಿನಾಂಕ: 16–12–2021ರಂದು ಈ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ (ಸಂ. ಬಿಐಎಪಿಎ / ಟಿಪಿ/ಭೂಉಬ/22/2021–22/1384, ದಿನಾಂಕ : 13–12–2021) ಪ್ರಕಟಣೆ ಜಾಹೀರಾತಿನಲ್ಲಿ ಸರ್ವೆ ನಂ. ಹಾಗೂ ಎ–ಗುಂಟೆ ಕಾಲಂನಲ್ಲಿ 107/1ರ ಪೈಕಿ 0–25 ಮತ್ತು 107/2ರ ಪೈಕಿ 0–15 ಎಂದು ಪ್ರಕಟವಾಗಿದ್ದು, **ಅದರ ಬದಲಾಗಿ** 107/1ರ ಪೈಕಿ **0–15 ಎ–ಗು** ಮತ್ತು 107/2ರ ಪೈಕಿ **0–25 ಎ–ಗು** ಎಂದು ತಿದ್ದಿ ಓದಿಕೊಳ್ಳುವುದು.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ನಗರದಲ್ಲಿ ಹೆಚ್ಚುತ್ತಿದೆ ಬೆಕ್ಕುಗಳ ಸಂತತಿ • ಬೀದಿಪಾಲಾಗುತ್ತಿವೆ ಪುಟಾಣಿ ಮರಿಗಳು

# ಬೆಕ್ಕಿಗೂ ಬೇಕು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಶಸ್ತ್ರಚಿಕಿತ್ಸೆ ನಡೆಸಲು ಹಿಡಿಯಲಾದ ಬೆಕ್ಕುಗಳು

ಪ್ರಜಾವಾಣಿ CUPA ಸಹಯೋಗ

ಬೆಂಗಳೂರು: ಮನೆಯಲ್ಲಿ ಸಾಕಿದ ಬೆಕ್ಕುಗಳು ಹಾಕುವ ಮರಿಗಳನ್ನು ಸಾಕಲಾಗದೇ ಬೀದಿ ಪಾಲು ಮಾಡುವ ಪರಿಪಾಠ ನಗರದಲ್ಲಿ ಹೆಚ್ಚಾಗುತ್ತಿದೆ. ಬೆಕ್ಕುಗಳ ಸಂತಾನ ಮಿತಿ ಮೀರುವುದನ್ನು ತಡೆಯಲು ಅವುಗಳನ್ನೂ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾದ ಅಗತ್ಯವಿದೆ ಎನ್ನುತ್ತಾರೆ ಪ್ರಾಣಿ ಪ್ರಿಯರು.

‘ಬೆಕ್ಕುಗಳು 15ರಿಂದ 17 ವರ್ಷಗಳ ಕಾಲ ಬದುಕುತ್ತವೆ. ಹೆಣ್ಣು ಬೆಕ್ಕು ಪ್ರತಿ ಮೂರು ತಿಂಗಳಿಗೊಮ್ಮೆ ಬೆದೆಗೆ ಬರುತ್ತದೆ. ಒಮ್ಮೆಗೆ ಆರರಿಂದ ಒಂಬತ್ತು ಮರಿಗಳನ್ನು ಹಾಕುವ ಹೆಣ್ಣು ಬೆಕ್ಕು ವರ್ಷದಲ್ಲಿ 20ರಿಂದ 25 ಬೆಕ್ಕುಗಳ ಹುಟ್ಟಿಗೆ ಕಾರಣವಾಗಬಲ್ಲುದು. ಜೀವಿತಾವಧಿಯಲ್ಲಿ 10 ವರ್ಷಗಳ ಕಾಲ ಮರಿ ಹಾಕಬಲ್ಲುದು. ಹಾಗಾಗಿ ಕೆಲವು ವಸತಿ ಸಮುಚ್ಚಯಗಳಲ್ಲಿ ಬೆಕ್ಕುಗಳ ಸಂಖ್ಯೆ ವಿಪರೀತ ಹೆಚ್ಚಳವಾಗುತ್ತಿದೆ. ಸಂತಾನ ಅಭಿವೃದ್ಧಿ ತಡೆಯಬೇಕಾದರೆ ಅವುಗಳಿಗೂ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸುವುದು ಅಗತ್ಯ’ ಎಂದು ಕ್ಯೂಪಾ ಸಂಸ್ಥೆಯ ಯೋಜನಾ ವಿಭಾಗದ ಮುಖ್ಯಸ್ಥ ಅಜಯ್ ಅರ್ಜುನ್ ಅಭಿಪ್ರಾಯಪಟ್ಟರು.

ಬೆಕ್ಕುಗಳ ಸಂತಾನ ಶಕ್ತಿ ಹರಣಕ್ಕಾಗಿಯೇ ಕ್ಯೂಪಾ 2018ರಿಂದ ವಿಶೇಷ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಕಾರ್ಯಕ್ರಮಕ್ಕೆಂದೇ ವ್ಯವಸ್ಥಾಪರು, ಪಶುವೈದ್ಯರು, ಮೇಲ್ವಿಚಾರಕರು, ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಹಾಗೂ ನಿವಾಸಿಗಳನ್ನು ಒಳಗೊಂಡ ತಂಡಗಳಿವೆ.

‘ಬೆಕ್ಕುಗಳಿಗೆ ಸಂತಾನಶಕ್ತಿ-ಹರಣ ಶಸ್ತ್ರಚಿಕಿತ್ಸೆ ನಡೆಸುವಂತೆ ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಂದ (ಆರ್‌ಡಬ್ಲ್ಯುಎ) ಬೇಡಿಕೆ ಬರುತ್ತಿತ್ತು. ಆದರೆ, ಇದಕ್ಕೆ ಸೂಕ್ತ ವ್ಯವಸ್ಥೆ ಇರಲಿಲ್ಲ. ಹಾಗಾಗಿ, ಕ್ಯೂಪಾ ವತಿಯಿಂದಲೇ ಬೆಕ್ಕುಗಳ ಸಂತಾನ ನಿಯಂತ್ರಣ ಕಾರ್ಯಕ್ರಮ ಆರಂಭಿಸಿದೆವು. ನಿಗದಿತ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿರುವ ಬೆಕ್ಕುಗಳನ್ನು ಹಿಡಿದು ಅಲ್ಲೇ ಶಸ್ತ್ರಚಿಕಿತ್ಸೆಗೆ ಒಳಪಡಿಸುವ ಈ ಪ್ರಯತ್ನ ದೇಶದಲ್ಲೇ ಮೊದಲು’ ಎಂದು ಅಜಯ್ ತಿಳಿಸಿದರು.

‘ಬೆಕ್ಕುಗಳ ಸಂತಾನ ನಿಯಂತ್ರಣಕ್ಕೆ ಸಂಬಂಧಿಸಿದ, ಸಮುದಾಯ ಆಧಾರಿತವಾದ ಮೊದಲ ಕಾರ್ಯಕ್ರಮವಿದು. ಇದು ಬಹಳ ಯಶಸ್ವಿಯಾಗಿದೆ. ಅನೇಕ ಆರ್‌ಡಬ್ಲ್ಯುಎಗಳು ಹಾಗೂ ಸ್ವಯಂಸೇವಕರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ನಾವೀಗ ತಿಂಗಳಲ್ಲಿ ಸರಾಸರಿ 9 ಬೆಕ್ಕುಗಳಿಗೆ ಇಂತಹ ಶಸ್ತ್ರಚಿಕಿತ್ಸೆ ನಡೆಸುತ್ತೇವೆ. ಇದುವರೆಗೆ 3 ಸಾವಿರಕ್ಕೂ ಅಧಿಕ ಬೆಕ್ಕುಗಳಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದೇವೆ’ ಎಂದು ಅವರು ಮಾಹಿತಿ ನೀಡಿದರು.

‘ಸೂಕ್ಷ್ಮ ವಿಚಾರಗಳನ್ನು ಕ್ಷಿಪ್ರವಾಗಿ ಗ್ರಹಿಸುವ ಬೆಕ್ಕುಗಳನ್ನು ಹಿಡಿಯುವುದು ಬಲು ಕಷ್ಟದ ಕೆಲಸ. ಇದಕ್ಕಾಗಿಯ ವಿಶೇಷ ಬಲೆ ಹಾಗೂ ಬೋನುಗಳನ್ನು ಬಳಸುತ್ತೇವೆ. ಇಂತಹ ಸಾಧನಗಳು ಹಾಗೂ ಬೋನು ಗಳು ಕ್ಯೂಪಾ ಬಳಿ ಲಭ್ಯ.ಬೆಕ್ಕು ಗಳಿಗೆ ನಂಬಿಕಾರ್ಹವಾದಸ್ಥಳೀಯರ ನೆರವೂ ಅಗತ್ಯ. ಹಿಡಿದ ಬೆಕ್ಕುಗಳನ್ನು ಶಸ್ತ್ರಚಿಕಿತ್ಸೆಗೆ ಸಜ್ಜುಗೊಳಿಸಬೇಕಾಗುತ್ತದೆ. ಅವು 12 ತಾಸು ಉಪವಾಸ ಇರಬೇಕು. ಶಸ್ತ್ರಚಿಕಿತ್ಸೆ ಬಳಿಕ ಹೆಣ್ಣು ಬೆಕ್ಕಿಗೆ ಮೂರು ದಿನ ವಿಶೇಷ ಆರೈಕೆಯ ಅಗತ್ಯವಿದೆ. ಶಸ್ತ್ರಚಿಕಿತ್ಸೆಗೆ ಒಳಗಾದ ಬೆಕ್ಕಿನ ಕಿವಿಯನ್ನು ಇಂಗ್ಲಿಷ್ ಅಕ್ಷರ ‘ವಿ’ (V) ಆಕಾರದಲ್ಲಿ ಕತ್ತರಿಸಲಾಗುತ್ತದೆ. ಇದರಿಂದ ಅವುಗಳು ಮತ್ತೆ ಶಸ್ತ್ರಚಿಕಿತ್ಸೆಗೆ ಒಳಗಾಗುವುದನ್ನು ತಪ್ಪಿಸಬಹುದು’ ಎಂದು ವಿವರಿಸಿದರು.

ಪ್ರತಿ ಬೆಕ್ಕಿನ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಕ್ಯೂಪಾ ₹ 1500 ದರ ವಿಧಿಸುತ್ತದೆ. ಆದರೆ, ಇದರಲ್ಲಿ ಶಸ್ತ್ರಚಿಕಿತ್ಸೆಯ ವೆಚ್ಚ, ರೇಬಿಸ್ ನಿರೋಧಕ ಲಸಿಕೆ, ದೀರ್ಘಕಾಲ ಪರಿಣಾಮ ಬಿರುವ ಜೀವಪ್ರತಿರೋಧಕ ಔಷಧದ (ಆ್ಯಂಟಿಬಯಾಟಿಕ್) ವೆಚ್ಚವೂ ಸೇರಿದೆ.

‘ಶಸ್ತ್ರಚಿಕಿತ್ಸೆಯ ವೆಚ್ಚ ಭರಿಸಲು ಸಾಧ್ಯವಾಗದವರಿಗೆ ಹಾಗೂ ಬೀದಿ ಬದಿಯ ಬೆಕ್ಕುಗಳಿಗೆ ಇಂತಹ ಶಸ್ತ್ರಚಿಕಿತ್ಸೆ ಮಾಡಿಸಲು ಮುಂದಾಗುವವರಿಗೆ ನಾವು ರಿಯಾಯಿತಿಗಳನ್ನು ನೀಡುತ್ತೇವೆ’ ಎಂದು ಅಜಯ್ ತಿಳಿಸಿದರು.

### ಬೆಕ್ಕಿನ ಸಂತಾನಶಕ್ತಿ ಹರಣದ ಪ್ರಯೋಜನಗಳು

- ಕ್ರೂರವರ್ತನೆ ಕ್ರಮೇಣ ಕಡಿಮೆಯಾಗುತ್ತದೆ
- ಸೀಮೆಗೆ ಸಂಬಂಧಿಸಿ ಅವುಗಳ ನಡುವೆ ಕಚ್ಚಾಟ ಕಡಿಮೆಯಾಗುತ್ತದೆ
- ಬೆಕ್ಕಿನ ಮರಿಗಳನ್ನು ಬೀದಿಪಾಲು ಮಾಡುವುದು ತಪ್ಪುತ್ತದೆ
- ಗಂಡು ಬೆಕ್ಕುಗಳು ಬೇಕಾಬಿಟ್ಟಿ ಅಲೆದಾಡುವುದು ಕಡಿಮೆಯಾಗಲಿದೆ
- ಗಂಡು ಬೆಕ್ಕು ವೃಷಣ– ಪ್ರಾಸ್ಟೇಟ್ ಕ್ಯಾನ್ಸರ್‌ಗೆ ಒಳಗಾಗುವುದು ತಪ್ಪಲಿದೆ
- ಹೆಣ್ಣು ಬೆಕ್ಕುಗಳಲ್ಲಿ ಗೆಡ್ಡೆ ಬೆಳವಣಿಗೆಯ ಅಪಾಯ ಕಡಿಮೆಯಾಗಲಿದೆ
- ಅವುಗಳ ಜೀವಿತಾವಧಿ ಹೆಚ್ಚಾಗಲಿದೆ

### ಬೆಕ್ಕು ಹಿಡಿಯುವ ತಂತ್ರ

- ಅವುಗಳ ಜೊತೆ ನಂಟು ಬೆಳೆಸಿ
- ಅವುಗಳಿಗೆ ಆಗಾಗ ಆಹಾರ ನೀಡುತ್ತಿರಿ
- ಕ್ರಮೇಣ ಬೋನಿನ ಒಳಗೆ ಆಹಾರ ನೀಡುವುದನ್ನು ಅಭ್ಯಾಸ ಮಾಡಿಸಿ

### ಪ್ರಜಾವಾಣಿ– ಕ್ಯೂಪಾ ಅಭಿಯಾನಕ್ಕೆ ಕೈಜೋಡಿಸಿ

ಬೀದಿಪ್ರಾಣಿಗಳನ್ನು ದ್ವೇಷಿಸುವವರ ದೃಷ್ಟಿಕೋನ ಬದಲಾಯಿಸಲು ಹಾಗೂ ಅವುಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ‘ಪ್ರಜಾವಾಣಿ’ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ನಡೆಸುತ್ತಿದೆ.

ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಮೂಕ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸಲು ಹಮ್ಮಿಕೊಂಡ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಿರಾದರೆ, ಇಲ್ಲಿರುವ ಕೊಂಡಿಯನ್ನು (bit.ly/PVCUPA) ಕ್ಲಿಕ್ಕಿಸಿ ಹೆಸರು ನೋಂದಾಯಿಸಿ.

ಸುದ್ದಿ 2 ನಿಮಿಷ

## ಸರ್ಕಾರ ಅನುಮತಿಸಿದರೆ ಮಾತ್ರ ಕೊಟ್ಟೂರಿನಲ್ಲಿ ತರಳಬಾಳು ಹುಣ್ಣಿಮೆ

ಭರಮಸಾಗರ: ಕೊಟ್ಟೂರಿನಲ್ಲಿ ತರಳಬಾಳು ಹುಣ್ಣಿಮೆ ಹಮ್ಮಿಕೊಳ್ಳಲು ತಾತ್ಕಾಲಿಕ ಸಿದ್ಧತೆ ಮಾಡಿಕೊಂಡಿರುವಂತೆ ಸೂಚನೆ ನಿಡಲಾಗಿದೆ. ಆದರೆ. ಸರ್ಕಾರ ಅನುಮತಿ ನೀಡಿದರೆ ಮಾತ್ರ ಕೊಟ್ಟೂರಿನಲ್ಲಿ ಕಾರ್ಯಕ್ರಮ ನಡೆಸಲಾಗುವುದು ಇಲ್ಲದಿದ್ದರೆ ಸಿರಿಗೆರೆಯಲ್ಲಿಯೇ ನಡೆಸಲಾಗುವುದು ಎಂದು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಬಿಚ್ಚುಗತ್ತಿ ಭರಮಣ್ಣ ನಾಯಕ ದೊಡ್ಡಕೆರೆ ಕೋಡಿ ಬಿದ್ದ ಕ್ಷಣವನ್ನು ವೀಕ್ಷಿಸಿದ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ಪೂರ್ವಯೋಜನೆಯಂತೆ ಕೊಟ್ಟೂರಿನಲ್ಲಿ ತರಳಬಾಳು ಹುಣ್ಣಿಮೆ ಕಾರ್ಯಕ್ರಮವನ್ನು 2022ರ ಫೆ. 8ರಿಂದ ನಡೆಸಲು ಸಿದ್ಧತೆ ಮಾಡಿಕೊಳ್ಳುವಂತೆ ಆ ಭಾಗದ ಜನರಿಗೆ ತಿಳಿಸಲಾಗಿದೆ. ಜನವರಿ ವೇಳೆಗೆ ಓಮೈಕ್ರಾನ್ ಹೆಚ್ಚುವ ಸೂಚನೆ ಇದ್ದು, ಅನುಮತಿ ದೊರೆತರೆ ಮಾತ್ರ ಕಾರ್ಯಕ್ರಮ ನಡೆಸಲಾಗುವುದು. ಸರ್ಕಾರದ ಆದೇಶಕ್ಕೆ ಮೀರಿ ಕಾರ್ಯಕ್ರಮ ಹಮ್ಮಿಕೊಳ್ಳುವುದಿಲ್ಲ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

‘ದೊಡ್ಡಕೆರೆಗೆ ನೀರು ಬಂದಿದ್ದು, ಮುಂದಿನ ದಿನಗಳಲ್ಲಿ 42 ಕೆರೆಗಳಿಗೂ ನೀರು ಹರಿಯಲಿದೆ. ಇದರ ಸ್ಮರಣಾರ್ಥ ಭರಮಸಾಗರದಲ್ಲಿಯೂ ತರಳಬಾಳು ಹುಣ್ಣಿಮೆ ನಡೆಸಬೇಕು. ಭರಮಸಾಗರವನ್ನು ತಾಲ್ಲೂಕು ಕೇಂದ್ರವಾಗಿಸಲು ಪ್ರಯತ್ನಿಸಬೇಕು’ ಎಂದು ಸ್ಥಳೀಯರು ಮನವಿ ಮಾಡಿದರು.

‘ಈಗ ಆ ಪ್ರಸ್ತಾಪ ಬೇಡ. ಮುಂದೆ ನೋಡೋಣ’ ಎಂದು ಸ್ವಾಮೀಜಿ ಪ್ರತಿಕ್ರಿಯಿಸಿದರು.

## ಮೇಕೆದಾಟು: 3 ತಿಂಗಳಲ್ಲಿ ಇತ್ಯರ್ಥಕ್ಕೆ ಸುಪ್ರೀಂಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ಮೇಕೆದಾಟು ಬಳಿ ಜಲಾಶಯ ನಿರ್ಮಿಸುವುದರ ಕುರಿತು ಸಂಬಂಧಿಸಿದ ಪ್ರಾಧಿಕಾರವೇ ನಿರ್ಧರಿಸಲಿದೆ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಅಲ್ಲದೇ, ಉದ್ದೇಶಿತ ಜಲಾಶಯ ನಿರ್ಮಾಣ ಪ್ರಶ್ನಿಸಿದ್ದ ಅರ್ಜಿಯ ತ್ವರಿತ ವಿಚಾರಣೆಗಾಗಿ ಅರ್ಜಿದಾರರು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಲಿ. ಪ್ರಾಧಿಕಾರ ಮೂರು ತಿಂಗಳೊಳಗಾಗಿ ಈ ಅರ್ಜಿ ಕುರಿತು ತನ್ನ ನಿರ್ಧಾರ ಪ್ರಕಟಿಸಬೇಕು ಎಂದೂ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಹಾಗೂ ಸಿ.ಟಿ.ರವಿಕುಮಾರ್ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘ಈ ವಿಷಯ ಕುರಿತು ಸರ್ಕಾರಕ್ಕೆ ಅಹವಾಲು ಸಲ್ಲಿಸಿದ್ದೀರಾ’ ಎಂದು ನ್ಯಾಯಪೀಠ ಅರ್ಜಿದಾರರನ್ನು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರ, ‘ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳಿಗೆ ಅಹವಾಲು ಸಲ್ಲಿಸಲಾಗಿತ್ತು. ಆದರೆ, ಸರ್ಕಾರಗಳಿಂದ ಯಾವುದೇ ಉತ್ತರ ಬಂದಿಲ್ಲ’ ಎಂದು ಹೇಳಿದರು.

‘ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಬೇರೆ ಬೇರೆ ಪ್ರಾಧಿಕಾರಗಳಿಗೆ ಅಹವಾಲು ಸಲ್ಲಿಸಿದ್ದಾರೆ. ಹೀಗಾಗಿ ತಮ್ಮ ಅರ್ಜಿಯ ತ್ವರಿತ ವಿಚಾರಣೆ ಕೋರಿ ಅವರು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಮನವಿ ಸಲ್ಲಿಸಲಿ’ ಎಂದು ನಿರ್ದೇಶನ ನೀಡಿದ ನ್ಯಾಯಪೀಠ, ಅರ್ಜಿಯನ್ನು ವಿಲೇವಾರಿ ಮಾಡಿತು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ತೋಟಗಾರಿಕೆ ಇಲಾಖೆಯಿಂದ ಮಾರ್ಗಸೂಚಿ

# ಕಬ್ಬನ್ ಉದ್ಯಾನ: ಆಕ್ರಮಣಕಾರಿ ಶ್ವಾನಗಳಿಗೆ ಪ್ರವೇಶ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕ್ರಮಣಕಾರಿ ಪ್ರವೃತ್ತಿಯ ಹಾಗೂ ದೊಡ್ಡ ಗಾತ್ರದ ಸಾಕು ನಾಯಿಗಳನ್ನು ಇನ್ನು ಮುಂದೆ ಕಬ್ಬನ್ ಉದ್ಯಾನಕ್ಕೆ ಕರೆತರುವಂತಿಲ್ಲ. ಉದ್ಯಾನಕ್ಕೆ ಸಾಕು ಪ್ರಾಣಿಗಳನ್ನು ಕರೆತರುವವರು ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮಗಳ ಸಂಬಂಧ ತೋಟಗಾರಿಕೆ ಇಲಾಖೆ ಹೊಸ ಮಾರ್ಗಸೂಚಿ ಹೊರಡಿಸಿದೆ.

‘ಕಬ್ಬನ್ ಉದ್ಯಾನಕ್ಕೆ ನಾಯಿ ಸೇರಿದಂತೆ ಇತರ ಸಾಕು ಪ್ರಾಣಿಗಳನ್ನು ಕರೆ ತರುವ ಮಾಲೀಕರು ಅವುಗಳ ಸಂಪೂರ್ಣ ಹೊಣೆಯನ್ನೂ ಹೊರಬೇಕು. ಸಾಕು ನಾಯಿಗಳಿಗೆ ಗರಿಷ್ಠ 6 ಅಡಿ ಉದ್ದದ ಚೈನ್ ಹಾಕಿ ಕರೆತರಬೇಕು. ಮಲ ವಿಸರ್ಜಿಸಿದರೆ ಅದನ್ನು ಮಾಲೀಕರೇ ತೆರವುಗೊಳಿಸಿ, ಕಸದ ಬುಟ್ಟಿಗೆ ಹಾಕಬೇಕು. ಇದಕ್ಕಾಗಿ ‘ಪೂಪ್ ಬ್ಯಾಗ್’ (ಶೌಚ ಚೀಲ) ತರುವುದು ಕಡ್ಡಾಯ’ ಎಂದು ಇಲಾಖೆ ಹೇಳಿದೆ.

‘ಉದ್ಯಾನಕ್ಕೆ ಬರುವ ಸಾಕು ನಾಯಿಗಳಿಗೆ ರೇಬಿಸ್ ಲಸಿಕೆ ಹಾಕಿಸಿರುವುದು ಕಡ್ಡಾಯ. ಇದಕ್ಕೆ ಸಂಬಂಧಿಸಿದ ದಾಖಲೆಯನ್ನು ಜೊತೆಯಲ್ಲಿ ತರಬೇಕು. ಅಧಿಕಾರಿಗಳು ಕೇಳಿದಾಗ ಲಸಿಕೆಯ ಪ್ರಮಾಣ ಪತ್ರ ತೋರಿಸಬೇಕು. ಉದ್ಯಾನದಲ್ಲಿ ನಾಯಿಗಳಿಗೆ ಆಹಾರ ನೀಡುವಂತಿಲ್ಲ. ಒಂದು ವೇಳೆ ಸಾಕು ನಾಯಿ ಉದ್ಯಾನದಲ್ಲಿ ಯಾರನ್ನಾದರೂ ಕಚ್ಚಿದ್ದಲ್ಲಿ ಗಾಯ ಮಾಡಿದ್ದಲ್ಲಿ ಅದಕ್ಕೆ ಮಾಲೀಕರೇ ಹೊಣೆಗಾರರು. ಗಾಯಾಳುವಿನ ಚಿಕಿತ್ಸಾ ವೆಚ್ಚವನ್ನೂ ಭರಿಸಬೇಕು’ ಎಂದೂ ಮಾರ್ಗಸೂಚಿಯಲ್ಲಿ ತಿಳಿಸಿದೆ.

‘ಲಾಲ್‌ಬಾಗ್ ಉದ್ಯಾನದಲ್ಲಿ ಈಗಾಗಲೇ ಸಾಕುಪ್ರಾಣಿಗಳಿಗೆ ಪ್ರವೇಶ ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಕಬ್ಬನ್ ಉದ್ಯಾನಕ್ಕೆ ಬರುವ ಸಾರ್ವಜನಿಕರ ಹಿತದೃಷ್ಟಿಯಿಂದ ಅಪಾಯಕಾರಿ ಸಾಕು ಪ್ರಾಣಿಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ನಾಯಿಗಳನ್ನು ಜೊತೆಯಲ್ಲಿ ಕರೆ ತರುವವರೂ ಕಡ್ಡಾಯವಾಗಿ ಈ ನಿಯಮಗಳನ್ನು ಪಾಲಿಸಬೇಕು’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ.ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಉದ್ಯಾನಕ್ಕೆ ಸಾಕು ಪ್ರಾಣಿಗಳಿಗೆ ಕರೆತರುವ ಸಂಬಂಧ ಬಿಬಿಎಂಪಿ ಹಾಗೂ ಭಾರತೀಯ ಕಲ್ಯಾಣ ಮಂಡಳಿ ರೂಪಿಸಿರುವ ನಿಯಮಗಳನ್ನೇ ಕಬ್ಬನ್ ಉದ್ಯಾನಕ್ಕೂ ಅನ್ವಯಿಸಲಾಗಿದೆ’ ಎಂದೂ ಹೇಳಿದರು.

ಎಚ್ಚರಿಕೆ ನೀಡಿದ್ದ ಹೈಕೋರ್ಟ್: ‘ಸಾಕು ನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಗೆ ಕರೆತಂದು ಮಲ,ಮೂತ್ರ ವಿಸರ್ಜನೆ ಮಾಡಿಸುವುದನ್ನು ತಡೆಯಬೇಕು. ಬಿಬಿಎಂಪಿ ತಾನಾಗಿಯೇ ಕ್ರಮ ಜರುಗಿಸಬೇಕು. ಇಲ್ಲವಾದರೆ ನ್ಯಾಯಾಲಯವೇ ಈ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಂಡು ನೋಟಿಸ್ ಜಾರಿ ಮಾಡಲು ಆದೇಶಿಸಬೇಕಾಗುತ್ತದೆ’ ಎಂದು ಹೈಕೋರ್ಟ್ ಇತ್ತೀಚೆಗೆ ಮೌಖಿಕ ಎಚ್ಚರಿಕೆ ನೀಡಿತ್ತು

## ಉತ್ತರ ಪ್ರದೇಶ: 7ನೇ ಸುತ್ತಿನ ಯಾತ್ರೆ ಆರಂಭಿಸಿದ ಅಖಿಲೇಶ್

ರಾಯಬರೇಲಿ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಬಿರುಸಿನ ಪ್ರಚಾರ ನಡೆಸುತ್ತಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಏಳನೇ ಸುತ್ತಿನ ‘ಸಮಾಜವಾದಿ ವಿಜಯ ಯಾತ್ರೆ’ಗೆ ಶುಕ್ರವಾರ ರಾಯಬರೇಲಿಯಲ್ಲಿ ಚಾಲನೆ ನೀಡಿದರು. ಇದಕ್ಕೂ ಮೊದಲು ರಾಯಬರೇಲಿ ಹತ್ತಿರದ ಆಂಜನೇಯ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಹನುಮಾನ್ ಅಷ್ಟಕದ ಕಡೆಯ ಎರಡು ಸಾಲುಗಳು ಮತ್ತು ದೇವಸ್ಥಾನದಲ್ಲಿ ಸೆರೆ ಹಿಡಿಯಲಾಗಿರುವ ಚಿತ್ರದ ಜೊತೆ, ‘ಆಂಜನೇಯನ ಆಶೀರ್ವಾದ ಮತ್ತು ದರ್ಶನದೊಂದಿಗೆ ರಾಯಬರೇಲಿಯಲ್ಲಿ ವಿಜಯ ಯಾತ್ರೆ ಆರಂಭವಾಯಿತು’ ಎಂದು ಟ್ವೀಟ್ ಮಾಡಿದ್ದಾರೆ.

# ಕುಸಿದ ತಾಪಮಾನ: ತೀವ್ರಗೊಂಡ ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಗ್ಗಿದ ಮಳೆ ಹಾಗೂ ಮೋಡರಹಿತ ವಾತಾವರಣ ಇರುವುದರಿಂದ ರಾಜ್ಯದಾದ್ಯಂತ ತಾಪಮಾನ ದಿನೇ ದಿನೇ ಕುಸಿತ ಕಾಣುತ್ತಿದೆ. ಇದರಿಂದ ಚಳಿಯ ತೀವ್ರತೆಯೂ ಹೆಚ್ಚಾಗಿದೆ.

ಬೀದರ್ ಹಾಗೂ ವಿಜಯಪುರದಲ್ಲಿ ಶುಕ್ರವಾರ ತಲಾ 12 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ತಾಪಮಾನ ದಾಖಲಾಗಿದೆ. ಧಾರವಾಡ, ಹಾಸನ, ಚಿಂತಾಮಣಿಗಳಲ್ಲಿ 13 ಡಿಗ್ರಿ ಸೆಲ್ಸಿಯಸ್, ದಾವಣಗೆರೆ, ಚಿತ್ರದುರ್ಗ, ಗದಗ, ಬೆಳಗಾವಿ ವಿಮಾನ ನಿಲ್ದಾಣದಲ್ಲಿ ತಲಾ 14 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಬೀದರ್‌ನಲ್ಲಿ ಗುರುವಾರ 11.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ರಾಜ್ಯದಲ್ಲಿ ಈ ತಿಂಗಳಲ್ಲೇ ಅತ್ಯಂತ ಕಡಿಮೆ ತಾಪಮಾನ. ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಡಿ.9ರಂದು 13.2 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿತ್ತು.ಬೆಂಗಳೂರಿನಲ್ಲಿಗುರುವಾರ15ಡಿಗ್ರಿಸೆಲ್ಸಿಯಸ್‌ತಾಪಮಾನ ದಾಖಲಾಗಿತ್ತು. ನಗರದಲ್ಲಿ ಡಿಸೆಂಬರ್‌ನಲ್ಲಿ ಈವರೆಗೆ ದಾಖಲಾಗಿರುವ ಕನಿಷ್ಠ ತಾಪಮಾನವಿದು. 2020ರ ಡಿಸೆಂಬರ್‌ನಲ್ಲಿ ಒಮ್ಮೆ 14 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಇದು ಕಳೆದ ಡಿಸೆಂಬರ್‌ನಲ್ಲಿ ದಾಖಲಾಗಿದ್ದ ಅತಿ ಕಡಿಮೆ ತಾಪಮಾನ.

‘ತೇವಾಂಶ ತರುವ ಮಾರುತಗಳು ಸಂಪೂರ್ಣವಾಗಿ ನಿಂತು, ಉತ್ತರ ಮತ್ತು ಈಶಾನ್ಯ ಮಾರುತಗಳು ರಾಜ್ಯದತ್ತ ಬೀಸುತ್ತಿವೆ. ಹಾಗಾಗಿ, ಒಣಹವೆ ಮುಂದುವರಿದು ಹವಾಮಾನದಲ್ಲಿ ಏರಿಳಿತ ಕಂಡು ಬಂದಿದೆ’ ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಣ ಹವೆ ಇದೆ. ಶುಭ್ರ ಆಕಾಶದಿಂದಾಗಿ ರಾತ್ರಿಯಿಂದಲೇ ತಾಪಮಾನ ಕಡಿಮೆಯಾಗಿ ಥರಗುಟ್ಟುವ ಚಳಿಯಾಗುತ್ತಿದೆ. ಈ ವೈಪರೀತ್ಯದಿಂದ ಮುಂಜಾನೆ ದಟ್ಟವಾದ ಮಂಜು ಆವರಿಸಿ ಗೋಚರತೆಯೂ ಕ್ಷೀಣಿಸುತ್ತಿದೆ’ ಎಂದು ಹವಾಮಾನ ಇಲಾಖೆ ತಜ್ಞ ಸದಾನಂದ ಅಡಿಗ ವಿವರಿಸಿದರು.

‘ಕಳೆದ ವಾರವಿಡೀ ಕನಿಷ್ಠ ತಾಪಮಾನ ಸ್ಥಿರವಾಗಿತ್ತು. ಮೂರು ದಿನಗಳಿಂದ ತಾಪಮಾನ ಕ್ಷೀಣಿಸುತ್ತಿದೆ. ಮುಂದಿನ ದಿನಗಳಲ್ಲಿ ಚಳಿ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ’ ಎಂದರು.

ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಧುಕರ ಶೆಟ್ಟಿ ಅವರ ಭಾವಚಿತ್ರಕ್ಕೆ ನಿವೃತ್ತ ನ್ಯಾಯಮೂರ್ತಿ ಎನ್‌.ಕೆ. ಸುಧೀಂದ್ರ ರಾವ್, ಎಡಿಜಿಪಿ ಜೆ. ಅರುಣ್ ಚಕ್ರವರ್ತಿ ಹಾಗೂ ಐಎಎಸ್ ಅಧಿಕಾರಿ ಹರ್ಷಗುಪ್ತ ಅವರು ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

## ‘ಕೆಲ ಅಧಿಕಾರಿಗಳಿಗೆ ಪ್ರಚಾರದ ಗೀಳು; ‘ಲೈಕ್’ ಸಿಗದಿದ್ದರೆ ಖಿನ್ನತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ಕೆಲ ಅಧಿಕಾರಿಗಳು, ಪ್ರಚಾರದ ಹಿಂದೆ ಬಿದ್ದಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮದೇ ಫೋಟೊ ಹಾಗೂ ವಿಡಿಯೊ ಅಪ್‌ಲೋಡ್ ಮಾಡುವ ಅವರೆಲ್ಲ, ‘ಲೈಕ್’ ಬಾರದಿದ್ದರೆ ಖಿನ್ನತೆಗೆ ಒಳಗಾದಂತೆ ವರ್ತಿಸುತ್ತಿದ್ದಾರೆ’ ಎಂದು ಆಂತರಿಕ ಭದ್ರತಾ ಪಡೆಯ (ಐಎಸ್‌ಡಿ) ಎಡಿಜಿಪಿ ಜೆ. ಅರುಣ್ ಚಕ್ರವರ್ತಿ ಹೇಳಿದರು.

ನಗರದ ‘ದಿ ಚಾನ್ಸೆಲರಿ’ ಹೋಟೆಲ್‌ನಲ್ಲಿ ಆಯೋಜಿಸಿದ್ದ ‘ಐಪಿಎಸ್ ಅಧಿಕಾರಿ ದಿವಂಗತ ಕೆ. ಮಧುಕರ್ ಶೆಟ್ಟಿ ಅವರ ಜನ್ಮ ದಿನಾಚರಣೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಣ್ಣ ವಯಸ್ಸಿನಲ್ಲೇ ಪ್ರಚಾರ ಬಯಸದೇ ಜನ ಮೆಚ್ಚುವ ಕೆಲಸ ಮಾಡಿದ ಮಧುಕರ್ ಶೆಟ್ಟಿ, ಇಂದಿನ ಪ್ರತಿಯೊಬ್ಬ ಅಧಿಕಾರಿಗಳಿಗೆ ಮಾದರಿ. ಅಭಿಮಾನಿಗಳು ಹಾಗೂ ಸಹೋದ್ಯೋಗಿಗಳ ಮನದಲ್ಲಿ ಅವರು ಅಜರಾಮರ. ಪ್ರತಿ ವರ್ಷವೂ ಅವರ ಜನ್ಮದಿನವನ್ನೂ ಅರ್ಥಪೂರ್ಣವಾಗಿ ಆಚರಿಸುವಂತಾಗಬೇಕು’ ಎಂದರು.

‘ಪದವಿ ವ್ಯಾಸಂಗದ ಅವಧಿಯಿಂದಲೂ ಮಧುಕರ್ ಶೆಟ್ಟಿ ಜೊತೆ ಒಡನಾಟ ಹೊಂದಿದ್ದೆ. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಅವರು, ಪ್ರತಿಯೊಂದು ವಿಷಯವನ್ನು ಬೇರೆಯವರಿಗಿಂತ ಭಿನ್ನವಾಗಿ ಆಳವಾಗಿ ತಿಳಿದುಕೊಳ್ಳುತ್ತಿದ್ದರು. ಅವರು ಭಾರತೀಯ ಪೊಲೀಸ್ ಸೇವೆಗೆ ಸೇರಿದ ಬಳಿಕ, ಹಗಲು-ರಾತ್ರಿ ಕೆಲಸ ಮಾಡುತ್ತಿದ್ದರು. ಮಾನವೀಯ ಮೌಲ್ಯಗಳನ್ನು ಇಟ್ಟುಕೊಂಡು ಸೇವೆ ಸಲ್ಲಿಸುತ್ತಿದ್ದ ಅಧಿಕಾರಿ ಅವರಾಗಿದ್ದರು’ ಎಂದೂ ತಿಳಿಸಿದರು.

ಕಾಡಿನಲ್ಲಿ ಒಂಟಿಯಾಗಿ ಬಂದಿದ್ದ ಮಧುಕರ್: ಐಎಎಸ್ ಅಧಿಕಾರಿ ಹರ್ಷ ಗುಪ್ತ ಮಾತನಾಡಿ, ‘ಮಧುಕರ್ ಶೆಟ್ಟಿ ಜೊತೆ ಕೆಲಸ ಮಾಡಿದ್ದು ನನ್ನ ಅದೃಷ್ಟ. ಅವರ ಕೆಲಸದ ವೈಖರಿ ಮೆಚ್ಚುವಂಥದ್ದು. ಜೊತೆಯಲ್ಲಿ ಕೆಲಸ ಮಾಡದವರೂ ಮಧುಕರ ಅವರನ್ನು ಹೊಗಳುತ್ತಾರೆ’ ಎಂದರು.

‘ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಎಸ್ಪಿಯಾಗಿ ಮಧುಕರ್ ಶೆಟ್ಟಿ ಕೆಲಸ ಮಾಡುತ್ತಿದ್ದರು. ಮಲೆ ಮಹದೇಶ್ವರ ಬೆಟ್ಟದಲ್ಲಿದ್ದ ಅವರನ್ನು ಭೇಟಿಯಾಗಲು ಹೋಗಿದ್ದೆ. ಅಪಾಯಕಾರಿ ಕಾಡಿನಲ್ಲಿ ಮಧುಕರ್ ಶೆಟ್ಟಿ ಒಬ್ಬರೇ ಟಾಟಾ ಸುಮೊ ತೆಗೆದುಕೊಂಡು ನನ್ನನ್ನು ಕರೆದೊಯ್ಯಲು ಬಂದಿದ್ದರು. ಹೆದರಿಕೆಯಾಗುವುದಿಲ್ಲವೇ ? ಎಂದು ಕೇಳಿದಾಗ, ಕಾರಿನಲ್ಲಿದ್ದ ಎರಡು ಎಕೆ–47 ಗನ್ ತೋರಿಸಿದ್ದರು. ಯಾರಾದರೂ ದಾಳಿ ಮಾಡಿದರೆ, ಅವರ ವಿರುದ್ಧ ಹೋರಾಡಲೇ ಬೇಕಲ್ಲ ? ಎಂಬುದಾಗಿ ಹೇಳಿದ್ದರು’ ಎಂದು ಮಧುಕರ್ ಜೊತೆಗಿನ ದಿನಗಳನ್ನು ಹರ್ಷ ಮೆಲುಕು ಹಾಕಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರ ರಾವ್, ‘ಸುದ್ದಿಗಾಗಿ ಸೇವೆ ಮಾಡದೇ, ಸದ್ದಿಲ್ಲದೇ ಸೇವೆ ಮಾಡಿದವರು’ ಎಂದರು. ಕಾರ್ಯಕ್ರಮದಲ್ಲಿ ಮಧುಕರ್ ಶೆಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

## ನಗರದಲ್ಲಿ ಇಂದು

**ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗೂ ಆಟೊ ಚಾಲಕರಿಗೆ ಸಮವಸ್ತ್ರ ವಿತರಣೆ:**ಆಯೋಜನೆ–ಕರುನಾಡ ವಿಜಯಸೇನೆ, ಸ್ಥಳ–ಸರ್ವತೋಮುಖ ಆಟದ ಮೈದಾನ, ಹೆಗ್ಗನಹಳ್ಳಿ ಕ್ರಾಸ್, ಗಜಾನನ ನಗರ, ಮಾಗಡಿ ರಸ್ತೆ, ಬೆಳಿಗ್ಗೆ 10

**ಕೃಷಿ ತಂತ್ರಜ್ಞರ ಸಂಸ್ಥೆಯ ಸಂಸ್ಥಾಪನಾ ದಿನ:**ಉದ್ಘಾಟನೆ–ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ನಿರ್ದೇಶಕ ಬಿ.ಎನ್.ಎಸ್.ಮೂರ್ತಿ, ಅತಿಥಿಗಳು–ಕೃಷಿ ಇಲಾಖೆ ನಿರ್ದೇಶಕ ಬಿ.ವೈ.ಶ್ರೀನಿವಾಸ, ಅಧ್ಯಕ್ಷತೆ–ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಪ್ರೊ. ವಿ.ವೀರಭದ್ರಯ್ಯ, ಸ್ಥಳ–ಎಚ್.ಆರ್.ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11



ಶೇಷಗೋಪಾಲನ್

**ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವ:** ಸಂಜೆ 5.15ಕ್ಕೆ 2021ನೇ ಸಾಲಿನ ‘ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ:ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪುರಸ್ಕೃತರು–ವಿದ್ವಾನ್ ಮಧುರೈ ಟಿ.ಎನ್. ಶೇಷಗೋಪಾಲನ್, ಸಂಗೀತ ಕಾರ್ಯಕ್ರಮಗಳು: ಬೆಳಿಗ್ಗೆ 9.30ಕ್ಕೆ ಎಸ್.ವಿ.ರಮಣ ಕುಮಾರ್ ಅವರಿಂದ ಗಾಯನ, 11.45ಕ್ಕೆ **ಮುದ್ದು ಮೋಹನ್ ಅವರಿಂದ ಹಿಂದೂಸ್ತಾನಿ ಗಾಯನ,** ಮಧ್ಯಾಹ್ನ 3.30ಕ್ಕೆ, ಶ್ರೀಧರ್ ಸಾಗರ್ ಅವರಿಂದ ಸ್ಯಾಕ್ಸೋಫೋನ್ ವಾದನ, ಸಂಜೆ 6.45ಕ್ಕೆ ಮೈಸೂರು ಎಂ.ನಾಗರಾಜ್ ಮತ್ತು ಎಂ.ಮಂಜುನಾಥ್ ಅವರಿಂದ ಪಿಟೀಲು ವಾದನ, ಆಯೋಜನೆ–ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ

**ಪುಸ್ತಕಗಳ ಬಿಡುಗಡೆ ಹಾಗೂ ಪ್ರಶಸ್ತಿಗಳ ಪ್ರದಾನ**:ಉದ್ಘಾಟನೆ–ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪುಸ್ತಕ ಬಿಡುಗಡೆ–ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕ್ಯಾಲೆಂಡರ್ ಬಿಡುಗಡೆ–ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಅಧ್ಯಕ್ಷತೆ–ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಶಸ್ತಿ ಪುರಸ್ಕೃತರು–ಜೋಗಿ, ಮಂಜುಳಾ ಹಿರೇಮಠ್, ಜಿ.ಎನ್.ಮೋಹನ್, ಬಿ.ಆರ್.ಅಶೋಕ್ ಕುಮಾರ್, ಆಯೋಜನೆ–ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 11

**ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ಬಹುಮಾನ ವಿತರಣೆ:**ಉದ್ಘಾಟನೆ–ಹೊನ್ನು ಸಿದ್ಧಾರ್ಥ್, ಅಧ್ಯಕ್ಷತೆ–ವಿ.ಕೃಷ್ಣಮೂರ್ತಿ, ಬಹುಮಾನ ವಿತರಣೆ–ಟಿ.ಪ್ರಕಾಶ್, ಆಯೋಜನೆ–ರಂಗೋತ್ರಿ, ಸ್ಥಳ–ನ್ಯೂಹಾರ್ಡ್ ಇಂಡಿಯನ್ ಸ್ಕೂಲ್, ಕೊಡಿಗೇಹಳ್ಳಿ, ಮಧ್ಯಾಹ್ನ 12.30

**ಪ್ರಥಮ ಚಿಕಿತ್ಸೆ ಕ್ರಮಗಳ ಕುರಿತು ಸಂಚಾರ ಪೊಲೀಸರಿಗೆ ತರಬೇತಿ:**ಅತಿಥಿ–ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಬಿ.ಆರ್.ರವಿಕಾಂತೇಗೌಡ, ಆಯೋಜನೆ–ವಿಎಂಇಡಿಒ, ಸ್ಥಳ–ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರ, ಇನ್‌ಫೆಂಟ್ರಿ ರಸ್ತೆ, ಮಧ್ಯಾಹ್ನ 1

ರವಿಕಾಂತೇಗೌಡ

**ಮನೆಯಂಗಳದಲ್ಲಿ ಮಾತುಕತೆ**:ತಿಂಗಳ ಅತಿಥಿ–ರಂಗಕರ್ಮಿ ಎಸ್.ಎನ್.ಸೇತುರಾಂ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

**‘ನಾದ ಝೇಂಕಾರ’–ವೈವಿಧ್ಯಮಯ ಕನ್ನಡ ಗೀತೆಗಳ ಗೀತಯಾನ**:ಸಂಜೆ 7ಕ್ಕೆ ಉದ್ಘಾಟನೆ–ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ನೀಲಮ್ಮ, ಅತಿಥಿಗಳು–ಗಾಯಕ ಪಂ.ಬಸವರಾಜ ಮುಗಳಖೋಡ, ಗಾಯಕಿ ಸುಮಾ ಎಲ್.ಎನ್.ಶಾಸ್ತ್ರೀ, ರೋಶನ್ ಕುಮಾರ್, ಟಿ.ಎನ್.ವಿಶ್ವನಾಥ್, ವೆಂಕಟೇಶ್ ಶೇಷಾದ್ರಿ, ಆಯೋಜನೆ–ಚಿರಂತನ ಅಭಿವೃದ್ಧಿ ಪ್ರತಿಷ್ಠಾನ, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಕೆನರಾ ಬ್ಯಾಂಕ್, ಸ್ಥಳ–ಆರೂಢ ಜ್ಞಾನಮಂದಿರ ಸಿದ್ಧಾರೂಢ ಆಶ್ರಮ, ಮೈಸೂರು ರಸ್ತೆಯ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 4.30ಕ್ಕೆ

**ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ‘ಗಾಂಧಿ ಶಿಲ್ಪ ಬಜಾರ್’ ಉದ್ಘಾಟನೆ:**ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, ಅತಿಥಿಗಳು–ಸಂಸದ ತೇಜಸ್ವಿ ಸೂರ್ಯ, ಶಾಸಕ ಸತೀಶ್ ರೆಡ್ಡಿ, ಆಯೋಜನೆ–ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, ಸ್ಥಳ–ವೈಟ್ ಹೌಸ್ ಕನ್ವೆಂಷನ್ ಹಾಲ್, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಎಚ್‌ಎಸ್‌ಆರ್ ಬಡಾವಣೆ 6ನೇ ಹಂತ, ಸಂಜೆ 5

**ಕಾಂಚನೋತ್ಸವ:**ಪಂಡಿತ್ ವೆಂಕಟೇಶ್ ಕುಮಾರ್ ಅವರಿಂದ ಗಾಯನ, ಆಯೋಜನೆ–ಕಾಂಚನ ಶ್ರೀಲಕ್ಷ್ಮೀನಾರಾಯಣ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ–ಅಕ್ಷರಂ, ಗಿರಿನಗರ, ಬೆಳಿಗ್ಗೆ 6

**ಮಾರ್ಗಶೀರ್ಷೋತ್ಸವ**:ಕೃಷ್ಣಮೋಹನ್, ರಾಮ್ ಕುಮಾರ್ ಮೋಹನ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಆಯೋಜನೆ ಮತ್ತು ಸ್ಥಳ–ಸುರಭಾರತೀ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಎಚ್‌ಆರ್‌ಬಿಆರ್ ಬಡಾವಣೆ, ಸಂಜೆ 6.30

**ರಂಗನಾಯಕಮ್ಮ ಅವರ ‘ಮಕ್ಕಳಿಗಾಗಿ ಅರ್ಥಶಾಸ್ತ್ರ’ ಪುಸ್ತಕ ಬಿಡುಗಡೆ ಹಾಗೂ ಚರ್ಚೆ:**ಪುಸ್ತಕ ಪರಿಚಯ–ರತಿ ರಾವ್, ಅತಿಥಿಗಳು–ಪಿ.ಎ.ಕುಮಾರ್, ವಿ.ಎನ್. ಲಕ್ಷ್ಮೀ ನಾರಾಯಣ, ಆಯೋಜನೆ–ಪುಸ್ತಕ ಪ್ರೀತಿ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

**ಸಂಗೀತ ಕಾರ್ಯಕ್ರಮ**

**ಉದಯ್ ಮಹೂರ್ಕರ್ ಅವರ ‘ವೀರ ಸಾವರ್ಕರ್’ ಪುಸ್ತಕ ಬಿಡುಗಡೆ**:ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ–ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು–ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಶಾಸಕ ಎನ್. ಮಹೇಶ್, ಆಯೋಜನೆ–ನಿಲುಮೆ, ಸ್ಥಳ–ಟೌನ್‌ಹಾಲ್, ಸಂಜೆ 5



ನಿರ್ಮಲಾನಂದ ನಾಥ ಸ್ವಾಮೀಜಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆಗಳು–ಮಹದೇವಪುರ, ಹಳೆ ಮದ್ರಾಸ್ ರಸ್ತೆ, ಕೆ.ಆರ್.ಪುರ, ಬೆಂಗಳೂರು – 560 036.
ಸಂಖ್ಯೆ: ಬೃಬೆಂಮಪಾ/ಕಾಪಾಅ(ಯೋ)/ಮವ/ಟೆಂಡರ್/01/2021–22 ದಿನಾಂಕ: 16.12.2021

ತಿದ್ದುಪಡಿ ಪ್ರಕಟಣೆ

ಈ ಮೇಲ್ಕಂಡ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆಯಲ್ಲಿ ಕ್ರ.ಸಂ. 4ರಲ್ಲಿ ಅಂದಾಜು ಮೊತ್ತ 300.00 ಲಕ್ಷಗಳು ಎಂದಿರುವುದನ್ನು 500.00 ಲಕ್ಷಗಳು ಎಂದು ಓದಿಕೊಳ್ಳುವುದು. ಸಹಿ/– ಕಾರ್ಯಪಾಲಕ ಅಭಿಯಂತರರು – ಯೋಜನೆಗಳು–ಮಹದೇವಪುರ ವಿಭಾಗ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110 ದೂ: 080–29787463,
E-Mail: eerdwsd.bngr1@gmail.com
ಸಂ.ಕಾ.ಅ./ಗ್ರಾಕುನೀ&ನೈವಿ./ಬೆಂಗ್ರಾ/ಸಿ1/17/ಪ್ರಕಟಣೆ/2021–22/821 ದಿನಾಂಕ : 16.12.2021

ಪ್ರಕಟಣೆ

2021–22 ನೇ ಸಾಲಿನ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಕಛೇರಿಗೆ ಹಾಗೂ ಉಪ ವಿಭಾಗ ಕಛೇರಿಗೆ ಲೇಖನಾಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಲೇಖನಾ ಸಾಮಗ್ರಿ ಸರಬರಾಜುದಾರರಿಂದ ಕೊಟೇಷನ್ ಅಹ್ವಾನಿಸಲಾಗಿದೆ. ಲೇಖನಾ ಸಾಮಗ್ರಿಗಳ ಸರಬರಾಜುದಾರರು ಕೊಟೇಷನನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

1. ಕೊಟೇಷನ್ ಸಲ್ಲಿಸುವ ಪ್ರಾರಂಭಿಸುವ ದಿನಾಂಕ: 17–12–2021
2. ಕೊಟೇಷನ್ ಸಲ್ಲಿಸುವ ಕೊನೆಯ ದಿನಾಂಕ: 23–12–2021
3. ಭರ್ತಿ ಮಾಡಿದ ಕೊಟೇಷನ್ ತೆಗೆಯುವ ದಿನಾಂಕ: 24–12–2021

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/312/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ಸಂಖ್ಯೆ: ಕಾಪಾಅ/ಯೋ–ಪಶ್ಚಿಮ/ಟೆಂಡರ್/18/2021–22 ದಿನಾಂಕ: 17.12.2021

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ. **ಸ್ಟ್ಯಾಂಡರ್ಡ್ ಬಿಡ್ ದಾಖಲೆಗಳು: ಕೆಡಬ್ಲ್ಯೂ – 3**

| ಕಾಮಗಾರಿಯ ಹೆಸರು | ಅಂದಾಜು ಮೊತ್ತ (₹.ಲಕ್ಷಗಳಲ್ಲಿ) | ಇಎಂಡಿ (₹.ಗಳಲ್ಲಿ) |
|---|---|---|
| ವಾರ್ಡ್ ಸಂಖ್ಯೆ–101, ಕಾಮಾಕ್ಷಿಪಾಳ್ಯದಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಪಾರ್ಕ್ (ಆಲದಮರ ಪಾರ್ಕ್) ನಲ್ಲಿ ಬಾಕಿ ಉಳಿಕೆ ಮತ್ತು ಇತರೆ ಕಾಮಗಾರಿಗಳನ್ನು ಮಾಡುವುದು. | 99.95 | 2,00,000 |

**ಟೆಂಡರ್ ವೇಳಾಪಟ್ಟಿ:** (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **20.12.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳಿಗೆ (ಇ–ಪೋರ್ಟಲ್ ಮೂಲಕ ಮಾತ್ರ) ಕೊನೆಯ ದಿನಾಂಕ ಮತ್ತು ಸಮಯ: **22.12.2021**ರ ಮಧ್ಯಾಹ್ನ **3:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **24.12.2021**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ: **06.01.2022**ರ ಸಂಜೆ **4:00** ಗಂಟೆಯವರೆಗೆ. (5) ಬಿಡ್‌ಗಳ ತೆರೆಯುವಿಕೆ (ತಾಂತ್ರಿಕ ಬಿಡ್) ದಿನಾಂಕ **10.01.2022**ರ ಸಂಜೆ **4:30** ಗಂಟೆಗೆ. (6) ಬಿಡ್‌ಗಳ ತೆರೆಯುವಿಕೆ (ಆರ್ಥಿಕ ಬಿಡ್) ದಿನಾಂಕ **12.01.2022** (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನೆ ವಿಭಾಗ, ಪಶ್ಚಿಮ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ • ದಟ್ಟಣೆಗೆ ಸಿಗದ ಪರಿಹಾರ

# ಹೆಬ್ಬಾಳ ಮೇಲ್ಸೇತುವೆ: ಸಂಚಾರ ನಿತ್ಯ ಗೋಳು

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಬಳ್ಳಾರಿ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಲ್ಲಿ ನಿತ್ಯವೂ ಸಂಚಾರ ದಟ್ಟಣೆಯ ಗೋಳು ಸಾಮಾನ್ಯವಾಗಿಬಿಟ್ಟಿದೆ. ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ದಿನಂಪ್ರತಿ ವಾಹನಗಳು ದಟ್ಟಣೆಯಲ್ಲಿ ಸಿಲುಕಿ ಸಾಲುಗಟ್ಟಿ ನಿಲ್ಲುತ್ತಿವೆ. ಈ ಮೇಲ್ಸೇತುವೆ ಬಳಸುವವರು ನಿಮಿಷಗಟ್ಟಲೇ ಕಾಯುವ ಶಿಕ್ಷೆಯನ್ನು ಅನುಭವಿಸುವಂತಾಗಿದೆ.

ವಿಮಾನ ನಿಲ್ದಾಣದಲ್ಲಿ ಬಂದಿಳಿಯುವ ಬಹುತೇಕ ಪ್ರಯಾಣಿಕರು ಬಳ್ಳಾರಿ ರಸ್ತೆ ಮೂಲಕವೇ ಬೆಂಗಳೂರು ಪ್ರವೇಶಿಸುತ್ತಾರೆ. ವಿಮಾನ ನಿಲ್ದಾಣದಿಂದ ಹೊರಟು ಯಾವುದೇ ಅಡೆತಡೆಗಳಿಲ್ಲದೆಯೇ ಬರುವ ಅವರು, ಹೆಬ್ಬಾಳ ಸೇತುವೆ ಬಳಿ ಬರುತ್ತಿದ್ದಂತೆಯೇ ಧುತ್ತೆಂದು ಎದುರಾಗುವ ದಟ್ಟಣೆಗೆ ಬೆಚ್ಚಿಬೀಳುವ ಸ್ಥಿತಿ ಇದೆ. ಎರಡು ಪಥಗಳ ರಸ್ತೆಯಲ್ಲಿ ಬಂದ ವಾಹನಗಳು, ಇಲ್ಲಿ ಮೇಲ್ಸೇತುವೆಯಲ್ಲಿ ಒಂದೇ ಪಥದಲ್ಲಿ ಸಾಗಬೇಕಿದೆ. ದಟ್ಟಣೆಗೆ ಇದುವೇ ಪ್ರಮುಖ ಕಾರಣವೆಂದು ಸ್ಥಳೀಯರು ದೂರುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಂತೆಯೂ ಒತ್ತಾಯಿಸುತ್ತಿದ್ದಾರೆ.

‘ಹೆಬ್ಬಾಳ ಮೇಲ್ಸೇತುವೆ ಮೂಲಕ ಬನ್ನಿ ಎಂದೊಡನೆ, ಅದರ ಸಹವಾಸ ಬೇಡವೆಂದು ಸಂಬಂಧಿಕರು ಹೇಳುತ್ತಾರೆ. ಹೆಬ್ಬಾಳ ಮೇಲ್ಸೇತುವೆ ಅತೀ ಹೆಚ್ಚು ದಟ್ಟಣೆ ಇರುವ ಜಾಗವೆಂಬ ಅಪಖ್ಯಾತಿಗೂ ಪಾತ್ರವಾಗಿದೆ. ಈ ಸಮಸ್ಯೆಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ’ ಎಂದು ಸ್ಥಳೀಯ ನಿವಾಸಿ ಎಸ್. ವೀರೇಶ್ ಅಳಲು ತೋಡಿಕೊಂಡರು.

‘ವಿಮಾನ ನಿಲ್ದಾಣದಿಂದ ವೇಗವಾಗಿ ಬರುವ ವಾಹನಗಳು, ಹೆಬ್ಬಾಳ ಮೇಲ್ಸೇತುವೆಯಲ್ಲಿ ದಟ್ಟಣೆಯಲ್ಲಿ ಸಿಲುಕುತ್ತವೆ. ಮಧ್ಯಾಹ್ನ ದಟ್ಟಣೆ ಪ್ರಮಾಣ ಸ್ವಲ್ಪ ಕಡಿಮೆ. ಬೆಳಿಗ್ಗೆ ಹಾಗೂ ಸಂಜೆಯಂತೂ ವಾಹನಗಳು ಕಿ.ಮೀ ಗಟ್ಟಲೇ ಸಾಲುಗಟ್ಟಿ ನಿಂತಿರುತ್ತವೆ. ಇಂಥ ದಟ್ಟಣೆಯ ಅವಧಿಯಲ್ಲಿ ಮೇಲ್ಸೇತುವೆ ಮೂಲಕ ವಾಹನಗಳು ಹಾದುಹೋಗಲು ಅರ್ಧ ತಾಸುಗಟ್ಟಲೆ ಸಮಯ ತಗಲುತ್ತದೆ’ ಎಂದು ವಿವರಿಸಿದರು.

ಸಂಜಯನಗರದ ರಾಮಕೃಷ್ಣ ಲೇಔಟ್ ನಿವಾಸಿ ದೀಪಕ್‌ಕುಮಾರ್, ‘ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಂಚರಿಸುವುದೇ ದೊಡ್ಡ ತಲೆನೋವು. ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುತ್ತೇನೆ. ಕೆಲಸದ ಅವಧಿಗೂ ಎರಡು ಗಂಟೆ ಮುನ್ನವೇ ಮನೆಯಿಂದ ಬೆಳಿಗ್ಗೆ ಹೊರಡುತ್ತೇನೆ. ಸಂಜೆ ಕೆಲಸ ಮುಗಿಸಿ ಹೊರಡುವಾಗ ಮನೆಗೆ ಯಾವಾಗ ಹೋಗುತ್ತೇನೆ ಎಂಬ ಬಗ್ಗೆಯೇ ಸ್ಪಷ್ಟತೆ ಇರುವುದಿಲ್ಲ’ ಎಂದರು.

‘ಸಂಜೆ ಮನೆಗೆ ಹೊರಡುವಾಗ ಹೆಬ್ಬಾಳ ಮೇಲ್ಸೇತುವೆಯನ್ನು ದಾಟಿ ಮುಂದೆ ಸಾಗಿದರೆ ಸಾಕು ಅನಿಸುತ್ತದೆ. ಆದರೆ, ವಾಹನಗಳ ದಟ್ಟಣೆ ಇದ್ದೇ ಇರುತ್ತದೆ. ಮೇಲ್ಸೇತುವೆ ದಾಟಿದ ಕೂಡಲೇ ಏನೋ ಸಾಧನೆ ಮಾಡಿದಷ್ಟು ಖುಷಿ ಆಗುತ್ತದೆ’ ಎಂದೂ ವ್ಯಂಗ್ಯವಾಡಿದರು.

**ಮಾಲ್, ಖಾಸಗಿ ಕಂಪನಿಗಳ ತಾಣ:** ಎಸ್ಟಿಮ್ ಮಾಲ್ ಹಾಗೂ ಹಲವು ಖಾಸಗಿ ಕಂಪನಿಗಳು ಈ ರಸ್ತೆಯ ಆಸುಪಾಸಿನಲ್ಲಿವೆ. ನಗರದ ವಸತಿ ಪ್ರದೇಶಗಳಿಂದ ಕೆಲಸಕ್ಕೆ ಹೋಗುವ ಹಾಗೂ ಕೆಲಸ ಮುಗಿಸಿ ಮನೆಗೆ ಮರಳುವ ಬಹುತೇಕರು ಹೆಬ್ಬಾಳ ಮೇಲ್ಸೇತುವೆ ಬಳಸುತ್ತಾರೆ. ನಿತ್ಯವೂ ಇಲ್ಲಿನ ಸಂಚಾರ ದಟ್ಟಣೆಯಿಂದ ಬೇಸತ್ತಿದ್ದು, ಇದಕ್ಕೆ ಶಾಶ್ವತ ಪರಿಹಾರ ಯಾವಾಗ ಎಂಬುದಾಗಿ ಇವರೆಲ್ಲರೂ ಪ್ರಶ್ನಿಸುತ್ತಿದ್ದಾರೆ.

ಹೆಬ್ಬಾಳ ಕೆರೆಗೆ ಹೊಂದಿಕೊಂಡಿರುವ ಮೇಲ್ಸೇತುವೆ ಕೆಳಭಾಗದಲ್ಲಿ ರೈಲ್ವೆ ಹಳಿ ಇದೆ. ಮೇಲ್ಸೇತುವೆ ತಪ್ಪಿಸಿ, ಸರ್ವೀಸ್ ರಸ್ತೆ ಮೂಲಕ ಹೊರ ವರ್ತುಲ ರಸ್ತೆಗೆ ಸೇರಿ ಮುಂದಕ್ಕೆ ಹೋಗಲು ಅಡೆತಡೆಗಳಿವೆ. ಸುತ್ತಿ– ಬಳಸಿ ಸಂಚರಿಸಬೇಕಾದ ಸ್ಥಿತಿಯೂ ಇದೆ.

‘ದಿನದಲ್ಲಿ ಒಂದು ಬಾರಿ ದಟ್ಟಣೆ ಸಹಿಸಿಕೊಳ್ಳಬಹುದು. ಅದೇ ನಿತ್ಯವೂ ದಟ್ಟಣೆಯಾದರೆ ಕಿರಿಕಿರಿ ಹೆಚ್ಚು. ಕೆಲಸ ಹಾಗೂ ಇತರೆ ಒತ್ತಡಗಳಲ್ಲಿರುವ ಜನ, ದಟ್ಟಣೆಯಲ್ಲಿ ಸಿಲುಕಿದರಂತೂ ಅವರ ಪಾಡು ಹೇಳತೀರದು’ ಎಂದು ಖಾಸಗಿ ಕಂಪನಿ ಉದ್ಯೋಗಿಯೂ ಆಗಿರುವ ಬೈಕ್ ಸವಾರ ಅರುಣ್ ಗೌಡ ಸಮಸ್ಯೆ ಹೇಳಿಕೊಂಡರು.

ಕ್ಯಾಬ್ ಚಾಲಕ ನಾರಾಯಣಸ್ವಾಮಿ, ‘ವಿಮಾನ ನಿಲ್ದಾಣದಿಂದ ನಗರಕ್ಕೆ ಕ್ಯಾಬ್ ಸೇವೆ ನೀಡುತ್ತಿದ್ದೇನೆ. ಸಾಮಾನ್ಯ ದಿನಗಳಲ್ಲಿ ಹೆಬ್ಬಾಳ ಮೇಲ್ಸೇತುವೆ ದಾಟಲು 15 ನಿಮಿಷ ಬೇಕು. ದಟ್ಟಣೆ ಸಮಯದಲ್ಲಂತೂ ಅರ್ಧ ಗಂಟೆಗೂ ಹೆಚ್ಚು ಹೊತ್ತು ಕಾಯಲೇ ಬೇಕು’ ಎಂದರು.

‘ದಟ್ಟಣೆ ಸಮಸ್ಯೆಯಿಂದ ಹೆಚ್ಚು ಟ್ರಿಪ್ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ತಿಂಗಳ ದುಡಿಮೆಯೂ ಕಡಿಮೆ ಆಗುತ್ತಿದ್ದು, ಕಾರಿನ ಕಂತು ತುಂಬಲು ಕಷ್ಟಗಳು ಎದುರಾಗುತ್ತಿವೆ’ ಎಂದು ಅಳಲು ತೋಡಿಕೊಂಡರು.

‘ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೆಬ್ಬಾಳ ಮೇಲ್ಸೇತುವೆ ಮಾತ್ರ ಹಾಗೇ ಇದೆ. ದಯವಿಟ್ಟು ದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಬೇಕು. ಇಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಸಮಸ್ಯೆ ಮತ್ತಷ್ಟು ಹೆಚ್ಚಾಗಲಿದೆ’ ಎಂದೂ ಅವರು ಎಚ್ಚರಿಕೆ ಮಾತುಗಳನ್ನಾಡಿದರು.

ಹೆಬ್ಬಾಳ ಮೇಲ್ಸೇತುವೆ ಬಳಿ ಉಂಟಾದ ದಟ್ಟಣೆಯಿಂದಾಗಿ ಸಾಲುಗಟ್ಟಿ ನಿಂತ ವಾಹನಗಳು – ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಪ್ರಯಾಣ ಪ್ರಯಾಸ

# ಸಂಗೀತ ಉತ್ಸವ: ಗಾನ ಸುಧೆಯಲ್ಲಿ ಮಿಂದೆದ್ದ ಜನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸೂರ್ಯ ಪಡುವಣದತ್ತ ನಿಧಾನವಾಗಿ ಜಾರುತ್ತಿದ್ದ ಸಮಯದಲ್ಲಿ ಗಾಯನ ಸಮಾಜದಲ್ಲಿ ಸಂಗೀತ ಸುಧೆ ಶುರುವಾಗಿತ್ತು. ಸಂಗೀತ ಕಲಾನಿಧಿ, ವಿದ್ವಾನ್ ಸುಧಾ ರಘುನಾಥನ್ ಅವರ ಗಾನ ಮಾಧುರ್ಯಕ್ಕೆ ನೆರೆದಿದ್ದವರು ತಲೆದೂಗಿದರು.

ನಗರದ ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್ ಹಮ್ಮಿಕೊಂಡಿರುವ 27ನೇ ವರ್ಷದ ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವಕ್ಕೆ ಶುಕ್ರವಾರ ಚಾಲನೆ ಲಭಿಸಿತು.

ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಅವರು ಉತ್ಸವ ಉದ್ಘಾಟಿಸಿದ ಬಳಿಕ ಸಭಾಂಗಣವು ಸ್ವರ ಮಾಧುರ್ಯಕ್ಕೆ ಸಾಕ್ಷಿಯಾಯಿತು.

ವಿದುಷಿ ಚಾರುಮತಿ ರಾಮಾನುಜಂ ಅವರ ವಯಲಿನ್, ವಿದ್ವಾನ್ ಅಕ್ಷಯ್ ಅನಂತ ಪದ್ಮನಾಭನ್ ಅವರ ಮೃದಂಗ ವಾದನವೂ ಕಿವಿಗೆ ಇಂಪು ನೀಡಿದವು.

ವಿದ್ವಾನ್ ವಾಲಯಪಟ್ಟಿ ಎ.ಆರ್. ಸುಬ್ರಮಣಿಯಂ ಹಾಗೂ ಸಂಗಡಿಗರ ಸಂಗೀತ ಕಛೇರಿ ಸಂಜೆ 4 ರಿಂದ 6ರ ವರೆಗೆ ನಿಗದಿಯಾಗಿತ್ತು. ಅನಿವಾರ್ಯ ಕಾರಣಗಳಿಂದ ಅದು ರದ್ದಾಯಿತು. ಈ ಕೊರಗನ್ನು ಸುಧಾ ದೂರ ಮಾಡಿದರು.

ಸುಮಾರು ಎರಡೂವರೆ ಗಂಟೆ ಸಂಗೀತ ಕಛೇರಿ ನಡೆಸಿಕೊಟ್ಟ ಅವರು ತಮ್ಮ ಸವಿಗಾನದಿಂದ ಸಂಗೀತಾಸಕ್ತರನ್ನು ಮಂತ್ರಮುಗ್ಧರನ್ನಾಗಿಸಿದರು. ಆನ್‌ಲೈನ್ ಮೂಲಕವೂ ಹಲವರು ಅವರ ಹಾಡುಗಳನ್ನು ಆಲಿಸಿದರು.

ಶನಿವಾರ ಬೆಳಿಗ್ಗೆ 9.30ಕ್ಕೆ ಸಂಗೀತ ಕಚೇರಿ ಶುರುವಾಗಲಿವೆ. ಪ್ರಸಿದ್ಧ ಹಿಂದೂಸ್ಥಾನಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವೀಣೆ, ಡೋಲು, ಪಿಟೀಲು, ಸ್ಯಾಕ್ಸೊಫೋನ್, ವಯಲಿನ್ ಹಾಗೂ ಕೊಳಲು ವಾದಕರು ಸಂಗೀತ ಕಛೇರಿಗಳನ್ನು ನಡೆಸಿಕೊಡಲಿದ್ದಾರೆ. ಆನ್‌ಲೈನ್‌ನಲ್ಲೂ (https://shaale.com/watch/svn) ನೇರ ಪ್ರಸಾರ ಇರಲಿದೆ.

ಶಾಸ್ತ್ರೀಯ ಸಂಗೀತ ಗಾಯಕಿ ಸುಧಾ ರಘುನಾಥನ್ ಅವರು ಸಂಗೀತ ಉತ್ಸವಕ್ಕೆ ಚಾಲನೆ ನೀಡಿದರು. (ಎಡದಿಂದ) ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್‌.ಎನ್‌.ರಾಮಪ್ರಸಾದ್, ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಸತ್ಯಧ್ಯಾನ ಆಚಾರ್ ಕಟ್ಟಿ, ಗಾಯನ ಸಮಾಜದ ಅಧ್ಯಕ್ಷ ಎಂ.ಆರ್‌.ವಿ.ಪ್ರಸಾದ್, ಬಿಜೆಪಿ ಮುಖಂಡ ಎಸ್‌.ಎಂ.ಕೃಷ್ಣ ಮತ್ತು ಸ್ವಾಸ ಹೋಮ್ಸ್ ಸಿಇಒ ಶಶಿಧರ್ ರಾವ್ ಇದ್ದರು –ಪ್ರಜಾವಾಣಿ ಚಿತ್ರ

# ‘ಸಂಗೀತದಿಂದ ಸಮಾಜದಲ್ಲಿ ಶಾಂತಿ ಸಾಧ್ಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸುಗಮ ಸಂಗೀತ ಒಂದು ವಿಶಿಷ್ಟ ಪ್ರಕಾರವಾಗಿದ್ದು, ಅದು ಕಾವ್ಯದ ಅರ್ಥವನ್ನು ವ್ಯಾಖ್ಯಾನಿಸುವ ಸಾಮರ್ಥ್ಯ ಹೊಂದಿದೆ. ಸಾಹಿತ್ಯವು ಅದರ ಪ್ರಧಾನ ಅಂಶವಾಗಿದ್ದು, ಗಾಯಕರು ಭಾವನೆಗಳನ್ನು ಪ್ರಸ್ತುತಪಡಿಸಿ ಹಾಡಿದರೆ ಹಾಡು ಉತ್ತಮವಾಗಿ ಮೂಡಿಬರುತ್ತದೆ. ಆದ್ದರಿಂದ ಸಾಹಿತ್ಯವನ್ನು ಪ್ರೀತಿಸಬೇಕು‘ ಎಂದು ಗಾಯಕಿ ಮತ್ತು ಸಂಗೀತ ಸಂಯೋಜಕಿ ಪ್ರೇಮಲತಾ ದಿವಾಕರ್ ಹೇಳಿದರು.

ಅವರು ಗಾನಗಂಗಾ ಸಂಸ್ಥೆಯು ನಗರದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ನಯನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ’ಕನ್ನಡ ಗೀತ ಗಾಯನ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಹಲವಾರು ವರ್ಷಗಳಿಂದ ಸಂಗೀತ ಪೋಷಣೆಯನ್ನು ಮಾಡಿಕೊಂಡು ಬರುತ್ತಿರುವ ಗಾನಗಂಗಾ ಸಂಸ್ಥೆಯ ಕಾರ್ಯ ಶ್ಲಾಘನೀಯ. ಸಂಗೀತದಿಂದ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವಿದ್ದು, ಕಲಾವಿದರಿಗೆ ಅದು ದಾರಿಯಾಗಲಿ ಸುಗಮ ಸಂಗೀತವು ಇನ್ನಷ್ಟು ಬೆಳೆಯಲಿ‘ ಎಂದು ಅವರು ಆಶಿಸಿದರು.

ಸಂಸ್ಥೆಯ ನಿರ್ದೇಶಕ ಪಂಪಾಪತಿ ಗದ್ದಿ, ಟ್ರಸ್ಟಿ ಅಮೃತಾ. ಪಿ. ಗದ್ದಿ ಇದ್ದರು. ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ವಿವಿಧ ತಂಡಗಳ ಕಲಾವಿದರು ಕನ್ನಡ ಗೀತ ಗಾಯನ ನಡೆಸಿಕೊಟ್ಟರು.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ಪ್ರತೀ ದಿನ ಬೆಳಿಗ್ಗೆ ವಚನವಾಣಿ, ಬೆ. 7.30 ದಿನದ ಸುದ್ದಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಸಾರ
Prajavani.net Prajavani Prajavani

## ಐಎಸ್‌ಐಎಸ್‌ನಲ್ಲಿ 66 ಭಾರತೀಯರು: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಜಾಗತಿಕ ಉಗ್ರ ಸಂಘಟನೆ ಐಎಸ್‌ಐಎಸ್‌ನಲ್ಲಿ ಭಾರತದ 66 ಜನ ಹೋರಾಟಗಾರರು ಇದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಜಾಗತಿಕ ಭಯೋತ್ಪಾದನೆ ಕುರಿತು ಇಲಾಖೆ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ.

'ಭಯೋತ್ಪಾದನೆಗೆ ಸಂಬಂಧಿಸಿದ 34 ಪ್ರಕರಣಗಳ ಕುರಿತು ಎನ್‌ಐಎ ತನಿಖೆ ನಡೆಸಿದೆ. ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲಿ 160 ಮಂದಿಯನ್ನು ಬಂಧಿಸಿದೆ. ಈ ಪೈಕಿ 10 ಜನರು ಅಲ್‌ಕೈದಾ ಜೊತೆ ನಂಟು ಹೊಂದಿದ್ದರು' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಭಯೋತ್ಪಾದನೆ ವಿರುದ್ಧ ಭಾರತ ನಡೆಸುತ್ತಿರುವ ಹೋರಾಟವನ್ನು ವರದಿಯಲ್ಲಿ ಶ್ಲಾಘಿಸಲಾಗಿದೆ. ಎನ್‌ಐಎ ಸೇರಿದಂತೆ ಭಯೋತ್ಪಾದನೆ ನಿಗ್ರಹ ಪಡೆಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಾಗಿದೆ.

ರಸ್ತೆ ಕಾಮಗಾರಿ: ಕೆಆರ್‌ಐಡಿಎಲ್‌ಗೆ ಹೊಣೆ • ₹27 ಲಕ್ಷ ಹೆಚ್ಚುವರಿ ಪಾವತಿ?

# ಕಡಿಮೆ ವೆಚ್ಚ ಬಿಟ್ಟು ದುಬಾರಿ ವೆಚ್ಚಕ್ಕೆ ಮೊರೆ!

• ವಿಜಯಕುಮಾರ್ ಎಸ್‌.ಕೆ.

ಬೆಂಗಳೂರು: ಅಂದಾಜು ವೆಚ್ಚಕ್ಕಿಂತ ಶೇ 15ರಷ್ಟು ಕಡಿಮೆ ಮೊತ್ತದಲ್ಲಿ ಅಭಿವೃದ್ಧಿಯಾಗುತ್ತಿದ್ದ ರಸ್ತೆಗೆ ಶೇ 12ರಷ್ಟು ಹೆಚ್ಚು ಬಿಲ್ ಮೊತ್ತ ಪಾವತಿಸಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅಭಿವೃದ್ಧಿಪಡಿಸಲು ಸಮಾಜ ಕಲ್ಯಾಣ ಇಲಾಖೆ ಮುಂದಾಗಿದೆ.

ಪರಿಶಿಷ್ಟ ಜಾತಿಗಳ ಉಪಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ (ಟಿಎಸ್‌ಪಿ) ಅನುದಾನದಲ್ಲಿ ಸಿ.ವಿ. ರಾಮನ್‌ನಗರ ವ್ಯಾಪ್ತಿಯಲ್ಲಿ ₹3 ಕೋಟಿ ಮೊತ್ತದಲ್ಲಿ ಆರು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮೊದಲಿಗೆ ಪಂಚಾಯತ್ ರಾಜ್ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಲಾಗಿತ್ತು.

ತಲಾ ₹50 ಲಕ್ಷ ಮೊತ್ತದ ಆರು ಕಾಮಗಾರಿಗಳಿಗೆ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದರು. ಅಂದಾಜು ಮೊತ್ತಕ್ಕಿಂತ ಶೇ 15ರಿಂದ ಶೇ 18ರಷ್ಟು ಕಡಿಮೆ ದರದಲ್ಲಿ ಕಾಮಗಾರಿ ನಿರ್ವಹಿಸಲು ಮುಂದೆ ಬಂದಿದ್ದರು. ಆದರೆ, ಈ ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಿ ಈಗ ಅಷ್ಟೂ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಲಾಗಿದೆ. ಕಾಮಗಾರಿ ನಿರ್ವಹಿಸಲು ಇದೇ ಮೊತ್ತದಲ್ಲಿ ಶೇ 12ರಷ್ಟು ಸೇವಾ ಶುಲ್ಕವಾಗಿ ನೀಡಬೇಕಾಗುತ್ತದೆ. ಈ ಮೊತ್ತವನ್ನು ಕಡಿತಗೊಳಿಸಿಯೇ ಯೋಜನೆಯ ಅಂದಾಜು ರೂಪಿಸಲಾಗುತ್ತದೆ.

### ನಿಯಮ ಉಲ್ಲಂಘಿಸಿ ಕಾಮಗಾರಿ

ಎಸ್‌ಸಿಪಿ ಅನುದಾನದಲ್ಲಿ ಕಾಮಗಾರಿ ಅನುಷ್ಠಾನಗೊಳ್ಳುವ ಜಾಗದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಶೇ 50ರಷ್ಟು ಹೆಚ್ಚು ಜನಸಂಖ್ಯೆ ಇರಬೇಕು. ಆದರೆ, ಸಿ.ವಿ. ರಾಮನ್‌ನಗರ ವಾರ್ಡ್‌ನಲ್ಲಿ ಈ ನಿಯಮ ಉಲ್ಲಂಘಿಸಲಾಗಿದೆ ಎಂದು ರಾಜ್ಯ ಎಸ್‌ಸಿ/ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎಸ್. ಮಹದೇವಸ್ವಾಮಿ ಆರೋಪಿಸಿದ್ದಾರೆ.

'2011ರ ಜನಗಣತಿ ಪ್ರಕಾರ ಇಡೀ ವಾರ್ಡ್‌ನಲ್ಲಿ 58,815 ಜನಸಂಖ್ಯೆ ಇದ್ದರೆ, ಪರಿಶಿಷ್ಟ ಜಾತಿಯ 4,516 (ಶೇ 7.68) ಮತ್ತು ಪರಿಶಿಷ್ಟ ಪಂಗಡದ 943 (ಶೇ 1.60) ಜನಸಂಖ್ಯೆ ಇದೆ. ಆದರೂ ಇಲ್ಲಿ ಎಸ್‌ಸಿಪಿ ಅನುದಾನದಲ್ಲಿ ಕಾಮಗಾರಿ ನಿರ್ವಹಿಸಲಾಗುತ್ತಿದೆ' ಎಂದು ದೂರಿದರು.

ಪ್ರಜಾವಾಣಿ ವಿಶೇಷ

'ಉದಾಹರಣೆಗೆ ₹1 ಕೋಟಿ ಅಂದಾಜು ಮೊತ್ತದ ಕಾಮಗಾರಿಯನ್ನು ₹85 ಲಕ್ಷ ಮೊತ್ತದಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರು ಮುಂದೆ ಬರುತ್ತಾರೆ. ಅದನ್ನು ಬಿಟ್ಟು ಕೆಆರ್‌ಐಡಿಎಲ್‌ಗೆ ಹೆಚ್ಚುವರಿಯಾಗಿ ₹12 ಲಕ್ಷ ಸೇವಾ ಶುಲ್ಕ ಪಾವತಿಸಿ ಕಾಮಗಾರಿ ವಹಿಸಲಾಗಿದೆ. ಹೀಗೆ ಮಾಡುವುದರಿಂದ ಸರ್ಕಾರಕ್ಕೆ ಒಟ್ಟಾರೆ ₹27 ಲಕ್ಷ ನಷ್ಟವಾಗುತ್ತದೆ' ಎಂಬುದು ಗುತ್ತಿಗೆದಾರರ ಆಕ್ಷೇಪ.

'ಕೆಆರ್‌ಐಡಿಎಲ್ ಮತ್ತು ಜಿಲ್ಲಾ ನಿರ್ಮಿತಿ ಕೇಂದ್ರಗಳು ಗುಣಮಟ್ಟದ ಕಾಮಗಾರಿ ನಿರ್ವಹಿಸುತ್ತಿಲ್ಲ. ಅನಗತ್ಯವಾಗಿ ವಿಳಂಬ ಮಾಡುತ್ತಿವೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಯಾವುದೇ ಕಾಮಗಾರಿಗಳನ್ನು ವಹಿಸಬಾರದು ಎಂದು 2018ರಲ್ಲಿ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಶಾಸಕರು ಮತ್ತು ಕೆಲ ಸಚಿವರ ಒತ್ತಡಕ್ಕೆ ಮಣಿದು ಆ ನಿರ್ಧಾರವನ್ನು ಕೆಲವೇ ತಿಂಗಳಲ್ಲಿ ವಾಪಸ್ ಪಡೆಯಿತು. ಗುಣಮಟ್ಟದ ಕಾಮಗಾರಿ ನಿರ್ವಹಿಸುತ್ತಿಲ್ಲ ಎಂದು ಸರ್ಕಾರವೇ ಒಪ್ಪಿಕೊಂಡು ಮತ್ತೆ ಆ ನಿರ್ಧಾರ ಬದಲಿಸಿದ್ದು ಏಕೆ?' ಎಂಬುದು ಗುತ್ತಿಗೆದಾರರ ಪ್ರಶ್ನೆ.

> ಕೆಆರ್‌ಐಡಿಎಲ್‌ಗೆ ಕಾಮಗಾರಿ ವಹಿಸುವುದು ಸರ್ಕಾರದ ನಿರ್ಧಾರ. ಪರಿಶಿಷ್ಟ ಜಾತಿಯವರು ಕಡಿಮೆ ಇರುವೆಡೆ ಕಾಮಗಾರಿ ನಿರ್ವಹಿಸುತ್ತಿರುವ ದೂರಿನ ಬಗ್ಗೆ ಪರಿಶೀಲಿಸಲಾಗುವುದು
>
> ಅಕ್ಷಯ್ ಶ್ರೀಧರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ

'ಕಾಮಗಾರಿಗಳನ್ನು ಕಡಿಮೆ ಮೊತ್ತಕ್ಕೆ ವಿಭಜಿಸದೆ ಒಂದೇ ಪ್ಯಾಕೇಜ್‌ನಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂಬ ಸುತ್ತೋಲೆಯೂ ಇದೆ. ಆದರೆ, ವಾರ್ಡ್ ಸಂಖ್ಯೆ 57ರಲ್ಲಿ (ಸಿ.ವಿ.ರಾಮನ್‌ನಗರ) ₹3 ಕೋಟಿ ಮೊತ್ತದ ಒಂದೇ ಕಾಮಗಾರಿಯನ್ನು ತಲಾ ₹50 ಲಕ್ಷದ ಆರು ಭಾಗವಾಗಿ ವಿಭಜಿಸಲಾಗಿದೆ. ಒಟ್ಟು ಆರು ಕಾಮಗಾರಿಯನ್ನು ಎಂದು ಗುತ್ತಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ದೊರೆತಿತ್ತು. ಇದನ್ನು ತಪ್ಪಿಸಲು ಕೆಆರ್‌ಐಡಿಎಲ್‌ಗೆ ವಹಿಸಲಾಗಿದೆ' ಎಂಬುದು ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಗುತ್ತಿಗೆದಾರರ ಆರೋಪ.

'ಕೆಆರ್‌ಐಡಿಎಲ್ ಅಥವಾ ನಿರ್ಮಿತಿ ಕೇಂದ್ರಕ್ಕೆ ವಹಿಸಿದರೆ ಕಾಮಗಾರಿಗಳನ್ನು ತಮ್ಮ ಹಿಂಬಾಲಕರ ಮೂಲಕ ತಾವೇ ನಿರ್ವಹಿಸಲು ಅನುಕೂಲ ಆಗಲಿದೆ ಎಂಬ ಲೆಕ್ಕಾಚಾರದಲ್ಲಿ ಜನಪ್ರತಿನಿಧಿಗಳು ಈ ರೀತಿ ಒತ್ತಡ ಹೇರುತ್ತಿದ್ದಾರೆ. ಸಿ.ವಿ.ರಾಮನ್‌ನಗರದ ಕಾಮಗಾರಿಗಳು ಕೇವಲ ಉದಾಹರಣೆಯಷ್ಟೆ, ರಾಜ್ಯದ ಎಲ್ಲ ಕಡೆಯೂ ಇದೇ ರೀತಿ ಎಸ್‌ಸಿಪಿ, ಟಿಎಸ್‌ಪಿ ಅನುದಾನ ಪೋಲು ಮಾಡಲಾಗುತ್ತಿದೆ. ಇದಕ್ಕೆ ಕಡಿವಾಣ ಬೀಳಬೇಕು' ಎಂಬುದು ಅವರ ಒತ್ತಾಯ.

## ಸುದ್ದಿ 2 ನಿಮಿಷ

### ಡ್ರಗ್ಸ್ ಪ್ರಕರಣ; ಸಿನಿಮಾ ಛಾಯಾಗ್ರಾಹಕನಿಗೆ ನೋಟಿಸ್

ಬೆಂಗಳೂರು: ಡ್ರಗ್ ಪ್ರಕರಣದಲ್ಲಿ 'ಪ್ರೆಸ್ಟೀಜ್ ಗ್ರೂಪ್' ಕಂಪನಿ ಕಾರ್ಯನಿರ್ವಾಹಕ ನಿರ್ದೇಶಕ ಅಂಬಿಯಾಜ್ ಇರ್ಫಾನ್ ಅವರನ್ನು ವಿಚಾರಣೆ ನಡೆಸಿದ್ದ ಗೋವಿಂದಪುರ ಠಾಣೆ ಪೊಲೀಸರು, ಇದೀಗ ಮತ್ತೆ ಇಬ್ಬರಿಗೆ ನೋಟಿಸ್ ನೀಡಿದ್ದಾರೆ.

'ಡ್ರಗ್ಸ್ ಮಾರಾಟ ಆರೋಪದಡಿ ಬಂಧಿಸಲಾಗಿರುವ ನೈಜೀರಿಯಾದ ಥಾಮಸ್ ಕಾಲಾ ಜೊತೆ ನಂಟು ಹೊಂದಿದ್ದ ಕಾರಣಕ್ಕೆ ಅಂಬಿಯಾಜ್ ಇರ್ಫಾನ್ ಅವರನ್ನು ವಿಚಾರಣೆ ನಡೆಸಲಾಗಿತ್ತು. ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಕೇರಳದ ಸಿನಿಮಾ ಛಾಯಾಗ್ರಾಹಕ ಸಂಜಯ್ ಹ್ಯಾರಿಸ್ ಹಾಗೂ ಪಾರ್ಟಿ ಆಯೋಜಕ ಅಜಾಜ್ ಸೇಠ್ ಎಂಬುವರಿಗೂ ನೋಟಿಸ್ ಕೊಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅನಾರೋಗ್ಯ ಕಾರಣ ನೀಡಿರುವ ಸಂಜಯ್, ಕಾಲಾವಕಾಶ ಕೋರಿದ್ದಾರೆ. ಅಜಾಜ್ ಸೇಠ್ ತಲೆಮರೆಸಿಕೊಂಡಿದ್ದಾರೆ. ಡ್ರಗ್ ಪೆಡ್ಲರ್ ಥಾಮಸ್ ಜೊತೆ ಒಡನಾಟ ಹೊಂದಿದ್ದ ಇಬ್ಬರೂ ಡ್ರಗ್ ಖರೀದಿಸುತ್ತಿದ್ದ ಮಾಹಿತಿ ಇದೆ. ಅವರಿಬ್ಬರ ವಿಚಾರಣೆ ನಡೆಸಿದ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ತಿಳಿಸಿವೆ.

### 'ಮಿತಿಗಳ ನಡುವೆಯೂ ರಂಗ ಬದುಕು ಕಟ್ಟಿಕೊಳ್ಳುತ್ತಿರುವ ಮಹಿಳೆ'

ಬೆಂಗಳೂರು: 'ಮಹಿಳೆಯು ಹಲವು ಮಿತಿಗಳ ನಡುವೆಯೂ ರಂಗ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ. ಇದು ಸ್ಫೂರ್ತಿದಾಯಕ ನಡೆ' ಎಂದು ಕವಯಿತ್ರಿ ಎಚ್.ಎಲ್.ಪುಷ್ಪಾ ಹೇಳಿದರು.

ರಂಗ ವಿನ್ಯಾಸ ಟ್ರಸ್ಟ್ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ 'ತಂತಿ' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಹೆಣ್ಣು ಮಕ್ಕಳಿಗೆ ಹಲವು ಮಿತಿಗಳಿವೆ. ಅವುಗಳ ನಡುವೆ ಜೀವನ ಸಾಗಿಸುವುದೇ ಕಷ್ಟ. ಇಂತಹ ಸವಾಲಿನ ನಡುವೆಯೂ ಅವರು ರಂಗಭೂಮಿಯತ್ತ ಮುಖ ಮಾಡಿರುವುದು ಸಂತಸದ ವಿಷಯ' ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ, 'ರಂಗಭೂಮಿಯು ಜನರಿಗಾಗಿ ನಿರಂತರವಾಗಿ ಮಿಡಿಯುವ ಕ್ಷೇತ್ರ. ಇಲ್ಲಿ ಹಲವರು ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಹೀಗಾಗಿ ಇದು ನಿತ್ಯ ನೂತನ' ಎಂದು ತಿಳಿಸಿದರು.

ಜಾನಪದ ಗಾಯಕ ಜೋಗಿಲ ಸಿದ್ದರಾಜು, ಜಿಪಿಓ ಚಂದ್ರು ಇದ್ದರು.

# ಪತಿಯ ವಿರುದ್ಧದ ಅತ್ಯಾಚಾರ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಡನ ವಿರುದ್ಧ ಪತ್ನಿ ದಾಖಲಿಸಿದ್ದ ಅತ್ಯಾಚಾರದ ದೂರನ್ನು ರದ್ದುಪಡಿಸಿರುವ ಹೈಕೋರ್ಟ್, 'ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಪ್ರಕರಣವನ್ನು ವಿಚಾರಣೆಗೆ ಅಂಗೀಕರಿಸಿದ (ಪರಿಗಣನೆಗೆ ತೆಗೆದುಕೊಂಡ ಸಂಜ್ಞೇಯ ಅಪರಾಧ) ಮ್ಯಾಜಿಸ್ಟ್ರೇಟ್ ಕೋರ್ಟ್ ಕ್ರಮ ಸಮರ್ಥನೀಯವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ನನ್ನ ಪತ್ನಿ, ನನ್ನ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿದ್ದಾಳೆ. ದೂರು ದಾಖಲಿಸಿಕೊಂಡಿರುವ ಗಿರಿನಗರ ಠಾಣೆಯ ಪೊಲೀಸರು ನಗರದ 1ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಇದೊಂದು ಸಾಕ್ಷ್ಯಾಧಾರಗಳಿಲ್ಲದ ದೂರು. ಆದ್ದರಿಂದ ಈ ದೂರನ್ನು ರದ್ದುಗೊಳಿಸಬೇಕು' ಎಂದು ಕೋರಿ ಗಿರಿನಗರದ ನಿವಾಸಿ ಮಂಜುನಾಥ್ ಹೆಬ್ಬಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಪ್ರಕರಣದಲ್ಲಿನ ಆರೋಪಗಳನ್ನು ಗಮನಿಸಿದರೆ ತನಿಖಾಧಿಕಾರಿಗಳು ಸೂಕ್ತ ಸಾಕ್ಷ್ಯಾಧಾರ ನೀಡಿಲ್ಲದಿರುವುದು ಕಂಡು ಬರುತ್ತದೆ. ಆದ್ದರಿಂದ, ಪ್ರಕರಣದ ವಿಚಾರಣೆ ಮುಂದುವರಿಸಿದರೆ ಪತಿಗೆ ಕಿರುಕುಳ ನೀಡಿದಂತಾಗುತ್ತದೆ ಮತ್ತು ಕಾನೂನು ಪ್ರಕ್ರಿಯೆಯ ದುರ್ಬಳಕೆಯೂ ಆಗುತ್ತದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿದಾರರ ವಿರುದ್ಧ ದಾಖಲಾಗಿರುವ ದೂರನ್ನು ರದ್ದುಪಡಿಸಿದೆ.

**ಬೇರೆಯವರಿಗೆ ಅನ್ವಯಿಸುವುದಿಲ್ಲ:** ಇದೇ ವೇಳೆ ನ್ಯಾಯಪೀಠವು ತನ್ನ ತೀರ್ಪಿನಲ್ಲಿ, 'ದೂರುದಾರಳು ಹೊಸನಗರದ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಸೇರಿದಂತೆ ಇತರರ ವಿರುದ್ಧವೂ ದೂರು ದಾಖಲಿಸಿದ್ದಾರೆ. ಆದ್ದರಿಂದ, ಈ ಅರ್ಜಿಯು ಕೇವಲ ಮಂಜುನಾಥ್ ಹೆಬ್ಬಾರ್ ವಿರುದ್ಧದ ಆರೋಪಗಳಿಗೆ ಸಂಬಂಧಿಸಿರುತ್ತದೆ' ಎಂದು ಸ್ಪಷ್ಟಪಡಿಸಿದೆ.

'ಒಂದು ವೇಳೆ ಇತರೆ ಆರೋಪಿಗಳ ವಿಚಾರಣೆ ಬಾಕಿಯಿದ್ದರೆ, ಅದನ್ನು ಈ ಆದೇಶದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪ್ರಭಾವಕ್ಕೆ ಒಳಗಾಗದೇ ಮುಂದುವರಿಸಬೇಕು' ಎಂದು ಸಂಬಂಧಪಟ್ಟ ನ್ಯಾಯಾಲಯಕ್ಕೆ ಹೈಕೋರ್ಟ್ ಸ್ಪಷ್ಟ ಸೂಚನೆ ನೀಡಿದೆ.

**ಪ್ರಕರಣವೇನು?:** ಮಂಜುನಾಥ್ ಹೆಬ್ಬಾರ್ ಅವರನ್ನು ದೂರುದಾರ ಪತ್ನಿ 2009ರ ಮೇ 27ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ವಿವಾಹವಾಗಿದ್ದರು. 2012ರ ಮಾರ್ಚ್ 18ರ ನಂತರ ತವರು ಮನೆಗೆ ತೆರಳಿದ್ದರು. ನಂತರ ಪತಿಯಿಂದ ಪ್ರತ್ಯೇಕವಾಗಿ ಜೀವನ ನಡೆಸುತ್ತಿದ್ದರು. ಏತನ್ಮಧ್ಯೆ 2015ರ ಆಗಸ್ಟ್ 29ರಂದು ಪತಿಯ ವಿರುದ್ಧ ಅತ್ಯಾಚಾರದ ಆರೋಪದಡಿ ಗಿರಿನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಮಂಜುನಾಥ್ ಹೆಬ್ಬಾರ್ ವಿರುದ್ಧ ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಹಲ್ಲೆ ಮತ್ತು ಹಣಕ್ಕೆ ಆಮಿಷವೊಡ್ಡಿದ ಆರೋಪಗಳಿಗೆ ಸಂಬಂಧಿಸಿದಂತೆ 2018ರ ಸೆಪ್ಟೆಂಬರ್ 7 ರಂದು 1ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಮ್ಯಾಜಿಸ್ಟ್ರೇಟ್ ಕೋರ್ಟ್ 2019ರ ಸೆಪ್ಟೆಂಬರ್ 27ರಂದು ಪ್ರಕರಣವನ್ನು ಪರಿಗಣಿಸಿ ವಿಚಾರಣೆಗೆ ಅಂಗೀಕರಿಸಿತ್ತು.

## ಪೀಠೋಪಕರಣ ಉತ್ಸವ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ ಆ್ಯಡ್ಸ್ ಆ್ಯಂಡ್ ಈವೆಂಟ್ಸ್' ಸಂಸ್ಥೆಯು ಅರಮನೆ ಮೈದಾನದಲ್ಲಿರುವ ತ್ರಿಪುರ ವಾಸಿನಿ ಸಭಾಂಗಣದಲ್ಲಿ ಪೀಠೋಪಕರಣ ಉತ್ಸವ ಶುಕ್ರವಾರದಿಂದ ಆರಂಭವಾಗಿದ್ದು, ಇದೇ 20ರವರೆಗೆ ನಡೆಯಲಿದೆ.

ದೇಸಿ ಮತ್ತು ವಾಣಿಜ್ಯ ಮಾದರಿಯ ಪೀಠೋಪಕರಣಗಳನ್ನು ಉತ್ಸವದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಪೀಠೋಪಕರಣ ಖರೀದಿ ಮೇಲೆ ಶೇ 70ರಷ್ಟು ರಿಯಾಯಿತಿ ನೀಡಲಾಗುವುದು. ಬೆಳಿಗ್ಗೆಯಿಂದ ಸಂಜೆಯವರೆಗೆ ಉತ್ಸವಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ನೀಡಲಾಗಿದೆ. ಸಂಪರ್ಕ: 9342577908

# 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ದೇಶದ ತಾಂತ್ರಿಕ ಕ್ಷೇತ್ರದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಕಂಪ್ಯೂಟರ್ ಸೈನ್ಸ್ ಮತ್ತು ಆಟೋಮೇಷನ್ ವಿಭಾಗದ ಪ್ರಾಧ್ಯಾಪಕ ಪ್ರೊ. ಡಾ. ವೈ.ನರಹರಿ ಹೇಳಿದರು.

ಆರ್.ವಿ.ತಾಂತ್ರಿಕ ಮಹಾವಿದ್ಯಾಲಯ ಮತ್ತು ಫ್ಲೋರಿಡಾ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ 5ನೇ ಐಇಇಇ ಸಂಸ್ಥೆ ಶುಕ್ರವಾರ ಆಯೋಜಿಸಿದ್ದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಮಸ್ಯೆಗೆ ಸುಸ್ಥಿರ ಪರಿಹಾರ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ವೈದ್ಯಕೀಯ, ಆರೋಗ್ಯ, ಸಂಚಾರ, ಶಿಕ್ಷಣ, ನಗರೀಕರಣ ಮತ್ತು ವ್ಯವಸಾಯ ಕ್ಷೇತ್ರದ ಬೆಳವಣಿಗೆಗೆ ಸಹಕಾರಿ. ಈ ತಂತ್ರಜ್ಞಾನದ ಮೂಲಕ ವಿವಿಧ ಕ್ಷೇತ್ರಗಳ ಸರ್ವಾಂಗೀಣ ಪ್ರಗತಿಗೆ ಕೇಂದ್ರ ಸರ್ಕಾರ ಆಸಕ್ತಿ ವಹಿಸಿದೆ. ಹೆಚ್ಚಿನ ಅನುದಾನ ಮೀಸಲಿಡುವ ಮೂಲಕ ಸಂಶೋಧನೆ ಕೈಗೊಳ್ಳಲು ಪ್ರೋತ್ಸಾಹಿಸುತ್ತಿದೆ' ಎಂದರು.

ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಮಸ್ಯೆಗೆ ಸುಸ್ಥಿರ ಪರಿಹಾರ' ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಫ್ಲೋರಿಡಾ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಎಸ್.ಎಸ್. ಅಯ್ಯಂಗಾರ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. –ಪ್ರಜಾವಾಣಿ ಚಿತ್ರ

ಫ್ಲೋರಿಡಾ ಅಂತರಾಷ್ಟ್ರೀಯ ವಿಶ್ವವಿದ್ಯಾಲಯದ ಪ್ರೊ.ಎಸ್. ಎಸ್. ಅಯ್ಯಂಗಾರ್, 'ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇರುತ್ತದೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗೆ ಅಗತ್ಯ ನೆರವು ನೀಡಿ ಪ್ರತಿಭಾ ಅನಾವರಣಕ್ಕೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕು' ಎಂದು ಸಲಹೆ ನೀಡಿದರು.

ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರ್ಸ್‌ನ ಬೆಂಗಳೂರು ವಿಭಾಗದ ಮುಖ್ಯಸ್ಥ ಬಿಂದು ಮಾಧವ, ಐಐಎಸ್‌ಸಿ ಪ್ರಾಧ್ಯಾಪಕ ಪ್ರೊ. ವೈ. ನರಹರಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಗೌರವ ಸಹ ಕಾರ್ಯದರ್ಶಿ ಡಿ.ಪಿ. ನಾಗರಾಜ್, ಡಾ. ಕೆ.ಎನ್. ಸುಬ್ರಮಣ್ಯ, ಡಾ. ಪಿ. ರಮಾಕಾಂತಕುಮಾರ್, ಪಿಇಟಿಇ ವಿಭಾಗದ ಮುಖ್ಯಸ್ಥೆ ಡಾ. ಕೆ.ಶ್ರೀಲಕ್ಷ್ಮಿ ಉಪಸ್ಥಿತರಿದ್ದರು.

# ಎಂಜಿನಿಯರಿಂಗ್ ಪ್ರವೇಶಾತಿ: ಡಿ.31ರವರೆಗೂ ಪ್ರವೇಶಾವಕಾಶ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಎಂಜಿನಿಯರಿಂಗ್, ಫಾರ್ಮಸಿ, ಕೃಷಿ ಮತ್ತು ಇತರ ಕೋರ್ಸುಗಳಿಗೆ ಡಿ.31ರವರೆಗೂ ಪ್ರವೇಶಾವಕಾಶ ಕಲ್ಪಿಸಲು ಸುಪ್ರೀಂಕೋರ್ಟ್ ಅನುಮತಿ ನೀಡಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರತಿ ವರ್ಷ ಜುಲೈ 31ರೊಳಗೆ ಪ್ರವೇಶಾತಿ ಮುಗಿಸುವಂತೆ ಈ ಹಿಂದೆ (2012ರಲ್ಲಿ) ಸುಪ್ರೀಂಕೋರ್ಟ್ ಆದೇಶಿಸಿತ್ತು. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಂಜಿನಿಯರಿಂಗ್ ಮತ್ತು ಫಾರ್ಮಸಿ ಕೋರ್ಸ್‌ಗಳಿಗೆ ಡಿ.31ರವರೆಗೂ ಪ್ರವೇಶ ಪಡೆಯಲು ಅವಕಾಶ ನೀಡಬೇಕೆಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಜಿ ಸಲ್ಲಿಸಿತ್ತು. ಗುರುವಾರ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ರಾಜ್ಯದ ಮನವಿಯನ್ನು ಪುರಸ್ಕರಿಸಿದೆ ಎಂದು ಅವರು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟಿನ ಆದೇಶದಂತೆ ಇದೇ ತಿಂಗಳ 31ರ ಒಳಗೆ ಎಂಜಿನಿಯರಿಂಗ್ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮುಗಿಸಬೇಕಾಗಿದೆ. ಹೀಗಾಗಿ ವೈದ್ಯಕೀಯ ಸೀಟು ಹಂಚಿಕೆಯ ನಂತರ ಖಾಲಿ ಉಳಿದ ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಫಾರ್ಮಸಿ ಮುಂತಾದ ಸೀಟುಗಳಿಗೆ ಮತ್ತೊಮ್ಮೆ 'ಕ್ಯಾಶುಯಲ್ ವೇಕೆನ್ಸಿ ರೌಂಡ್' ನಡೆಸಲು ತೀರ್ಮಾನಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಹಿಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟುಗಳನ್ನು ಒಟ್ಟಿಗೇ ಹಂಚಲಾಗುತ್ತಿತ್ತು. ಆದರೆ, ಪ್ರಸಕ್ತ ಸಾಲಿನಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಆದಾಯ ಮಿತಿ ನಿರ್ಧಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದ್ದು, ಇದು ಇತ್ಯರ್ಥವಾಗುವವರೆಗೂ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶಾತಿ ಕೈಗೊಳ್ಳದಂತೆ ತಡೆಯಾಜ್ಞೆ ನೀಡಲಾಗಿದೆ. ಹೀಗಾಗಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಎಐಸಿಟಿಇ) ಮತ್ತು ಭಾರತೀಯ ಮೆಡಿಕಲ್ ಕೌನ್ಸಿಲ್ ಜತೆ ಚರ್ಚಿಸಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸುಗಳಿಗೆ ಸಂಯೋಜಿತವಾಗಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು ಎಂದು ಅವರು ತಿಳಿಸಿದ್ದಾರೆ.

# ಮೇಲುಕೋಟೆ: ಗರ್ಭಗುಡಿ ಮುಂದೆ ಬೆತ್ತಲಾಗಿ ಯುವಕನ ರಂಪಾಟ

ಮೇಲುಕೋಟೆ (ಮಂಡ್ಯ): ಇಲ್ಲಿನ ಚೆಲುವನಾರಾಯಣಸ್ವಾಮಿ ದೇಗುಲದಲ್ಲಿ ಗುರುವಾರ ರಾತ್ರಿ ಗರ್ಭಗುಡಿಯ ಮುಂಭಾಗ ಬೆತ್ತಲಾಗಿ ನಿಂತು ರಂಪಾಟ ಮಾಡಿದ ಸ್ಥಳೀಯ ಯುವಕ ರಾಮ್‌ಕುಮಾರ್ ವಿರುದ್ಧ ಶುಕ್ರವಾರ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಾಮ್ ಕುಮಾರ್

ದೇವಾಲಯದ ಮುಂದೆ ಚುರುಮುರಿ ಮಾರಾಟ ಮಾಡಿ ತಾಯಿಯೊಂದಿಗೆ ಜೀವನ ನಡೆಸುತ್ತಿದ್ದ ಯುವಕ ರಾತ್ರಿ 9ರ ಸುಮಾರಿನಲ್ಲಿ ದೇವಾಲಯದ ಬಾಗಿಲು ಮುಚ್ಚುತ್ತಿದ್ದಾಗ ಶುಕನಾಸಿಗೆ ಓಡಿ ಬಂದು 'ನಾನು ದೇವರ ತಮ್ಮ, ಅವನ ಪಕ್ಕದಲ್ಲೇ ನಿಲ್ಲುತ್ತೇನೆ' ಎಂದು ಹುಚ್ಚಾಟ ಮಾಡಿದ್ದಾನೆ. ನಂತರ 'ನಾನೇ ರಾಮ, ನಾನೇ ಅಲ್ಲಾ' ಎಂದು ಕಿರುಚಾಡಿದ್ದ.

ಕಾವಲುಗಾರರು ಆತನನ್ನು ಹೊರಹಾಕಲು ಪ್ರಯತ್ನಿಸಿದಾಗ ಬೆತ್ತಲಾಗಿ ರಂಪಾಟ ಮಾಡಿದ್ದಾನೆ. ಸ್ಥಳಕ್ಕೆ ಬಂದ ಪೊಲೀಸರ ಮುಂದೆಯೂ ರಂಪಾಟ ಮಾಡಿ ದೇವಾಲಯಕ್ಕೆ ನುಗ್ಗಲು ಪ್ರಯತ್ನಿಸಿದ್ದಾರೆ. ನಂತರ ದೇವಾಲಯದ ಸಿಬ್ಬಂದಿ ಆತನನ್ನು ಥಳಿಸಿದ್ದಾರೆ. ಆತನ ದುರ್ವರ್ತನೆಗೆ ಗಾಂಜಾ ಸೇವನೆಯೇ ಕಾರಣ ಎಂದು ದೇವಾಲಯದ ಸಿಬ್ಬಂದಿ ಆರೋಪಿಸಿದ್ದಾರೆ.

ಘಟನಾವಳಿ ಸಿಸಿ ಟಿವಿ ಕ್ಯಾಮೆರಾದಲ್ಲಿ ದಾಖಲಾಗಿದ್ದು, ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಮಂಗಳಮ್ಮ ದೂರು ನೀಡಿದ್ದಾರೆ.

'ಯುವಕ ಈಚೆಗೆ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಯಾಗಿದ್ದು, ಜಿಲ್ಲಾ ಘಟಕದ ಅಧ್ಯಕ್ಷನಾಗಿ ಪದಗ್ರಹಣ ಮಾಡಿರುವುದಾಗಿ ಹೇಳಿಕೊಂಡು ಮನೆಯಲ್ಲೇ ಮಂಡ್ಯ ಜಿಲ್ಲಾ ಘಟಕದ ಕಚೇರಿ ತೆರೆದಿರುವುದಾಗಿ ಹೇಳಿಕೊಳ್ಳುತ್ತಿದ್ದ' ಎಂದು ದೇವಾಲಯದ ಪರಿಚಾರಕ ಎಂ.ಎನ್.ಪಾರ್ಥಸಾರಥಿ ತಿಳಿಸಿದ್ದಾರೆ.

'ಮೂರು ದಿನಗಳ ಹಿಂದೆ ರಾತ್ರಿ 12 ಗಂಟೆ ವೇಳೆ ಯುವಕ ದೇವಾಲಯದ ಬಳಿ ಬಂದಿದ್ದಾಗ ಎಚ್ಚರಿಸಿ ಕಳಿಸಲಾಗಿತ್ತು. ಮತ್ತೆ ಗುರುವಾರ ರಾತ್ರಿ ಬಂದು ರಂಪಾಟ ಮಾಡಿದ್ದಾನೆ' ಎಂದು ಎಂದು ಭದ್ರತಾ ಸಿಬ್ಬಂದಿ ಮಾಹಿತಿ ನೀಡಿದರು.

'ಮಂಡ್ಯ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರನ್ನು ನೇಮಕ ಮಾಡಿಲ್ಲ' ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

# ಬಾಂಬ್ ಸ್ಫೋಟ ಪ್ರಕರಣ: ಸ್ಥಿರಾಸ್ತಿ ಜಪ್ತಿ ಪ್ರಕ್ರಿಯೆ ಆರಂಭ

ಭಟ್ಕಳ: ಭಯೋತ್ಪಾದನೆ ನಿಗ್ರಹ ದಳವು (ಎ.ಟಿ.ಎಸ್), ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳ ಸ್ಥಿರಾಸ್ತಿಯನ್ನು ಜಪ್ತಿ ಮಾಡುವ ಪ್ರಕ್ರಿಯೆ ಆರಂಭಿಸಿದೆ.

ಪ್ರಕರಣದ ಆರೋಪಿಗಳಾದ ಭಟ್ಕಳದ ರಿಯಾಜ್ ಮತ್ತು ಇಕ್ಬಾಲ್ ತಲೆ ಮರೆಸಿಕೊಂಡಿದ್ದಾರೆ. ಪಟ್ಟಣದಲ್ಲಿ ಅವರಿಗೆ ಸೇರಿರುವ ಆಸ್ತಿಯನ್ನು ಜಪ್ತಿ ಮಾಡುವಂತೆ ನ್ಯಾಯಾಲಯವು ಆದೇಶ ಮಾಡಿದೆ. ಈ ಸಂಬಂಧ ಎ.ಟಿ.ಎಸ್.ನ ಬೆಂಗಳೂರು ಘಟಕದ ಅಧಿಕಾರಿಗಳು ಭಟ್ಕಳದಲ್ಲಿ ಶುಕ್ರವಾರ ಶೋಧಕಾರ್ಯ ಮಾಡಿದ್ದಾರೆ.

ಸಿ.ಪಿ.ಐ ನೇತೃತ್ವದ ಮೂವರು ಅಧಿಕಾರಿಗಳು ಭಟ್ಕಳದ ಬಂದರು ರಸ್ತೆಯಲ್ಲಿರುವ ಆರೋಪಿಗಳ ಸಂಬಂಧಿಕರ ಮನೆಯಲ್ಲಿ ಶೋಧ ಕಾರ್ಯ ನಡೆಸಿದ್ದಾರೆ ಎಂದು ಗೊತ್ತಾಗಿದೆ. ಅಲ್ಲದೇ ಭಟ್ಕಳ ಪುರಸಭೆ, ಜಾಲಿ ಪಟ್ಟಣ ಪಂಚಾಯಿತಿ, ಕಂದಾಯ ಇಲಾಖೆ, ನಗರ ಪೊಲೀಸ್ ಠಾಣೆಗಳಿಗೆ ನೋಟಿಸ್ ನೀಡಿದ್ದಾರೆ. ಆರೋಪಿಗಳ ಹೆಸರಿನಲ್ಲಿರುವ ಆಸ್ತಿಗಳ ವಿವರ ಸೇರಿದಂತೆ ಇನ್ನಿತರ ಮಾಹಿತಿ ಇದ್ದರೆ ತಮ್ಮೊಂದಿಗೆ ಹಂಚಿಕೊಳ್ಳುವಂತೆ ಸೂಚಿಸಿದ್ದಾರೆ.

# ಬಿಸಿಐ ಚುನಾವಣೆ: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಕೀಲರ ಪರಿಷತ್ (ಬಿಸಿಐ) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಚುನಾವಣೆ ನಡೆಸಲು ಕೈಗೊಂಡಿದ್ದ ತೀರ್ಮಾನವನ್ನು ಮರು ಪರಿಶೀಲಿಸುವುದಾಗಿ ಬಿಸಿಐ ತಿಳಿಸಿದ ಹಿನ್ನೆಲೆಯಲ್ಲಿ ಈ ಕುರಿತ ರಿಟ್ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಬಿಸಿಐಗೆ 2021ರ ಡಿಸೆಂಬರ್ 4ರಂದು ನಡೆಸಲು ಉದ್ದೇಶಿಸಿದ್ದ ಚುನಾವಣೆಗೆ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮೊದಲು ತಡೆ ನೀಡಿತ್ತು. ಇದನ್ನು ಪ್ರಶ್ನಿಸಿ ಬಿಸಿಐ ಇದೇ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ತಡೆ ತೆರವುಗೊಳಿಸುವಂತೆ ಕೋರಿತ್ತು. ಮೇಲ್ಮನವಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ನೀವು ನೇರವಾಗಿ ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲ. ಆದ್ದರಿಂದ, ಈ ಕುರಿತು ಏನಾದರೂ ಆಕ್ಷೇಪಣೆ ಇದ್ದರೆ ಏಕಸದಸ್ಯ ನ್ಯಾಯಪೀಠದಲ್ಲೇ ಅರ್ಜಿ ಸಲ್ಲಿಸಿ ಪರಿಹರಿಸಿಕೊಳ್ಳಿ' ಎಂದು ಸೂಚಿಸಿತ್ತು.

ಇದರನ್ವಯ ಬಿಸಿಐ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಬಿಸಿಐ ಪರ ವಕೀಲರು ಲಿಖಿತ ಮೆಮೊ ಸಲ್ಲಿಸಿ, 'ಚುನಾವಣೆ ನಡೆಸಲು ಭಾರತೀಯ ವಕೀಲರ ಪರಿಷತ್ತು ನವೆಂಬರ್ 19ರಂದು ಹೈದರಾಬಾದ್‌ನಲ್ಲಿ ಕೈಗೊಂಡಿದ್ದ ನಿರ್ಣಯವನ್ನು ಪುನರ್ ಪರಿಶೀಲಿಸುವುದಾಗಿ' ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಏನಾದರೂ ಆಕ್ಷೇಪಣೆ ಇದ್ದರೆ ಅರ್ಜಿದಾರರು ಪುನಃ ಕೋರ್ಟ್ ಮೊರೆ ಹೋಗಲು ಅವಕಾಶ ಕಾಯ್ದಿರಿಸಲಾಗಿದೆ' ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

**ಏನಿದು ಅರ್ಜಿ?:** 'ಬಿಸಿಐನ ಹಾಲಿ ಪದಾಧಿಕಾರಿಗಳ ಅಧಿಕಾರಾವಧಿ 2022ರ ಏಪ್ರಿಲ್ 16ರವರೆಗೂ ಇದೆ. ಹಾಗಿರುವಾಗ, ಅವಧಿ ಮುಗಿಯುವ 4 ತಿಂಗಳು ಮುಂಚಿತವಾಗಿಯೇ ತರಾತುರಿಯಲ್ಲಿ ಚುನಾವಣೆ ನಡೆಸುವ ಅಗತ್ಯವಿಲ್ಲ. ಅದರಲ್ಲೂ ಸದಸ್ಯರಿಗೆ ಯಾವುದೇ ಸೂಚನೆ ನೀಡದೆ ಚುನಾವಣಾ ಸಭೆ ನಡೆಸಲಾಗಿದೆ. ಆದ್ದರಿಂದ, ಚುನಾವಣೆಗೆ ತಡೆ ನೀಡಬೇಕು' ಎಂದು ಕೋರಿ ಬಿಸಿಐ ಸದಸ್ಯರೂ ಆದ ಹೈಕೋರ್ಟ್‌ನ ವಕೀಲ ವೈ.ಆರ್.ಸದಾಶಿವ ರೆಡ್ಡಿ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಪರ ವಕೀಲ ಜಯಕುಮಾರ್ ಎಸ್.ಪಾಟೀಲ ವಾದ ಮಂಡಿಸಿದ್ದರು.

### ವಕೀಲರ ಸಂಘ: ಮತದಾನದ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘಕ್ಕೆ ಇದೇ 19ರಂದು ನಡೆಯಲಿರುವ ಮತದಾನದ ಅವಧಿಯನ್ನು ಒಂದು ಗಂಟೆ ಕಾಲ ವಿಸ್ತರಿಸಿ ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್‌ನ ವಕೀಲರೂ ಆದ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿ ವಿವೇಕ ರೆಡ್ಡಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಮನವಿಯ ಅನುಸಾರ 2021ರ ಡಿಸೆಂಬರ್ 19ರ ಬೆಳಿಗ್ಗೆ 10 ಗಂಟೆಯಿಂದ 4 ಗಂಟೆಯವರೆಗೆ ಇದ್ದ ಈ ಮೊದಲಿನ ಮತದಾನದ ಅವಧಿಯನ್ನು ಬೆಳಿಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ವಿಸ್ತರಿಸಿ ನ್ಯಾಯಪೀಠ ಆದೇಶಿಸಿದೆ.

# ಮದ್ಯಪಾನಕ್ಕೆ ₹100 ನೀಡದಿದ್ದಕ್ಕೆ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ಮದ್ಯಪಾನ ಮಾಡಲು ₹100 ಕೊಡಲಿಲ್ಲವೆಂಬ ಕಾರಣಕ್ಕೆ ಎಸ್. ಪ್ರತೀಕ್ ಯಾದವ್ (31) ಎಂಬುವರನ್ನು ಕೊಲೆ ಮಾಡಿದ್ದ ಆರೋಪದಡಿ ಶಂಶೀರ್ ಎಂಬಾತನನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಮತ್ತಿಕೆರೆ ನಿವಾಸಿ ಪ್ರತೀಕ್, ಮಾಂಸದಂಗಡಿ ನಡೆಸುತ್ತಿದ್ದರು. ತಲೆಗೆ ತೀವ್ರ ಪೆಟ್ಟಾಗಿ ಆಸ್ಪತ್ರೆಗೆ ದಾಖಲಾಗಿದ್ದ ವೇಳೆ ಚಿಕಿತ್ಸೆಗೆ ಸ್ಪಂದಿಸದೇ ಅವರು ತೀರಿಕೊಂಡಿದ್ದರು. ಅಪಘಾತದಿಂದ ಗಾಯಗೊಂಡಿದ್ದಾಗಿ ಆಸ್ಪತ್ರೆಯಲ್ಲಿ ನಮೂದಿಸಲಾಗಿತ್ತು. ಮರಣೋತ್ತರ ಪರೀಕ್ಷೆ ವರದಿ ಬಂದಾಗ, ಇದೊಂದು ಕೊಲೆ ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವರದಿ ನೀಡಿದ್ದ ಸುಳಿವು ಆಧರಿಸಿ ಪುರಾವೆಗಳನ್ನು ಸಂಗ್ರಹಿಸಿ ಆರೋಪಿ ಶಂಶೀರ್‌ನನ್ನು ಬಂಧಿಸಲಾಗಿದೆ. ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದ್ದು, ತಪ್ಪೊಪ್ಪಿಕೊಂಡಿದ್ದಾನೆ' ಎಂದೂ ತಿಳಿಸಿದರು.

**ತೂಕದ ಕಲ್ಲಿನಿಂದ ಹೊಡೆದಿದ್ದ:** 'ಪ್ರತೀಕ್ ಅವರು ಕೊಡಿಗೇಹಳ್ಳಿ ಬಳಿಯ ತಿಂಡ್ಲು ವೃತ್ತದಲ್ಲಿರುವ ಸ್ನೇಹಿತರೊಬ್ಬರ ಮಾಂಸದಂಗಡಿಗೆ ಅಕ್ಟೋಬರ್ 17ರಂದು ಬಂದಿದ್ದರು. ಅಂಗಡಿಯಲ್ಲಿ ಕುಳಿತು ಪರಸ್ಪರ ಮಾತನಾಡುತ್ತಿದ್ದರು. ಅದೇ ಸಂದರ್ಭದಲ್ಲೇ ಆರೋಪಿ ಶಂಶೀರ್ ಅಂಗಡಿಗೆ ಬಂದಿದ್ದ' ಎಂದು ಪೊಲೀಸರು ಹೇಳಿದರು.

'ಮದ್ಯ ವ್ಯಸನಿಯಾದ ಆರೋಪಿ ಶಂಶೀರ್, ಮದ್ಯಪಾನಕ್ಕಾಗಿ ₹100 ಕೊಡುವಂತೆ ಪ್ರತೀಕ್ ಅವರನ್ನು ಒತ್ತಾಯಿಸಿದ್ದ. ಹಣವಿಲ್ಲವೆಂದು ಅವರು ಹೇಳಿದ್ದರು. ಅಷ್ಟಕ್ಕೆ ಸಿಟ್ಟಾದ ಆರೋಪಿ, ಅಂಗಡಿಯಲ್ಲಿದ್ದ 1 ಕೆ.ಜಿ ತೂಕದ ಕಲ್ಲಿನಿಂದ ಪ್ರತೀಕ್ ಅವರ ತಲೆಗೆ ಹೊಡೆದು ಪರಾರಿಯಾಗಿದ್ದ' ಎಂದೂ ತಿಳಿಸಿದರು.

'ತೀವ್ರ ಗಾಯಗೊಂಡು ಕುಸಿದು ಬಿದ್ದಿದ್ದ ಪ್ರತೀಕ್ ಅವರನ್ನು ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಜೊತೆಗಿದ್ದ ಕೆಲವರು, ಅಪಘಾತದಿಂದ ಗಾಯವಾಗಿರುವುದಾಗಿ ವೈದ್ಯರ ಬಳಿ ಸುಳ್ಳು ಹೇಳಿದ್ದರು' ಎಂದೂ ಮಾಹಿತಿ ನೀಡಿದರು.

# ಸಹಜೀವನ: ಮದುವೆಯಾಗು ಎಂದಿದ್ದಕ್ಕೆ ಶುಶ್ರೂಷಕಿ ಕೊಲೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಗಂಗಾ ಎಂಬುವರ ಕೊಲೆ ಪ್ರಕರಣ ಸಂಬಂಧ, ಅವರ ಸ್ನೇಹಿತ ಶ್ಯಾಮ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಉಡುಪಿಯ ಗಂಗಾ, ನಗರದ ಆಸ್ಪತ್ರೆಯೊಂದರಲ್ಲಿ ಶುಶ್ರೂಷಕಿ ಆಗಿ ಕೆಲಸ ಮಾಡುತ್ತಿದ್ದರು. ಡಿ. 14ರಂದು ಅವರ ಕೊಲೆ ಆಗಿತ್ತು. ಘಟನಾ ಸ್ಥಳದಲ್ಲಿ ಸಿಕ್ಕ ಪುರಾವೆಗಳನ್ನು ಆಧರಿಸಿ ಶ್ಯಾಮ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದಾಂಡೇಲಿಯ ಆರೋಪಿ ಶ್ಯಾಮ್, ಯೋಗ ಶಿಕ್ಷ. ಯಲಹಂಕದಲ್ಲಿ ಯೋಗ ತರಬೇತಿ ಕೇಂದ್ರ ನಡೆಸುತ್ತಿದ್ದ. ಆತನ ಕೇಂದ್ರಕ್ಕೆ ಯೋಗ ಕಲಿಯಲೆಂದು ಗಂಗಾ ಬರುತ್ತಿದ್ದರು. ಅದೇ ಸಂದರ್ಭದಲ್ಲೇ ಅವರಿಬ್ಬರಿಗೂ ಪರಿಚಯವಾಗಿತ್ತು.ಇಬ್ಬರು ಪರಸ್ಪರ ಒಪ್ಪಿ ಸಹಜೀವನ ನಡೆಸಲಾರಂಭಿಸಿದ್ದರು. ತಮ್ಮನ್ನು ಮದುವೆಯಾಗುವಂತೆ ಗಂಗಾ ಒತ್ತಾಯಿಸಲಾರಂಭಿಸಿದ್ದರು. ಸದ್ಯ ಮದುವೆ ಬೇಡವೆಂದು ಆರೋಪಿ ಹೇಳಿದ್ದ. ಅದೇ ವಿಚಾರವಾಗಿ ಹಲವು ಬಾರಿ ಮಾತಿನ ಚಕಮಕಿಯೂ ನಡೆದಿತ್ತು.ಡಿ. 14ರಂದು ಕತ್ತು ಹಿಸುಕಿ ಕೊಂದಿದ್ದ ಎಂದು ಅವರು ಮಾಹಿತಿ ನೀಡಿದರು.

ಮೀನಾಕ್ಷಿ ಭಟ್ಟ ಐನಕ್ಕೈ ಅವರ ಆತ್ಮಕಥೆ 'ಹರಿವ ನದಿ' ಬಿಡುಗಡೆ

# 'ಕಷ್ಟ ಜಯಿಸಿದ ಬದುಕು ಸ್ಫೂರ್ತಿಯಾಗಲಿ'

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): 'ಸಾಮಾನ್ಯ ಮಹಿಳೆಯೊಬ್ಬಳು ಜೀವನದಲ್ಲಿ ಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಯಶಸ್ಸು ಕಂಡ ಗಾಥೆ ಸಮಾಜದ ಎಲ್ಲ ಮಹಿಳೆಯರಿಗೆ ಸ್ಫೂರ್ತಿ' ಎಂದು ಖ್ಯಾತ ಗಾಯಕಿ ಎಚ್.ಆರ್. ಲೀಲಾವತಿ ಹೇಳಿದರು.

ಪಟ್ಟಣದ ಶಂಕರಮಠದ ಸಭಾಂಗಣದಲ್ಲಿ ಶುಕ್ರವಾರ ಸಂಸ್ಕೃತಿ ಸಂಪದ ಆಯೋಜಿಸಿದ್ದ 'ಅಮ್ಮನೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಮೀನಾಕ್ಷಿ ಭಟ್ಟ ಐನಕ್ಕೈ ಅವರ ಆತ್ಮಕಥೆ 'ಹರಿವ ನದಿ' ಬಿಡುಗಡೆಗೊಳಿಸಿ ಮಾತನಾಡಿದರು.

'ತಾಯಿ ಎಂಬುದು ಪ್ರೀತಿ ಸೂಚಕ. ಪ್ರೀತಿ ಹಂಚುವ ಯಾರನ್ನೇ ಆದರೂ ತಾಯಿ ಎಂದು ಪರಿಗಣಿಸಬಹುದು. ಮೀನಾಕ್ಷಿ ಭಟ್ ಅವರದು ವಿಶಾಲ ಹೃದಯದ ತಾಯಿ ಪ್ರೀತಿ' ಎಂದು ಶ್ಲಾಘಿಸಿದರು. ಆತ್ಮಕಥೆಯ ಕುರಿತು ಪರಿಚಯಿಸಿದ ವಿಮರ್ಶಕಿ ವಿನಯಾ ವಕ್ಕುಂದ, 'ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಬದುಕಿನ ಚಿತ್ರಣ ಕಟ್ಟಿಕೊಡುವ ಪ್ರಯತ್ನದಲ್ಲಿ ಹರಿವ ನದಿ ಯಶಸ್ವಿಯಾಗಿದೆ. ಯಾತನೆಯ ಕಥನ ಇದಲ್ಲ. ಹೆಣ್ಣಿನ ಜೀವನವೂ ನದಿಯಂತೆ ಎಂಬುದನ್ನು ಪ್ರಾಮಾಣಿಕವಾಗಿ ಅಕ್ಷರರೂಪದಲ್ಲಿ ಅಚ್ಚೊತ್ತಲಾಗಿದೆ' ಎಂದರು.

ಸಿದ್ದಾಪುರದ ಶಂಕರ ಮಠದಲ್ಲಿ ಶುಕ್ರವಾರ ನಡೆದ 'ಅಮ್ಮನೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಮೀನಾಕ್ಷಿ ಭಟ್ಟ ಐನಕ್ಕೈ ಅವರ ಆತ್ಮಕಥನ 'ಹರಿವ ನದಿ' ಪುಸ್ತಕವನ್ನು ಗಾಯಕಿ ಎಚ್‌.ಆರ್‌.ಲೀಲಾವತಿ ಬಿಡುಗಡೆ ಮಾಡಿದರು. ವಿಮರ್ಶಕಿ ವಿನಯಾ ವಕ್ಕುಂದ ಹಾಗೂ ಮೀನಾಕ್ಷಿ ಭಟ್ಟ ಐನಕ್ಕೈ ಇದ್ದಾರೆ –ಪ್ರಜಾವಾಣಿ ಚಿತ್ರ

'ಅನುಭವಿಸಿದ ಶೋಷಣೆ, ಯಾತನೆಯ ಕುರಿತಾದ ಆರೋಪಗಳಿಲ್ಲದೆ ಜೀವನ ಕಥನ ಸಾಗಿದ ನಿರೂಪಣೆ ಅದ್ಭುತ. ಜಗತ್ತನ್ನು ಸಿದ್ಧಮಾನದಂಡದ ಹೊರತಾಗಿಯೂ ನೋಡುವ ವಿಚಾರವನ್ನು ಬಿತ್ತರಿಸಿದೆ' ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೀನಾಕ್ಷಿ ಭಟ್ಟ ಐನಕ್ಕೈ ಹಾಗೂ ಲೇಖಕಿ ಭಾರತಿ ಹೆಗಡೆ ಉಪಸ್ಥಿತರಿದ್ದರು.

ಶಿವಮೊಗ್ಗದ ಸುರೇಖಾ ಹೆಗಡೆ ಮತ್ತು ತಂಡದವರು 'ಅಮ್ಮನ ಹಾಡು'ಗಳನ್ನು ಹಾಡಿದರು. 'ಐರಾವತ' ತಾಳಮದ್ದಲೆ ಪ್ರಸಂಗ ಪ್ರದರ್ಶನಗೊಂಡಿತು.

## ಅಖಿಲ ಭಾರತ ಸಾಹಿತ್ಯ ಪರಿಷದ್ ಅಧಿವೇಶನ 8ರಿಂದ

ಮೈಸೂರು: ಅಖಿಲ ಭಾರತ ಸಾಹಿತ್ಯ ಪರಿಷದ್‌ನ 3ನೇ ರಾಜ್ಯ ಅಧಿವೇಶನ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆ ಜನಾರ್ದನ ದೇವಸ್ಥಾನ ಬಳಿಯ ಕೃಷ್ಣಾನುಗ್ರಹ ಸಭಾ ಭವನದಲ್ಲಿ ಜ.8, 9ರಂದು ನಡೆಯಲಿದೆ.

'ನುಡಿ ಸಾಮ್ರಾಜ್ಯದಲ್ಲಿ ಸ್ವರಾಜ್ಯ ವಿಷಯದ ಕುರಿತು ನಡೆಯಲಿರುವ ಅಧಿವೇಶನವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸುವರು. ರಂಗಕರ್ಮಿ ದಿವಾಕರ ಹೆಗಡೆ ಸಮಾರೋಪ ಭಾಷಣ ಮಾಡುವರು' ಎಂದು ಪರಿಷದ್‌ನ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಪರಿಷದ್‌ನ ಮೈಸೂರು ಜಿಲ್ಲಾ ಸಮಿತಿಯ ಕೊಶಾಧ್ಯಕ್ಷ ಸುಬ್ರಹ್ಮಣ್ಯ, ಪದಾಧಿಕಾರಿಗಳಾದ ರಘುಶೆಟ್ಟಿ, ಶ್ರೀರಾಮ್ ಇದ್ದರು.

ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮಸೂದೆ ಮಂಡಿಸಿದರು

# ಬಿಬಿಎಂಪಿ: ಶುಲ್ಕ ಸಂಗ್ರಹಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಬಿಬಿಎಂಪಿ ಕಟ್ಟಡ ನಕ್ಷೆಯ ಮಂಜೂರಾತಿ, ಕಟ್ಟಡ ಪ್ರಾರಂಭ ಪ್ರಮಾಣಪತ್ರ ಮತ್ತು ಕಟ್ಟಡ ಮುಕ್ತಾಯ ಪ್ರಮಾಣ ಪತ್ರವನ್ನು ಮಂಜೂರು ಮಾಡುವಾಗ ಸಂಗ್ರಹಿಸುವ ಶುಲ್ಕ ಮತ್ತು ದಂಡಗಳನ್ನು ಸಿಂಧುಗೊಳಿಸಲು 'ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆ 2021' ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಈ ತಿದ್ದುಪಡಿಯನ್ನು ಈಗಾಗಲೇ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗಿದ್ದು, ವಿಧಾನಮಂಡಲದ ಉಭಯ ಸದನಗಳ ಒಪ್ಪಿಗೆಗಾಗಿ ಮುಖ್ಯಮಂತ್ರಿಯ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮಸೂದೆಯನ್ನು ಶುಕ್ರವಾರ ಮಂಡಿಸಿದರು.

ಈ ತಿದ್ದುಪಡಿಯ ಮೂಲಕ ಬಿಬಿಎಂಪಿಯ ಬೈ-ಲಾದಲ್ಲಿ ಶುಲ್ಕ ಪಡೆಯುವುದಕ್ಕೆ ಅವಕಾಶ ಕಲ್ಪಿಸಲಾಗುವುದು. ಈವರೆಗೂ ಇದಕ್ಕೆ ಪೂರಕವಾದ ಕಾನೂನು ರಚಿಸಿರಲಿಲ್ಲ. ಸೂಕ್ತ ಕಾನೂನು ರೂಪಿಸಲು ಹೈಕೋರ್ಟ್ ಸೂಚಿಸಿರುವ ಕಾರಣ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಕಾನೂನು ರಚನೆಗೆ ಮುನ್ನ ಸುಮಾರು ₹ 2,362 ಕೋಟಿ ಸಂಗ್ರಹಿಸಿದ್ದು, ಇದು ನ್ಯಾಯಸಮ್ಮತವಾಗಿಲ್ಲದ್ದರಿಂದ ವಾಪಸ್ ಮಾಡಬೇಕೆಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು. ಇಷ್ಟು ದೊಡ್ಡ ಮೊತ್ತವನ್ನು ವಾಪಸ್ ಮಾಡುವುದನ್ನು ತಡೆಯಲು ಸರ್ಕಾರ ಕಾಯ್ದೆಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಹೊರಡಿಸಿತ್ತು.

ಬಿಬಿಎಂಪಿ ಸಂಗ್ರಹಿಸಿದ ₹ 2,362 ಕೋಟಿ ಶುಲ್ಕವನ್ನು ವಿವಿಧ ಅಭಿವೃದ್ಧಿ ಕೆಲಸಗಳಿಗೆ ಉಪಯೋಗ ಮಾಡಿದ್ದರಿಂದ ಬಿಬಿಎಂಪಿ ಅದನ್ನು ಮರುಪಾವತಿಸುವುದು ಅಸಾಧ್ಯವಾಗಿದೆ. ಹೀಗಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

ವಿಧಾನ ಮಂಡಲದಲ್ಲಿ

## ಶಿವಪ್ಪನಾಯಕ ಕೃಷಿ ವಿ.ವಿ

ಬೆಳಗಾವಿ (ಸುವರ್ಣ ವಿಧಾನಸೌಧ): ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆಯನ್ನು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

ಅಲ್ಲದೆ, 'ಇಂಗ್ಲಿಷ್ ಭಾಷಾ ಅಧಿನಿಯಮ 2009 ರಲ್ಲಿ 'ಶಿವೊಗ್ಗ' ಎಂಬ ಪದ ಬಳಕೆಯಾಗಿದ್ದು, ಅದನ್ನು 'ಶಿವಮೊಗ್ಗ' ಎಂದು ಮರು ಹೆಸರಿಸಲಾಗಿದೆ. ಕೃಷಿ ಸಚಿವ ಬಿ.ಸಿ.ಪಾಟೀಲ ಮಸೂದೆ ಮಂಡಿಸಿದರು.

## 4ನೇ ಹಂತದ ನಗರೋತ್ಥಾನ ವಿಸ್ತರಣೆ

ಬೆಳಗಾವಿ: ರಾಜ್ಯದಲ್ಲಿ 315 ನಗರಸಭೆ, ಪುರಸಭೆಗಳಿಗೂ ನಗರೋತ್ಥಾನ 4ನೇ ಹಂತದ ಯೋಜನೆಯನ್ನು ವಿಸ್ತರಿಸಲಾಗುವುದು ಎಂದು ಸಚಿವ ಪೌರಾಡಳಿತ ಎಂ.ಟಿ.ಬಿ.ನಾಗರಾಜ್ ಹೇಳಿದರು.

10 ಮಹಾನಗರ ಪಾಲಿಕೆಗಳಲ್ಲಿ ನಗರೋತ್ಥಾನ 4ನೇ ಹಂತದ ಯೋಜನೆಯ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಎಂದು ನಾಮಕರಣದಿಂದ ಅನುಷ್ಠಾನಗೊಳ್ಳುತ್ತಿದೆ, ಇದನ್ನು ವಿಸ್ತರಿಸಲಾಗುವುದು. ಈ ಸಂಬಂಧ ತಯಾರಿ ನಡೆದಿದೆ. ಆರ್ಥಿಕ ಇಲಾಖೆ ಅಧಿಕಾರಿಗಳ ಚರ್ಚೆ ನಡೆಸಿ ಅವರ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದೂ ವಿಧಾನಸಭೆಯಲ್ಲಿ ಹೇಳಿದರು.

ಬೊಕ್ಕಸಕ್ಕೆ ನಷ್ಟ: ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ನಕ್ಷೆಯನ್ನು ಅನುಮೋದನೆ ಪಡೆಯದೇ ರಾಜ್ಯಾದ್ಯಂತ ಮನೆಗಳನ್ನು ನಿರ್ಮಿಸುತ್ತಿರುವುದರಿಂದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ ಎಂದು ಸಚಿವ ನಾಗರಾಜ್ ಹೇಳಿದರು.

ಜೆಡಿಎಸ್‌ನ ಸದಸ್ಯ ಮಂಜುನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಅನಧಿಕೃತ ನಿರ್ಮಾಣ ತಡೆಗಟ್ಟಲು ನಿಯಮಿತವಾಗಿ 15 ದಿನಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ಅಕ್ರಮವಾಗಿ ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ ಎಂದರು.

ಸಮಿತಿಯಿಂದ ವರದಿ ನೀಡಲಿ: 'ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಬಗೆಹರಿಸಲು ಹಿರಿಯ ಅಧಿಕಾರಿಗಳ ಸಮಿತಿ ರಚಿಸಲಾಗಿದೆ. ಇನ್ನೊಂದು ತಿಂಗಳಲ್ಲಿ ವರದಿ ನೀಡಲಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಶೂನ್ಯವೇಳೆಯಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್‌ನ ಲಿಂಗೇಶ್ ಅವರ ಪ್ರಸ್ತಾವಕ್ಕೆ ಸಚಿವರು ಉತ್ತರಿಸಿದರು.

## ಬಿಸಿಎಂ ವಿದ್ಯಾರ್ಥಿ ನಿಲಯ: 1.5 ಲಕ್ಷ ಹೆಚ್ಚುವರಿ ಅರ್ಜಿ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಹೋಲಿಸಿದರೆ 1.5 ಲಕ್ಷ ಹೆಚ್ಚುವರಿ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಕೋರಿ ಹೆಚ್ಚಿನ ಬೇಡಿಕೆ ಬಂದಿರುವ ಕುರಿತು ಮುಖ್ಯಮಂತ್ರಿಯವರ ಜತೆ ಚರ್ಚಿಸಲಾಗಿದೆ. ಬಾಡಿಗೆ ಕಟ್ಟಡಗಳಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸುವ ಕುರಿತು ಪರಿಶೀಲಿಸಲಾಗುತ್ತಿದೆ' ಎಂದರು.

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ 1,867 ವಿದ್ಯಾರ್ಥಿ ನಿಲಯಗಳು, 68 ವಸತಿ ಶಾಲೆಗಳಿವೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 826 ವಸತಿ ಶಾಲೆಗಳಿವೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ 2,438 ವಿದ್ಯಾರ್ಥಿ ನಿಲಯಗಳು ಮತ್ತು 18 ಆಶ್ರಮ ಶಾಲೆಗಳಿವೆ. ಹೊಸ ವಿದ್ಯಾರ್ಥಿ ನಿಲಯಗಳ ಆರಂಭ ಹಾಗೂ ಕಟ್ಟಡ ನಿರ್ಮಾಣದ ಕುರಿತು ಈಗಾಗಲೇ ಚರ್ಚೆ ನಡೆಸಲಾಗಿದೆ ಎಂದರು.

ಬಾಲಕಿಯರು ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳಲ್ಲಿ ಭದ್ರತಾ ಸಮಸ್ಯೆ ಪರಿಹರಿಸುವಂತೆ ಭಾರತಿ ಶೆಟ್ಟಿ ಆಗ್ರಹಿಸಿದರು. ಶೀಘ್ರದಲ್ಲಿ ಈ ಸಂಬಂಧ ಸಭೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಪ್ರತಿಭಟನೆ

ಕನಿಷ್ಠ ವೇತನ ನೀಡಬೇಕು, ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಅಂಗನವಾಡಿ ಕೇಂದ್ರಗಳಲ್ಲೇ ಆರಂಭಿಸಬೇಕು ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ನೂರಾರು ಮಂದಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಬೆಳಗಾವಿಯ ಸುವರ್ಣ ವಿಧಾನಸೌಧ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

## 'ಅರಸು ಸಂಶೋಧನಾ ಸಂಸ್ಥೆ ಮುಚ್ಚುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಹಿಂದುಳಿದ ವರ್ಗಗಳು ಮತ್ತು ಜಾತಿಗಳ ಕುರಿತು ಸಂಶೋಧನೆಗಾಗಿ ಸ್ಥಾಪಿಸಿರುವ ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಮುಚ್ಚುವ ಪ್ರಸ್ತಾವ ಸರ್ಕಾರ ಮುಂದೆ ಇಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಅವರು, 'ಅರಸು ಸಂಶೋಧನಾ ಸಂಸ್ಥೆಯನ್ನು ಮುಚ್ಚುವ ಪ್ರಶ್ನೆಯೇ ಇಲ್ಲ. ಈ ಸಂಸ್ಥೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಯೋಜನೆಗಳು ಕೋವಿಡ್ ಕಾರಣದಿಂದ ಎರಡು ವರ್ಷದಿಂದ ಕುಂಠಿತವಾಗಿವೆ. ನಾನು ಕೂಡ ಅರಸು ಜಾರಿಗೆ ತಂದ ಭೂಸುಧಾರಣಾ ಕಾಯ್ದೆಯಿಂದ ಎರಡು ಎಕರೆ ಜಮೀನು ಪಡೆದಿರುವವನು. ಅವರ ಬಗ್ಗೆ ಅಪಾರ ಗೌರವವಿದೆ' ಎಂದು ಹೇಳಿದರು. ಹರಿಪ್ರಸಾದ್ ಮಾತನಾಡಿ, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ದೊಡ್ಡ ಸಮುದಾಯಗಳು, ಜಾತಿಗಳಿಗೆ ನಿಗಮ ಮತ್ತು ಮಂಡಳಿಗಳನ್ನು ರಚಿಸಲಾಗಿದೆ. ಆದರೆ, ಹಿಂದುಳಿದ ವರ್ಗಗಳು, ಜಾತಿಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಮುಚ್ಚುವ ಯತ್ನ ನಡೆದಿದೆ. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೂ ಸರಿಯಾಗಿ ಅನುದಾನ ನೀಡುತ್ತಿಲ್ಲ. ಅಲ್ಲಿರುವ ಯೋಜನೆಗಳು ದಲ್ಲಾಳಿಗಳ ಅನುಕೂಲಕ್ಕೆ ಬಳಕೆಯಾಗುತ್ತಿವೆ' ಎಂದು ದೂರಿದರು.

## ರಮೇಶ್ ಕುಮಾರ್ ಹೇಳಿಕೆಗೆ ಖಂಡನೆ

ಬೆಂಗಳೂರು: ಬೆಳಗಾವಿ ಅಧಿವೇಶನದಲ್ಲಿ ಕಾಂಗ್ರೆಸ್ ಶಾಸಕ ಕೆ.ಆರ್.ರಮೇಶ್ ಕುಮಾರ್ ಅವರು ಅತ್ಯಾಚಾರ ಕುರಿತಾಗಿ ಆಕ್ಷೇಪಾರ್ಹ ಹೇಳಿಕೆ ನೀಡಿರುವುದನ್ನು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ರಾಜ್ಯ ಸಮಿತಿ ಖಂಡಿಸಿದೆ.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಶೋಭಾ ಎಸ್, 'ಮಹಿಳೆಯರ ಘನತೆಗೆ ಚ್ಯುತಿ ತರುವಂತಹ ಹೇಳಿಕೆಯನ್ನು ಖಂಡಿಸಬೇಕಾಗಿದ್ದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನಕ್ಕಿರುವುದು ಹಾಗೂ ಇತರ ಸದಸ್ಯರು ಸಹಜ ವಿದ್ಯಮಾನವೆಂಬಂತೆ ವರ್ತಿಸಿರುವುದು ಆಡಳಿತ–ರಾಜಕೀಯ ವರ್ಗದ ಸಂವೇದನಾ ರಹಿತ, ಪ್ರಜಾತಂತ್ರ ವಿರೋಧಿ, ಪುರುಷ ಪ್ರಧಾನ ಧೋರಣೆಯನ್ನು ತೋರಿಸುತ್ತದೆ' ಎಂದು ದೂರಿದ್ದಾರೆ.

## ಭಿಕ್ಷಾಟನೆ: 28 ಮಕ್ಕಳ ರಕ್ಷಣೆ

ಬೆಳಗಾವಿ: ತುಮಕೂರು ಮತ್ತು ಬೆಂಗಳೂರಿನಲ್ಲಿ ಭಿಕ್ಷಾಟನೆಗೆ ಬಳಕೆಯಾಗುತ್ತಿದ್ದ 28 ಮಕ್ಕಳನ್ನು ಈ ವರ್ಷ ರಕ್ಷಣೆ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಜೆಡಿಎಸ್‌ನ ಗೋವಿಂದ ರಾಜು ಪ್ರಶ್ನೆಗೆ ಉತ್ತರಿಸಿದ ಅವರು, 'ಕೆಲವರು ಸ್ವಂತ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿದರೆ, ಇನ್ನು ಕೆಲವರು ಬೇರೆಯವರ ಮಕ್ಕಳನ್ನು ಬಳಕೆ ಮಾಡುವುದು ಕಂಡುಬಂದಿದೆ. ತುಮಕೂರಿನಲ್ಲಿ ಆರು ಮಕ್ಕಳನ್ನು ರಕ್ಷಿಸಲಾಗಿದೆ. ಬೆಂಗಳೂರಿನ ವಿವಿಧೆಡೆ ಆಗಸ್ಟ್ ತಿಂಗಳಲ್ಲಿ 22 ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಲಾಗಿದೆ' ಎಂದರು.

14 ಜಿಲ್ಲೆಗಳಲ್ಲಿ ಈಗಾಗಲೇ ಪುನರ್ವಸತಿ ಕೇಂದ್ರಗಳು ಇವೆ. ನಾಲ್ಕು ಜಿಲ್ಲೆಗಳಲ್ಲಿ ಪುನರ್ವಸತಿ ಕೇಂದ್ರಗಳ ನಿರ್ಮಾಣ ಪ್ರಗತಿಯಲ್ಲಿದೆ. ಉಳಿದ ಜಿಲ್ಲೆಗಳಲ್ಲೂ ಪುನರ್ವಸತಿ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

'ಭಿಕ್ಷಾಟನೆ ನಿರ್ಮೂಲನೆಗಾಗಿ ನಗರ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುತ್ತಿರುವ ಸೆಸ್ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ₹400 ಕೋಟಿ ಹತ್ತು ವರ್ಷಗಳಿಂದ ಬಳಕೆಯಾಗಿಲ್ಲ. ಈ ಹಣವನ್ನು ಬಳಸಿಕೊಂಡು ಭಿಕ್ಷುಕರಿಗೆ ಪುನರ್ವಸತಿ ಕಲ್ಪಿಸಬೇಕು' ಎಂದು ಗೋವಿಂದ ರಾಜು ಒತ್ತಾಯಿಸಿದರು.

ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಿದ್ಧತೆ

# ಕ್ರಿಸ್‌ಮಸ್, ಹೊಸ ವರ್ಷಾಚರಣೆಗೆ ನಿರ್ಬಂಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೊರೊನಾದ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತರ ಸಂಖ್ಯೆ ಎಂಟಕ್ಕೆ ಹೆಚ್ಚಳವಾಗಿರುವ ಬೆನ್ನಲ್ಲೇ, ಬಿಬಿಎಂಪಿಯು ಜನ ಗುಂಪುಗೂಡಲು ಕಾರಣವಾಗುವ ಕಾರ್ಯಕ್ರಮಗಳಿಗೆ ಕಡಿವಾಣ ಹಾಕಲು ಮುಂದಾಗಿದೆ. ಕ್ರಿಸ್‌ಮಸ್ ಹಬ್ಬ ಹಾಗೂ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಜನಜಂಗುಳಿ ತಡೆಯುವ ಪ್ರಸ್ತಾವವೂ ಪಾಲಿಕೆ ಮುಂದಿದೆ.

ಓಮೈಕ್ರಾನ್ ಸೋಂಕು ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಸುದ್ದಿಗಾರರಿಗೆ ಶುಕ್ರವಾರ ಮಾಹಿತಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಜನಜಂಗುಳಿ ಸೇರುವುದನ್ನು ನಿರ್ಬಂಧಿಸುವ ಅವಶ್ಯಕತೆ ಇದೆ. ಆದರೆ ಇನ್ನೂ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿಲ್ಲ. ರಾಜ್ಯ ಸರ್ಕಾರ ನೇಮಿಸಿರುವ ತಾಂತ್ರಿಕ ಸಲಹಾ ಸಮಿತಿಯ ಸಲಹೆ ಆಧಾರದಲ್ಲಿ ಉನ್ನತ ಮಟ್ಟದ ಸಮಿತಿ ಈ ಕುರಿತ ಮುಂದಿನ ತೀರ್ಮಾನ ಕೈಗೊಳ್ಳಲಿದೆ' ಎಂದರು.

'ಓಮೈಕ್ರಾನ್ ಹರಡುವಿಕೆಗೆ ಸಂಬಂಧಿಸಿ ಜಗತ್ತಿನಾದ್ಯಂತ ಆಗುತ್ತಿರುವ ಬೆಳವಣಿಗೆ ಆಧರಿಸಿ ಇಲ್ಲಿನ ಪರಿಸ್ಥಿತಿಯನ್ನೂ ಅವಲೋಕಿಸುತ್ತಿದ್ದೇವೆ. ಅನೇಕ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದೇವೆ. ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯ 40 ಸಾವಿರಕ್ಕೂ ಅಧಿಕ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಅಪಾಯಕಾರಿ ದೇಶಗಳಿಂದ ಬರುವವರಿಗೆ ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯ ಮಾಡಿದ್ದೇವೆ' ಎಂದರು.

'ವಿದೇಶದಿಂದ ಬಂದವರಿಗೆ ಕೋವಿಡ್ ದೃಢಪಟ್ಟರೆ, ಮಾದರಿಯನ್ನು ವೈರಾಣು ವಂಶವಾಹಿ ಸಂಚರನೆ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸುತ್ತೇವೆ. ಅವರು ಎಂಟು ದಿನ ಕಡ್ಡಾಯ ಪ್ರತ್ಯೇಕವಾಸಕ್ಕೆ ಒಳಗಾಗಬೇಕು. ಎಂಟನೇ ದಿನ ಮತ್ತೆ ಪರೀಕ್ಷೆ ನಡೆಸಲಿದ್ದು, ಮತ್ತೆ ಸೋಂಕು ದೃಢಪಟ್ಟರೆ ಪ್ರತ್ಯೇಕವಾಸ ಮುಂದುವರಿಸಬೇಕು' ಎಂದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ, 'ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆ ವೇಳೆ ಜನ ಗುಂಪುಗೂಡುವುದನ್ನು ತಡೆಯುವ ಅಗತ್ಯದ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ. ಈ ಬಗ್ಗೆ ಸರ್ಕಾರಕ್ಕೆ ಶನಿವಾರ ಪ್ರಸ್ತಾವ ಸಲ್ಲಿಸಲಿದ್ದೇವೆ' ಎಂದರು.

## ನಾಲ್ಕು ದಿನಗಳ ಮುನ್ನವೇ ರಾತ್ರಿ ಕರ್ಫ್ಯೂಗೆ ಚಿಂತನೆ

ಹೊಸ ವರ್ಷಾಚರಣೆಯ ನಾಲ್ಕು ದಿನಗಳ ಮುನ್ನವೇ ರಾತ್ರಿ ಕರ್ಫ್ಯೂ ವಿಧಿಸಲು ಅವಕಾಶ ಇರುವಂತೆ ನಿಯಮಗಳನ್ನು ರೂಪಿಸುವಂತೆ ಪೊಲೀಸ್ ಹಿರಿಯ ಅಧಿಕಾರಿಗಳು, ಬಿಬಿಎಂಪಿ ಅಧಿಕಾರಿಗಳನ್ನು ಕೋರಿದ್ದಾರೆ.

'ಡಿ.30 ಅಥವಾ ಡಿ.31ಕ್ಕೆ ಏಕಾಏಕಿ ನಿಯಮಗಳನ್ನು ಜಾರಿ ಮಾಡಿದರೆ ಜನರನ್ನು ನಿಯಂತ್ರಿಸುವುದು ಕಷ್ಟ. ಹೀಗಾಗಿ, ನಾಲ್ಕು ದಿನಗಳ ಮುಂಚಿತವಾಗಿ ಜಾರಿಗೊಳಿಸಿದರೆ ಪರಿಸ್ಥಿತಿ ನಿಯಂತ್ರಿಸಲು ಸುಲಭವಾಗುತ್ತದೆ' ಎಂದು ಸಲಹೆ ನೀಡಿದ್ದಾರೆ.

### ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,59,738 ▲ ಒಟ್ಟು ಸೋಂಕಿತರು

| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |
|---|---|---|
| 5,596 ▼ | 12,37,765 ▲ | 16,376 ▲ |

| ದಿನದ ಏರಿಕೆ | |
|---|---|
| ಹೊಸ ಪ್ರಕರಣ | 153 ▼ |
| ಗುಣಮುಖ | 185 ▲ |
| ಸಾವು | 02 |

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

### ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| ಒಟ್ಟು ಸೋಂಕಿತರು (30,01,251 ನಿನ್ನೆಯ ವಿವರ) | 30,01,792 ▲ |
| ಸಕ್ರಿಯ ಪ್ರಕರಣಗಳು | 7,076 ▼ |
| ಗುಣಮುಖರಾದವರು | 29,56,405 ▲ |
| ಒಟ್ಟು ಸಾವು | 38,282 ▲ |

| ದಿನದ ಏರಿಕೆ | |
|---|---|
| ಹೊಸ ಪ್ರಕರಣ | 238 ▼ |
| ಗುಣಮುಖ | 317 ▼ |
| ಸಾವು | 3 ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

### ಕೋವಿಡ್ ಅಂಕಿ–ಅಂಶ

ಆಧಾರ: ವೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 27.36 ಕೋಟಿ ▲ | 3.47 ಕೋಟಿ |
| ಸಕ್ರಿಯ ಪ್ರಕರಣ | 2.25 ಕೋಟಿ ▲ | 86,415 ▼ |
| ಗುಣಮುಖ | 24.57 ಕೋಟಿ ▲ | 3.41 ಕೋಟಿ |
| ಸಾವು | 53.57 ಲಕ್ಷ ▲ | 4.76 ಲಕ್ಷ |

| ದಿನದ ಮಾಹಿತಿ | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 7.31 ಲಕ್ಷ ▲ | 7,447 ▼ |
| ಗುಣಮುಖ | 4.85 ಲಕ್ಷ ▼ | 7,886 ▼ |
| ಸಾವು | 7,114 ▼ | 391 ▲ |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| ಅಮೆರಿಕ | ಬ್ರಿಟನ್ | ಜರ್ಮನಿ |
|---|---|---|
| 1.44 ಲಕ್ಷ ▲ | 88,376 ▲ | 53,057 ▲ |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

| ಅಮೆರಿಕ | ಜರ್ಮನಿ | ಬ್ರಿಟನ್ |
|---|---|---|
| 1.02 ಕೋಟಿ ▲ | 9.82 ಲಕ್ಷ ▼ | 12.92 ಲಕ್ಷ ▲ |

ಎಲ್ಲಿ ಹೆಚ್ಚು ಸಾವು (ಒಟ್ಟು)

| | |
|---|---|
| ಮಹಾರಾಷ್ಟ್ರ | 1.41 ಲಕ್ಷ ▲ |
| ಕೇರಳ | 43,946 ▲ |
| ತಮಿಳುನಾಡು | 36,656 ▲ |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 66.46 |
| ಕೇರಳ | 52.07 ▲ |
| ತಮಿಳುನಾಡು | 27.37 |

ಪ್ರಜಾವಾಣಿ ಗ್ರಾಫಿಕ್ಸ್

## ಕೋವಿಡ್: ತಗ್ಗಿದ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಇಳಿಕೆಯಾಗಿವೆ. ಸದ್ಯ 7,076 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆಪಡೆಯುತ್ತಿದ್ದಾರೆ.

ಸೋಂಕಿತರ ಹೊಸ ಪ್ರಕರಣಗಳೂ ತಗ್ಗಿವೆ. ಶುಕ್ರವಾರ 238 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಸೋಂಕಿತರ ಒಟ್ಟು ಸಂಖ್ಯೆ 30.01 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣವು ಶೇ 0.20ರಷ್ಟಿದೆ. ಒಂದು ದಿನದಲ್ಲಿ 317 ಜನರಿಗೆ ಕಾಯಿಲೆ ವಾಸಿಯಾಗಿದ್ದು, ಈವರೆಗೆ 29.56 ಲಕ್ಷ ಮಂದಿ ಚೇತರಿಸಿಕೊಂಡಂತಾಗಿದೆ. ಬೆಂಗಳೂರಿನಲ್ಲಿ ಇಬ್ಬರು ಮೃತಪಟ್ಟಿದ್ದು, ಹಿಂದಿನ 24 ಗಂಟೆಗಳಲ್ಲಿ 153 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

ಬೀಳುವ ಹಂತದಲ್ಲಿ ಇದ್ದುದಾಗಿ ಅಧಿಕಾರಿಗಳ ಪ್ರತಿಕ್ರಿಯೆ

## ಅರಣ್ಯ ಇಲಾಖೆಯಿಂದ ಮರಗಳಿಗೆ ಕೊಡಲಿ

ಪ್ರಜಾವಾಣಿ ವಾರ್ತೆ

ಜೊಯಿಡಾ: ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕುಂಬಾರವಾಡಾ ವನ್ಯಜೀವಿ ವಲಯದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳೇ ಮರಗಳನ್ನು ಕಡಿದಿದ್ದಾರೆ. ಇದರ ವಿರುದ್ಧ ಸ್ಥಳೀಯರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಕುಂಬಾರವಾಡಾ ವನ್ಯಜೀವಿ ವಲಯದ ನುಜ್ಜಿಯಲ್ಲಿ ನದಿ ದಡದಲ್ಲಿ ಇರುವ ಹಳೆಯ ನರ್ಸರಿಯಲ್ಲಿ ಬೃಹತ್ ಗಾತ್ರದ ಒಟ್ಟು ಒಂಬತ್ತು ಹಸಿ ಮರಗಳನ್ನು ಈ ವಾರದಲ್ಲಿ ಕಡಿಯಲಾಗಿದೆ. ಇದರಲ್ಲಿ ಹಲಸು, ನಂದಿ, ಕಿಂದಳ ಮತ್ತು ಹಾರ್ನ್‌ಬಿಲ್ ಪಕ್ಷಿಗಳಿಗೆ ಪ್ರಮುಖ ಆಹಾರದ ಹಣ್ಣು ನೀಡುವ ಬೈನೆ ಮರವೂ ಸೇರಿದೆ. ಬಹುತೇಕ ಎಲ್ಲ ಮರಗಳೂ 40ರಿಂದ 50 ವರ್ಷದ್ದಾಗಿವೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಮರಿಯಾ ಡಿ.ಕ್ರಿಸ್ತರಾಜು, 'ಕತ್ತರಿಸಿರುವ ಎಲ್ಲ ಮರಗಳೂ ಬೀಳುವ ಸ್ಥಿತಿಯಲ್ಲಿದ್ದವು. ಮುಂಜಾಗೃತಾ ಕ್ರಮವಾಗಿ ಸುರಕ್ಷತೆಯ ದೃಷ್ಟಿಯಿಂದ, ಇಲಾಖೆಯ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ತೆರವುಗೊಳಿಸಲಾಗಿದೆ' ಎಂದರು.

ಜೊಯಿಡಾ ತಾಲ್ಲೂಕಿನ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕುಂಬಾರವಾಡ ವನ್ಯಜೀವಿ ವಲಯ ವ್ಯಾಪ್ತಿಯ ನುಜ್ಜಿ ನದಿ ದಡದ ಹಳೆಯ ನರ್ಸರಿಯಲ್ಲಿ ಮರಗಳನ್ನು ಅರಣ್ಯ ಇಲಾಖೆಯಿಂದಲೇ ಕತ್ತರಿಸಿರುವುದು.

## ಶಿವಸೇನಾ, ಎಂಇಎಸ್ ನಿಷೇಧಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕನ್ನಡದ ಬಾವುಟ ಸುಟ್ಟು ಹಾಕಿರುವ ಶಿವಸೇನಾ ಮತ್ತು ಎಂಇಎಸ್ ನಿಷೇಧಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಇಲ್ಲಿನ ಬಿಬಿಎಂಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಪ್ರತಿಕೃತಿ ದಹಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

'ಶಿವಸೇನಾ ಹಾಗೂ ಎಂಇಎಸ್ ಪುಡಾರಿಗಳು ಕನ್ನಡದ ಬಾವುಟ ಸುಟ್ಟರೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ರಾಜ್ಯದ ಕನ್ನಡಿಗರಿಗೆ ಮಾಡಿದ ಅವಮಾನವಾಗಿದೆ' ಎಂದು ರಾಜ್ಯ ಉಪಾಧ್ಯಕ್ಷ ಶಿವುರಾಜ್ ಗೌಡ್ರು ಟೀಕಿಸಿದರು.

ಕೆ.ಆರ್.ಪುರ ಕರವೇ ಉಪಾಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, 'ಮರಾಠಿ ಪುಂಡರಿಗೆ ಮಸಿ ಬಳಿದ ಕನ್ನಡಪರ ಹೋರಾಟಗಾರ ಸಂಪತ್ ಕುಮಾರ್ ದೇಸಾಯಿ ಅವರನ್ನು ಈ ಕೂಡಲೇ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿದರು. ಕೇಶವಮೂರ್ತಿ, ಲೋಕೇಶ್, ದೀಪಕ್, ಸೋಮು, ಡಿ.ಟಿ.ಶ್ರೀನಿವಾಸ್, ಗಂಧರ್ವ ರಮೇಶ್, ದೇವೇಂದ್ರ ಇದ್ದರು.

ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಕೆ.ಆರ್.ಪುರ ಬಿಬಿಎಂಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣನೆ

# ನೇರ ನುಡಿಯ ನಿಸ್ವಾರ್ಥ ರಾಜಕಾರಣಿ

ಪ್ರಜಾವಾಣಿ ವಾರ್ತೆ

ಕೋಲಾರ: 'ನಾಡು ಹಿರಿಯ ಮಾರ್ಗದರ್ಶಕರು ಹಾಗೂ ಧೀಮಂತ ನಾಯಕ ಜಾಲಪ್ಪರನ್ನು ಕಳೆದುಕೊಂಡಿದ್ದು, ಅವರ ಅಗಲಿಕೆ ಮನಸ್ಸಿಗೆ ತೀವ್ರ ನೋವು ತಂದಿದೆ. ನೇರ ನುಡಿ, ನಿಸ್ವಾರ್ಥ ರಾಜಕಾರಣಿಯಾಗಿದ್ದ ಅವರು ರಾಜ್ಯಕ್ಕೆ ನೀಡಿದ ಕೊಡುಗೆ ಅಪಾರ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದ ಬಗ್ಗೆ ಅಪಾರ ಪ್ರೀತಿ ಹೊಂದಿದ್ದ ಜಾಲಪ್ಪರು ಮುಲಾಜಿಲ್ಲದೆ ಸತ್ಯ ನುಡಿಯುವಂತಹ ವ್ಯಕ್ತಿತ್ವದವರಾಗಿದ್ದರು. ನಮ್ಮ ತಂದೆಯೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ಅವರು ಎಲ್ಲಾ ಸಮಯದಲ್ಲೂ ತಂದೆಯ ಜತೆ ಗಟ್ಟಿಯಾಗಿ ನಿಂತಿದ್ದರು. ಜಾಲಪ್ಪರು ಹಿಂದುಳಿದ ವರ್ಗಗಳ ನಾಯಕರಾಗಿ ಬೆಳೆಯಬಹುದಿತ್ತು. ಆದರೂ ಅವರು ದೇವರಾಜ ಅರಸು ಅವರಿಗೆ ಬೆಂಬಲವಾಗಿದ್ದರು' ಎಂದರು.

'ಹಿಂದುಳಿದ ವರ್ಗಗಳಿಂದ ಬಂದ ಜಾಲಪ್ಪ ಅವರು ಹಲವರಿಗೆ ತನು, ಮನ, ಧನ ಕೊಟ್ಟು ಬೆಳೆಸಿದ್ದಾರೆ. ಹಿಂದುಳಿದವರಿಗೆ ಸಮಾನ ಅವಕಾಶ ಸಿಗಬೇಕೆಂದು ಹೋರಾಟ ಸಹ ಮಾಡಿದರು. ಯಾರ ಊಹಿಸದಂತೆ ಕೋಲಾರ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಿ ತೋರಿಸಿದರು' ಎಂದು ಹೇಳಿದರು.

**ಜಾಲಪ್ಪರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಮನಸ್ಸಿಗೆ ಘಾಸಿಯಾಯಿತು. ಸಕಲ ಸರ್ಕಾರಿ ಗೌರವದೊಂದಿಗೆ ಜಾಲಪ್ಪರ ಅಂತ್ಯಕ್ರಿಯೆ ನೆರವೇರಿಸುವಂತೆ ಸೂಚಿಸಿದ್ದೇನೆ.**

**ಬಸವರಾಜ ಬೊಮ್ಮಾಯಿ,**
ಮುಖ್ಯಮಂತ್ರಿಗಳು

'ಹಲವು ವರ್ಷಗಳಿಂದ ಸಕ್ರಿಯ ರಾಜಕಾರಣದಿಂದ ದೂರವಿದ್ದರೂ ಅವರ ಮಾರ್ಗದರ್ಶನ ರಾಜ್ಯಕ್ಕೆ ಅಗತ್ಯವಾಗಿತ್ತು. 97ರ ವರ್ಷದ ಅವರು 100 ವರ್ಷ ಪೂರೈಸುತ್ತಾರೆ ಎಂದು ಕುಟುಂಬ ಸದಸ್ಯರು ನಿರೀಕ್ಷಿಸಿದ್ದರು. ಆದರೆ, ವಿಧಿಯಾಟ ಬೇರೆಯಿತ್ತು. ಅವರು ಹಾಕಿಕೊಟ್ಟ ದಾರಿಯಲ್ಲಿ ನಾವೆಲ್ಲಾ ಸಾಗಬೇಕಿದೆ' ಎಂದು ತಿಳಿಸಿದರು.

**ಅಪರೂಪದ ರಾಜಕಾರಣಿ:** 'ಆರ್.ಎಲ್.ಜಾಲಪ್ಪ ಅವರು ಬಲಹೀನ ವರ್ಗಗಳ ಏಳಿಗೆಗೆ ಶ್ರಮಿಸಿದ ಅಪರೂಪದ ರಾಜಕಾರಣಿ. ಅವರು ಮೌಢ್ಯಗಳನ್ನು ನಂಬುತ್ತಿರಲಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸ್ಮರಿಸಿದರು.

'ಜಾಲಪ್ಪ ಅವರು ಅಕ್ಷರ ದಾಸೋಹ ನಡೆಸಿದ್ದಾರೆ. ಗ್ರಾಮೀಣ ಭಾಗದ ಜನರಿಗೆ ಆರೋಗ್ಯ ದಾಸೋಹ ನೀಡಿದ್ದಾರೆ. ಅವರ ಇಡೀ ಬದುಕು ನಮಗೆ ಮಾರ್ಗದರ್ಶನ. ಅವರ ಬಿಟ್ಟು ಹೋದ ದಾರಿಯಲ್ಲಿ ಪ್ರಯಾಣಿಸಲು ಪ್ರಯತ್ನ ಮಾಡುತ್ತೇವೆ. ಜಾಲಪ್ಪರ ಸೇವೆ ರಾಜ್ಯಕ್ಕೆ ಬೇಕಿತ್ತು. ಅವರಂತಹ ಧೀಮಂತರು ಮತ್ತೆ ಹುಟ್ಟಿ ಬರಲಿ' ಎಂದು ಆಶಿಸಿದರು.

## ಅಂತಿಮ ದರ್ಶನ ಪಡೆದ ಸಿ.ಎಂ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೋಲಾರದಲ್ಲಿ ಶುಕ್ರವಾರ ನಿಧನರಾದ ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು

ಕೋಲಾರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಂಪುಟದ ಹಲವು ಸಚಿವರು ಶುಕ್ರವಾರ ರಾತ್ರಿ ಕೇಂದ್ರದ ಮಾಜಿ ಆರ್.ಎಲ್.ಜಾಲಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿಗಳು ಜಾಲಪ್ಪರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ರಾತ್ರಿಯೇ ಕೋಲಾರಕ್ಕೆ ಆಗಮಿಸಿ ಮೃತರಿಗೆ ಅಂತಿಮ ನಮನ ಸಲ್ಲಿಸಿದರು. ಬಳಿಕ ಜಾಲಪ್ಪರ ಕುಟುಂಬ ಸದಸ್ಯರನ್ನು ಭೇಟಿಯಾಗಿ ಸಾಂತ್ವನ ಹೇಳಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್, ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಜಾಲಪ್ಪರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ನಿಧನ ವಾರ್ತೆ

## ನಿಂಗಮ್ಮ

ಕನಕಪುರ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಅಜ್ಜಿ ನಿಂಗಮ್ಮ (106) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ದೊಡ್ಡಾಲಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಜೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ.ಸುರೇಶ್, ವಿಧಾನ ಪರಿಷತ್ ಸದಸ್ಯ ಎಸ್.ರವಿ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ವಿಧಾನ ಪರಿಷತ್ ಚುನಾವಣೆ: ಕಾಂಗ್ರೆಸ್‌ನಿಂದ ಫಲಿತಾಂಶದ ವಿಶ್ಲೇಷಣೆ

# 'ಬಿಜೆಪಿ ಗರ್ವಭಂಗ, ಜೆಡಿಎಸ್‌ಗೆ ಮುಖಭಂಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಪರಿಷತ್ ಚುನಾವಣೆಯ ಫಲಿತಾಂಶ ಪ್ರಕಟವಾದ ಬಳಿಕ ಬಿಜೆಪಿಯವರ ಗರ್ವಭಂಗ ಆಗಿದೆ. ಜೆಡಿಎಸ್‌ಗೆ ಮುಖಭಂಗ ಆಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ವಿಶ್ಲೇಷಿಸಿದರು.

ಪಕ್ಷದ ಮತ್ತೊಬ್ಬ ನಾಯಕ ಚಂದ್ರಪ್ಪ ಜೊತೆ ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಿಷತ್ ಚುನಾವಣೆಯಲ್ಲಿ ಮತಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ 44,225 (ಶೇ 48ರಷ್ಟು) ಮತಗಳನ್ನು ಕಾಂಗ್ರೆಸ್ ಪಡೆದುಕೊಂಡಿದೆ. ಬಿಜೆಪಿ ಕೇವಲ 37,283 ಮತಗಳನ್ನು ಮಾತ್ರ ಪಡೆದುಕೊಂಡಿದೆ' ಎಂದರು.

'45 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿ ಸದಸ್ಯರು ಬಿಜೆಪಿಯವರು ಎಂದು ಶಾಸಕ ಯಡಿಯೂರಪ್ಪ ಹೇಳಿದ್ದರು. ಬಿಜೆಪಿ ಅಧ್ಯಕ್ಷ ಕಟೀಲ್ ಅವರು ಚುನಾವಣೆಗೆ ಮೊದಲು ಕಾಂಗ್ರೆಸ್ ಮುಳುಗುವ ಹಡಗು ಅಂದಿದ್ದರು. ಉತ್ತರ ಕರ್ನಾಟಕ ಅಂದರೆ ವೀರಶೈವ ಸಮಾಜ ಬಿಜೆಪಿ ಜೊತೆ ಇದೆ ಎಂಬ ಭಾವನೆ ಇತ್ತು. ಆದರೆ, ಹಿಂದುಳಿದ ವರ್ಗ ಕಾಂಗ್ರೆಸ್ ಜೊತೆಗಿದೆ ಎಂಬುದನ್ನು ಫಲಿತಾಂಶ ಸಾಬೀತುಪಡಿಸಿದೆ. ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಹೆಚ್ಚಿನ ಮತ ಪಡೆಯಲು ಸಾಧ್ಯವಾಗಿಲ್ಲ. ಆ ಭಾಗದಲ್ಲಿ ಜೆಡಿಎಸ್ ಪ್ರಾಬಲ್ಯ ಕಡಿಮೆ ಆಗಿದೆ. ಕಾಂಗ್ರೆಸ್ ಪರವಾಗಿ ಬದಲಾವಣೆ ಪರ್ವ ಕಾಣಿಸುತ್ತಿದೆ' ಎಂದರು.

'ದೇವಸ್ಥಾನಗಳನ್ನು ತೋರಿಸಿ ರಾಜಕಾರಣ ಮಾಡುವವರು ಕಾಂಗ್ರೆಸ್‌ನವರಲ್ಲ. ನಾವು ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಸಮುದಾಯಕ್ಕೆ ಟಿಕೆಟ್ ನೀಡಿದ್ದೇವೆ. ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ಮಂತ್ರಿಗಳೆಲ್ಲ ಪ್ರವಾಸ ಮಾಡಿದರೂ ಕಾಂಗ್ರೆಸ್ ಹೆಚ್ಚಿನ ಮತ ಗಳಿಸಿದೆ. ಇದು ಅನ್ಯಪಕ್ಷಗಳ ಶಾಸಕರನ್ನು ಖರೀದಿಸಿ ನಡೆಯುತ್ತಿರುವ ಸರ್ಕಾರ. ಆಡಳಿತ ವೈಫಲ್ಯದಿಂದ ಜನ ನಮ್ಮ ಪರ ವಾಲುತ್ತಿದ್ದಾರೆ' ಎಂದರು.

ಮತ್ತೊಂದು ಕಾಯ್ದೆ ಬೇಕಿಲ್ಲ: 'ಬಲವಂತದ ಮತಾಂತರ ನಡೆದರೆ ಕಾನೂನು ಕ್ರಮ ತೆಗೆದುಕೊಳ್ಳಲು ಈಗಾಗಲೇ ಅವಕಾಶ ಇದೆ. ಹೀಗಾಗಿ ಮತ್ತೊಂದು ಕಾಯ್ದೆಯ ಅವಶ್ಯಕತೆ ಇಲ್ಲ. ಯಾವ ಧರ್ಮದಲ್ಲಿ ಅಸಮಾನತೆ ಇದೆಯೋ ಆ ಧರ್ಮ ಬಿಟ್ಟು ಬೇರೆ ಧರ್ಮಕ್ಕೆ ಹೋಗುತ್ತಾರೆ' ಎಂದು ಅವರು ಹೇಳಿದರು.

'ಶಾಸಕ ಗೂಳಿಹಟ್ಟಿ ಶೇಖರ್ ಆರೆಸ್ಸೆಸ್‌ನ ಕೈಗೊಂಬೆ. ಅವರ ತಾಯಿ ಈಗ ಮತಾಂತರ ಆಗಿದ್ದಲ್ಲ. ಎಷ್ಟೋ ವರ್ಷದ ಹಿಂದೆಯೇ ಮತಾಂತರ ಆಗಿದ್ದಾರೆ. ಆದರೆ, ಆಗ ಮಾತನಾಡಿದ ಅವರು, ಈಗ ಯಾಕೆ ಮಾತನಾಡುತ್ತಿದ್ದಾರೆ. ಧರ್ಮ, ಪೂಜೆ, ಪುರಸ್ಕಾರ ಮನೆಯಲ್ಲಿ ಇರಬೇಕು, ಬೀದಿಗೆ ತರಬಾರದು' ಎಂದರು.

# ಹಳ್ಳಿಯಿಂದ ದಿಲ್ಲಿವರೆಗೆ ಬೆಳೆದ ಧೀಮಂತ

• ಪ್ರೊ.ಎಂ.ಜಿ. ಚಂದ್ರಶೇಖರಯ್ಯ

**ದೊಡ್ಡಬಳ್ಳಾಪುರ:** ಅದು 1980ರ ಸಮಯ. ಆ ವರ್ಷ ಲೋಕಸಭಾ ಚುನಾವಣೆ ನಡೆದು ಇಂದಿರಾಗಾಂಧಿ ಮತ್ತೆ ಪ್ರಧಾನಿ ಹುದ್ದೆ ಅಲಂಕರಿಸಿದ ಸಂಜೆಯೊಳಗೆ ರಾಜ್ಯದಲ್ಲಿ ಪಕ್ಷಾಂತರ ಪರ್ವ ನಡೆಯಿತು. 80 ಶಾಸಕರು ಮುಖ್ಯಮಂತ್ರಿಯಾಗಿದ್ದ ದಿವಂಗತ ಡಿ. ದೇವರಾಜ ಅರಸು ನೇತೃತ್ವದ ಕರ್ನಾಟಕ ಕಾಂಗ್ರೆಸ್ ಪಕ್ಷ ತೊರೆದು ಇಂದಿರಾಗಾಂಧಿ ಅವರ ರಾಷ್ಟ್ರೀಯ ಕಾಂಗ್ರೆಸ್ (ಐ) ಪಕ್ಷಕ್ಕೆ ಸೇರಿದರು. ಬಹುಮತ ಕಳೆದುಕೊಂಡ ಅರಸು ಸರ್ಕಾರ ಪತನಗೊಂಡು ಇಂದಿರಾ ಅವರ ಪುತ್ರ ಸಂಜಯ್ ಗಾಂಧಿ ಅವರ ಅಂತರಂಗದ ಗೆಳೆಯ ಆರ್. ಗುಂಡೂರಾವ್ ಮುಖ್ಯಮಂತ್ರಿಯಾದರು.

ಆಗ ಹಿಂದುಳಿದ ವರ್ಗಗಳ ನಾಯಕರೂ, ಸಮಾಜವಾದಿ ಧುರೀಣರೂ ಆಗಿದ್ದ ಎಸ್. ಬಂಗಾರಪ್ಪ ಮತ್ತು ಎಂ. ವೀರಪ್ಪ ಮೊಯಿಲಿ ಅವರು ಗುಂಡೂರಾವ್ ಸರ್ಕಾರದಲ್ಲಿ ಸಚಿವರಾದರು. ಅಂದಿನ ಕಾಲಕ್ಕೆ ರಾಜ್ಯದಲ್ಲಿ ಲಿಕ್ಕರ್ ಲಾಬಿ ರಾಜಕಾರಣವನ್ನು ನಿಯಂತ್ರಿಸುವಷ್ಟು ಶಕ್ತವಾಗಿತ್ತು.

ಅರಸು ಅವರು ರಾಜ್ಯ ರಾಜಕಾರಣದಲ್ಲಿ ಯಾರೂ ಅಷ್ಟಾಗಿ ಹೆಸರು ಕೇಳಿರದ ಆರ್.ಎಲ್. ಜಾಲಪ್ಪ ಅವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿದರು. ಇದು ಆ ಕಾಲಕ್ಕೆ ಅನೇಕರ ಹುಬ್ಬೇರಿಸಿತು. ಜಾಲಪ್ಪ ಪರಿಷತ್ತಿನ ಸದಸ್ಯರಾಗುವ ಪೂರ್ವದಲ್ಲಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಬಹಳ ಕಾಲ ಆ ಹುದ್ದೆ ಅಲಂಕರಿಸಿದ್ದ ದೊಡ್ಡಬಳ್ಳಾಪುರದ ಜಿ. ರಾಮೇಗೌಡ ಅವರು 1975ರಲ್ಲಿ ಸಚಿವರಾದಾಗ ಆ ಸ್ಥಾನವನ್ನು ತಮ್ಮ ರಾಜಕೀಯ ಶಿಷ್ಯ ಜಾಲಪ್ಪ ಅವರಿಗೆ ಬಿಟ್ಟುಕೊಟ್ಟರು. ಅಲ್ಲಿಯವರೆಗೆ ದೊಡ್ಡಬಳ್ಳಾಪುರಕ್ಕೆ ಸೀಮಿತವಾಗಿದ್ದ ಜಾಲಪ್ಪ ಅವರ ರಾಜಕೀಯ ಚಟುವಟಿಕೆ ರಾಜ್ಯದ ರಾಜಧಾನಿವರೆಗೆ ವಿಸ್ತರಿಸಿತು.

ಜಾಲಪ್ಪ ಅವರ ತಂದೆಯ ಮೂಲ ಬೆಂಗಳೂರು ಉತ್ತರ ತಾಲ್ಲೂಕಿನ ರಾಜಾನುಕುಂಟೆ. ತಂದೆಯ ಕಾಲಕ್ಕೆ ಅವರು ರಾಜಾನುಕುಂಟೆ ತೊರೆದು ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆಗೆ ವಲಸೆ ಬಂದು ಬದುಕು ರೂಪಿಸಿಕೊಂಡರು. ಪ್ರಾಥಮಿಕ ವಿದ್ಯಾಭ್ಯಾಸ ರಾಜಾನುಕುಂಟೆ, ಬಿ.ಎ. ಪದವಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆಯಿತು. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಮಹಾರಾಜ ಕಾಲೇಜಿನಲ್ಲಿ ಅವರ ಒಡನಾಡಿಯಾಗಿದ್ದರು.

ಮೂಲತಃ ಎಡಪಂಥೀಯ ವಿಚಾರಗಳನ್ನು ಹೊಂದಿದ್ದ ಜಾಲಪ್ಪ ಅಂದಿನ ಕಾಲಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗೇಣಿದಾರ ರೈತರ ಪರವಾಗಿ ಹೋರಾಟ ಮಾಡುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರ, ಸಿಪಿಎಂ ಮುಖಂಡ ಎಚ್. ಮುಗುವಾಳಪ್ಪ ಅವರ ಅನುಯಾಯಿಯಾಗಿದ್ದರು. ಯೌವನದ ದಿನಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು.

1958ರಲ್ಲಿ ನಡೆದ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ತೂಬಗೆರೆ ಕ್ಷೇತ್ರದಿಂದ ಸ್ಪರ್ಧಿಸಿ ಸೋತರು. 1962ರ ಸಾರ್ವತ್ರಿಕ ಚುನಾವಣೆ ವೇಳೆಗೆ ಅವರು ಜಿ. ರಾಮೇಗೌಡರ ಅನುಯಾಯಿಯಾಗಿ ಕಾಂಗ್ರೆಸ್ ಸೇರಿದರು.

ಬಳಿಕ ದೊಡ್ಡಬಳ್ಳಾಪುರ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿ ಕೆಲಸ ಮಾಡಿ ಹಂತ ಹಂತವಾಗಿ ರಾಜಕೀಯದ ಮೆಟ್ಟಿಲು ಏರಿ ಮೇಲ್ಮನೆಯ ಸದಸ್ಯರಾದರು. ಅಲ್ಲಿಂದ ಅವರು ರಾಜಕಾರಣದಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ.

1983ರ ವೇಳೆಗೆ ಗುಂಡೂರಾವ್ ಸರ್ಕಾರ ಜನಪ್ರಿಯತೆ ಕಳೆದುಕೊಂಡಿತ್ತು; ಮಾತ್ರವಲ್ಲ ಆ ಚುನಾವಣೆಯಲ್ಲಿ ಸ್ವತಃ ಗುಂಡೂರಾವ್ ಸೋಲು ಕಂಡರು. ಮೊದಲ ಬಾರಿಗೆ ಕರ್ನಾಟಕದಲ್ಲಿ ಕಾಂಗ್ರೆಸೇತರ ಸರ್ಕಾರ ರಾಮಕೃಷ್ಣ ಹೆಗಡೆ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ವಯಸ್ಸು ಮತ್ತು ಇತರೆ ಕಾರಣದಿಂದ ಜಿ. ರಾಮೇಗೌಡರು ರಾಜಕೀಯ ನಿವೃತ್ತಿ ಹೊಂದಲು ಬಯಸಿದ್ದರು. ಆಗಲೇ ಅವರು ಜಾಲಪ್ಪ ಅವರನ್ನು ತಮ್ಮ ಉತ್ತರಾಧಿಕಾರಿ ಎಂದು ಘೋಷಿಸಿದರು. ಇದು ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಜಾಲಪ್ಪ ಪ್ರವೇಶ ಪಡೆಯಲು ನೆರವಾಯಿತು. ಚುನಾವಣೆಯಲ್ಲಿ ಗೆದ್ದು ಹೆಗಡೆಯವರ ಸರ್ಕಾರದಲ್ಲಿ ಸಹಕಾರ ಸಚಿವರಾದರು. ಅಲ್ಲಿಂದ ಪ್ರಾರಂಭವಾದ ಅವರ ರಾಜಕೀಯ ಪಯಣ 2004ರವರೆಗೆ ಮುಂದುವರಿಯಿತು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ 1984ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಸೋಲುಂಡರು. 1991ರ ಚುನಾವಣೆಯಲ್ಲಿ ಜನತಾ ದಳದಿಂದ ಸ್ಪರ್ಧಿಸಿದ್ದ ಅವರು ಮತ್ತೆ ಪರಾಭವಗೊಂಡರು. 1996ರಲ್ಲಿ ಮೊದಲ ಬಾರಿ ಲೋಕಸಭೆಗೆ ಆಯ್ಕೆಯಾದ ಅವರು, ಎಚ್.ಡಿ. ದೇವೇಗೌಡ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಜವಳಿ ಸಚಿವರಾದರು.

ಮುಂದೆ ಐ.ಕೆ. ಗುಜ್ರಾಲ್ ಸರ್ಕಾರದಲ್ಲಿಯೂ ಸಚಿವರಾಗಿ ಮುಂದುವರಿದರು. 1998ರಲ್ಲಿ ಜನತಾದಳ ತೊರೆದು ಕಾಂಗ್ರೆಸ್ ಸೇರಿದ ಜಾಲಪ್ಪ ಮೂರು ಬಾರಿ (1998, 1999 ಮತ್ತು 2004) ಕಾಂಗ್ರೆಸ್‌ನಿಂದ ಲೋಕಸಭೆಗೆ ಆಯ್ಕೆಯಾದರು.

ಅವರ ರಾಜಕೀಯ ಜೀವನ ಅಷ್ಟೇನೂ ಏರುಪೇರು ಕಾಣದಿದ್ದರೂ ಅವರು ಗೃಹ ಸಚಿವರಾಗಿದ್ದ ಅವಧಿಯಲ್ಲಿಯೇ ದೇವರಾಜ ಅರಸು ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ಒಂದು ಘಟನೆ ನಡೆಯದೇ ಇದ್ದಿದ್ದರೆ ರಾಮಕೃಷ್ಣ ಹೆಗಡೆ ನಂತರ ಕರ್ನಾಟಕದ ಮುಖ್ಯಮಂತ್ರಿಯಾಗುವ ಎಲ್ಲಾ ಅವಕಾಶ ಅವರಿಗಿತ್ತು. ಆ ಘಟನೆ ಅವರ ರಾಜಕೀಯ ಬದುಕಿನ ಒಂದು ಕಪ್ಪುಚುಕ್ಕೆಯಾಗಿ ಅವರ ಉಜ್ವಲ ಭವಿಷ್ಯವನ್ನು ಮುಸುಕು ಮಾಡಿತು.

*ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕ, ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ.*

ಮಾಜಿ ರಾಷ್ಟ್ರಪತಿ ದಿವಂಗತ ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ ಆರ್.ಎಲ್. ಜಾಲಪ್ಪ

ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿದ್ದ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರೊಂದಿಗೆ ಆರ್.ಎಲ್. ಜಾಲಪ್ಪ

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತಮ್ಮ ಒಡನಾಡಿಯಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರೊಂದಿಗೆ ಜಾಲಪ್ಪ

ಕುಟುಂಬದ ಸದಸ್ಯರೊಟ್ಟಿಗೆ ಜನ್ಮ ದಿನ ಆಚರಿಸಿಕೊಂಡ ಆರ್.ಎಲ್. ಜಾಲಪ್ಪ (ಸಂಗ್ರಹ ಚಿತ್ರ)

## ಕೇಂದ್ರದ ಮಾಜಿ ಸಚಿವ ಜಾಲಪ್ಪ ವಿಧಿವಶ

**ಒಂದನೇ ಪುಟದಿಂದ**

ಡಿ. 9ರಂದು ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಗಿತ್ತು. ಫೆಬ್ರುವರಿ ತಿಂಗಳಲ್ಲಿ ಪಾರ್ಶ್ವವಾಯುಗೆ ತುತ್ತಾಗಿದ್ದ ಅವರಿಗೆ ಎರಡು ಬಾರಿ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ನಂತರ ಚೇತರಿಸಿಕೊಂಡಿದ್ದರು. ಹಿಂದಿನ ವರ್ಷ ಕೋವಿಡ್ 2ನೇ ಅಲೆಯಲ್ಲಿ ಅವರಿಗೆ ಕೊರೊನಾ ಸೋಂಕು ತಗುಲಿತ್ತು. ಬಳಿಕ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು.

ಬೆಂಗಳೂರು ಉತ್ತರ ತಾಲ್ಲೂಕಿನ ರಾಜಾನುಕುಂಟೆ ಗ್ರಾಮದ ಲಕ್ಷ್ಮೀನಾರಾಯಣಪ್ಪ ಮತ್ತು ನರಸಮ್ಮ ದಂಪತಿಯ ಮಗನಾಗಿ 1925ರ ಅ.19ರಂದು ಜನಿಸಿದ ಜಾಲಪ್ಪ ಅವರಿಗೆ ಆಂಜಿನಮ್ಮ ಮತ್ತು ವಿಜಯಲಕ್ಷ್ಮೀ ಪತ್ನಿಯರು. ಅವರಿಗೆ ಜೆ. ನರಸಿಂಹಸ್ವಾಮಿ, ಜೆ. ನಾಗೇಂದ್ರಸ್ವಾಮಿ, ಜೆ.ರಾಜೇಂದ್ರ ಎಂಬ ಮೂವರು ಪುತ್ರರು ಹಾಗೂ ಪಾರ್ವತಮ್ಮ, ಉಮಾದೇವಿ, ಲಕ್ಷ್ಮೀ, ಸರಸ್ವತಿ ಎಂಬ ಪುತ್ರಿಯರು ಇದ್ದಾರೆ. ಜಾಲಪ್ಪರ ಹಿರಿಯ ಪುತ್ರ ನರಸಿಂಹಸ್ವಾಮಿ ಅವರು ದೊಡ್ಡಬಳ್ಳಾಪುರ ಕ್ಷೇತ್ರದ ಮಾಜಿ ಶಾಸಕರಾಗಿದ್ದಾರೆ.

'ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆಯಲ್ಲಿ ಪಾರ್ಥಿವ ಶರೀರವನ್ನು ಶನಿವಾರ (ಡಿ.18) ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತದೆ. ಬಳಿಕ ಆರ್.ಎಲ್. ಜಾಲಪ್ಪ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಸಂಜೆ 4.20ಕ್ಕೆ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ನರಸಿಂಹಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ಅವರ ಎರಡೂ ಕಣ್ಣುಗಳನ್ನು ದಾನ ಮಾಡಲಾಗಿದೆ.

### ರಾಜಕೀಯ ಹೆಜ್ಜೆಗುರುತು

ಇಂದಿನ ರಾಜಕಾರಣ ಜಾತಿ, ಹಣ ಮತ್ತು ತೋಳ್ಬಲದ ಮೇಲೆ ನಿಂತಿರುವುದು ಗುಟ್ಟೇನಲ್ಲ. ಇವುಗಳ ಬೆಂಬಲ ಇಲ್ಲದೆ ರಾಜಕೀಯದ ಹಾದಿಯಲ್ಲಿ ಸಾಗುವುದು ಕಷ್ಟಕರ. ಜಾಲಪ್ಪ ಅವರು ಇದ್ಯಾವುದರ ಬೆಂಬಲ ಇಲ್ಲದೆಯೇ ಸಾಧನೆ ಮಾಡಿದ್ದು ಅವರ ಸಂಘಟನಾ ಚತುರತೆಗೆ ಸಾಕ್ಷಿಯಾಗಿದೆ.

ಅವರ ಜಾತಿಯ (ಈಡಿಗ) ಮತಗಳು ಅವರು ಪ್ರತಿನಿಧಿಸಿದ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಅತ್ಯಲ್ಪ. ಆದರೆ, ಜಾಲಪ್ಪ ಅವರ ಜನಪರ ಕಾಳಜಿ, ಸಹಕಾರ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯೇ ಅವರ ರಾಜಕೀಯ ಕ್ಷೇತ್ರದಲ್ಲಿನ ಯಶಸ್ಸಿಗೆ ಭದ್ರ ಬುನಾದಿಯಾಯಿತು.

ಜಾಲಪ್ಪ ಅವರು 1980ರಿಂದ 1983ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. 1983, 1985, 1989 ಮತ್ತು 1994ರ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸತತ ನಾಲ್ಕು ಬಾರಿ ಗೆಲುವು ಸಾಧಿಸಿದ್ದರು. 1983-1984ರವರೆಗೆ ಮತ್ತು 1985-86ರವರೆಗೆ ಸಹಕಾರ, 1986-87ರಲ್ಲಿ ಗೃಹ ಮತ್ತು 1995-96ರಲ್ಲಿ ಕಂದಾಯ ಸಚಿವರಾಗಿದ್ದರು.

ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಸಹಕಾರ ಸಚಿವರಾಗಿ ರೈತರ ಸುಸ್ತಿ ಸಾಲದ ಬಡ್ಡಿ ಮನ್ನಾ, ಸಹಕಾರ ಸಂಘಗಳಲ್ಲಿ ಮಹಿಳೆಯರು ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಕಲ್ಪಿಸಿದರು.

ಜಾಲಪ್ಪ ಸಚಿವರಾಗಿದ್ದ ವೇಳೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ಆರ್ಯ ಈಡಿಗ ಮಹಾ ಸಂಸ್ಥಾನಕ್ಕಾಗಿ 14 ಎಕರೆ ಜಾಗವನ್ನು ಮಂಜೂರು ಮಾಡಿಸಿದ್ದರು. ಅಲ್ಲಿ ಸ್ಥಾಪಿಸಿರುವ ಬ್ರಹ್ಮಶ್ರೀ ನಾರಾಯಣಗುರು ವಿದ್ಯಾಸಂಸ್ಥೆಯ ಕಟ್ಟಡದಲ್ಲಿ ಆರ್.ಎಲ್.ಜಾಲಪ್ಪ ಅಕಾಡೆಮಿ ಆರಂಭವಾಗಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲಾಗುತ್ತಿದೆ.

ಕೇರಳದ ವಕೀಲ ಎಂ.ಎ. ರಶೀದ್ ಕೊಲೆ ಪ್ರಕರಣದಲ್ಲಿ ಜಾಲಪ್ಪರ ಹೆಸರು ತಳುಕು ಹಾಕಿಕೊಂಡಿತ್ತು. ಆಗ ರಾಮಕೃಷ್ಣ ಹೆಗಡೆ ಅವರ ಸಂಪುಟದಲ್ಲಿ ಅವರು ಗೃಹ ಸಚಿವರಾಗಿದ್ದರು. ದೇವರಾಜ ಅರಸು ವೈದ್ಯಕೀಯ ಕಾಲೇಜು ವಿವಾದದ ವಿಚಾರವಾಗಿ ರಶೀದ್ ಅವರನ್ನು ಜಾಲಪ್ಪ ಅವರೇ ಕೊಲೆ ಮಾಡಿಸಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಯಿತು.

ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದ ನಂತರ ಜಾಲಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ನಿರೀಕ್ಷಣಾ ಜಾಮೀನು ಪಡೆದರು. ಸುಮಾರು 14 ವರ್ಷ ಪ್ರಕರಣದ ವಿಚಾರಣೆ ನಡೆದು ನ್ಯಾಯಾಲಯವು ಜಾಲಪ್ಪ ಅವರನ್ನು ನಿರ್ದೋಷಿ ಎಂದು ಘೋಷಿಸಿತ್ತು.

---

362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನೇಮಕಾತಿ ವಿವಾದ • ಮರು ನೇಮಕಾತಿಗೆ ದಾರಿ?

# ಕೆಪಿಎಸ್‌ಸಿ: ಬೊಮ್ಮಾಯಿಗೆ ಸಿದ್ಧಗಂಗಾಶ್ರೀ ಪತ್ರ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ವ್ಯಾಪಕ ಭ್ರಷ್ಟಾಚಾರ ನಡೆದಿದೆಯೆಂದು ತೀವ್ರ ವಿವಾದಕ್ಕೆ ಒಳಗಾಗಿದ್ದ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಅನ್ಯಾಯಕ್ಕೆ ಒಳಗಾದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತುಮಕೂರು ಸಿದ್ಧಗಂಗಾ ಮಠದ ಅಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಪತ್ರ ಬರೆದಿದ್ದಾರೆ.

ಸಿದ್ಧಲಿಂಗ ಸ್ವಾಮೀಜಿ

ಈ ಸಾಲಿನ ನೇಮಕಾತಿಯನ್ನು ರದ್ದುಗೊಳಿಸಿ ಹೈಕೋರ್ಟ್ 2018ರ ಮಾರ್ಚ್ 9ರಂದು ತೀರ್ಪು ನೀಡಿತ್ತು. ಅದೇ ತೀರ್ಪು ಅನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಆ ಬಳಿಕ, ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯನ್ನೂ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಇದೀಗ ಸಿದ್ಧಲಿಂಗ ಸ್ವಾಮೀಜಿ ಅವರು ಬರೆದ ಪತ್ರ ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

**ಪತ್ರದಲ್ಲಿ ಏನಿದೆ:** '2011ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ 2020ರ ಬಜೆಟ್ ಅಧಿವೇಶನದಲ್ಲಿ ಚರ್ಚೆಯಾಗಿತ್ತು. ಮಂತ್ರಿಮಂಡಲ ಸಭೆಯಲ್ಲಿಯೂ ಚರ್ಚೆ ಮಾಡಿ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಆದರೆ, ಇದುವರೆಗೂ ಪ್ರಯೋಜನ ಆಗಿಲ್ಲವೆಂದು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಿ, ಅಂಗೀಕರಿಸಿ ಅನ್ಯಾಯಕ್ಕೆ ಒಳಗಾದವರಿಗೆ ಅನುಕೂಲ ಮಾಡಿಕೊಟ್ಟರೆ ಸಂತೋಷ' ಎಂದು ಇದೇ ಡಿ.7ರಂದು ಬರೆದ ಪತ್ರದಲ್ಲಿ ಸ್ವಾಮೀಜಿ ಉಲ್ಲೇಖಿಸಿದ್ದಾರೆ.

ಈ ಪತ್ರದ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ಇದೇ 10ರಂದು ಟಿಪ್ಪಣಿ ಕಳುಹಿಸಿರುವ ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, 'ಸ್ವಾಮೀಜಿಯವರ ಕೋರಿಕೆಯಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯಿಂದ ನಿರ್ದೇಶಿತನಾಗಿದ್ದೇನೆ' ಎಂದು ತಿಳಿಸಿದ್ದಾರೆ.

**ಮರು ನೇಮಕಾತಿ?:** 'ಅಕ್ರಮದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷ ಮತ್ತು ಒಂಬತ್ತು ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಲು ಈಗಾಗಲೇ ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಆ ಮೂಲಕ, ಈ ಪ್ರಕರಣದಲ್ಲಿ ಸಿಐಡಿ ತನಿಖೆ ನಡೆಸಿ ಸಿದ್ಧಪಡಿಸಿದ್ದ ದೋಷಾರೋಪಪಟ್ಟಿಯಲ್ಲಿ ಹೆಸರು ಇದ್ದ ಎಲ್ಲ ಆರೋಪಿಗಳಿಗೆ ಸರ್ಕಾರ ಕ್ಲೀನ್ ಚಿಟ್ ನೀಡಿದೆ. ಇದರಿಂದಾಗಿ ಈ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಮರು ನೇಮಕಾತಿ ಮಾಡಿಕೊಳ್ಳಲು ದಾರಿ ತೆರೆದುಕೊಂಡಿದೆ' ಎಂದು ಹೆಸರು ಹೇಳಲು ಇಚ್ಛಿಸದ ಡಿಪಿಎಆರ್ ಅಧಿಕಾರಿಯೊಬ್ಬರು ತಿಳಿಸಿದರು.

### ಮಸೂದೆಯೇ, ಸುಗ್ರೀವಾಜ್ಞೆಯೇ?

'ವಿಶೇಷ ನೇಮಕಾತಿಗೆ ಕಾಯ್ದೆ ರೂಪಿಸಲು ಮಸೂದೆ ಮಂಡಿಸಬೇಕೇ? ಸುಗ್ರೀವಾಜ್ಞೆ ಹೊರಡಿಸಬೇಕೇ? ಎಂಬ ಜಿಜ್ಞಾಸೆ ನಡೆದಿದೆ. ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದ್ದು, ಬಳಿಕ ಸರ್ಕಾರ ತೀರ್ಮಾನಕ್ಕೆ ಬರಲಿದೆ' ಎಂದು ಮೂಲಗಳು ಹೇಳಿವೆ.

'ಈ ಸಾಲಿನ ಅಕ್ರಮದಲ್ಲಿ ಭಾಗಿಯಾದ ಕೆಪಿಸಿಸಿ ಅಧ್ಯಕ್ಷ ಮತ್ತು ಒಂಬತ್ತು ಸದಸ್ಯರ ವಿರುದ್ಧದ ಪ್ರಾಸಿಕ್ಯೂಷನ್ ಕೈಬಿಡುವಂತೆ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ (ಡಿಒಪಿಟಿ) ರಾಜ್ಯ ಸರ್ಕಾರ ನೇರವಾಗಿ ಕಡತ ಸಲ್ಲಿಸಿತ್ತು. ಆದರೆ, ಈ ಕಡತ ರಾಜ್ಯಪಾಲರ ಮೂಲಕವೇ ಸಲ್ಲಿಸಬೇಕು ಎಂದು ಷರಾ ಬರೆದು ಡಿಒಪಿಟಿ ವಾಪಸು ಕಳುಹಿಸಿದೆ. ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿಗೆ ಕಡತ ಸಲ್ಲಿಸಲಾಗಿದೆ. ಅಲ್ಲದೆ, ಈ ಸಾಲಿನ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆಯೂ ನಿರ್ಧಾರಕ್ಕೆ ಬರಲು ಮುಖ್ಯಮಂತ್ರಿಗೆ ಕಡತ ಸಲ್ಲಿಸಲಾಗಿದೆ. ಈಗಾಗಲೇ ಹಲವು ಸಭೆಗಳು ನಡೆದಿವೆ. ಇದೀಗ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದಾದರೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು' ಎಂದು ಮೂಲಗಳು ವಿವರಿಸಿವೆ.

ಪ್ರಜಾವಾಣಿ ವಿಶೇಷ

---

## 'ಮೊಟ್ಟೆ ವಿತರಣೆ ನಿಲ್ಲದು, ತಿನ್ನದವರಿಗೆ ಹಾಲು ಕೊಡುತ್ತೇವೆ'

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಪೋಷಕಾಂಶವಿದೆ ಎಂದು ಮಕ್ಕಳಿಗೆ ಮೊಟ್ಟೆ ಕೊಡಲಾಗುತ್ತಿದೆ. ತಿನ್ನದವರಿಗೆ ಹಾಲು ಕೊಡಲಾಗುತ್ತಿದೆ. ಮೊಟ್ಟೆ ವಿತರಣೆ ನಿಲ್ಲುವುದಿಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್ ಹೇಳಿದರು.

ಅಂಗನವಾಡಿ ಹಾಗೂ ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ವಿತರಣೆಗೆ ಕೆಲವರಿಂದ ವಿರೋಧ ವ್ಯಕ್ತವಾಗಿರುವ ಕುರಿತು ಶುಕ್ರವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ತಜ್ಞರ ಶಿಫಾರಸಿನಂತೆ ಮೊಟ್ಟೆ ವಿತರಿಸಲಾಗುತ್ತಿದೆ' ಎಂದರು.

ಓಮೈಕ್ರಾನ್ ಸೋಂಕು ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಮುಚ್ಚಲಾಗುವುದೇ ಎಂಬ ಪ್ರಶ್ನೆಗೆ, 'ತಜ್ಞರ ಸಲಹೆಯಂತೆ ಸದ್ಯ 2 ಗಂಟೆಯಷ್ಟೆ ಕೇಂದ್ರಗಳನ್ನು ನಡೆಸುತ್ತಿದ್ದೇವೆ. ಮುಂದೆ ಈ ಅವಧಿ ಹೆಚ್ಚಿಸುತ್ತೇವೆ. ಆರೋಗ್ಯ ಇಲಾಖೆ ನಿರ್ದೇಶನದ ಮೇರೆಗೆ ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು.

## ಪರ್ಸಂಟೇಜ್ ಆರೋಪದ ಹಿಂದೆ ಕಾಂಗ್ರೆಸ್ ಕೈವಾಡ: ಸಿ.ಸಿ.ಪಾಟೀಲ

**ಗದಗ:** '40 ಪರ್ಸಂಟೇಜ್ ಆರೋಪ ಆಧಾರರಹಿತವಾಗಿದ್ದು, ಗುತ್ತಿಗೆದಾರರ ಸಂಘದವರ ದೂರಿನ ಹಿಂದೆ ಕಾಂಗ್ರೆಸ್ ಪಕ್ಷದ ಕೈವಾಡವಿದೆ' ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಆರೋಪಿಸಿದರು.

ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, 'ಗುತ್ತಿಗೆದಾರರ ಸಂಘದ ಅಧ್ಯಕ್ಷರು ನನಗೂ ದೂರಿನ ಪ್ರತಿ ಕೊಡಲು ಬಂದಿದ್ದರು. ಅವರನ್ನು ಕೂರಿಸಿಕೊಂಡು ಪತ್ರ ಓದಿದೆ. ಅದರಲ್ಲಿ ಕೆಲ ಅಸಂವಿಧಾನಿಕ ಹಾಗೂ ಆಕ್ಷೇಪಾರ್ಹ ಪದಗಳಿದ್ದವು. ಶಬ್ದ ಬಳಸುವಾಗ ಯೋಚಿಸಬೇಕು ಎಂದು ಹೇಳಿದ್ದೆ. ಆಗ ಅವರು, 'ನನಗೇನೂ ಗೊತ್ತಿಲ್ಲ ಸರ್. ಯಾರೋ ಬರೆದುಕೊಂಡು ಬಂದಿದ್ದರು. ನಾನು ಸಹಿ ಮಾಡಿದ್ದೇನೆ' ಎಂದರು. 'ಇದು ಸತ್ಯ. ಹೀಗಾಗಿ ಇದು ಮತ್ತಾರೋ ಬರೆದುಕೊಟ್ಟ ದೂರು' ಎಂದು ಪಾಟೀಲ ಹೇಳಿದರು.

ಕಾಂಗ್ರೆಸ್ ಪಕ್ಷದ ಟ್ರ್ಯಾಕ್ಟರ್ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸುತ್ತಾ, 'ಟ್ರಾಕ್ಟರ್‌ನಲ್ಲಿ ಬಂದವರನ್ನು ಸುವರ್ಣಸೌಧಕ್ಕೆ ಬಿಡಲು ಸಾಧ್ಯವೇ ಎಂದಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಆಲೋಚಿಸಬೇಕು. ನಾಳೆ ಮತ್ತೊಬ್ಬ ಒಂಟೆ, ಕುದುರೆ, ಚಕ್ಕಡಿಯಲ್ಲಿ ಬರುತ್ತಾನೆ. ಹಾಗಂತ ಅವರನ್ನು ಬಿಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

## ಕನ್ನಡ ಧ್ವಜ ದಹನ: ಕಸಾಪ ಖಂಡನೆ

**ಬೆಂಗಳೂರು:** ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಶಿವಸೇನೆ ಕಾರ್ಯಕರ್ತರು ಕನ್ನಡದ ಬಾವುಟಕ್ಕೆ ಬೆಂಕಿ ಹಚ್ಚಿರುವ ಘಟನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಖಂಡಿಸಿದೆ.

'ಘಟನೆ ಬಗ್ಗೆ ಮಹಾರಾಷ್ಟ್ರ ಸರ್ಕಾರ ವಿಷಾದ ವ್ಯಕ್ತಪಡಿಸಿಲ್ಲ. ದುಷ್ಕೃತ್ಯ ಎಸಗಿದವರ ಮೇಲೆ ಕ್ರಮವನ್ನೂ ಕೈಗೊಂಡಿಲ್ಲ. ಕನ್ನಡದ ಬಾವುಟದ ಬಗೆಗೆ ಕನ್ನಡಿಗರಿಗೆ ಆರಾಧ್ಯ ಭಾವನೆ ಇದೆ. ಹೀಗಾಗಿ ಮಹಾರಾಷ್ಟ್ರ ಸರ್ಕಾರ ಕೂಡಲೇ ಎಂ.ಇ.ಎಸ್.ಪುಂಡರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

## ಹೊಸದುರ್ಗ ತಹಶೀಲ್ದಾರ್ ವರ್ಗಾವಣೆ

**ಚಿತ್ರದುರ್ಗ:** ಹೊಸದುರ್ಗ ತಾಲ್ಲೂಕಿನ ಹಳ್ಳಿಗಳಲ್ಲಿ ಬಲವಂತದ ಮತಾಂತರ ನಡೆದಿಲ್ಲ ಎಂದು ವರದಿ ಸಲ್ಲಿಸಿದ್ದ ತಹಶೀಲ್ದಾರ್ ವೈ.ತಿಪ್ಪೇಸ್ವಾಮಿ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ವೈ.ತಿಪ್ಪೇಸ್ವಾಮಿ

ಎಂ.ಮಲ್ಲಿಕಾರ್ಜುನ್ ಅವರನ್ನು ನೂತನ ತಹಶೀಲ್ದಾರ್ ಆಗಿ ನಿಯೋಜಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ವರ್ಗಾವಣೆ ಆಗಿರುವ ತಿಪ್ಪೇಸ್ವಾಮಿ ಅವರಿಗೆ ಸ್ಥಳ ನಿಯುಕ್ತಿಗೊಳಿಸಿಲ್ಲ.

'ತಾಲ್ಲೂಕಿನಲ್ಲಿ ಬಲವಂತದ ಮತಾಂತರ ನಡೆಯುತ್ತಿದೆ' ಎಂದು ಶಾಸಕ ಗೂಳಿಹಟ್ಟಿ ಡಿ.ಶೇಖರ್ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದರು. ಜಿಲ್ಲಾಧಿಕಾರಿ ಸೂಚನೆ ಮೇರೆಗೆ ತಹಶೀಲ್ದಾರ್ ತಿಪ್ಪೇಸ್ವಾಮಿ ಅವರು ಸ್ಥಳ ಪರಿಶೀಲನೆ ನಡೆಸಿ ಜನರ ಹೇಳಿಕೆ ದಾಖಲಿಸಿದ್ದರು. ಡಿ.1ರಂದು ವರದಿಯನ್ನು ಸಲ್ಲಿಸಿದ್ದರು.

---

## ಕಾಡುಗೊಲ್ಲ ಅಭಿವೃದ್ಧಿ ನಿಗಮ: ಹೈಕೋರ್ಟ್ ನಿರ್ದೇಶನ

**ಬೆಂಗಳೂರು:** 'ಕಾಡುಗೊಲ್ಲರ ಅಭಿವೃದ್ಧಿ ನಿಗಮದ ಹೆಸರು ಬದಲಾವಣೆ ಮಾಡದಂತೆ ಕೋರಿ ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ ಸಲ್ಲಿಸಿರುವ ಮನವಿಯನ್ನು ಮೂರು ತಿಂಗಳ ಒಳಗಾಗಿ ಪರಿಗಣಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ, ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಕುರಿತಂತೆ, 'ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ'ದ ಉಪಾಧ್ಯಕ್ಷ ಸಿ.ಮಹಾಲಿಂಗಪ್ಪ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಗೊಲ್ಲ–ಕಾಡುಗೊಲ್ಲ ನಡುವಿನ ಅಂತರಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಂದ ಸರ್ಕಾರ ಅಗತ್ಯ ದಾಖಲೆಗಳನ್ನು ಕೇಳಿ ಪಡೆದು ಕ್ರಮಕೈಗೊಳ್ಳಬೇಕು. ಈ ವಿಷಯದಲ್ಲಿ ವಿಳಂಬವನ್ನು ಕೋರ್ಟ್ ಸಹಿಸುವುದಿಲ್ಲ' ಎಂದು ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಕೆ.ಅಭಿಷೇಕ್, 'ರಾಜ್ಯ ಸರ್ಕಾರವು ಕಾಡುಗೊಲ್ಲರ ಅಭಿವೃದ್ಧಿ ನಿಗಮದ ಹೆಸರನ್ನು 'ಗೊಲ್ಲ-ಕಾಡುಗೊಲ್ಲರ ಅಭಿವೃದ್ಧಿ ನಿಗಮ' ಎಂದು ಬದಲಾಯಿಸಲು ಮುಂದಾಗಿದೆ. ಇದರಿಂದ ನ್ಯಾಯಯುತವಾಗಿ ಸಲ್ಲಬೇಕಾದ ಅನೇಕ ಮೀಸಲು ಸೌಲಭ್ಯಗಳು ಕಾಡುಗೊಲ್ಲರಿಗೆ ದಕ್ಕುವುದಿಲ್ಲ. ಹೀಗಾಗಿ, ಈ ವಂಚಿತ ಸಮುದಾಯದ ಅಸಮಾನತೆ ಮತ್ತಷ್ಟು ಮುಂದುವರಿಯುವ ಸಾಧ್ಯತೆ ಇದೆ. ಆದ್ದರಿಂದ, ರಾಜ್ಯ ಸರ್ಕಾರ 2020ರ ಸೆಪ್ಟೆಂಬರ್ 28ರಂದು ಹೊರಡಿಸಿರುವ ಆದೇಶದ ಅನುಸಾರವೇ ಕಾಡುಗೊಲ್ಲ ಅಭಿವೃದ್ಧಿ ನಿಗಮವನ್ನು ಕಾರ್ಯಗತಗೊಳಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಇದೊಂದು ಸೂಕ್ಷ್ಮ ವಿಚಾರ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ, 'ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿಯಲ್ಲಿನ ಅಂಶಗಳನ್ನು ಮುಕ್ತವಾಗಿ ಇರಿಸಲಾಗಿರುತ್ತದೆ' ಎಂದು ತಿಳಿಸಿತು ಹಾಗೂ ಮನವಿ ಪರಿಗಣಿಸಲು ಸರ್ಕಾರಕ್ಕೆ ಆದೇಶಿಸಿತು.

## ಪಿಯು ಉಪನ್ಯಾಸಕರಿಗೆ ಬಿ.ಇಡಿ ಕಡ್ಡಾಯ

**ಬೆಂಗಳೂರು:** ಸರ್ಕಾರಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 2008ರ ಫೆಬ್ರುವರಿ 4ರ ನಂತರ ನೇಮಕಗೊಂಡ ಉಪನ್ಯಾಸಕರಿಗೆ ಬಿ.ಇಡಿ. ಪದವಿ ಕಡ್ಡಾಯಗೊಳಿಸಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಪದವಿಪೂರ್ವ ಶಿಕ್ಷಣಾ ಇಲಾಖೆ ಈ ಕ್ರಮಕೈಗೊಂಡಿದೆ.

ಆದರೆ, 2008ರ ಫೆಬ್ರುವರಿ 4ಕ್ಕಿಂತ ಪೂರ್ವದಲ್ಲಿ ನೇಮಕಗೊಂಡು ಅನುದಾನಕ್ಕೆ ಒಳಪಟ್ಟಿರುವವರಿಗೆ ಬಿ.ಇಡಿ. ಪದವಿ ಹೊಂದುವಂತೆ ಷರತ್ತು ವಿಧಿಸಲು ಅವಕಾಶ ಇಲ್ಲ ಎಂದು ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

---

# ಮತಾಂತರ ನಿಷೇಧ ಮಸೂದೆಗೆ ವಿರೋಧ

## ಸುವರ್ಣ ವಿಧಾನಸೌಧ ಬಳಿ ಕ್ರೈಸ್ತರಿಂದ ಸಾಂಕೇತಿಕ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಮತಾಂತರ ನಿಷೇಧ ಮಸೂದೆ ಮಂಡನೆ ವಿರೋಧಿಸಿ ಮತ್ತು ಕ್ರೈಸ್ತರ ಮೇಲಿನ ದೌರ್ಜನ್ಯ ಖಂಡಿಸಿ ಭಾರತೀಯ ಕ್ರೈಸ್ತ ಒಕ್ಕೂಟದವರು ಸುವರ್ಣ ವಿಧಾನಸೌಧ ಬಳಿ ಶುಕ್ರವಾರ ಸಾಂಕೇತಿಕ ಉಪವಾಸ ಸತ್ಯಾಗ್ರಹ ನಡೆಸಿದರು.

'ಮಸೂದೆ ಅಂಗೀಕಾರವಾಗಿ ಕಾಯ್ದೆ ಜಾರಿಗೆ ಬಂದರೆ ಸಂವಿಧಾನದತ್ತ ವಾಕ್ ಸ್ವಾತಂತ್ರ್ಯ ಮೊಟಕುಗೊಳಿಸಿದಂತೆ ಆಗಲಿದೆ. ಧರ್ಮ ಪ್ರಚಾರದ ಹಕ್ಕಿಗೆ ಚ್ಯುತಿಯಾಗುತ್ತದೆ. ಅನೈತಿಕ ಪೊಲೀಸ್‌ಗಿರಿಗೆ ಅಸ್ತ್ರ ಕೊಟ್ಟಂತಾಗುತ್ತದೆ. ಸಂಘಟನೆಗಳವರು ತಮಗೆ ಆಗದ ಕ್ರೈಸ್ತ ಧರ್ಮ ಗುರುಗಳು ಮತ್ತು ಕ್ರೈಸ್ತ ನಾಯಕರ ಮೇಲೆ ಈ ಕಾನೂನು ದುರ್ಬಳಕೆ ಮಾಡಿಕೊಳ್ಳಬಹುದು ಎಂದು ಆತಂಕವಿದೆ' ಎಂದರು.

ಧರ್ಮಪ್ರಾಂತ್ಯದ ಬಿಷಪ್ ಡೆರಿಕ್ ಫರ್ನಾಂಡೀಸ್ ಅವರು, 'ಕಾಯ್ದೆ ಇಲ್ಲದೆಯೇ ಕ್ರೈಸ್ತರ ಮೇಲೆ ಆಗಾಗ ದಾಳಿ ನಡೆಯುತ್ತಿದೆ. ಹೀಗಿರುವಾಗ ಕಾಯ್ದೆ ಬಂದರೆ ನಮ್ಮ ಪರಿಸ್ಥಿತಿ ಏನಾಗಬೇಕು?' ಎಂದು ಆತಂಕ ವ್ಯಕ್ತಪಡಿಸಿದರು.

ಮೆಥೋಡಿಸ್ಟ್ ಸೆಂಟ್ರಲ್ ಚರ್ಚ್ ಜಿಲ್ಲಾ ಸೂಪರಿಂಟೆಂಡೆಂಟ್ ರೆ.ನಂದಕುಮಾರ್, 'ಸದನದಲ್ಲಿ ದೇವರೇ ನಮ್ಮ ಪರವಾಗಿ ಕೆಲಸ ಮಾಡುತ್ತಾನೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅವರಿಗೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಬೆಂಬಲ ಸೂಚಿಸಿದರು.

ಸರ್ಕಾರದ ಪರವಾಗಿ ಸಚಿವ ಶಿವರಾಮ ಹೆಬ್ಬಾರ್ ಮನವಿ ಸ್ವೀಕರಿಸಿದರು. ವಿಧಾನಪರಿಷತ್ ಸದಸ್ಯ ಐವನ್ ಡಿಸೋಜಾ, ಭಾರತೀಯ ಕ್ರೈಸ್ತ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಪ್ರಶಾಂತ ಜತ್ತನ್ನ ಇದ್ದರು.

ಮತಾಂತರ ನಿಷೇಧ ಮಸೂದೆ ವಿರೋಧಿಸಿ ಬೆಳಗಾವಿಯ ಸುವರ್ಣ ವಿಧಾನಸೌಧ ಬಳಿ ಭಾರತೀಯ ಕ್ರೈಸ್ತ ಒಕ್ಕೂಟದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಉಪವಾಸ ಸತ್ಯಾಗ್ರಹದಲ್ಲಿ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

### 'ನಾವು ವಾಪಸ್ ತಗೊತೀವಿ'

ಬೆಳಗಾವಿ: 'ಮತಾಂತರ ನಿಷೇಧ ಮಸೂದೆ ಮಂಡನೆ, ಅನುಮೋದನೆಗೆ ನಾವು ಬಿಡುವುದಿಲ್ಲ. ಸರ್ಕಾರ ದುಸ್ಸಾಹಸ ಮಾಡಿದರೆ, 2023ಕ್ಕೆ ನಮ್ಮ ಸರ್ಕಾರ ಬಂದಾಗ ವಾಪಸ್ ತೆಗೆದುಕೊಳ್ಳುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕ್ರೈಸ್ತ ಒಕ್ಕೂಟ ನಡೆಸಿದ ಉಪವಾಸ ಸತ್ಯಾಗ್ರಹದಲ್ಲಿ ಮಾತನಾಡಿದ ಅವರು, 'ಇದು ಗಂಭೀರ ವಿಚಾರ. ಕೋಮು ಸೌಹಾರ್ದ ಹಾಳು ಮಾಡಲು, ಒಂದು ಧರ್ಮ ಗುರಿಯಾಗಿಸಿ ಕಾಯ್ದೆ ತರುತ್ತಿದ್ದಾರೆ. ಇದು ಆರ್‌ಎಸ್‌ಎಸ್ ಹುನ್ನಾರ. ನಿಮ್ಮೊಂದಿಗೆ (ಕ್ರೈಸ್ತರ) ಸದಾ ಇರುತ್ತೇವೆ. ಸಂವಿಧಾನ ಹೇಳಿದಂತೆ ಸರ್ಕಾರ ನಡೆದುಕೊಳ್ಳಬೇಕು' ಎಂದರು.

### 'ಗಾಂಧೀಜಿ ಹೇಳಿದ್ದನ್ನು ತಿಳಿದುಕೊಳ್ಳಲಿ'

**ಚಿಕ್ಕಮಗಳೂರು:** 'ಮತಾಂತರದ ಬಗ್ಗೆ ಗಾಂಧೀಜಿ ಏನು ಹೇಳಿದ್ದರು ಎಂಬುದನ್ನು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿದುಕೊಳ್ಳಲಿ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಕುಟುಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಮತಾಂತರವು ದೇಶಾಂತರಕ್ಕೆ ಸಮ ಎಂದು ಗಾಂಧೀಜಿ ಹೇಳಿದ್ದರು. 'ನಮ್ಮದು ಗಾಂಧೀಜಿ ಹಿಂದುತ್ವ ಎನ್ನುವ ಕಾಂಗ್ರೆಸ್‌ನವರು ಇತಿಹಾಸವನ್ನು ಓದಿ ತಿಳಿಯಬೇಕು' ಎಂದರು.

ಪ್ರಜಾವಾಣಿ ಶನಿವಾರ, 18 ಡಿಸೆಂಬರ್ 2021

# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

5

ಪ್ರಜಾವಾಣಿ ಚಿತ್ರಗಳು: ತಾಜುದ್ದೀನ್ ಆಜಾದ್

ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಮನೋಬಲ ವೃದ್ಧಿಸುವ ಪಾಠದ ಜೊತೆಗೆ, ಸ್ವಯಂರಕ್ಷಣೆ ಜ್ಞಾನ, ತಂತ್ರಗಳನ್ನು ಕಲಿಸಬೇಕಿದೆ. ಇದು ರಕ್ಷಣೆಯ ಜೊತೆಗೆ, ಮನೋಬಲವನ್ನು ಹೆಚ್ಚಿಸಿ, ವ್ಯಕ್ತಿತ್ವವಿಕಸನಕ್ಕೆ ದಾರಿ ಮಾಡಿಕೊಡುತ್ತದೆ.

## ಮನೋಬಲ–ಸ್ವಯಂ ರಕ್ಷಣೆಗೆ

# ‘ಸಮರ ಕಲೆ’

ಕೃಷ್ಣಿ ಶಿರೂರ

ಇದು ಮೂರು ತಿಂಗಳ ಹಿಂದಷ್ಟೇ ಹುಬ್ಬಳ್ಳಿಯ ಜನನಿಬಿಡ ಪ್ರದೇಶ ಕಿಮ್ಸ್ ಸರ್ಕಲ್‌ನಲ್ಲಿ ನಡೆದ ಘಟನೆ. ಅಂದು ಸಂಜೆ 6.45 ಗಂಟೆಗೆ ಎಂದಿನಂತೆ ನಾನು ಕಚೇರಿಗೆ ಹೊರಟಿದ್ದೆ. ಆಗ ಆಗಂತುಕನೊಬ್ಬ ನನ್ನನ್ನು ಹಿಂಬಾಲಿಸುತ್ತಿದ್ದ. ಕೊನೆಗೆ ಭುಜಕ್ಕೆ ಭುಜ ತಾಗಿಸುವಷ್ಟು ಹತ್ತಿರ ಬಂದು ನಿಂತ. ಅವನ ಅಸಭ್ಯ ವರ್ತನೆ ನನ್ನ ತಾಳ್ಮೆಗೆಡಿಸಿತು. ‘ಯಾಕೆ ನನ್ನ ಫಾಲೊ ಮಾಡ್ತಿದ್ದಿಯಾ? ಪೊಲೀಸ್‌ಗೆ ಹೇಳ್ತಿನಿ ನೋಡು’ ಎಂದೆ. ಅದಕ್ಕೂ ಬಗ್ಗದೇ, ಅಸಭ್ಯ ವರ್ತನೆ ಮುಂದುವರಿಸಿದ. ತಕ್ಷಣ ನಾನು ಸಮೀಪದ ಪೊಲೀಸ್ ಠಾಣೆ ಹಾಗೂ 112 ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಕಚೇರಿ ಸಹೋದ್ಯೋಗಿಗಳಿಗೂ ತಿಳಿಸಿದೆ. ಪೊಲೀಸರು ಬರುವುದು ವಿಳಂಬವಾಯಿತು. ಅಷ್ಟರೊಳಗೆ ನನ್ನ ಸಹೋದ್ಯೋಗಿಗಳೇ ಬಂದರು. ಅವರನ್ನು ನೋಡಿ ಆತ ಪರಾರಿಯಾಗಲು ಯತ್ನಿಸಿದ. ನಾನು ಅವನ ಕೊರಳಪಟ್ಟಿ ಹಿಡಿದು ಬಾರಿಸಲು ಶುರುಮಾಡಿದೆ. ಒಂದೆರಡು ಕಿಕ್ ಕೊಟ್ಟೆ. ನಂತರ ಪೊಲೀಸರು ಬಂದರು. ಆತನನ್ನು ಪೊಲೀಸರಿಗೆ ಒಪ್ಪಿಸಿಯೂ ಆಯಿತು.

ಪ್ರಿಯಾ ಮಸ್ಕಿನ್

20 ವರ್ಷಗಳ ಹಿಂದೆ ಕಲಿತಿದ್ದ ಕರಾಟೆಯ ಪಟ್ಟುಗಳು ನನಗೆ ಅಂದು ಸಹಾಯಕ್ಕೆ ಬಂತು. ಕರಾಟೆಯಿಂದ ನನ್ನಲ್ಲಿ ವೃದ್ಧಿಯಾದ ಆತ್ಮವಿಶ್ವಾಸ, ಮನೋಬಲ ಆವತ್ತಿನ ಸನ್ನಿವೇಶವನ್ನು ಧೈರ್ಯವಾಗಿ ಎದುರಿಸಲು ನೆರವಾಯಿತು.



ನನಗೆ ಇದೇ ಸಂದರ್ಭದಲ್ಲಿ ಮತ್ತೊಂದು ಘಟನೆ ನೆನಪಾಗುತ್ತಿದೆ. ಆ ಘಟನೆಯ ವಿಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಆ ವಿಡಿಯೊ ತುಣುಕಿನಲ್ಲಿ, ಯುವತಿಯೊಬ್ಬಳು ಕಾಲೇಜಿಗೆ ಹೋಗುತ್ತಿದ್ದಾಗ, ಆಕೆಯನ್ನು ಒಬ್ಬ ವ್ಯಕ್ತಿ ಬೈಕ್‌ನಲ್ಲಿ ಹಿಂಬಾಲಿಸುತ್ತಾನೆ. ಆಕೆ ಅಂಜುತ್ತಾ ದಾರಿಯಲ್ಲೇ ನಿಲ್ಲುತ್ತಾಳೆ. ಅದೇ ವೇಳೆಗೆ ಪಕ್ಕದಲ್ಲಿ ಮಹಿಳಾ ಪೌರಕಾರ್ಮಿಕರೊಬ್ಬರು ಕೋಲಿಗೆ ಕಸಬರಿಗೆ ಕಟ್ಟಿಕೊಂಡು ಕಸ ಗುಡಿಸುತ್ತಿರುತ್ತಾರೆ. ಆ ಯುವತಿ ಆಕೆಯ ಕೈಯಿಂದ ಪೊರಕೆ ಕಟ್ಟಿದ ಕೋಲು ತೆಗೆದುಕೊಂಡಿದ್ದೇ, ಅದನ್ನೇ ಲಾಠಿಯಂತೆ ತಿರುಗಿಸಲು ಆರಂಭಿಸುತ್ತಾಳೆ. ಇದನ್ನು ನೋಡಿದ ಆ ವ್ಯಕ್ತಿ ಅಲ್ಲಿಂದ ಕಾಲ್ಕೀಳುವ ದೃಶ್ಯವಿತ್ತು.

> ‘ಸಮರ ಕಲೆ ತರಬೇತಿಯಲ್ಲಿ ಅಭ್ಯಾಸ ಮಾಡುವ ಕಠಿಣ ವ್ಯಾಯಾಮಗಳು ದೇಹವನ್ನು ಹುರಿಗೊಳಿಸುವ ಜೊತೆಗೆ, ಮನಸ್ಸನ್ನು ಗಟ್ಟಿಗೊಳಿಸುತ್ತವೆ. ಇದರಿಂದ ಮನಸ್ಸನ್ನು ಕೇಂದ್ರೀಕರಿಸಿ ಎದುರಾಳಿಗೆ ಹೊಡೆಯುವ ಪಟ್ಟುಗಳು ಪರಿಣಾಮಕಾರಿಯಾಗಿರುತ್ತವೆ. ಆದ್ದರಿಂದ ಪ್ರತಿ ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಸ್ವಯಂರಕ್ಷಣಾ ಕಲೆ ಕರಗತವಾದರೆ ಆಕೆಯ ವ್ಯಕ್ತಿತ್ವ ವಿಕಸನಕ್ಕೂ ದಾರಿಯಾಗಲಿದೆ.
>
> **ಡಾ.ಅಪರ್ಣಾ ದೀಕ್ಷಿತ್,** ಮನಶಾಸ್ತ್ರಜ್ಞರು ಮತ್ತು ಆಪ್ತ ಸಮಾಲೋಚಕರು

***

ನನ್ನ ಅನುಭವ ಮತ್ತು ಈ ಮೇಲೆ ವಿವರಿಸಿದ ಘಟನೆ ಮಹಿಳೆಯರಿಗೆ ಸ್ವಯಂ ರಕ್ಷಣಾ ವಿದ್ಯೆಯ ಅಗತ್ಯವನ್ನು ಒತ್ತಿ ಹೇಳುತ್ತವೆ. ಈಗಿನ ಕಾಲದಲ್ಲಿ ಮಹಿಳೆಯರಿಗೆ ಆತ್ಮಬಲ ವೃದ್ಧಿಸುವ ಪಾಠದ ಜೊತೆಗೆ, ಸ್ವಯಂರಕ್ಷಣೆ ಜ್ಞಾನ, ತಂತ್ರಗಳನ್ನು ಕಲಿಸಬೇಕು ಎಂಬುದನ್ನೂ ಸೂಚಿಸುತ್ತವೆ.

ಪ್ರತಿ ಮಹಿಳೆಯೂ ಬಾಲ್ಯದಿಂದ ಮುಪ್ಪಿನವರೆಗೆ ಬದುಕಿನುದ್ದಕ್ಕೂ ಒಂದಿಲ್ಲೊಂದು ರೀತಿ ದೌರ್ಜನ್ಯ, ಶೋಷಣೆ, ಕಿರುಕುಳವನ್ನು ಎದುರಿಸಿರುತ್ತಾಳೆ. ಇಂಥ ಕಹಿ ಘಟನೆಗಳು ಶಾಲೆ, ಕಾಲೇಜು, ಟ್ಯೂಷನ್ ತರಗತಿ, ವಾಹನಗಳಲ್ಲಿ ಪ್ರಯಾಣಿಸುವಾಗ, ಅಷ್ಟೇ ಏಕೆ ನಡೆದು ಹೋಗುವಾಗಲೂ ನಡೆಯಬಹುದು. ಆಗ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಲು ಆಕೆಗಿರುವ ಅಸ್ತ್ರವೇ ಆತ್ಮಸ್ಥೈರ್ಯ. ಈ ಆತ್ಮಸ್ಥೈರ್ಯ ಕರಾಟೆ, ಜೂಡೊ, ಟೇಕ್ವಾಂಡೊ, ಕುಸ್ತಿ, ಕಳರಿಪಯಟ್ಟಿನಂಥ ಸಮರಕಲೆಗಳಿಂದ ಬರುತ್ತದೆ. ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಈ ಕಲೆ ಕರಗತವಾಗಬೇಕು. ಶಾಲೆಗಳಲ್ಲಿ ಶಿಕ್ಷಣದ ಪಠ್ಯದ ಜೊತೆಗೆ ಇವುಗಳನ್ನೂ ಕಲಿಸುವಂತಾಗಬೇಕು. ಆದರೆ ನಮ್ಮಲ್ಲಿ ಎಷ್ಟು ಮಂದಿ ಪಾಲಕರು/ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಸಮರ ಕಲೆ ಕಲಿಸುತ್ತಿದ್ದಾರೆ? ಇತ್ತೀಚಿನ ವರ್ಷಗಳಲ್ಲಿ ಕೆಲವು ಶಾಲೆಗಳಲ್ಲಿ ಕರಾಟೆಯನ್ನು ಪಠ್ಯೇತರ ಚಟುವಟಿಕೆಯಾಗಿ ವಾರಕ್ಕೊಂದು ತರಗತಿ ಕಲಿಸಲಾಗುತ್ತಿದೆ. ಇದು ಸಮಾಧಾನದ ಸಂಗತಿ, ಅಷ್ಟೇ.

‘ಪ್ರಸ್ತುತ ಸನ್ನಿವೇಶದಲ್ಲಿ ಹೆಣ್ಣುಮಕ್ಕಳಿಗೆ ಸಮಗ್ರ ವ್ಯಕ್ತಿತ್ವ ವಿಕಸನದಲ್ಲಿ ಸ್ವಯಂರಕ್ಷಣಾ ಕಲೆ ಅತ್ಯಂತ ಮಹತ್ವವಾಗಿದೆ. ಇದನ್ನು ಬಾಲ್ಯದಿಂದಲೇ ಕಲಿಸಬೇಕು’ ಎನ್ನುತ್ತಾರೆ ಮನೋವೈದ್ಯ ಡಾ.ಆನಂದ ಪಾಂಡುರಂಗಿ.

‘ಈಗ ಹೆಣ್ಣುಮಕ್ಕಳ ಮುಗ್ಧತೆಯ ದುರ್ಬಳಕೆ ತಪ್ಪಿಸಲು ಶಾಲೆ ಮತ್ತು ಮನೆಗಳಲ್ಲಿ ಬಾಲಕಿಯರಿಗೆ ‘ಒಳ್ಳೆಯ ಸ್ಪರ್ಶ, ಕೆಟ್ಟ ಸ್ಪರ್ಶ’ಗಳ (ಗುಡ್ ಟಚ್ – ಬ್ಯಾಡ್ ಟಚ್) ಅರಿವು ಮೂಡಿಸಲಾಗುತ್ತಿದೆ. ಇದರ ಜೊತೆಗೆ, ಕರಾಟೆ, ಜೂಡೊ, ಟೇಕ್ವಾಂಡೊದಂತಹ ಸಮರಕಲೆಗಳ ತರಬೇತಿ ಕೊಡಿಸುವುದು ಪೋಷಕರ ಜವಾಬ್ದಾರಿಯಾಗಿದೆ. ಇಂಥ ಕಲೆಗಳ ತರಬೇತಿ ಪಡೆದವರ ಮನೋಬಲ ಹೆಚ್ಚುತ್ತದೆ. ಅದು ಸಹಜವಾಗಿ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ’ ಎಂದು ಅವರು ವಿಶ್ಲೇಷಿಸುತ್ತಾರೆ.

‘ಕೆಟ್ಟ ಸನ್ನಿವೇಶಗಳು ಎದುರಾದಾಗ, ಅವುಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಮೊದಲು ಮನಸ್ಸು ನಿರ್ಣಯಿಸುತ್ತದೆ. ಮನೋಬಲ ಗಟ್ಟಿಯಿದ್ದಾಗ ದೈಹಿಕವಾಗಿ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗಲಿದೆ. ಮನಸ್ಸು ಮತ್ತು ದೈಹಿಕಕ್ಷಮತೆ ಒಂದಕ್ಕೊಂದು ಕೊಂಡಿಯಂತೆ. ಮನೋಬಲ ಗಟ್ಟಿಯಾಗಿದ್ದಾಗ ದೈಹಿಕ ಬಲವೂ ಜೊತೆಯಾಗಲಿದೆ. ಸ್ವಯಂರಕ್ಷಣೆಯಲ್ಲಿ ಕಲಿತ ಪಂಚ್, ಕಿಕ್‌ಗಳನ್ನು ಬಳಸಿ ತಮ್ಮನ್ನು ತಾವು ರಕ್ಷಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪೋಷಕರು ಹೆಣ್ಣುಮಕ್ಕಳಿಗೆ ಕಡ್ಡಾಯವಾಗಿ ಸ್ವಯಂರಕ್ಷಣಾ ಕಲೆ ತರಬೇತಿ ಕೊಡಿಸುವುದು ಇಂದಿನ ಅಗತ್ಯಗಳಲ್ಲೊಂದು’ ಎನ್ನುತ್ತಾರೆ ಅವರು.

ಡಬಲ್ ಬ್ಲ್ಯಾಕ್ ಬೆಲ್ಟ್ ಶ್ರೇಣಿ ಪಡೆದಿರುವ ಕರಾಟೆ ಪಟು ಪೂಜಾ ಮಿಸ್ಕಿನ್, ‘ಕರಾಟೆ ಕಲಿತಿರುವುದರಿಂದ ನನ್ನಲ್ಲಿ ಆತ್ಮವಿಶ್ವಾಸ, ಧೈರ್ಯ ಹೆಚ್ಚಿದೆ. ಭಯವಿಲ್ಲದೆ ಓಡಾಡುವೆ. ಶಾಲೆ–ಕಾಲೇಜುಗಳಲ್ಲಿ ವಿವಿಧ ಕ್ರೀಡೆಗಳಲ್ಲಿ ಆತ್ಮವಿಶ್ವಾಸದಿಂದ ಪಾಲ್ಗೊಂಡು ಪ್ರಶಸ್ತಿ ಪಡೆಯಲು ಸಹಾಯವಾಗಿದೆ’ ಎನ್ನುತ್ತಾರೆ.

ಪೂಜಾ ಸಹೋದರಿ ಪ್ರಿಯಾ ಮಿಸ್ಕಿನ್ ಕೂಡ ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಪಡೆದಿದ್ದಾರೆ. ‘ಕರಾಟೆ ಕಲಿತ ಮೇಲೆ, ನನ್ನಲ್ಲಿದ್ದ ಭಯವೆಲ್ಲ ಮಾಯವಾಯಿತು. ಯಾವುದೇ ಕ್ರೀಡಾಸ್ಪರ್ಧೆ ಇದ್ದರೂ ಅದರಲ್ಲಿ ಆತ್ಮವಿಶ್ವಾಸದಿಂದ ಪಾಲ್ಗೊಳ್ಳುತ್ತಿದ್ದೇನೆ. ಜೊತೆಗೆ ಕಷ್ಟದಲ್ಲಿರುವವರಿಗೆ ನೆರವಾಗುವ ಮನೋಭಾವ ಬೆಳೆಸಿಕೊಂಡಿದ್ದೇನೆ’ ಎನ್ನುತ್ತಾರೆ.

ಸ್ವಯಂ ರಕ್ಷಣೆ ವಿದ್ಯೆ, ರಕ್ಷಣೆಗಷ್ಟೇ ಅಲ್ಲ, ಮನೋಧೈರ್ಯ ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂಬುದಕ್ಕೆ ಮಿಸ್ಕಿನ್ ಸಹೋದರಿಯರ ಅನುಭವ ಉದಾಹರಣೆಯಾಗುತ್ತದೆ.

---

# ಮೋಹಕ ನೋಟಕ್ಕೆ ಡೆನಿಮ್ ಸ್ಕರ್ಟ್

ಮನಸ್ವಿ

**ದಶಕಗಳ** ಹಿಂದೆ ತೊಡುತ್ತಿದ್ದ ಡೆನಿಮ್ ಉಡುಪುಗಳು, ‘ಫ್ಯಾಷನ್’ ಲೋಕದಲ್ಲಿ ಈಗಲೂ ತಮ್ಮ ತಾಜಾತನ ಉಳಿಸಿಕೊಂಡಿವೆ. ಹೆಣ್ಣುಮಕ್ಕಳ ನೆಚ್ಚಿನ ಉಡುಪಾದ ಡೆನಿಮ್ ಸ್ಕರ್ಟ್‌ಗಳು 1960ರ ಸಮಯದಲ್ಲಿ ಹೆಚ್ಚು ಸದ್ದು ಮಾಡಿದ್ದವು. ಅಂದಿನಿಂದಲೂ ಎಲ್ಲ ವಯೋಮಾನದ ಮಹಿಳೆಯರ ಇಷ್ಟದ ಉಡುಗೆಯಾಗಿರುವ ಈ ಸ್ಕರ್ಟ್‌ಗಳು ಈಗ ಮತ್ತೆ ಟ್ರೆಂಡ್‌ನಲ್ಲಿವೆ. ಫ್ಯಾಷನ್‌ನತ್ತ ಒಲವು ಹೊಂದಿರುವವರು ಈ ಟ್ರೆಂಡ್ ಅನ್ನು ಬಲುವಾಗಿ ಮೆಚ್ಚಿಕೊಂಡಿದ್ದಾರೆ.

ಇವು ಎಲ್ಲಾ ರೀತಿಯ ದೇಹಸಿರಿ ಹೊಂದಿರುವವರಿಗೂ ಧರಿಸಲು ಸೂಕ್ತ ಎನ್ನಿಸುತ್ತವೆ. ಅಷ್ಟೇ ಅಲ್ಲ, ಕ್ಲಾಸಿ ಲುಕ್ ನೀಡುತ್ತವೆ. ಅಲ್ಲದೇ ಇದರಲ್ಲಿ ವಿವಿಧ ರೀತಿಯ ಪ್ರಿಂಟ್ ಹಾಗೂ ಎಂಬ್ರಾಯ್ಡರಿಗಳಿವೆ. ಈ ವೆರೈಟಿಗಳು ಉಡುಪು ಧರಿಸಿದವರ ಅಂದ ಹೆಚ್ಚುವಂತೆ ಮಾಡುತ್ತವೆ. ಬಟನ್, ಕಾಂಟ್ರ್ಯಾಸ್ಟ್ ಲೇಸ್, ಪ್ರಿಂಟ್ ಇರುವ ಸ್ಕರ್ಟ್‌ಗಳು ಭಿನ್ನ ಲುಕ್ ಹೊಂದುವಂತೆ ಮಾಡುತ್ತವೆ. ಡೆನಿಮ್ ಸ್ಕರ್ಟ್ ಜೊತೆ ಡೆನಿಮ್ ಶರ್ಟ್ ಕೂಡ ಧರಿಸಬಹುದು. ಇದರೊಂದಿಗೆ ಟೀ ಶರ್ಟ್, ಜಾಕೆಟ್ ಅನ್ನು ಹೊಂದಿಸಬಹುದು.

> **ವಯಸ್ಸಿನ ಮಿತಿ ಇಲ್ಲ...**
>
> ಡೆನಿಮ್ ಸ್ಕರ್ಟ್ ಧರಿಸಲು ವಯಸ್ಸಿನ ಮಿತಿ ಇಲ್ಲ. ಎಲ್ಲಾ ವಯೋಮಾನದವರು ಧರಿಸಬಹುದು. ಹದಿಹರೆಯದ ಹುಡುಗಿಯರಿಂದ ಹಿಡಿದು 40 ವರ್ಷ ವಯಸ್ಸಿನವರೆಗೂ ಈ ಸ್ಕರ್ಟ್ ಧರಿಸಬಹುದು. ನೀವು ಯಾವ ಸಂದರ್ಭದಲ್ಲಿ ಧರಿಸುತ್ತಿದ್ದೀರಿ ಎಂಬುದರ ಮೇಲೆ ಯಾವ ವಿಧದ ಸ್ಕರ್ಟ್ ಧರಿಸಬಹುದು ಎಂಬುದನ್ನು ನಿರ್ಧರಿಸಬಹುದು.

### ಡೆನಿಮ್ ಮಿನಿ ಫ್ಲೇರ್ಡ್ ಸ್ಕರ್ಟ್

ನೀವು ಡೆನಿಮ್ ಸ್ಕರ್ಟ್‌ನಲ್ಲಿ ಲೇಟೆಸ್ಟ್ ಟ್ರೆಂಡ್ ಹುಡುಕುತ್ತಿದ್ದರೆ, ಮಿನಿ ಫ್ಲೇರ್ಡ್ ಸ್ಕರ್ಟ್ ಆರಿಸಿಕೊಳ್ಳಬಹುದು. ಇದು ಮೊಣಕಾಲಿನಿಂದ ಸ್ವಲ್ಪ ಮೇಲೆ ಇರುತ್ತದೆ. ಇದು ಫ್ಲೇರ್ಡ್ ವಿನ್ಯಾಸದಲ್ಲಿದ್ದು, ಇದನ್ನು ಧರಿಸಿದರೆ ನವತರುಣಿಯಂತೆ ಕಾಣುತ್ತೀರಿ. ಈ ಸ್ಕರ್ಟ್ ಮೇಲೆ, ಟೀ ಶರ್ಟ್ ಅಥವಾ ಸ್ಲೀವ್‌ಲೆಸ್ ಟಾಪ್ ಧರಿಸಬಹುದು. ಆಗ ನೀವು ಬೋಲ್ಡ್ ಆಗಿ ಕಾಣಿಸುತ್ತೀರಿ.

### ಡೆನಿಮ್ ಪೆನ್ಸಿಲ್ ಸ್ಕರ್ಟ್

ವಿವಿಧ ಬಣ್ಣದಲ್ಲಿ ಲಭ್ಯವಿರುವ ಮೊಣಕಾಲಿನವರೆಗೆ ಬರುವ ಪೆನ್ಸಿಲ್ ಸ್ಕರ್ಟ್ ಬಹಳ ಹಿಂದಿನಿಂದಲೂ ಟ್ರೆಂಡ್‌ನಲ್ಲೇ ಇದೆ. ಈ ಟ್ರೆಂಡ್ ಇಂದಿಗೂ ಮಾಸಿಲ್ಲ ಎನ್ನುವುದು ವಿಶೇಷ. ಇದರಲ್ಲಿ ವಿವಿಧ ಬಣ್ಣದ ಸ್ಕರ್ಟ್‌ಗಳು ಲಭ್ಯವಿದ್ದು ನಿಮಗೆ ಸೂಕ್ತ ಎನ್ನಿಸುವ ಬಣ್ಣದ ಸ್ಕರ್ಟ್ ಅನ್ನು ಖರೀದಿ ಮಾಡಿ ಧರಿಸಬಹುದು. ಈ ಸ್ಕರ್ಟ್‌ನೊಂದಿಗೆ ಕಾಂಟ್ರ್ಯಾಸ್ಟ್ ಬಣ್ಣದ ಟಾಪ್ ಧರಿಸಬಹುದು. ಇದರಲ್ಲಿ ಬೇರೆ ಬೇರೆ ವಿನ್ಯಾಸ ಹಾಗೂ ಪ್ರಿಂಟ್ ಇರುವ ಡ್ರೆಸ್‌ಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಜಿಪ್ ವಿನ್ಯಾಸವಿರುವ ಸ್ಕರ್ಟ್‌ಗಳು ಐಡಿಯಲ್ ನೋಟ ಸಿಗುವಂತೆ ಮಾಡುತ್ತವೆ.

### ಹೂವಿನ ಚಿತ್ತಾರವಿರುವ ಸ್ಕರ್ಟ್

ಹೂವಿನ ಚಿತ್ತಾರವಿರುವ ಡೆನಿಮ್ ಸ್ಕರ್ಟ್‌ಗಳು ನೋಡಲು ಸುಂದರವಾಗಿ ಕಾಣುವುದಲ್ಲದೇ ನಿಮ್ಮ ಅಂದಕ್ಕೆ ಇನ್ನಷ್ಟು ಮೆರಗು ಮೂಡಿಸುತ್ತವೆ. ಇದನ್ನು ಧರಿಸಿದಾಗ ನಿಮಗೆ ಭಿನ್ನ ನೋಟ ಸಿಗುವುದಲ್ಲದೇ ತಕ್ಷಣಕ್ಕೆ ನೋಡಿದಾಗ ಡೆನಿಮ್ ಅನ್ನಿಸುವುದಿಲ್ಲ. ಸಿನಿಮಾ, ಶಾಪಿಂಗ್ ಹೋಗುವಾಗ ಈ ಸ್ಕರ್ಟ್ ಧರಿಸಬಹುದು. ಈ ಸ್ಕರ್ಟ್ 20 ರಿಂದ 40 ವಯಸ್ಸಿನವರು ಧರಿಸಲು ಸೂಕ್ತ ಎನ್ನಿಸುತ್ತದೆ.

### ಹೈವೇಸ್ಟ್ ಡೆನಿಮ್ ಮಿಡಿ ಸ್ಕರ್ಟ್

ಮೊಣಕಾಲಿನಿಂದ ಸ್ವಲ್ಪ ಕೆಳಗೆ ಬರುವ ಮಿಡಿಯಂತೆ ಕಾಣುವ ಈ ಸ್ಕರ್ಟ್ ಈಗ ಮತ್ತೆ ಮಾರುಕಟ್ಟೆಯಲ್ಲಿ ಸದ್ದು ಮಾಡುತ್ತಿದೆ. ಸೊಂಟಕ್ಕೂ ಮೇಲಿನಿಂದ ಧರಿಸುವ ಈ ಸ್ಕರ್ಟ್ ಕ್ಲಾಸಿ ನೋಟ ಸಿಗುವಂತೆ ಮಾಡುತ್ತದೆ. ಇದು ಕಚೇರಿಯ ಫಾರ್ಮಲ್ ಮೀಟಿಂಗ್, ಪಾರ್ಟಿಗಳಿಗೆ ಧರಿಸಲು ಸೂಕ್ತ ಎನ್ನಿಸುತ್ತದೆ.

### ಶಾರ್ಟ್ ಡೆನಿಮ್ ಎ–ಲೈನ್ ಸ್ಕರ್ಟ್

ಎ–ಲೈನ್ ಶಾರ್ಟ್ ಡೆನಿಮ್ ಸ್ಕರ್ಟ್‌ಗಳು ಫ್ಯಾಷನ್ ಪ್ರಿಯರಿಗೆ ಮೆಚ್ಚುಗೆಯಾಗುವುದರಲ್ಲಿ ಎರಡು ಮಾತಿಲ್ಲ. ಇದನ್ನು ಧರಿಸಿದಾಗ ಆಕರ್ಷಕವಾಗಿ ಕಾಣಬಹುದು. ಮುಂದಿನಿಂದ ಉದ್ದಕ್ಕೆ ಬಟನ್‌ಗಳಿರುವ ಈ ಸ್ಕರ್ಟ್ ಮೇಲೆ ಬಿಳಿ ಬಣ್ಣದ, ಉದ್ದ ತೋಳಿರುವ ಟೀ ಶರ್ಟ್ ಧರಿಸಬಹುದು. ಇದು ಧರಿಸಿದವರಿಗೆ ಬೋಲ್ಡ್ ಹಾಗೂ ವೈಬ್ರೆಂಟ್ ನೋಟ ಸಿಗುವಂತೆ ಮಾಡುತ್ತದೆ.

### ಪ್ಲಸ್ ಸೈಜ್ ಡೆನಿಮ್ ಸ್ಕರ್ಟ್

ನೀವು ದಪ್ಪ ಇದ್ದು, ನಿಮ್ಮ ಸೊಂಟ ಅಗಲವಿರುವ ಕಾರಣಕ್ಕೆ ನೀವು ಡೆನಿಮ್ ಸ್ಕರ್ಟ್ ಧರಿಸದೇ ಇರಬಹುದು. ಆದರೆ ಪ್ಲಸ್ ಸೈಜ್ ಇರುವವರಿಗೆಂದೇ ಡೆನಿಮ್ ಸ್ಕರ್ಟ್‌ಗಳಿವೆ. ಇವು ನಿಮಗೆ ಹೊಂದಿಕೆಯಾಗುತ್ತವೆ, ಅಲ್ಲದೇ ನಿಮ್ಮನ್ನೂ ಟ್ರೆಂಡ್‌ಗೆ ತೆರೆದುಕೊಳ್ಳುವಂತೆ ಮಾಡುತ್ತವೆ. ಇದರಲ್ಲಿ ಹೂವಿನ ಚಿತ್ತಾರ ಮೂಡಿಸಿರುವ ಡೆನಿಮ್ ಸ್ಕರ್ಟ್‌ಗಳು ನಿಮ್ಮ ಅಂದ ಹೆಚ್ಚಿಸಲು ಪ್ಲಸ್ ಪಾಯಿಂಟ್. ಮಧ್ಯದಲ್ಲಿ ಬಟನ್ ಇರಿಸಿರುವ ಸ್ಕರ್ಟ್‌ಗಳು ಪ್ಲಸ್ ಸೈಜ್ ಇರುವವರಿಗೆ ಹೆಚ್ಚು ಹೊಂದುತ್ತವೆ.

### ನೆರಿಗೆ ಇರುವ ಲೇಯರ್ಡ್ ಸ್ಕರ್ಟ್

ನೆರಿಗೆ ಹಾಗೂ ಲೇಯರ್ ಇರುವ ಡೆನಿಮ್ ಸ್ಕರ್ಟ್‌ಗಳನ್ನು ಧರಿಸಿದಾಗ ಭಿನ್ನ ನೋಟ ಸಿಗುತ್ತದೆ. ಇದನ್ನು ಧರಿಸಿದಾಗ ಮನಮೋಹಕವಾಗಿ ಕಾಣುವುದರಲ್ಲಿ ಎರಡು ಮಾತಿಲ್ಲ. ಕಡು ನೀಲಿ ಬಣ್ಣದ ಲೇಯರ್ಡ್ ಮಿನಿ ಸ್ಕರ್ಟ್‌ಗಳು ಕಾಲಿನ ಅಂದ ಹೆಚ್ಚಿಸುವ ಜೊತೆಗೆ ಟ್ರೆಂಡಿ ಆಗಿ ಕಾಣಿಸುವಂತೆಯೂ ಮಾಡುತ್ತವೆ.

---

# ಕಿತ್ತಳೆ ಹಣ್ಣಿನ ಲಸ್ಸಿ, ದಹಿ ತಡ್ಕಾ

ಸವಿತಾ ಕುಲಕರ್ಣಿ

ನಳಪಾಕ

## ಆಲೂ ಬ್ರೆಡ್ ದಹಿವಡಾ

**ಬೇಕಾಗುವ ಸಾಮಗ್ರಿಗಳು: ಆಲೂ ಬ್ರೆಡ್ ವಡಾ ಮಾಡಲು:** ಬ್ರೆಡ್ – 8, ಆಲೂಗೆಡ್ಡೆ – 4, ಕಡಲೆಹಿಟ್ಟು – ಒಂದು ಬಟ್ಟಲು, ಎಣ್ಣೆ – 3 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಹಸಿ ಮೆಣಸಿನಕಾಯಿ – 2, ಹಸಿಶುಂಠಿ – 1/4 ಇಂಚು, ಖಾರದಪುಡಿ – 1 ಚಮಚ, ಜೀರಿಗೆ – 1/4 ಚಮಚ, ಕೊತ್ತಂಬರಿ ಕಾಳು – 1/4 ಚಮಚ, ಜೀರಿಗೆ ಪುಡಿ – 1/2 ಚಮಚ, ಗರಂ ಮಸಾಲೆ ಪುಡಿ – 1 ಚಮಚ, ಅರಿಸಿನ ಪುಡಿ– ಚಿಟಿಕೆ, ನಿಂಬೆರಸ – 1/2 ಚಮಚ, ಕರಿಯಲು ಎಣ್ಣೆ

**ಮಸಾಲಾ ದಹಿ ಮಾಡಲು:** ಮೊಸರು – 1 ಲೀಟರ್, ಕೊತ್ತಂಬರಿ ಪುಡಿ – 1/2 ಚಮಚ, ಗರಂ ಮಸಾಲೆ ಪುಡಿ – 1/2 ಚಮಚ, ಜೀರಿಗೆ ಪುಡಿ – 1/4 ಚಮಚ, ಸಕ್ಕರೆ – 1 ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಕತ್ತರಿಸಿದ ಕೊತ್ತಂಬರಿ ಸೊಪ್ಪು ಸ್ವಲ್ಪ

**ತಯಾರಿಸುವ ವಿಧಾನ:** ಬ್ರೆಡ್ ಅನ್ನು ನೀರಿನಲ್ಲಿ ಅದ್ದಿ ತೆಗೆದಿಡಿ. ಆಲೂಗೆಡ್ಡೆ ಬೇಯಿಸಿ ಸಿಪ್ಪೆ ತೆಗೆದು ಸ್ಮ್ಯಾಷ್ ಮಾಡಿ. ಹಸಿ ಮೆಣಸಿನಕಾಯಿ, ಹಸಿಶುಂಠಿ ಪೇಸ್ಟ್ ತಯಾರಿಸಿಕೊಳ್ಳಿ. ಜೀರಿಗೆ, ಕೊತ್ತಂಬರಿ ಪುಡಿ ಮಾಡಿ. ಎಣ್ಣೆ ಬಿಸಿ ಮಾಡಿ ಹಸಿ ಮೆಣಸಿನಕಾಯಿ, ಹಸಿಶುಂಠಿ ಪೇಸ್ಟ್ ಹಾಕಿ, ನಂತರ ಸ್ವಲ್ಪ ಜೀರಿಗೆ, ಕೊತ್ತಂಬರಿ ಪುಡಿ ಹಾಕಿ ಹುರಿಯಿರಿ. ಉಪ್ಪು, ಅರಿಸಿನ, ಗರಂ ಮಸಾಲೆಪುಡಿ ಸೇರಿಸಿ. ಸ್ಮ್ಯಾಷ್ ಮಾಡಿದ ಆಲೂಗೆಡ್ಡೆ ಹಾಕಿ ಮಿಶ್ರಣ ಮಾಡಿ. ಕಡಲೆಹಿಟ್ಟು ಮತ್ತು ಸ್ವಲ್ಪ ನೀರು ಹಾಕಿ. ಅಜುವಾನ ಅಥವಾ ಓಂಕಾಳು ಮತ್ತು ಉಪ್ಪು ಹಾಕಿ ಚೆನ್ನಾಗಿ ಕಲೆಸಿ ಇಟ್ಟುಕೊಳ್ಳಿ. ಬ್ರೆಡ್‌ನಲ್ಲಿ ಆಲೂಗಡ್ಡೆ ಮಸಾಲೆ ತುಂಬಿ ಉಂಡೆ ಮಾಡಿಕೊಂಡು ಕಡಲೆಹಿಟ್ಟಿನಲ್ಲಿ ಅದ್ದಿ ತೆಗೆದು ಕಾದ ಎಣ್ಣೆಯಲ್ಲಿ ಕರಿದು ತೆಗೆಯಿರಿ. ಮಸಾಲಾ ದಹಿ ಮಾಡಲು ಮೊಸರು ಸ್ವಲ್ಪ ಕಡೆದು ಉಪ್ಪು, ಸಕ್ಕರೆ, ಜೀರಿಗೆ ಪುಡಿ, ಕೊತ್ತಂಬರಿ ಪುಡಿ, ಗರಂ ಮಸಾಲೆ ಪುಡಿ ಸ್ವಲ್ಪ ಮತ್ತು ಕತ್ತರಿಸಿದ ಕೊತ್ತಂಬರಿ ಸೊಪ್ಪು ಸ್ವಲ್ಪ ಸೇರಿಸಿ ಚೆನ್ನಾಗಿ ಕಲೆಸಿ ಇಟ್ಟುಕೊಳ್ಳಿ. ಕರಿದ ಬ್ರೆಡ್ ವಡಾವನ್ನು ಮೊಸರಿನಲ್ಲಿ ಅದ್ದಿ ತೆಗೆದು ಸರ್ವ್ ಮಾಡಿ. ನಿಮಗೆ ಬೇಕಾದಷ್ಟು ಮಸಾಲೆ ಮೊಸರು ಮೇಲೆ ಹಾಕಿಕೊಂಡು ಸವಿಯಿರಿ.

## ದಹಿ ತಡ್ಕಾ

**ಬೇಕಾಗುವ ಸಾಮಗ್ರಿಗಳು:** ಮೊಸರು – 2 ಬಟ್ಟಲು, ಈರುಳ್ಳಿ – 1, ಒಣ ಮೆಣಸಿನಕಾಯಿ–3, ಹಸಿ ಶುಂಠಿ – 1/4 ಇಂಚು, ಬೆಳ್ಳುಳ್ಳಿ – 4 ಎಸಳು, ಕೊತ್ತಂಬರಿ ಕಾಳು – 1/4 ಚಮಚ, ಸೋಂಪು – 1/4 ಚಮಚ, ಗರಂ ಮಸಾಲೆಪುಡಿ – 1/4 ಚಮಚ, ಸಾಸಿವೆ – 1/4 ಚಮಚ, ಜೀರಿಗೆ – 1/4 ಚಮಚ, ಇಂಗು – ಚಿಟಿಕೆ, ತುಪ್ಪ – 4 ಚಮಚ, ಸಕ್ಕರೆ – 1 ಚಮಚ, ಕರಿಬೇವು – 5 ರಿಂದ 6, ಹೆಚ್ಚಿದ ಕೊತ್ತಂಬರಿ ಸೊಪ್ಪು – 1/2 ಬಟ್ಟಲು, ಉಪ್ಪು – ರುಚಿಗೆ ತಕ್ಕಷ್ಟು, ಅರಿಸಿನ ಪುಡಿ – 1/4 ಚಮಚ

**ತಯಾರಿಸುವ ವಿಧಾನ:** ಮೊಸರು, ಸಕ್ಕರೆ ಸೇರಿಸಿ ಮಿಕ್ಸರ್‌ನಲ್ಲಿ ಒಂದು ಸುತ್ತು ತಿರುಗಿಸಿ ಇಟ್ಟುಕೊಳ್ಳಿ. ಈರುಳ್ಳಿ ಮತ್ತು ಕೊತ್ತಂಬರಿ ಸೊಪ್ಪು ಸಣ್ಣಗೆ ಕತ್ತರಿಸಿಕೊಳ್ಳಿ.

ತುಪ್ಪ ಬಿಸಿ ಮಾಡಿ ಒಗ್ಗರಣೆಗೆ ಸಾಸಿವೆ, ಜೀರಿಗೆ, ಇಂಗು, ಕರಿಬೇವು ಹಾಕಿ ಹುರಿಯಿರಿ. ಅದಕ್ಕೆ ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ. ಒಣ ಮೆಣಸಿನಕಾಯಿ ಮುರಿದು ಹಾಕಿ ಹುರಿಯಿರಿ. ಕೊತ್ತಂಬರಿ, ಸೋಂಪು ಪುಡಿ ಹಾಕಿ. ಈರುಳ್ಳಿ ಮತ್ತು ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಹುರಿಯಿರಿ. ಗರಂ ಮಸಾಲೆ ಪುಡಿ ಸೇರಿಸಿ. ಉಪ್ಪು, ಅರಿಸಿನ ಪುಡಿ ಸ್ವಲ್ಪ ಸೇರಿಸಿ ಚೆನ್ನಾಗಿ ತಿರುಗಿಸಿ ಒಲೆ ಆರಿಸಿ. ಆರಿದ ನಂತರ ಮೊಸರು ಕೆನೆ ಸೇರಿಸಿ ಸ್ವಲ್ಪ ಬಿಸಿ ಮಾಡಿ ಇಳಿಸಿ. ಈಗ ದಹಿ ತಡ್ಕಾ ಸವಿಯಲು ಸಿದ್ಧ. ಬಡಿಸುವಾಗ ಸಣ್ಣ ಉರಿಯಲ್ಲಿ ಇಟ್ಟು ಬಿಸಿ ಮಾಡಿ ಅನ್ನದ ಜೊತೆ ಸವಿಯಿರಿ.

## ಕಿತ್ತಳೆ ಹಣ್ಣಿನ ಲಸ್ಸಿ

**ಬೇಕಾಗುವ ಸಾಮಗ್ರಿಗಳು:** ಕಿತ್ತಳೆ ಹಣ್ಣು – 2, ಮೊಸರು – 2 ಕಪ್, ನೀರು – ಅರ್ಧ ಕಪ್, ಉಪ್ಪು – 1/4 ಚಮಚ, ಸಕ್ಕರೆ – 4 ಚಮಚ, ಏಲಕ್ಕಿ – 1

**ತಯಾರಿಸುವ ವಿಧಾನ:** ಏಲಕ್ಕಿಪುಡಿ ಮಾಡಿ ಇಟ್ಟುಕೊಳ್ಳಿ. ಮೊಸರು, ಸಕ್ಕರೆ, ಉಪ್ಪು ಸೇರಿಸಿ ಚೆನ್ನಾಗಿ ತಿರುಗಿಸಿ ಇಟ್ಟುಕೊಳ್ಳಿ. ಕಿತ್ತಳೆ ಹಣ್ಣಿನ ರಸ ತೆಗೆದು ಮೊಸರು ಮಿಶ್ರಣಕ್ಕೆ ಸೇರಿಸಿ ತಿರುಗಿಸಿ. ಈಗ ತಣ್ಣನೆಯ ಕಿತ್ತಳೆ ಹಣ್ಣಿನ ಲಸ್ಸಿ ಸವಿಯಲು ಸಿದ್ಧ. ಬೇಕಾದರೆ ಐಸ್ ಕ್ಯೂಬ್ ಹಾಕಿ ಸವಿಯಿರಿ.

---

# ಡಿ ಅಂಡ್ ಸಿಯಿಂದ ತೊಂದರೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

**1. ನನಗೆ 47 ವರ್ಷ. ಕಳೆದೊಂದು ವರ್ಷದಿಂದ ಮುಟ್ಟಾದಾಗ ಅತಿಯಾದ ರಕ್ತಸ್ರಾವ ಇರುತ್ತದೆ. ಅಲ್ಲದೇ ಇದು ಏಳೆಂಟು ದಿನಗಳವರೆಗೆ ಮುಂದುವರಿಯುತ್ತದೆ. ವೈದ್ಯರು ಸ್ಕ್ಯಾನಿಂಗ್ ಮಾಡಿ ಗರ್ಭಕೋಶ ಸ್ವಲ್ಪ ದೊಡ್ಡದಿದೆ, ಡಿ ಆಂಡ್ ಸಿ/ ಬಯಾಪ್ಸಿ ಮಾಡಿಸಿ ಎಂದು ಹೇಳಿ ತುಂಬಾ ದಿನಗಳಾಗಿವೆ. ನನಗೆ ಈ ಬಗ್ಗೆ ಭಯ ಇರುವ ಕಾರಣ ವೈದ್ಯರು ಹೇಳಿದ ಯಾವ ಪರೀಕ್ಷೆಯನ್ನೂ ಮಾಡಿಸಿಲ್ಲ. ಆದರೆ ನನಗೆ ತುಂಬಾ ಸುಸ್ತಾಗುತ್ತದೆ. ಏನು ಮಾಡಲಿ? ಡಿ ಆಂಡ್ ಸಿ ಮಾಡಿಸುವುದು ಅಬಾರ್ಷನ್‌ಗಾಗಿ ಎಂದು ಕೇಳಿದ್ದೇನೆ. ಇದರ ಬಗ್ಗೆ ಮಾಹಿತಿ ನೀಡಿ**

**ಪಾರ್ವತಿ,** ಶಿರಾ

ಪಾರ್ವತಿಯವರೇ, ನೀವು ಚಿಕಿತ್ಸೆ ಪಡೆಯುತ್ತಿರುವ ತಜ್ಞರ ಬಳಿ ಶೀಘ್ರದಲ್ಲೇ ಮುಟ್ಟಿನ ಮುನ್ನಾದಿನಗಳಲ್ಲಿ ಅಥವಾ ಮುಟ್ಟಾದ ದಿನವೇ ಹೋಗಿ ಬಯಾಪ್ಸಿ ಅಥವಾ ಡಿ ಆಂಡ್ ಸಿ ಮಾಡಿಕೊಳ್ಳಿ. ಈ ಬಗ್ಗೆ ಹೆದರಿಕೆ ಬೇಡ. ಡಿ ಆಂಡ್ ಸಿ ಎಂದರೆ ಗರ್ಭದ್ವಾರವನ್ನು ಹಿಗ್ಗಿಸಿ (ಡಯಲೇಟೇಷನ್) ಗರ್ಭಾಶಯದ ಒಳಪದರವನ್ನು (ಎಂಡೋಮೆಟ್ರಿಯಂ) ಕೆರೆದು ತೆಗೆಯುವುದು. ಈ ಗರ್ಭಕೋಶದ ಒಳಪದರ ಪ್ರತಿ ಮಹಿಳೆಯರ ರಕ್ತಕ್ಕೆ ಸೇರುವ ಬೇರೆ ಬೇರೆ ರಸದೂತಗಳಿಗೆ ಸ್ಪಂದಿಸುತ್ತಾ, ಪ್ರತಿತಿಂಗಳು ಭ್ರೂಣದ ಆಗಮನಕ್ಕಾಗಿ ಕಾಯುತ್ತಾ ಗರ್ಭಕೋಶ ತನ್ನ ಸಿದ್ಧತೆ ನಡೆಸಿರುತ್ತದೆ. ಗರ್ಭಧಾರಣೆಯಾಗದಿದ್ದಾಗ ಪ್ರತಿತಿಂಗಳು ರಕ್ತಸ್ರಾವದ ರೂಪದಲ್ಲಿ ಹೊರಬರುತ್ತದೆ. ನೀವು ಸೂಕ್ತ ತಜ್ಞರಲ್ಲಿ ಸುಸಜ್ಜಿತ ವ್ಯವಸ್ಥೆಯಲ್ಲಿ, ಸೋಂಕು ರಹಿತ ವಾತಾವರಣದಲ್ಲಿ ಡಿ ಆಂಡ್ ಸಿ ಮಾಡಿಸಿಕೊಂಡರೆ ಏನೂ ತೊಂದರೆಯಾಗುವುದಿಲ್ಲ. ಗರ್ಭಪಾತವಾದಾಗಲೂ ಡಿ ಆಂಡ್ ಸಿ ಮಾಡಿದಾಗ ಕೆಲವು ಗರ್ಭದ ತುಣುಕುಗಳು ಹಾಗೇ ಉಳಿದಿದ್ದನ್ನು ಪೂರ್ಣವಾಗಿ ಕೆರೆದು ತೆಗೆಯುತ್ತಾರೆ. ಆದರೆ ನಿಮಗೆ ಈಗ ಮಾಡಲಿರುವ ಡಿ ಆಂಡ್ ಸಿಯಲ್ಲಿ ಗರ್ಭಕೋಶದ ಒಳಪದರವನ್ನೇ ತೆಗೆದು ಅದನ್ನು ತಜ್ಞರು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಹಾರ್ಮೋನುಗಳಿಂದ ಈ ಒಳಪದರದಲ್ಲಾಗುವ ಬದಲಾವಣೆಗಳು ತಜ್ಞರಿಗೆ ಪರೋಕ್ಷವಾಗಿ ತಿಳಿದುಬರುತ್ತದೆ. ಇದರಿಂದ ಮುಂದಿನ ಚಿಕಿತ್ಸೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ವೈದ್ಯರಿಗೆ ಸಹಾಯವಾಗುತ್ತದೆ. ಹಾಗಾಗಿ ಭಯಪಡದೆ ಬೇಗನೇ ಪರೀಕ್ಷಿಸಿಕೊಳ್ಳಿ. ಬಯಾಪ್ಸಿ ಮಾಡಿಸಿಕೊಳ್ಳಿ.

**2. ನನ್ನ ಹೆಂಡತಿಗೆ 20 ದಿನಕ್ಕೊಮ್ಮೆ ಮುಟ್ಟು ಆಗುತ್ತಿದ್ದು ನಂತರ 10 ದಿನಗಳು ರಕ್ತಸ್ರಾವವಾಗುತ್ತದೆ. ಮತ್ತೆ ಸ್ವಲ್ಪ ಸ್ವಲ್ಪ ರಕ್ತಸ್ರಾವ ಕಾಣಿಸಿಕೊಳ್ಳುತ್ತದೆ. ಯಾವ ಕಾರಣಕ್ಕೆ ಹೀಗಾಗುತ್ತದೆ? ಇದರ ನಿವಾರಣೆ ಹೇಗೆ? ಸಲಹೆ ಕೊಡಿ.**

**ಸುನಿಲ್,** ಊರು ವಯಸ್ಸು ತಿಳಿಸಿಲ್ಲ

ಸುನಿಲ್ ಅವರೇ, ನಿಮ್ಮ ಮಡದಿಗೆ ವಯಸ್ಸೆಷ್ಟು, ಮಕ್ಕಳಿದ್ದಾರೆಯೇ ಎಂಬ ಬಗ್ಗೆ ನೀವು ಇಲ್ಲಿ ತಿಳಿಸಿಲ್ಲ, ಇರಲಿ. ಸಹಜ ರಕ್ತಸ್ರಾವ 22 ದಿನದಿಂದ 45 ದಿನಗಳವರೆಗೆ ಯಾವಾಗ ಬೇಕಾದರೂ ಆಗಬಹುದು. ನಿಮ್ಮ ಪತ್ನಿಗೆ 20 ದಿನಕ್ಕೊಮ್ಮೆ ಮುಟ್ಟಾಗುತ್ತಿದ್ದು ದೀರ್ಘಾವಧಿಯವರೆಗೆ ಸ್ರಾವ ಆಗುವುದರಿಂದ ಗರ್ಭಕೋಶದ ನಾರುಗಡ್ಡೆಗಳ ಅಥವಾ ಪಾಲಿಪ್‌ನಂತಹ ಸಮಸ್ಯೆ ಇರಬಹುದು. ಆದ್ದರಿಂದ ತಜ್ಞವೈದ್ಯರಿಂದ ಕೂಲಂಕಷವಾಗಿ ತಪಾಸಣೆ ನಡೆಸಿದ ನಂತರವೇ ಚಿಕಿತ್ಸೆ ಪಡೆಯಿರಿ. ನಿರ್ಲಕ್ಷಿಸಬೇಡಿ.

**3. ನನ್ನ ವಯಸ್ಸು 38. ನಾನು ಖಾಸಗಿ ಶಾಲೆಯಲ್ಲಿ ಶಿಕ್ಷಕಿ. ನನಗೆ ಇಬ್ಬರು ಮಕ್ಕಳಿದ್ದಾರೆ. ಮಕ್ಕಳಾಗದಂತೆ ಶಸ್ತ್ರಚಿಕಿತ್ಸೆ ಕೂಡಾ ಆಗಿದೆ. ಈಗ ನಾನು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದೇನೆ. ನನ್ನ ಪ್ರಶ್ನೆ, ಈಗ ನನಗೆ ಇನ್ನೊಂದು ಮಗು ಬೇಕು. ಇದು ಸಾಧ್ಯವೇ? ಅದಕ್ಕೆ ಏನು ಮಾಡಬೇಕು ಎಂದು ದಯವಿಟ್ಟು ತಿಳಿಸಿ**

**ಹೆಸರು,** ಊರು ತಿಳಿಸಿಲ್ಲ

ನಿಮಗೆ ವಿಚ್ಛೇದನ ಸಿಕ್ಕಿ, ಇನ್ನೊಂದು ಮದುವೆ ಆಗಿ ಮಗು ಆಗಬೇಕು ಎಂದರೆ ನೀವು ತಜ್ಞವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯಿರಿ. ರೀಕ್ಯಾನಲೈಸೇಶನ್ (ಡಿಂಬನಾಳಗಳ ಮರುಜೋಡಣೆ) ಬಗ್ಗೆ ವಿಚಾರಿಸಿ. ಆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ಮಕ್ಕಳು ಮಾಡಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಫಲಿತಾಂಶ ಶೇ 50ರಷ್ಟು ಕೂಡಾ ಫಲಕಾರಿಯಲ್ಲ. ನೀವು ಆರ್ಥಿಕವಾಗಿ ಅನುಕೂಲವಾಗಿದ್ದಲ್ಲಿ ಪ್ರನಾಳಶಿಶು (ಐ.ವಿ.ಎಫ್) ಶಿಶು ಮಾಡಿಕೊಳ್ಳಲು ಪ್ರಯತ್ನಿಸಬಹುದು. ಈಗಂತೂ ಜಿಲ್ಲೆ ಜಿಲ್ಲೆಗಳಲ್ಲೂ ಬಂಜೆತನದ ಚಿಕಿತ್ಸಾ ತಜ್ಞರಿರುತ್ತಾರೆ. ಅವರನ್ನು ಭೇಟಿಮಾಡಿ ಸೂಕ್ತ ಸಲಹೆ ಪಡೆದುಕೊಳ್ಳಿ.

**4. ನನಗೆ 29ವರ್ಷ. ಮದುವೆಯಾಗಿ ಆರು ತಿಂಗಳಾಗಿದೆ. ನಾವು ಮಗುವಿಗಾಗಿ ಪ್ರಯತ್ನ ಮಾಡುತ್ತಿದ್ದೇವೆ. ನನ್ನ ಋತುಚಕ್ರ ನಿಯಮಿತ ವಾಗಿದೆ. ಯಾವ ದಿನಗಳಲ್ಲಿ ಸಂಭೋಗ ನಡೆಸಿದರೆ ಒಳ್ಳೆಯದು, ದಯವಿಟ್ಟು ತಿಳಿಸಿ?**

**ಹೆಸರು,** ಊರು ತಿಳಿಸಿಲ್ಲ

ಹಿಂದಿನ ಸಂಚಿಕೆಗಳಲ್ಲಿ ಈ ಬಗ್ಗೆ ತಿಳಿಸಿದ್ದೇನೆ, ಓದಿಕೊಳ್ಳಿ. ಅಂಡಾಣು ಬಿಡುಗಡೆಯಾಗುವ ಆಸುಪಾಸಿನಲ್ಲಿ ಲೈಂಗಿಕ ಸಂಪರ್ಕವಾದರೆ ಅಂದರೆ ಮುಟ್ಟು ಆರಂಭವಾಗಿ 8 ರಿಂದ 18 ದಿನಗಳ ಒಳಗೆ ಋತುಫಲಪ್ರದ ದಿನಗಳಲ್ಲಿ ಸಂಪರ್ಕವಾದರೆ ಮಕ್ಕಳಾಗುವ ಸಂಭವ ಹೆಚ್ಚು. ಇನ್ನು 6 ತಿಂಗಳೊಳಗೆ ಗರ್ಭ ನಿಲ್ಲದಿದ್ದಲ್ಲಿ ತಜ್ಞವೈದ್ಯರ ಸಲಹೆ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

**ಸ್ಪಂದನ...** ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.



❦ ಸುಭಾಷಿತ ❦

ಶಾಂತವಾದ ಮನಸ್ಸಿಗೆ ಅತ್ಯಮೂಲ್ಯವಾದ ಸಾಮರ್ಥ್ಯವನ್ನು ಸಾಬೀತುಪಡಿಸುವ ಶಕ್ತಿ ಇರುತ್ತದೆ.

–ಏಕ್‌ನಾಥ್ ಈಶ್ವರನ್

# ಮದುವೆಯ ವಯಸ್ಸು: ಜಾಗೃತಿ ಮೂಡಿಸುವ ಕೆಲಸವೇ ಮುಖ್ಯ

**ಜಗತ್ತಿನ** ಜನಸಂಖ್ಯೆಯಲ್ಲಿ ಅರ್ಧ ಭಾಗದಷ್ಟಿರುವ ಮಹಿಳಾ ಸಮುದಾಯವು ಪುರುಷ ಸಮುದಾಯಕ್ಕೆ ಸಮಾನವಲ್ಲ ಎಂಬ ನಂಬಿಕೆ, ಗ್ರಹಿಕೆಯು ಹೆಣ್ಣು ಮತ್ತು ಗಂಡು ಎರಡೂ ವರ್ಗದ ಗಮನಾರ್ಹ ಪ್ರಮಾಣದ ಜನರಲ್ಲಿ ಇದೆ ಎಂಬುದು ನಾಗರಿಕತೆಯು ಪೂರ್ಣವಾಗಿ ವಿಕಾಸಗೊಂಡಿಲ್ಲ ಎಂಬುದರ ಸಂಕೇತ. ಲಿಂಗ ತಾರತಮ್ಯವು ಹೆಣ್ಣು ಮಗು ಹುಟ್ಟುವ ಮೊದಲೇ ಶುರುವಾಗುತ್ತದೆ. ಹೆಣ್ಣು ಮಗು ಬೇಡ ಎಂಬ ಭಾವನೆಯು ವ್ಯಾಪಕವಾಗಿದೆ. ಭ್ರೂಣಲಿಂಗ ಪತ್ತೆಯನ್ನು ನಿಷೇಧ ಮಾಡಿದ್ದರೂ ಭ್ರೂಣದ ಲಿಂಗ ಪತ್ತೆ ಮಾಡುವ ಅಕ್ರಮವು ನಡೆಯುತ್ತಿದೆ. ಮಕ್ಕಳ ಬೆಳವಣಿಗೆಯ ಸಂದರ್ಭದಲ್ಲಿಯೂ ಹೆಣ್ಣುಮಕ್ಕಳು ಗಂಡು ಮಕ್ಕಳಿಗೆ ಸಮವಲ್ಲ ಎಂಬುದನ್ನು ಇಬ್ಬರಿಗೂ ಮನದಟ್ಟು ಮಾಡುವ ಕೆಲಸವನ್ನು ಕುಟುಂಬ ಮತ್ತು ಸಮಾಜವು ನಿರಂತರವಾಗಿ ಮಾಡುತ್ತಲೇ ಇರುತ್ತದೆ. ಆಹಾರ, ವಸ್ತ್ರ, ಕಲಿಕೆಯ ಅವಕಾಶ ಮತ್ತು ಬೆಳವಣಿಗೆಯ ಎಲ್ಲ ಅವಕಾಶಗಳಲ್ಲಿಯೂ ಹೆಣ್ಣು ಮಗುವಿಗೆ ಸಮಾನತೆ ದಕ್ಕಿದರೆ ಅದು ಅದೃಷ್ಟವೇ ಸರಿ. 2019–20ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯ ಪ್ರಕಾರ, ದೇಶದಲ್ಲಿ 15–49ರ ವಯೋಮಾನದ ಮಹಿಳೆಯರಲ್ಲಿ ಶೇ 57ರಷ್ಟು ಮಂದಿಯಲ್ಲಿ ರಕ್ತಹೀನತೆ ಸಮಸ್ಯೆ ಇದೆ. ಇದೇ ವಯೋಮಾನದ ಪುರುಷರಲ್ಲಿ ರಕ್ತಹೀನತೆ ಪ್ರಮಾಣವು ಶೇ 25ರಷ್ಟು ಇದೆ. ರಾಜ್ಯದ ಈ ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆ ಪ್ರಮಾಣವು ಶೇ 48ರಷ್ಟು ಇದೆ. ರಾಜ್ಯದ 15ರಿಂದ 19ರ ವಯೋಮಾನದ ಬಾಲಕರಲ್ಲಿ ಶೇ 26.5ರಷ್ಟು ರಕ್ತಹೀನತೆ ಇದ್ದರೆ ಬಾಲಕಿಯರಲ್ಲಿ ಈ ಪ್ರಮಾಣವು ಶೇ 49.4ರಷ್ಟು ಇದೆ. ಆಹಾರದಲ್ಲಿಯೂ ಯಾವ ಮಟ್ಟದ ಅಸಮಾನತೆ ಇದೆ ಎಂಬುದಕ್ಕೆ ಈ ಅಂಕಿ ಅಂಶಗಳು ಬೆಳಕು ಚೆಲ್ಲುತ್ತವೆ.

**ಮದುವೆಯ ಕನಿಷ್ಠ ವಯಸ್ಸು ಎಂಬುದು ಹೆಚ್ಚು ಸಂಕೀರ್ಣವಾದ ಸಾಮಾಜಿಕ ವಿಚಾರ. ಈ ವಿಷಯದಲ್ಲಿ ದಂಡನೆಗಿಂತ ಜಾಗೃತಿಯೇ ಹೆಚ್ಚು ಮುಖ್ಯ**

ಹೆಣ್ಣು ಎಂದರೆ ಎರಡನೇ ದರ್ಜೆ ಎಂಬ ಮನಃಸ್ಥಿತಿಯು ಒಂದೋ ಎರಡೋ ವಿಚಾರಗಳಿಗೆ ಸೀಮಿತವಾದುದಲ್ಲ. ಹೆಣ್ಣನ್ನು ‘ಹೊರೆ’ ಎಂದು ಪರಿಗಣಿಸುವ ಮನೋಭಾವ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಇದೆ. ನಗರ ಪ್ರದೇಶ ಇದಕ್ಕೆ ಸಂಪೂರ್ಣವಾಗಿ ಹೊರತಾಗಿದೆ ಎಂದು ಭಾವಿಸುವ ಅಗತ್ಯವೇನೂ ಇಲ್ಲ. ಈ ‘ಹೊರೆ’ ಎಂಬ ಮನೋಭಾವವೇ ಹೆಣ್ಣು ಮಕ್ಕಳಿಗೆ ಸಾಧ್ಯವಾದಷ್ಟು ಬೇಗ ಮದುವೆ ಮಾಡುವಂತೆ ಹೆತ್ತವರನ್ನು ಪ್ರೇರೇಪಿಸುತ್ತದೆ. ಹೆಣ್ಣು ಮಗಳ ಮದುವೆ ಮಾಡಿಕೊಟ್ಟು ಜವಾಬ್ದಾರಿ ಕಳಚಿಕೊಳ್ಳಬೇಕು ಎಂದು ಭಾವಿಸುವ ಅಪ್ಪ-ಅಮ್ಮಂದಿರೇ ಹೆಚ್ಚು ಎಂಬುದು ತಾರತಮ್ಯದ ಆಳ ಅಗಲವನ್ನು ಬಿಚ್ಚಿಡುತ್ತದೆ. ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸು ಈಗ 18 ಇದೆ. ಪುರುಷರ ಮದುವೆಯ ಕನಿಷ್ಠ ವಯಸ್ಸು 21. ಇಲ್ಲಿಯೂ ತಾರತಮ್ಯ. ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 21ಕ್ಕೆ ಏರಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ. ಅಷ್ಟರಮಟ್ಟಿಗೆ ಒಂದು ತಾರತಮ್ಯವನ್ನು ಇಲ್ಲವಾಗಿಸುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಿದೆ. ಹೆರಿಗೆ ಸಂದರ್ಭದಲ್ಲಿ ತಾಯಂದಿರ ಮರಣ ಪ್ರಮಾಣ ತಗ್ಗಿಸುವುದು, ತಾಯಿಯಾಗುವ ವಯಸ್ಸು, ಹೆಣ್ಣುಮಕ್ಕಳು ಮತ್ತು ಮಹಿಳೆಯರ ಅಪೌಷ್ಟಿಕತೆ ಸಮಸ್ಯೆ ಮುಂತಾದವುಗಳ ಬಗ್ಗೆ ಸಮಾಲೋಚನೆ ನಡೆಸಿ ವರದಿ ಕೊಡುವುದಕ್ಕೆ ಜಯಾ ಜೇಟ್ಲಿ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗಿತ್ತು. ಆ ಕಾರ್ಯಪಡೆಯ ವರದಿ ಆಧಾರದಲ್ಲಿ, ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸು ಏರಿಕೆಯ ನಿರ್ಧಾರಕ್ಕೆ ಸರ್ಕಾರ ಬಂದಿದೆ.

ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ಏರಿಸಿದ ಮಾತ್ರಕ್ಕೆ ಲಿಂಗ ತಾರತಮ್ಯವೆಂಬ ಕಲ್ಪನೆಯೇ ಇರುವುದಿಲ್ಲ ಎಂದು ಹೇಳಲಾಗದು. ಆಹಾರ, ವಸ್ತ್ರ, ಕಲಿಕೆಯ ಅವಕಾಶ ಮತ್ತು ಸ್ವಾತಂತ್ರ್ಯದ ವಿಚಾರದಲ್ಲಿ ತಕ್ಷಣವೇ ಭಾರಿ ಬದಲಾವಣೆ ಆಗಿಬಿಡುತ್ತದೆ ಎಂದೂ ನಿರೀಕ್ಷಿಸಲಾಗದು. ಅಷ್ಟಕ್ಕೂ ಮದುವೆಯ ಕನಿಷ್ಠ ವಯಸ್ಸು ಏರಿಕೆಯಿಂದ ಬಾಲ್ಯವಿವಾಹ ನಿಂತೇ ಹೋಗಬಹುದು ಎಂದು ಭಾವಿಸಲು ಯಾವ ಕಾರಣವೂ ಇಲ್ಲ. ಯುನಿಸೆಫ್‌ನ ಒಂದು ಅಂದಾಜು ಪ್ರಕಾರ, ಭಾರತದಲ್ಲಿ ಪ್ರತಿವರ್ಷ 15 ಲಕ್ಷ ಹೆಣ್ಣು ಮಕ್ಕಳಿಗೆ 18 ವರ್ಷ ವಯಸ್ಸಿನ ಒಳಗೆ ಮದುವೆ ಮಾಡಲಾಗುತ್ತದೆ. ಮದುವೆಯ ವಿಚಾರದಲ್ಲಿ ಬರೀ ಕಾಯ್ದೆಯ ಅಂಕುಶದಿಂದ ಹೆಚ್ಚಿನದೇನನ್ನೂ ಸಾಧಿಸಲಾಗದು ಎಂಬುದನ್ನು ಈ ಅಂಕಿಅಂಶ ನಿಚ್ಚಳಗೊಳಿಸುತ್ತದೆ. ಮದುವೆಯ ಕನಿಷ್ಠ ವಯಸ್ಸು 21ಕ್ಕೆ ಏರಿದರೆ, ಹೆಣ್ಣು ಹೆತ್ತವರ ಹೊರೆ ಕಳಚಿಕೊಳ್ಳುವ ಧಾವಂತ ಇನ್ನಷ್ಟು ಹೆಚ್ಚಿ, ಇನ್ನೂ ಹೆಚ್ಚು ಬಾಲ್ಯವಿವಾಹಗಳು ಗುಟ್ಟು ಗುಟ್ಟಾಗಿ ನಡೆಯದಿರುವಂತೆ ನೋಡಿಕೊಳ್ಳುವುದು ಹೇಗೆ? ಇದು ಸರ್ಕಾರ ಮತ್ತು ಸಮಾಜವು ಗಂಭೀರವಾಗಿ ಪರಿಗಣಿಸಬೇಕಾದ ಪ್ರಶ್ನೆ. ಕನಿಷ್ಠ ವಯೋಮಿತಿಗೆ ಮೊದಲೇ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದಕ್ಕೆ ಇರುವ ಕಾರಣ ಬಡತನ ಮತ್ತು ಅಜ್ಞಾನ. ಮದುವೆಯ ಕನಿಷ್ಠ ವಯಸ್ಸು 21ಕ್ಕೆ ಏರಿಕೆಯಾದರೆ, ಈ ವಯಸ್ಸಿಗೆ ಮುಂಚೆಯೇ ಮದುವೆ ಮಾಡುವುದು ಪವಾಡದ ರೀತಿಯಲ್ಲಿ ಸಂಪೂರ್ಣವಾಗಿ ನಿಲ್ಲುತ್ತದೆ ಎಂದು ಯಾರಾದರೂ ಭಾವಿಸಿದರೆ ಅದು ಅತಿಶಯೋಕ್ತಿ ಅಷ್ಟೆ. ಅಂತಹ ಸಂದರ್ಭದಲ್ಲಿ, ಯುವಜನ ಮತ್ತು ಅವರ ಹೆತ್ತವರಿಗೆ ಕಿರುಕುಳ ನೀಡಲು ತಿದ್ದುಪಡಿ ಕಾಯ್ದೆಯು ಬಳಕೆ ಆಗಬಹುದು ಎಂಬ ಸಂಶಯ ಇಲ್ಲದೇ ಇಲ್ಲ. ಬಾಲ್ಯವಿವಾಹದ ಸಮಸ್ಯೆಯು ಸಾರ್ವತ್ರಿಕವಲ್ಲ ಎಂಬುದು ಸಮಾಧಾನದ ಸಂಗತಿ. ಸುಶಿಕ್ಷಿತ, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಹೊರಜಗತ್ತಿಗೆ ತೆರೆದುಕೊಂಡಿರುವ ವರ್ಗಗಳಲ್ಲಿ ಹೆಣ್ಣು ಮಕ್ಕಳ ಮದುವೆಯು ಆತುರದಲ್ಲಿ ನಡೆಯುವುದಿಲ್ಲ. ವಿದ್ಯೆ ಮತ್ತು ವೃತ್ತಿಯ ಹಾದಿಯಲ್ಲಿ ಮುಂದೆಸಾಗಲು ಬಯಸುವ ಈ ವರ್ಗಗಳ ಜನರು ಮದುವೆಯೇ ಬಿಡುಗಡೆಯ ಮಾರ್ಗ ಎಂದು ನಂಬಿಲ್ಲ. ಹಾಗಾಗಿ, ಕಾಯ್ದೆಗೆ ತಿದ್ದುಪಡಿಯ ಜತೆಗೆ, ಜನರಲ್ಲಿ ಜಾಗೃತಿ ಮೂಡಿಸಲು ಬೇಕಾದ ಕೆಲಸಗಳನ್ನು ಸರ್ಕಾರ ಮಾಡಲೇಬೇಕು. ಹೆಣ್ಣು ಮಕ್ಕಳಿಗೆ ವಿದ್ಯೆ, ವೃತ್ತಿ ಮತ್ತು ಬದುಕಿನಲ್ಲಿ ಸಮಾನ ಅವಕಾಶಗಳು ಇನ್ನೂ ಹೆಚ್ಚಿಗೆ ತೆರೆದುಕೊಳ್ಳುವಂತೆ ಮಾಡಬೇಕು. ತಮ್ಮ ಮಕ್ಕಳಿಗೆ ಬದುಕಿನ ಸುರಕ್ಷತೆಯ ಖಾತರಿ ಇದೆ ಎಂದಾದರೆ ಅಪ್ಪ-ಅಮ್ಮಂದಿರು ಹೆಣ್ಣು ಮಕ್ಕಳನ್ನು ಹೊರೆ ಎಂದು ಭಾವಿಸಲಾರರು. ಮದುವೆಯ ಕನಿಷ್ಠ ವಯಸ್ಸು ಎಂಬುದು ಹೆಚ್ಚು ಸಂಕೀರ್ಣವಾದ ಸಾಮಾಜಿಕ ವಿಚಾರ. ಈ ವಿಷಯದಲ್ಲಿ ದಂಡನೆಗಿಂತ ಜಾಗೃತಿಯೇ ಹೆಚ್ಚು ಮುಖ್ಯ.

## ದಿನದ ಟ್ವೀಟ್

### ಇಂಥ ಹಾಸ್ಯ ಸಲ್ಲದು

**ಪ್ರಾಮಾಣಿಕವಾಗಿ ಹೇಳಬಹುದಾದ ಸತ್ಯ ಸಂಗತಿಯೆಂದರೆ, ಶಾಸನಸಭಾ ಅಧಿವೇಶನಗಳಲ್ಲಿ ಅಥವಾ ಕಚೇರಿಗಳಲ್ಲಿ ಮಾತ್ರವಲ್ಲ ಪುರುಷರನ್ನಷ್ಟೇ ಒಳಗೊಂಡ ವಾಟ್ಸ್‌ಆ್ಯಪ್ ಗುಂಪುಗಳಲ್ಲಿಯೂ ಲಿಂಗಭೇದಭಾವದಿಂದ ಕೂಡಿದ ಹಾಸ್ಯಚಟಾಕಿ ಹಾರಿಸುವುದನ್ನು ನಿಲ್ಲಿಸಬೇಕು.**

**ಪರ್ಮಿಂದರ್ ಸಿಂಗ್,** ಗೂಗಲ್/ಟ್ವಿಟರ್ ಮಾಜಿ ಅಧಿಕಾರಿ, ಲೇಖಕ

## ಕಿಡಿನುಡಿ

**ಬಲಾತ್ಕಾರದ ಮತಾಂತರ ಈಗಲೂ ಶಿಕ್ಷಾರ್ಹ ಅಪರಾಧವಾಗಿರುವಾಗ ಹೊಸ ಕಾಯ್ದೆಯನ್ನು ರಚಿಸುವುದು ಯಾವ ಉದ್ದೇಶಕ್ಕೆ? ಅಲ್ಪಸಂಖ್ಯಾತರನ್ನು ಬೆದರಿಸುವ ಮತ್ತು ಅವರ ವಿರುದ್ಧ ಇತರರನ್ನು ಎತ್ತಿಕಟ್ಟುವ ದುರುದ್ದೇಶ ದಿಂದಲೇ ರಾಜ್ಯದಲ್ಲಿ ಬಿಜೆಪಿಯು ಈ ಕಾಯ್ದೆಯನ್ನು ಜಾರಿಗೆ ತರಲು ಹೊರಟಿದೆ.**

**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಬುಧವಾರ, 18-12-1996

**• ಕೊಜೆಂಟ್ರಿಕ್ಸ್ ಮಾಲಿನ್ಯ ವಿಚಾರಣೆ ಹೈಕೋರ್ಟ್‌ಗೆ**

**ನವದೆಹಲಿ, ಡಿ. 17 (ಪಿಟಿಐ)**– ಮಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆಯೂ ಸೇರಿದಂತೆ ರಾಷ್ಟ್ರೀಯ ಪರಿಸರ ತಂತ್ರಜ್ಞಾನ ಮತ್ತು ಪರಿಸರ ಸಂಸ್ಥೆ ಒಪ್ಪಿಗೆ ನೀಡದೇ ಇರುವ 5 ಪ್ರಮುಖ ಯೋಜನೆಗಳ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸುವಂತೆ ಆಯಾ ರಾಜ್ಯಗಳ ಹೈಕೋರ್ಟ್‌ಗಳಿಗೆ ಇಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿತು.

ಕೇರಳದ ಕೊಚ್ಚಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಗೋಶ್ರೀ ಯೋಜನೆ, ಮಹಾರಾಷ್ಟ್ರದ ಸಿನಾರ್‌ಮಾಸ್ ಕಾಗದ ಕಾರ್ಖಾನೆ ಮತ್ತು ಬಾಂದ್ರಾ- ಕುರ್ಲಾ ಯೋಜನೆ, ಗುಜರಾತ್‌ನ ಸಾಂಗಿ ಸಿಮೆಂಟ್ ಕಾರ್ಖಾನೆ ಇವು ನಾಲ್ಕು ಯೋಜನೆಗಳಾಗಿವೆ.

## 50 ವರ್ಷಗಳ ಹಿಂದೆ

ಶನಿವಾರ, 18-12-1971

**• ಭಾರತ- ಪಾಕ್ ಸಮರ ಅಂತ್ಯ**

**ನವದೆಹಲಿ, ಡಿ. 17**– ಪಶ್ಚಿಮ ರಣರಂಗದ ಎಲ್ಲ ಕ್ಷೇತ್ರಗಳಲ್ಲೂ ಶುಕ್ರವಾರ ರಾತ್ರಿ 8 ಗಂಟೆಯಿಂದ ಯುದ್ಧ ನಿಲ್ಲಿಸಬೇಕೆಂಬ ಭಾರತದ ಸೂಚನೆಯನ್ನು ಪಾಕಿಸ್ತಾನ ಇಂದು ಒಪ್ಪಿಕೊಂಡಿತು. 14 ದಿನಗಳ ಹೋರಾಟ ಕೊನೆಮುಟ್ಟಿತು. ಕದನವಿರಾಮ ಪೂರ್ಣ ಜಾರಿಗೆ ಬಂದಿತು.

ಉಪಖಂಡದಲ್ಲಿ ‘ಶಾಂತಿ ಹಾಗೂ ಭದ್ರತೆಗಾಗಿ’ ತಾವು ಭಾರತದ ಯುದ್ಧ ನಿಲುಗಡೆ ಸಲಹೆಯನ್ನು ಒಪ್ಪಿಕೊಂಡಿರುವುದಾಗಿ ಅಧ್ಯಕ್ಷ ಯಾಹ್ಯಾ ಖಾನ್ ಇಂದು ರಾವಲ್ಪಿಂಡಿಯಲ್ಲಿ ಹೇಳಿಕೆಯೊಂದನ್ನಿತ್ತು ತಿಳಿಸಿದರು ಎಂದು ಪಾಕಿಸ್ತಾನ್ ರೇಡಿಯೊ ವರದಿ ಮಾಡಿತು.

ಭಾರತದ ಏಕಪಕ್ಷೀಯ ಯುದ್ಧಸ್ತಂಭನ ಜಾರಿಗೆ ಬರುವುದಕ್ಕೆ ನಾಲ್ಕೂವರೆ ಗಂಟೆಗಳ ಕಾಲವಿದ್ದಾಗ ಪಾಕಿಸ್ತಾನದ ಒಪ್ಪಿಗೆಯ ಪ್ರಕಟಣೆ ಬಂತು.

ಕಾಂಗ್ರೆಸ್– ತೃಣಮೂಲ ಕಾಂಗ್ರೆಸ್ ನಡುವೆ ಈ ವಿಷಯದಲ್ಲಿ ನಡೆದಿರುವ ಕಾದಾಟ ಕುತೂಹಲಕರ

# ನಾಯಕತ್ವ ಅವಕಾಶಕ್ಕಾಗಿ ಕುಸ್ತಿ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

**ಬಿಜೆಪಿ** ನೇತೃತ್ವದ ಎನ್‌ಡಿಎ ಸರ್ಕಾರದ ಎರಡನೇ ಅವಧಿಯ ಅಧಿಕಾರದ ಅವಧಿ ಅರ್ಧದಷ್ಟು ಪೂರೈಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ, ವಿರೋಧಪಕ್ಷದ ನಾಯಕತ್ವದ ಕೇಂದ್ರಸ್ಥಾನವನ್ನು ಆಕ್ರಮಿಸಿಕೊಳ್ಳುವ ಹೋರಾಟ ಮುನ್ನೆಲೆಗೆ ಬಂದಿರುವುದು ಸೂರ್ಯಸ್ಪಷ್ಟ. 2014ರಲ್ಲಿ ಅಧಿಕಾರ ಕಳೆದುಕೊಂಡ ನಂತರ, ಕಾಂಗ್ರೆಸ್ ಪಕ್ಷವು ದಿಕ್ಕು ತಪ್ಪಿದ ಸ್ಥಿತಿಯಲ್ಲಿರುವುದು ಮುಂದುವರಿದಿದೆ.

ಲೋಕಸಭೆಯಲ್ಲಿ ಈಗಲೂ ಅತಿ ದೊಡ್ಡ ವಿರೋಧ ಪಕ್ಷವೆಂದರೆ ಕಾಂಗ್ರೆಸ್. ಆದರೆ, ವಿರೋಧ ಪಕ್ಷದ ಅಧಿಕೃತ ಸ್ಥಾನಮಾನ ಪಡೆದುಕೊಳ್ಳಲು ಅಗತ್ಯವಾದಂತಹ ಸಂಖ್ಯಾಬಲ ಕಾಂಗ್ರೆಸ್ ಬಳಿ ಇಲ್ಲ. ರಾಜ್ಯಗಳ ಮಟ್ಟದಲ್ಲೂ ಕಾಂಗ್ರೆಸ್ ಸಂಖ್ಯಾಬಲ ಇಳಿಮುಖವಾಗಿದೆ. ರಾಷ್ಟ್ರದ ಮೂರು ರಾಜ್ಯಗಳಲ್ಲಷ್ಟೇ ಪ್ರಮುಖ ಪಕ್ಷವಾಗಿ ಈಗ ಕಾಂಗ್ರೆಸ್ ಉಳಿದಿದೆ. ಇನ್ನು ಮೂರು ರಾಜ್ಯಗಳಲ್ಲಿ, ಆಡಳಿತ ಮೈತ್ರಿಕೂಟಗಳಲ್ಲಿ ಕಾಂಗ್ರೆಸ್ ಕಿರಿಯ ಪಾಲುದಾರ ಪಕ್ಷವಾಗಿದೆ. ತನ್ನ ಚುನಾಯಿತ ಶಾಸಕರೇ ಕೈಬಿಟ್ಟು ಹೋದದ್ದರಿಂದ ಕರ್ನಾಟಕ ಹಾಗೂ ಮಧ್ಯಪ್ರದೇಶದಲ್ಲಿ ತನ್ನ ಸರ್ಕಾರಗಳನ್ನು ಹಿಡಿದಿಟ್ಟುಕೊಳ್ಳಲೂ ಅದು ವಿಫಲವಾಯಿತು.

ಪಶ್ಚಿಮ ಬಂಗಾಳ, ಜಾರ್ಖಂಡ್, ತೆಲಂಗಾಣ, ಒಡಿಶಾ ಹಾಗೂ ತಮಿಳುನಾಡಿನಲ್ಲಿ ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳಿಗೆ ನಿಜವಾದ ವಿರೋಧ ಎದುರಾಗಿರುವುದು ರಾಜ್ಯ ಮಟ್ಟದ ಬಲಿಷ್ಠ ಪಕ್ಷಗಳಿಂದ. ಈ ವಿಸ್ತೃತವಾದ ಹಿನ್ನೆಲೆಯನ್ನಿಟ್ಟುಕೊಂಡು ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ ಪಕ್ಷಗಳ ಮಧ್ಯೆ ವಿರೋಧಪಕ್ಷದ ನಾಯಕತ್ವ ಸ್ಥಾನಕ್ಕಾಗಿ ಸೃಷ್ಟಿಯಾಗುತ್ತಿರುವಂತಹ ಸಮರವನ್ನು ಗಮನಿಸಬೇಕು.

ಪಶ್ಚಿಮ ಬಂಗಾಳದಲ್ಲಿ ತಮ್ಮ ಪ್ರಚಂಡ ವಿಜಯ ವಿನ್ನೂ ಹಸಿರಾಗಿರುವ ಈ ಸಂದರ್ಭದಲ್ಲಿ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ತಮ್ಮನ್ನು ತಾವು ಪ್ರಮುಖ ಪಾತ್ರಧಾರಿಯಾಗಿ ಮಮತಾ ಬ್ಯಾನರ್ಜಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಪ್ರವೃತ್ತಿಗೆ ಹಲವು ಅಂಶಗಳು ಸೂಚಕವಾಗಿವೆ. ಮೊದಲಿಗೆ, ಈ ಹಿನ್ನೆಲೆಯನ್ನಿಟ್ಟುಕೊಂಡೇ ತ್ರಿಪುರಾ, ಮೇಘಾಲಯ, ಗೋವಾ ಹಾಗೂ ಉತ್ತರಪ್ರದೇಶಕ್ಕೆ ಅವರ ಪಕ್ಷದ ಮುನ್ನುಗ್ಗುವಿಕೆಯನ್ನು ನೋಡಬೇಕು.

ಎರಡನೆಯದಾಗಿ, ಮಮತಾ ಅವರ ಪಕ್ಷಕ್ಕೆ ಕಳೆದ ಕೆಲವು ವಾರಗಳಲ್ಲಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಹಲವು ಹಿರಿಯ ನಾಯಕರ ಪ್ರವೇಶವು ಇದೇ ದೊಡ್ಡ ಆಟದ ಯೋಜನೆಯ ಭಾಗವೇ ಆಗಿದೆ. ಮೂರನೆಯದಾಗಿ, ರಾಷ್ಟ್ರ ಮಟ್ಟದಲ್ಲಿ ಎನ್‌ಡಿಎ ವಿರೋಧಿ, ಕಾಂಗ್ರೆಸ್ಸೇತರ ಮೈತ್ರಿಕೂಟವನ್ನು ಕಟ್ಟುವ ತೃಣಮೂಲ ಕಾಂಗ್ರೆಸ್‌ನ ಪ್ರಯತ್ನ, ಇದೇ ದಿಕ್ಕಿನತ್ತ ಇರಿಸಿದ ಹೆಜ್ಜೆಯಾಗಿದೆ.

ಕೊನೆಯದಾಗಿ, ಕಾಂಗ್ರೆಸ್ ಹಾಗೂ ಅದರ ನಾಯಕತ್ವದ ಬಗ್ಗೆ ಮಮತಾ ಬ್ಯಾನರ್ಜಿ ಹಾಗೂ ತೃಣಮೂಲ ಕಾಂಗ್ರೆಸ್ ನಡೆಸುತ್ತಿರುವ ವಾಗ್ದಾಳಿಗಳೂ ಇದೇ ಕಾರ್ಯತಂತ್ರದ ಭಾಗವೇ ಆಗಿವೆ. ತೃಣಮೂಲ ಕಾಂಗ್ರೆಸ್ ಪಕ್ಷವನ್ನು (ಹಾಗೂ ಅದರ ನಾಯಕತ್ವ) ಮೂಲೆಗೆ ತಳ್ಳಲು ಕಾಂಗ್ರೆಸ್ ಹಾಗೂ ಅದರ ನಾಯಕರು ಪ್ರಜ್ಞಾಪೂರ್ವಕವಾಗಿ ಯತ್ನಿಸುತ್ತಿರುವುದೂ ಪರಸ್ಪರ ಸಂಬಂಧ ಹೊಂದಿರುವಂತೆ ಬಿಂಬಿತವಾಗುತ್ತದೆ! ಅನಾವರಣಗೊಳ್ಳುತ್ತಿರುವ ಈ ಬೆಳವಣಿಗೆಗಳ ಬಗ್ಗೆ ಕಾದು ನೋಡುವ ತಂತ್ರವನ್ನು ಅನುಸರಿಸುವ ನಿರ್ಧಾರವನ್ನು ವಿರೋಧ ಪಕ್ಷಗಳ ಪಾಳಯದ ಭಾಗವಾಗಿರುವ ಇತರ ಪಕ್ಷಗಳು ಕೈಗೊಂಡಂತಿವೆ.

ಈ ಹಿನ್ನೆಲೆಯಲ್ಲಿ, ಬಿಜೆಪಿ ನಾಯಕತ್ವಕ್ಕೆ, 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅಭಿಯಾನದ ಕೇಂದ್ರಬಿಂದುವಾಗಿದ್ದದ್ದು ಉತ್ತರಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಒಡಿಶಾ ಎಂಬುದನ್ನು ನೆನಪಿಸಿಕೊಳ್ಳುವುದು ಉಪಯುಕ್ತ. ಪ್ರಾಸಂಗಿಕವಾಗಿ, ಈ ರಾಜ್ಯಗಳಲ್ಲಿ ಬಿಜೆಪಿಗೆ ಪ್ರಮುಖ ಪ್ರತಿಸ್ಪರ್ಧಿಗಳಾಗಿದ್ದದ್ದು ರಾಜ್ಯ ಮಟ್ಟದ ಪಕ್ಷಗಳೇ. 2019ರ ಚುನಾವಣೆಗಳಲ್ಲಿ ಕಂಡುಬಂದ ಬಿಜೆಪಿ ಕಾರ್ಯತಂತ್ರವು ಕಳೆದ ಎರಡು ವರ್ಷಗಳಲ್ಲಿ ಮತ್ತಷ್ಟು ವಿಸ್ತೃತಗೊಂಡಿದೆ. ಬಿಜೆಪಿಯ ‘ಕಾಂಗ್ರೆಸ್‌ಮುಕ್ತ ಭಾರತ’ ಕಾರ್ಯಸೂಚಿಯು ಪ್ರಧಾನ ಕೇಂದ್ರಬಿಂದುವಾಗಿ ಉಳಿದಿದ್ದರೂ ರಾಜ್ಯ ಮಟ್ಟದ ಬಲಿಷ್ಠ ಪಕ್ಷಗಳಿರುವ ರಾಜ್ಯಗಳೆಡೆಗೆ ಅದರ ಗಮನ ಹೆಚ್ಚು ಕೇಂದ್ರೀಕೃತಗೊಳ್ಳುತ್ತಿದೆ.



2014ರ ಲೋಕಸಭೆ ಚುನಾವಣೆಯ ಸೋಲಿನಿಂದ ಚೇತರಿಸಿಕೊಳ್ಳುವಲ್ಲಿ ಕಾಂಗ್ರೆಸ್‌ನ ವೈಫಲ್ಯ, 2019ರ ಸಾರ್ವತ್ರಿಕ ಚುನಾವಣೆ ಹಾಗೂ ನಂತರದಲ್ಲೂ ಬದಿಗೇ ಉಳಿಯುವಂತಾದದ್ದು, ವಿರೋಧ ಪಕ್ಷದ ಪ್ರಮುಖ ಪಾತ್ರಧಾರಿಯ ಸ್ಥಾನವನ್ನು ಕಾಂಗ್ರೆಸ್ ಕ್ರಮೇಣ ತೆರವುಗೊಳಿಸುವಂತಾಗುವ ಸ್ಥಿತಿಗೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ನಾಯಕತ್ವದ ನಿರ್ವಾತ ಹಾಗೂ ಪಕ್ಷದೊಳಗೇ ಇರುವ ತೀವ್ರ ಒಡಕುಗಳು ಪರಿಸ್ಥಿತಿಯನ್ನು ಮತ್ತಷ್ಟು ಕೆಟ್ಟದಾಗಿಸಿವೆ. ರಾಜಸ್ಥಾನ ಹಾಗೂ ಛತ್ತೀಸಗಡ ಬಿಟ್ಟರೆ ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿಯನ್ನು ನೇರ ಹೋರಾಟಗಳಲ್ಲಿ ಪರಿಣಾಮಕಾರಿಯಾಗಿ ಎದುರಿಸುವಲ್ಲಿಯೂ ಕಾಂಗ್ರೆಸ್ ಅಸಮರ್ಥವಾಗಿದೆ. ಹಲವು ರಾಜ್ಯಗಳಲ್ಲಿ, ರಾಜ್ಯ ಮಟ್ಟದ ಬಲಿಷ್ಠ ಪಕ್ಷ ಹಾಗೂ ಬಿಜೆಪಿ ಮಧ್ಯೆ ಈಗ ಪ್ರಮುಖ ಚುನಾವಣೆ ಸ್ಪರ್ಧೆ ಏರ್ಪಡುತ್ತಿದ್ದು, ಕಾಂಗ್ರೆಸ್ ಹಾಗೂ ಎಡಪಕ್ಷಗಳು ಮೂರನೇ ಸ್ಥಾನಕ್ಕೆ ತಳ್ಳಲ್ಪಡುತ್ತಿವೆ. ಇದು ಪಶ್ಚಿಮ ಬಂಗಾಳ, ತ್ರಿಪುರಾ, ತೆಲಂಗಾಣ, ಉತ್ತರಪ್ರದೇಶ ಹಾಗೂ ಒಡಿಶಾದಲ್ಲಿ ನಿಜ. ಈ ಎರಡು ಬೆಳವಣಿಗೆಗಳ ಬೆಳಕಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎಗೆ ರಾಷ್ಟ್ರೀಯ ವಿರೋಧಿ ಕೇಂದ್ರವಾಗಿ ಉದಯಿಸಲು ಮಮತಾ ಬ್ಯಾನರ್ಜಿ ಹಾಗೂ ಅವರ ತೃಣಮೂಲ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಪ್ರಯತ್ನಗಳನ್ನು ಗಮನಿಸಬೇಕು.

ಈ ಸಂಬಂಧದಲ್ಲಿ ಎರಡು ವಿಚಾರಗಳು ಮುಖ್ಯವಾಗುತ್ತವೆ. ಬಿಜೆಪಿ ವಿರೋಧಿ ನಾಯಕತ್ವವನ್ನು ಕಟ್ಟಬೇಕಿರುವುದು ಪರ್ಯಾಯ ನಾಯಕತ್ವದ ಮೂಲಕವೇ ಅಥವಾ ವಾಸ್ತವಿಕ ನೀತಿ ಹಾಗೂ ಕಾರ್ಯಕ್ರಮಗಳ ಮೂಲಕವೇ? ನಾಯಕತ್ವದ ಸುತ್ತಲ ಸ್ಪರ್ಧೆಯನ್ನು ಬಿಜೆಪಿ ಇಷ್ಟಪಡುತ್ತದೆ. ಏಕೆಂದರೆ ಈ ವಿಚಾರದಲ್ಲಿ ಬಿಜೆಪಿಗೆ ನಿಶ್ಚಿತ ಅನುಕೂಲವಿದೆ. ನಾಯಕತ್ವದ ವಿಚಾರದಲ್ಲಿ ವಿರೋಧಪಕ್ಷಗಳು ಒಟ್ಟಾಗುವುದು ಕಠಿಣ ಸಂಗತಿ.

ನಾಯಕತ್ವದ ವಿಚಾರವನ್ನು ಬಗೆಹರಿಸಿಕೊಳ್ಳುವುದರಲ್ಲೇ ವಿರೋಧಪಕ್ಷಗಳ ಸಮಯ ಹಾಗೂ ಪ್ರಯತ್ನಗಳು ಚದುರಿ ಹೋಗುತ್ತವೆ ಹಾಗೂ ಈ ಪ್ರಕ್ರಿಯೆಯಲ್ಲಿ ಮುನ್ನೆಲೆಗೆ ಬರಲು ಬಿಜೆಪಿಗೆ ಅವೇ ಅನುವು ಮಾಡಿಕೊಡುವಂತಾಗುತ್ತದೆ. ಆದರೆ ವಾಸ್ತವಿಕ ನೀತಿ ಹಾಗೂ ಕಾರ್ಯಕ್ರಮಗಳ ಆಯ್ಕೆಯ ಪ್ರಶ್ನೆಯ ವಿಚಾರದಲ್ಲಿ ಹೀಗಾಗುವುದಿಲ್ಲ. ನೀತಿ ಆದ್ಯತೆಗಳು ಹಾಗೂ ಕಾರ್ಯಕ್ರಮ ಆಯ್ಕೆಗಳ ಪರ್ಯಾಯ ಕಾರ್ಯಸೂಚಿಯೊಂದಿಗೆ ವಿರೋಧ ಪಕ್ಷಗಳು ಒಟ್ಟಾಗಲು ಪ್ರಯತ್ನಿಸುತ್ತವೆಯೇ?

ಇಂತಹದ್ದೊಂದು ಆಯ್ಕೆಯಿಂದ ಸರ್ಕಾರದ ನೀತಿ ಹಾಗೂ ಆಡಳಿತಗಳ ವಾಸ್ತವಿಕ ವಿಚಾರಗಳು ಸ್ಪರ್ಧೆಯ ಕೇಂದ್ರಬಿಂದುವಾಗುತ್ತವೆ. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮ (ಸಾಮಾನ್ಯ ಕನಿಷ್ಠ ಕಾರ್ಯಕ್ರಮವಲ್ಲ- ಈ ಹಿಂದೆ ಇದ್ದಂತೆ ಕನಿಷ್ಠ ಒಮ್ಮತ ಎಂಬುದಕ್ಕಿಂತ ಗರಿಷ್ಠ ನೆಲೆಗೆ ಒಯ್ಯುವುದಕ್ಕೆ ಗಮನ) ಎಂಬುದು ವ್ಯಕ್ತಿಗಳು ಹಾಗೂ ವ್ಯಕ್ತಿಕೇಂದ್ರಿತ ಚರ್ಚೆಗಳನ್ನು ಜನರ ವಿಚಾರಗಳು, ಆದ್ಯತೆಗಳು ಹಾಗೂ ಪರ್ಯಾಯ ಮಾರ್ಗಗಳತ್ತ ಚರ್ಚೆಯ ದಿಕ್ಕನ್ನು ಬದಲಿಸಬಲ್ಲದು. ಇದಕ್ಕೆ (ಎರಡೂ ಕಡೆಗಳಲ್ಲಿ) ಸಮಗ್ರ ಹಾಗೂ ಗಟ್ಟಿಯಾದ ಅಸ್ತಿಭಾರ ಬೇಕು. ಜೀವನೋಪಾಯ ಹಾಗೂ ಅಭಿವೃದ್ಧಿಯಂತಹ ವಾಸ್ತವಿಕ ವಿಚಾರಗಳ ಮೇಲೆ ರಾಜಕೀಯ ವಿರೋಧಿಗಳ ನಡುವೆ ಹೆಚ್ಚು ಅರ್ಥಪೂರ್ಣ ಸಂವಾದಗಳಿಗೆ ಇದು ಬಹುಶಃ ನಾಂದಿಯಾಗಬಹುದು.

## ಚುರುಮುರಿ

### (ಗೃಹ)ಲೋಕ ಸುಂದರಿ!

• ಎಸ್.ಬಿ.ರಂಗನಾಥ್

‘ನೋಡ್ರೀ, ಈ 21ರ ಸ್ಪೆಷಲ್ ವಿಷ್ಯಾನ! 2021ನೇ ಇಸವೀಲಿ, 21 ವರ್ಷಗಳಾದ್ಮೇಲೆ, ನಮ್ಮ ದೇಶದ 21 ವರ್ಷದ ಯುವತಿ ಹರ್ನಾಜ್ ಕೌರ್ ಸಂಧು ‘ಭುವನ ಸುಂದರಿ’ ಆದರಲ್ರೀ. ರಿಯಲಿ ಗ್ರೇಟ್! ಇನ್ಮೇಲೆ ನೀವು ನನ್ನನ್ನ ಸಣಕಲು, ಪೀಚಲು ಅನ್ನೋ ಹಾಗಿಲ್ಲ’ ಎಂದ ಶ್ರೀಮತಿ ಬೆಳ್ಳಂಬೆಳಗ್ಗೆ ಮೋಹಕ ನಗೆ ಬೀರಿದಳು.

‘ಯಾಕೆ, ಡಯಟಿಂಗ್ ಬಿಟ್ಟು ದಪ್ಪಗಾಗೋಣ ಅಂತಿದೀಯಾ?’ ಎಂದೆ.

‘ಹರ್ನಾಜ್, ಓದುವಾಗ ಸಹಪಾಠಿಗಳಿಂದ ಸಣಕಲು ಎಂದು ಟೀಕೆಗೊಳಗಾಗಿದ್ರಂತೆ!’

‘ಅವ್ರು ಹೆಣ್ಮಕ್ಕಳಿಗೆ ಏನು ಸಲಹೆ ಕೊಟ್ರು ಗೊತ್ತಾ? ನೀವು ನಿಮ್ಮನ್ನ ಮತ್ತೊಬ್ರಿಗೆ ಹೋಲಿಸಿ ಕೊಳ್ಳಬಾರದು ಅಂತ. ಇನ್ಮೇಲಾದ್ರೂ ನೀನು ನೆರೆಯವ್ರ ಕಾರು, ಬಂಗ್ಲೆ, ಒಡವೆ-ವಸ್ತ್ರಗಳ ಬಗ್ಗೆ ತಲೆ ಕೆಡಿಸಿಕೊಳ್ಳೋದನ್ನ ನಿಲ್ಲಿಸು’.

‘ನಾಳೆ ನಿಮ್ಮ ಆಫೀಸ್ ಅಟೆಂಡರ್ ಹೊಸ ಮನೆ ಗೃಹಪ್ರವೇಶ ಅಂದ್ರಿ... ನಾವು ಮನೆ ಕಟ್ಟಿಸೋದು ಯಾವಾಗ?’

‘ನಮ್ಮ ಆಫೀಸು ಹೌಸಿಂಗ್ ಸೊಸೈಟೀಲಿ ಷೇರು ಹಾಕೋಣಾಂತಿದೀನಿ. ಕಂತು ತುಂಬಿ ನಂಗೆ ಸೈಟು ಅಲಾಟ್ ಆಗೋವಷ್ಟರಲ್ಲಿ ಮನೆ ನಿರ್ಮಾಣ ವಸ್ತುಗಳ ಬೆಲೆಯನ್ನ ನಮ್ಮ ಮೋದೀಜಿ ಖಂಡಿತಾ ಇಳಿಸ್ತಾರೆ. ಆಗ ಕಟ್ಟಿಸೋಣ’.

‘ಹಾಗಾದ್ರೆ ಈ ಜನ್ಮದಲ್ಲಿ ನಂಗೆ ಸ್ವಂತ ಮನೇಲಿರೋ ಭಾಗ್ಯ ಬಂದಂತೆಯೇ!’

‘ಹಂಗ್ಯಾಕೆ ಹತಾಶಳಾಗ್ತೀಯ? ಹರ್ನಾಜ್ ಸಂದೇಶ ಪಾಲಿಸು’.

‘ಅವ್ರು ಹೇಳಿದ ‘ಚಕ್ ದೇ ಫತ್ತೇ ಇಂಡಿಯಾ’ ಎಂಬ ಮಾತು ನನಗೆ ಬಹಳ ಹಿಡಿಸಿತು’.

‘ಅಂದ್ರೆ?!’

‘ಬಡಿಗೆ ಹಿಡಿಯಿರಿ, ಬಿಡದೆ ಆಕ್ರಮಿಸೀಂತ!... ಬಂದೆ ತಡೀರಿ’ ಎಂದ ಮಡದಿ ತನ್ನ ಆಯುಧಾಗಾರದೊಳಕ್ಕೆ ಹೋಗಿ ಸಶಸ್ತ್ರ ಸಮೇತ ಪ್ರತ್ಯಕ್ಷ!

ಅಧೀರನಾದ ನಾನು ಬೇಡಿಕೊಂಡೆ (ನಾಟಕೀಯವಾಗಿ)- ‘ದೇವಿ ಶಾಂತಳಾಗು, ಆಜ್ಞೆ ಪಾಲಿಸಲು ಸಿದ್ಧ, ಆದೇಶವಾಗಲಿ’.

‘ಸರ್ಕಾರಿ ನೌಕರರಿಗೆ ಸರ್ಕಾರ ಇಪ್ಪತ್ತೈದು ಸಾವಿರಕ್ಕೆ ಹೆಚ್ಚಿಸಿರುವ ಹಬ್ಬದ ಮುಂಗಡ ಮುಕ್ಕಾಗದೆ ಮನೆ ಸೇರಲಿ’.

‘ಅಪ್ಪಣೆ’ ಎಂದ ನಾನು ಜಾಗ ಖಾಲಿ ಮಾಡಿದೆ!

## ಸಂಗತ

# ಮಕ್ಕಳ ಎದುರು ದ್ವೇಷದ ಮಾದರಿ?

**ಯಾವುದು ವಿಶ್ವಾಸಾರ್ಹ ಮಾಹಿತಿ ಎಂದು ವಿವೇಚಿಸುವ ಸಾಮರ್ಥ್ಯವೇ ಇಲ್ಲದ ಮಕ್ಕಳನ್ನು ದ್ವೇಷ ರಾಜಕೀಯದ ಸರಕಿನಿಂದ ದೂರವಿರಿಸುವ ಹೊಣೆಗಾರಿಕೆ ಪೋಷಕರ ಹೆಗಲೇರಿದೆ**

• ಎಚ್.ಕೆ.ಶರತ್

**ಸಾಮಾನ್ಯವಾಗಿ** ತಾನು ಇಷ್ಟಪಡುವ ನಟನ ಸಿನಿಮಾ ದೃಶ್ಯಗಳನ್ನು ಅಥವಾ ತಾನು ಮೆಚ್ಚುವ ಕ್ರಿಕೆಟ್ ಆಟಗಾರರಿಗೆ ಸಂಬಂಧಿಸಿದ ಚಿತ್ರಗಳು, ವಿಡಿಯೊ ತುಣುಕುಗಳನ್ನು ತನ್ನ ವಾಟ್ಸ್‌ಆ್ಯಪ್ ಸ್ಟೇಟಸ್‌ಗೆ ಹಾಕಿಕೊಳ್ಳುತ್ತಿದ್ದ ಪರಿಚಯದ ಶಾಲಾ ವಿದ್ಯಾರ್ಥಿಯೊಬ್ಬ ಇತ್ತೀಚೆಗೆ ಹಾಕಿಕೊಂಡಿದ್ದ ವಾಟ್ಸ್‌ಆ್ಯಪ್ ಸ್ಟೇಟಸ್ ಕಂಡು ಕಸಿವಿಸಿಯಾಯಿತು.

ಆರನೇ ತರಗತಿಯಲ್ಲಿ ಓದುತ್ತಿರುವ ಹುಡುಗ, ತನ್ನ ವಿವಾದಿತ ಭಾಷಣಗಳಿಂದಾಗಿ ಕುಖ್ಯಾತಳಾಗಿರುವ ಕರಾವಳಿ ಮೂಲದ ಯುವತಿಯೊಬ್ಬಳ ಭಾಷಣದ ತುಣುಕನ್ನೇ ತನ್ನ ಸ್ಟೇಟಸ್‌ಗೆ ಹಾಕಿಕೊಂಡಿದ್ದ. ‘ನಮ್ಮೂರಿನ ಸಾಕಷ್ಟು ಹೆಣ್ಣುಮಕ್ಕಳನ್ನು ನೀವು ಮತಾಂತರ ಮಾಡಿದ್ದು ನಮಗೆ ಗೊತ್ತು. ನೋಡುವಷ್ಟು ನೋಡಿದ್ದೇವೆ, ಸಹಿಸುವಷ್ಟು ಸಹಿಸಿದ್ದೇವೆ. ನಮ್ಮ ತಾಳ್ಮೆಯ ಮಿತಿ ಮೀರಿದ್ರೆ ನಮಗೂ ಮತಾಂತರ ಮಾಡೋಕೆ ಚೆನ್ನಾಗಿ ಗೊತ್ತು. ನಮಗೂ ನಿಮ್ಮ ಹೆಣ್ಣು-ಮಕ್ಕಳನ್ನು ಮದುವೆಯಾಗೋದು ಗೊತ್ತು. ಬರೀ 23 ಪರ್ಸೆಂಟ್ ಇರೋ ನೀವೇ ಇಷ್ಟು ಹಾರಾಡ್ಬೇಕಾದ್ರೆ ಇನ್ನು 70 ಪರ್ಸೆಂಟ್ ಇರೋ ಹಿಂದೂಗಳೆಷ್ಟು ಹಾರಾಡ್ಬೇಕು? ಸ್ವಾಮಿ, ಇದು ಕೊನೇ ಎಚ್ಚರಿಕೆ ನಿಮಗೆ...’ ಎಂದು ಶುರುವಾಗುವ ಭಾಷಣದ ತುಣುಕು ಅದಾಗಿತ್ತು.

ಕೊರೊನಾ ಕಾರಣಕ್ಕೆ ಶಾಲೆಗಳನ್ನು ಮುಚ್ಚಿ ವರ್ಷಾನುಗಟ್ಟಲೆ ಆನ್‌ಲೈನ್ ಶಿಕ್ಷಣದ ಮೊರೆ ಹೋಗಿದ್ದರಿಂದ, ಇದೀಗ ಬಹುಪಾಲು ಶಾಲಾ ವಿದ್ಯಾರ್ಥಿಗಳ ಬಳಿ ಅವರದೇ ಮೊಬೈಲ್‌ಗಳಿವೆ. ವಾಟ್ಸ್‌ಆ್ಯಪ್, ಯುಟ್ಯೂಬ್ ಮತ್ತು ಅಂತರ್ಜಾಲ ತಾಣಗಳಲ್ಲಿ ಕಾಣಸಿಗುವ ಮಾಹಿತಿಗಳಲ್ಲಿ ಯಾವುದು ವಿಶ್ವಾಸಾರ್ಹ ಮತ್ತು ಯಾವುದು ತಪ್ಪು ಮಾಹಿತಿ ಎಂದು ವಿವೇಚಿಸುವ ಸಾಮರ್ಥ್ಯವೇ ಇಲ್ಲದ ಮಕ್ಕಳನ್ನೂ ತಲುಪತೊಡಗಿರುವ ದ್ವೇಷ ರಾಜಕೀಯದ ಸರಕಿನಿಂದ ಅವರನ್ನು ದೂರವಿರಿಸುವ ಹೊಣೆಗಾರಿಕೆಯೂ ಇದೀಗ ಪೋಷಕರ ಹೆಗಲೇರಿದೆ.

ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಸಾರ್ವಜನಿಕ ಸಂವಾದದ ಕೇಂದ್ರಬಿಂದುವಾಗಿಸಲು, ಮಾಡಬೇಕಿರುವ ಕಸರತ್ತುಗಳನ್ನೆಲ್ಲ ಆಳುವವರು ಚಾಲ್ತಿಗೆ ತಂದಿದ್ದಾರೆ. ಪೋಷಕರು ಮೊದಲಿಗೆ ತಾವು ಈ ದಾಳಕ್ಕೆ ಬಲಿಯಾಗದೇ ಉಳಿಯುವುದಲ್ಲದೆ, ದ್ವೇಷದ ನಂಜು ತಮ್ಮ ಮಕ್ಕಳವರೆಗೂ ತಲುಪದಿರುವಂತೆ ನಿಯಂತ್ರಿಸಲು ಇರುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಜರೂರತ್ತು ಎದುರಾಗಿದೆ.

ಉತ್ತಮ ಬದುಕು ಕಟ್ಟಿಕೊಳ್ಳಲು ಯುವ ಸಮೂಹಕ್ಕೆ ಅಗತ್ಯವಿರುವ ಉದ್ಯೋಗಾವಕಾಶ-ಗಳ ಸೃಷ್ಟಿಗೆ ಪೂರಕವಾಗುವಂತಹ ನೀತಿಗಳನ್ನು ರೂಪಿಸಲು ಸೋಲುತ್ತಿರುವ ಆಳುವವರು, ಧಾರ್ಮಿಕ ವಿಷಯಗಳಿಗೆ ನೀಡುತ್ತಿರುವ ಮಹತ್ವವು ತಮ್ಮ ಮಕ್ಕಳ ಭವಿಷ್ಯದ ಮೇಲೆ ಯಾವ ರೀತಿಯ ಪರಿಣಾಮ ಉಂಟು ಮಾಡಬಹುದೆಂದು ಪರಿಶೀಲಿಸುವ ಸಂಯಮವನ್ನು ಪೋಷಕರು ತೋರಬೇಕಿದೆ. ಜಾತಿ-ಧರ್ಮಗಳ ಗೊಡವೆಯಿಲ್ಲದೆ ಶಾಲಾ ಕಾಲೇಜುಗಳಲ್ಲಿ ಎಲ್ಲರೊಂದಿಗೂ ಒಡನಾಡುವ ಮೂಲಕ ಕೂಡಿ ಬಾಳುವ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕಿದ್ದ ಮಕ್ಕಳ ತಲೆಗೆ ರಾಜಕಾರಣಿಗಳು ತುಂಬಲು ಹೊರಟಿರುವ ವಿಚಾರಗಳಾದರೂ ಎಂತಹವು ಎಂದು ಚಿಂತಿಸ-ಬೇಕಲ್ಲವೇ? ದ್ವೇಷಿಸುವುದನ್ನು ಕಲಿಸುವುದು ನಮ್ಮ ಆದ್ಯತೆಯಾಗಬೇಕೇ? ದ್ವೇಷದ ನಂಜು ಆವರಿಸಿದ ಸಮಾಜವನ್ನು ಮಕ್ಕಳಿಗೆ ಉಳಿಸಿ ಹೋದರೆ ಅವರ ನಾಳೆಗಳು ನೆಮ್ಮದಿಯಿಂದ ಕೂಡಿರಲು ಸಾಧ್ಯವೇ?

ಇದುವರೆಗೂ ಸಿನಿಮಾ ನಟರನ್ನೋ ಕ್ರಿಕೆಟ್ ಆಟಗಾರರನ್ನೋ ಅನುಸರಿಸಲು ಮುಂದಾಗುತ್ತಿದ್ದ ಮಕ್ಕಳಿಗೆ ಇದೀಗ ದ್ವೇಷಿಸುವುದನ್ನು ಕಲಿಸುವ ಭಾಷಣಕಾರರು ಮಾದರಿ ವ್ಯಕ್ತಿಗಳಾಗಿ ತೋರತೊಡಗಿರುವುದು ಆತಂಕಕಾರಿ ವಿದ್ಯಮಾನ. ತಮ್ಮ ಪ್ರಚೋದನಕಾರಿ ಭಾಷಣಗಳ ಮೂಲಕ ಮಕ್ಕಳ ಗಮನವನ್ನೂ ತಮ್ಮೆಡೆಗೆ ಬಹುಬೇಗ ಸೆಳೆದುಕೊಳ್ಳುವ ಸಾಮರ್ಥ್ಯವಿರುವ ವ್ಯಕ್ತಿಗಳೆಡೆಗೆ ಮಕ್ಕಳು ಆಕರ್ಷಿತರಾಗುವ ಸುಳಿವು ಸಿಕ್ಕರೆ, ಅವರಲ್ಲಿ ತಿಳಿವಳಿಕೆ ಮೂಡಿಸಲು ಪೋಷಕರು ಮುಂದಾಗಬೇಕು. ಹೀಗೆ ಮಾಡಲು ಮಕ್ಕಳಿಗಿಂತ ಮೊದಲು ದೊಡ್ಡವರು ಇಂತಹ ಸುಳ್ಳು, ದ್ವೇಷ ಹರಡುವ ವಿಚಾರಗಳಿಗೆ ಬೆನ್ನು ತೋರಬೇಕಲ್ಲವೇ?

‘The Silent Coup: A History of India's Deep State’ ಎಂಬ ಪುಸ್ತಕದ ಲೇಖಕ, ಪತ್ರಕರ್ತ ಜೋಸಿ ಜೋಸೆಫ್ ಅವರು ಸಂದರ್ಶನವೊಂದರಲ್ಲಿ ಹೇಳಿದ ಮಾತುಗಳು ಇಲ್ಲಿ ಮನನೀಯ: ‘ಆಳುವವರ ಕೆಂಗಣ್ಣಿಗೆ ಗುರಿಯಾಗುವ ಎಲ್ಲ ಸಾಧ್ಯತೆಗಳಿದ್ದರೂ ಇಂತಹದ್ದೊಂದು ಪುಸ್ತಕ ಬರೆಯಲು ನೀವು ಏಕೆ ನಿರ್ಧರಿಸಿದಿರಿ’ ಎಂಬ ಸಂದರ್ಶಕರ ಪ್ರಶ್ನೆಗೆ, ‘ನನ್ನ ಮಗಳಿಗೆ ನಾನು ಎಂತಹ ಸಮಾಜವನ್ನು ಬಿಟ್ಟು ಹೋಗುತ್ತೇನೆ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಕಣ್ಣೆದುರೇ ವ್ಯವಸ್ಥೆ ಕುಸಿಯುತ್ತಿದ್ದಾಗಲೂ ಅದನ್ನು ತಡೆಯಲು ತನ್ನಿಂದ ಸಾಧ್ಯವಿರುವುದನ್ನು ಮಾಡದೇ ನನ್ನ ತಂದೆ ಸುಮ್ಮನೇ ತಮ್ಮ ಪಾಡಿಗೆ ತಾವಿದ್ದರಲ್ಲ ಎನ್ನುವ ಭಾವನೆ ಅವಳಲ್ಲಿ ಮೂಡದೇ ಇದ್ದರೆ ಅಷ್ಟು ಸಾಕು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮುಂದಿನ ಪೀಳಿಗೆಗೂ ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ’ ಎಂದಿದ್ದರು.

ರಾಜಕಾರಣಿಗಳು ಧರ್ಮಾಧಾರಿತ ದ್ವೇಷದ ದಾಳಗಳನ್ನು ಒಂದೊಂದಾಗಿಯೇ ಉರುಳಿಸುತ್ತ, ಜನರನ್ನು ಒಡೆದು ಆಳುವುದರಲ್ಲೇ ತಮ್ಮ ಯಶಸ್ಸು ಅಡಗಿದೆ ಎಂದು ಮನಗಂಡಿರುವ ಹೊತ್ತಿನಲ್ಲಿ, ತಾವು ಮಕ್ಕಳೆದುರು ಬಿಟ್ಟು ಹೋಗಲಿರುವ ಸಮಾಜ ಎಂತಹುದೆಂದು ಎಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

## ವಾಚಕರ ವಾಣಿ

### ಪಠ್ಯ ಮುಗಿಸುವ ಧಾವಂತದಲ್ಲಿ ಕಾಣದ ದೋಷ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಶುದ್ಧ ಕನ್ನಡ ಮತ್ತು ‘ಅ’ಕಾರ ‘ಹ’ಕಾರ ಉಚ್ಚಾರಣೆಯ ಬಗ್ಗೆ ಇತ್ತೀಚೆಗೆ ನೀಡಿದ ಹೇಳಿಕೆಯ ಮೇಲೆ ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ- ವಿಜಯಪುರ ಭಾಗದಲ್ಲಿ ಕಾರ‘ಣ’ ಅಕ್ಷರವನ್ನು ‘ನ’ ಕಾರವಾಗಿ ಉಚ್ಚಾರ ಮಾಡುತ್ತಾರೆ. ಪ್ರತೀ 30 ಕಿಲೊಮೀಟರ್‌ಗಳಂತೆ ಭಾಷೆಯ ಉಚ್ಚಾರಣೆಯಲ್ಲಿ, ಬಳಕೆಯಲ್ಲಿ ಬದಲಾವಣೆಯಾಗುತ್ತದೆ ಎಂದು ಭಾಷಾ ತಜ್ಞರು ಹೇಳುತ್ತಾರೆ.

‘ಅ’ಕಾರ, ‘ಹ’ಕಾರದ ಉಚ್ಚಾರಣೆ ಜೊತೆಗೆ ದೀರ್ಘಾಕ್ಷರಗಳು, ಹೊಟ್ಟೆ ಸೀಳುವ ಅಕ್ಷರಗಳನ್ನು ಬರೆಯುವಾಗ ಬಹಳಷ್ಟು ವಿದ್ಯಾರ್ಥಿಗಳು ಕಾಗುಣಿತ ದೋಷಗಳನ್ನು ಮಾಡುತ್ತಾರೆ ಎಂಬುದು ಹಲವರ ಅಭಿಪ್ರಾಯ. ಪ್ರಬಂಧ, ಪತ್ರಲೇಖನ ಮತ್ತು ಮೂರ್ನಾಲ್ಕು ವಾಕ್ಯಗಳಲ್ಲಿ ಬರೆಯಬೇಕಾದ ಉತ್ತರಗಳನ್ನೂ ವಿದ್ಯಾರ್ಥಿಗಳು ದೋಷಪೂರಿತವಾಗಿ ಬರೆಯುತ್ತಿದ್ದಾರೆ. ಬರವಣಿಗೆಗೆ ಹೆಚ್ಚು ಒತ್ತು ಕೊಡುತ್ತಾ ಹೋದರೆ, ಶೈಕ್ಷಣಿಕ ವರ್ಷದಲ್ಲಿನ ಪಠ್ಯ-ಸಾಗುವುದಿಲ್ಲವೆಂಬ ಬೇಸರ ಶಿಕ್ಷಕರ ವಲಯದಲ್ಲಿದೆ. ಎರಡು- ಮೂರು ದಶಕಗಳ ಹಿಂದೆ ಬರವಣಿಗೆ ಮತ್ತು ಓದಿಗೆ ಶಿಕ್ಷಕರು ಹೆಚ್ಚು ಒತ್ತು ನೀಡುತ್ತಿದ್ದರು. ಪಠ್ಯಪುಸ್ತಕದ ಎಲ್ಲಾ ಪಾಠಗಳನ್ನು ಮುಗಿಸುವ ಒತ್ತಡ ಇರಲಿಲ್ಲ. ಈ ಕಾರಣದಿಂದ ಆ ಕಾಲದಲ್ಲಿ ಅಭ್ಯಾಸ ಮಾಡಿದವರ ಬರವಣಿಗೆಯಲ್ಲಿ ಕಾಗುಣಿತ ದೋಷಗಳು ಕಡಿಮೆ ಕಂಡುಬರುತ್ತಿದ್ದವು.

**ಮಲ್ಲಪ್ಪ ಫ. ಕರೇಣ್ಣನವರ,** ಹನುಮಾಪುರ, ರಾಣೆಬೆನ್ನೂರು

### ಇಂಥವರಿಗೇ ಗೊತ್ತಾಗದಿದ್ದರೆ ಹೇಗೆ?

‘ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದರೆ...’ ಎಂಬ ಮಾತನ್ನು ಕಾಂಗ್ರೆಸ್ ಶಾಸಕ ಕೆ.ಆರ್.ರಮೇಶ್ ಕುಮಾರ್ ಅವರು ವಿಧಾನಸಭೆಯಲ್ಲಿ ಉಲ್ಲೇಖಿಸಿದ್ದಾರೆ. ಈ ಹಿಂದೆಯೂ ಅವರು ವಿವಾದಾತ್ಮಕ ಹೇಳಿಕೆಯೊಂದನ್ನು ವಿಸ್ತೃತವಾಗಿ ಹೇಳಿ, ಆಮೇಲೆ ಕ್ಷಮೆ ಯಾಚಿಸಿದ್ದಿದೆ. ಹೆಣ್ಣಿಗೆ ಇಂತಹ ಪರಿಹಾರವನ್ನು ಒಬ್ಬ ಗಂಡಸಷ್ಟೇ ಹೇಳಿರಲು ಸಾಧ್ಯ. ಯಾವುದೇ ಮಾತು ಮಹಿಳೆಯರ ಘನತೆ, ಗೌರವಕ್ಕೆ ಚ್ಯುತಿ ಬರುವಂತಿದ್ದರೆ, ಮುಜಗರ ಆಗುವಂತಿದ್ದರೆ, ಅದನ್ನು ಉದಾಹರಿಸುವುದು ಸೂಕ್ತವಲ್ಲ ಎಂಬುದನ್ನು ರಮೇಶ್ ಕುಮಾರ್ ಅವರಂಥವರು ಮರೆಯುವುದು ವಿಪರ್ಯಾಸ.

**ರಾಮಚಂದ್ರ ಎಸ್. ಕುಲಕರ್ಣಿ,** ಧಾರವಾಡ

### ಕೆಡದಿರಲಿ ಬಾಂಧವ್ಯದ ಬೆಸುಗೆ

ಒಂದು ನಾಡಿನ ಭಾವಕೋಶದ ಸಂಕೇತವಾದ ಬಾವುಟವನ್ನು ಸುಟ್ಟು ಪ್ರತಿಭಟನೆ ಮಾಡುವುದು ಸರಿಯಲ್ಲ. ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಿದರೆ ಭಾವೈಕ್ಯ ಉಳಿಯುವುದಾದರೂ ಹೇಗೆ? ಕೆಲ ಮರಾಠಿ ಭಾಷಿಕರಿಗಂತೂ ಇದೊಂದು ಚಟವಾಗಿ ಹೋಗಿದೆ. ಯಾರೋ ಕಿಡಿಗೇಡಿಗಳ ಕೃತ್ಯ ಎಂದು ನಿರ್ಲಕ್ಷಿಸಿದರೆ ಅದೇ ಕಿಡಿಯು ಭಾವನೆಗಳನ್ನು ಸುಡುವ ಬೆಂಕಿಯಾಗಿ ಪರಿವರ್ತನೆಯಾಗುವುದಿಲ್ಲವೇ? ಆಗ ಬಾಂಧವ್ಯದ ಬೆಸುಗೆ ಉಳಿಯುವುದಾದರೂ ಹೇಗೆ? ಇಂತಹ ಆಘಾತಕಾರಿ ವಿಷಯಗಳನ್ನು ಪ್ರಚೋದಿಸುವವರ ವಿರುದ್ಧ ಆಡಳಿತಾರೂಢರು ಕೂಡಲೇ ಕ್ರಮ ಜರುಗಿಸಿ ನಿಯಂತ್ರಿಸಿದರೆ, ಮುಂದೆ ಸಂಭವಿಸಬಹುದಾದ ಅವಘಡಗಳನ್ನು ತಪ್ಪಿಸಬಹುದು.

**ಮಹಾಂತೇಶ್ ಬಿ. ನಿಟ್ಟೂರ್,** ದಾವಣಗೆರೆ

### ಹಿಂದಿನ ಶಿಕ್ಷಣ ಪದ್ಧತಿಯೇ ಜಾರಿಗೆ ಬರಲಿ!

ಕಾಲೇಜಿಗೆ ಸೇರಿದ ಮಕ್ಕಳಿಗೂ ಸರಿಯಾಗಿ ಕಾಗುಣಿತ ಬಾರದಿರುವುದನ್ನು ಸಿಬಂತಿ ಪದ್ಮನಾಭ ತಮ್ಮ ಲೇಖನದಲ್ಲಿ (ಸಂಗತ, ಡಿ. 17) ಪ್ರಸ್ತಾಪಿಸಿದ್ದಾರೆ. ಹಿಂದೆ ಒಂದನೇ ತರಗತಿಯಿಂದಲೇ ಮಕ್ಕಳಿಗೆ ಕನ್ನಡ ಅಕ್ಷರಮಾಲೆಯ ಎಲ್ಲಾ ಅಕ್ಷರಗಳು, ಕಾಗುಣಿತ, ಮಗ್ಗಿಯನ್ನು ಕರಾರುವಾಕ್ಕಾಗಿ ಕಲಿಸುವ ಪ್ರಯತ್ನಗಳು ನಡೆಯುತ್ತಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ, ಶಾಲೆಗಳಿಂದ ಹೊರಗುಳಿಯುವ ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲು ‘ನಲಿ ಕಲಿ’ ಯೋಜನೆಯನ್ನು ಜಾರಿಗೆ ತಂದು ಅಕ್ಷರ, ಕಾಗುಣಿತ, ಮಗ್ಗಿಗಳನ್ನು ಪ್ರಾಥಮಿಕ ಹಂತದಲ್ಲಿಯೇ ಕಲಿಸುವ ಹಳೆಯ ಪದ್ಧತಿಗೆ ಎಳ್ಳುನೀರು ಬಿಟ್ಟಾಯಿತು! ಮಕ್ಕಳನ್ನು ಒಂದರಿಂದ ಒಂಬತ್ತನೇ ತರಗತಿವರೆಗೆ ಪಾಸು ಮಾಡುತ್ತಾ ಹೋಗಬೇಕೆನ್ನುವ ಸರ್ಕಾರದ ನಿಯಮವೂ ಅವರು ಕಲಿಕೆಯಲ್ಲಿ ಹಿಂದುಳಿಯುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಯಾವಾಗಲೂ ಪ್ರಾಥಮಿಕ ಶಿಕ್ಷಣವು ಮಕ್ಕಳ ಕಲಿಕೆಗೆ ಅಡಿಪಾಯ ಇದ್ದಂತೆ. ಆ ವೇಳೆಯಲ್ಲಿ ಅವರು ಏನನ್ನು ಕರಾರುವಾಕ್ಕಾಗಿ ಕಲಿಯುತ್ತಾರೋ ಅದೇ ಅವರ ಜೀವನದ ಕೊನೆಯವರೆಗೂ ಉಳಿಯುತ್ತದೆ. ಹಾಗಾಗಿ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಹಿಂದಿನ ಶಿಕ್ಷಣ ಪದ್ಧತಿಯೇ ಜಾರಿಗೆ ಬರಬೇಕು.

**ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮತ್ತೂರು, ಕೊಪ್ಪ

### ಹೇಳಿಕೆಯ ಸದುದ್ದೇಶ ಗ್ರಹಿಸದವರು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ‘ಅ’ಕಾರ, ‘ಹ’ಕಾರದ ಬಗ್ಗೆ ನೀಡಿದ ಒಂದು ಹೇಳಿಕೆಗೆ ಎಷ್ಟೊಂದು ಟೀಕೆ ಟಿಪ್ಪಣಿಗಳು ಪುಂಖಾನುಪುಂಖವಾಗಿ ಬಂದವೇ ಹೊರತು, ಅವರ ಹೇಳಿಕೆಯ ಸದುದ್ದೇಶವನ್ನು ಯಾರೂ ಗ್ರಹಿಸಲಿಲ್ಲ.

ಈಗ ಯಾರಿಗೂ ಏನೂ ಬೇಕಾಗಿಲ್ಲ. ಕೇವಲ ಮೋಜು, ಮಸ್ತಿ, ಹಣ, ಅಧಿಕಾರ ಅಷ್ಟೇ. ಭಾಷೆಯಂತೂ ಯಾರಿಗೂ ಬೇಡ. ಕಾಗುಣಿತ, ವ್ಯಾಕರಣ, ಮಗ್ಗಿ ಇವೆಲ್ಲಾ ಕೇವಲ ಗತಕಾಲದ ವೈಭವಗಳು. ಈಗಿನ ಮಕ್ಕಳಿಗೆ ತಾತ, ಅಜ್ಜಿ ಕಾಗುಣಿತ, ಮಗ್ಗಿ ಹೇಳಿಕೊಡಲು ಹೋದರೆ, ಮಕ್ಕಳು ಬಿಡಿ ಅವರ ಅಪ್ಪ ಅಮ್ಮಂದಿರಿಂದಲೇ ಪ್ರತಿರೋಧ ಬರುತ್ತದೆ. ಶಿಕ್ಷಕರು ಸಹ ಮಕ್ಕಳಿಗೆ ತಾವು ಹೇಳಿಕೊಟ್ಟದ್ದನ್ನು ಮಾತ್ರ ಕಲಿಸಬೇಕು, ಇಲ್ಲದಿದ್ದರೆ ಮಕ್ಕಳಿಗೆ ಗೊಂದಲವಾಗುತ್ತದೆ ಎನ್ನುತ್ತಾರೆ. ಯಾಕೆಂದರೆ ಇವೆಲ್ಲಾ ಅಂಕ, ರ‍್ಯಾಂಕ್ ಪಡೆಯಲು ಸಹಕಾರಿಯಲ್ಲ ಮತ್ತು ಬೇಕಾಗಿಲ್ಲ.

ಈಗ ಪರೀಕ್ಷೆಗಳಲ್ಲಿ ಕೂಡ ಹೆಚ್ಚು ಬರೆಯುವ ಗೋಜೇ ಇಲ್ಲ. ಕೇವಲ ಬಹು ಆಯ್ಕೆಯ ಪ್ರಶ್ನೆಗಳ ಉತ್ತರಕ್ಕೆ ಟಿಕ್ ಮಾಡಬೇಕಾಗಿರುತ್ತದೆ. ಮೊಬೈಲ್‌ಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸ್ವರಗಳನ್ನು ಬಿಟ್ಟು ಸಾಂಕೇತಿಕವಾಗಿ ಬರೆಯುವುದು, The ಬದಲು d ಎಂಬಂತೆ ಸಂಕ್ಷೇಪಿಸಿ ಬರೆಯುವುದು, ಕನ್ನಡವನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಬರೆಯುವುದು, ಲೆಕ್ಕ ಹಾಕಲು ಕ್ಯಾಲ್ಕ್ಯುಲೇಟರ್ ಉಪಯೋಗಿಸುವುದು ನಡೆದಿದೆ. ಪರಿಸ್ಥಿತಿ ಹೀಗಿರುವಾಗ ‘ಅ’ಕಾರ, ‘ಹ’ಕಾರ, ಕಾಗುಣಿತ, ಮಗ್ಗಿ, ವ್ಯಾಕರಣ ಇವೆಲ್ಲಾ ಯಾರಿಗೆ ಬೇಕಾಗಿದೆ?

**ಟಿ.ವಿ.ಬಿ.ರಾಜನ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

### ಬಹುರೂಪಿ ರಂಗಾಯಣವನ್ನು ಏಕರೂಪಕ್ಕೆ ಇಳಿಸುವ ಪ್ರಯತ್ನ ಆಗುತ್ತಿದೆಯೇ?

# ಯಾರನ್ನೋ ಆಹ್ವಾನಿಸದಂತೆ ನಿರ್ಬಂಧ ಎಷ್ಟು ಸರಿ?

● ಬಿ.ವಿ.ರಾಜಾರಾಂ

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶ ಇರುತ್ತದೆ. ಎರಡು ದಶಕಗಳ ಇತಿಹಾಸವಿರುವ 'ಬಹುರೂಪಿ'ಯಲ್ಲಿ ಅನೇಕ ಮಂದಿ ಅತಿಥಿಗಳಾಗಿ ಪಾಲ್ಗೊಂಡಿದ್ದಾರೆ. ಅವರನ್ನೆಲ್ಲ, ಅವರು ಎಡ– ಇವರು ಬಲ ಎಂದು ಪಟ್ಟ ಮಾಡಿಕೊಂಡು ಕೂರುವುದಕ್ಕೆ ಆಗುತ್ತದೆಯೇ? ಉತ್ಸವದ ವಸ್ತುವಿಷಯಕ್ಕೆ ತಕ್ಕಂತೆ ಅತಿಥಿಗಳನ್ನು ಆಹ್ವಾನಿಸಲಾಗುತ್ತದೆ

ನಮ್ಮ ರಸ್ತೆಗೆ ಅಡ್ಡವಾಗಿ ವಾಹನವೊಂದು ನಿಂತಿರುತ್ತದೆ. 'ಪಕ್ಕಕ್ಕೆ ಹೋಗಪ್ಪ' ಎಂದು ಸಾವಧಾನವಾಗಿ ಹೇಳುತ್ತೇವೆಯೇ? ಜೋರಾಗಿಯೇ ಗದರುತ್ತೇವೆ. ಅವರೇನು ಕಡಿಮೆ? ಗಟ್ಟದನಿಯಲ್ಲಿಯೇ ಗಲಾಟೆ ಎಬ್ಬಿಸುತ್ತಾರೆ. ಆಗ ಇನ್ಯಾರಾದರೂ ಬಂದು 'ಹೋಗ್ರಿ ಗಲಾಟೆ ಮಾಡಬೇಡಿ' ಎಂದಾಗ ಇಬ್ಬರೂ ತಮ್ಮ ಪಾಡಿಗೆ ತಮ್ಮ ತಮ್ಮ ದಾರಿ ಹಿಡಿಯುತ್ತಾರೆ. ಮೈಸೂರಿನ ರಂಗಾಯಣ ಪ್ರತಿವರ್ಷ ಆಯೋಜಿಸುವ 'ಬಹುರೂಪಿ' ಸಾಂಸ್ಕೃತಿಕ ಉತ್ಸವಕ್ಕೆ ಈ ಬಾರಿ ಅತಿಥಿಗಳನ್ನು ಆಹ್ವಾನಿಸುವ ವಿಷಯದಲ್ಲಿ ಉದ್ಭವವಾಗಿರುವ ವಿವಾದವೂ ಇದೇ ಮಾದರಿಯದು.

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು 'ಬಹುರೂಪಿ'ಗೆ ಚಕ್ರವರ್ತಿ ಸೂಲಿಬೆಲೆ ಮತ್ತು ಮಾಳವಿಕಾ ಅವಿನಾಶ್ ಅವರನ್ನು ಅತಿಥಿಗಳನ್ನಾಗಿ ಆಯ್ಕೆ ಮಾಡಿರುವುದಕ್ಕೆ ರಂಗಭೂಮಿಯ ಕೆಲವು ಸ್ನೇಹಿತರು ವಿರೋಧ ವ್ಯಕ್ತಪಡಿಸಿದ್ದಾರೆ. ಅವರನ್ನು ಕರೆಯಬಾರದು ಎಂದು ಪಟ್ಟುಹಿಡಿದಿದ್ದಾರೆ. ಆದರೆ, ಯಾಕೆ ಕರೆಯಬಾರದು ಎನ್ನುವುದು ಇಲ್ಲಿ ಪ್ರಶ್ನೆ. ಅವರೇನು ಅಪರಾಧಿಗಳೇ? ಇಬ್ಬರೂ ನಮ್ಮವರೇ ಆದ ಕಲಾವಿದರು, ಸಾಹಿತ್ಯ ಚಿಂತಕರು. ಅಂತಹವರನ್ನು ಕರೆಯಲೇಬಾರದು ಎನ್ನುವುದಾದರೆ ನೀವು ಅವರನ್ನು ನಿರ್ಬಂಧಿಸಿದಂತೆ ಆಗುತ್ತದೆ. ಹೀಗೆ ಮಾಡುವುದು ಎಷ್ಟು ಸರಿ?

ಪ್ರಸನ್ನ, ಲಿಂಗದೇವರು ಹಳೆಮನೆ, ಬಸವಲಿಂಗಯ್ಯ, ಜನ್ನಿ ಇವರೆಲ್ಲ ಮೈಸೂರು ರಂಗಾಯಣದ ನಿರ್ದೇಶಕರಾಗಿದ್ದವರು. ರಾಷ್ಟ್ರೀಯ ನಾಟಕ ಶಾಲೆಯಲ್ಲಿ (ಎನ್‌ಎಸ್‌ಡಿ) ಕಲಿತು ಬಂದವರು. 'ಸಮುದಾಯ' ತಂಡದ ಹೊಣೆ ಹೊತ್ತು ರಂಗಭೂಮಿಯಲ್ಲಿ ದುಡಿದವರು. ಅದು ಎಡಪಂಥೀಯ ನಿಲುವನ್ನು ಹೊಂದಿದ್ದಂತಹ ಒಂದು ರಂಗತಂಡ ಎನ್ನುವುದು ರಾಜ್ಯದ ರಂಗಕರ್ಮಿಗಳಿಗೆಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಅದರಿಂದ ನಮಗೆ ಯಾರಿಗೂ ಏನೂ ತೊಂದರೆ ಆಗಲಿಲ್ಲ, ನಾವ್ಯಾರೂ ಅದಕ್ಕೆ ತಗಾದೆಯನ್ನೂ ತೆಗೆಯಲಿಲ್ಲ. ನಮ್ಮ ನಮ್ಮ ಪಾಡಿಗೆ ನಾವು ನಾಟಕಗಳನ್ನು ಮಾಡುತ್ತಾ ಬಂದೆವು. ಒಗ್ಗೂಡಿಯೂ ಕೆಲಸ ಮಾಡಿದೆವು.

ಅವರೆಲ್ಲರೂ ನಿರ್ದೇಶಕರಾಗಿದ್ದಾಗಿನ ಅವಧಿಯಲ್ಲಿ ತಮಗೆ ಗೊತ್ತಾದಂತೆ ಕೆಲಸಗಳನ್ನು ಮಾಡಿದ್ದಾರೆ. ಬೇಕಾದವರನ್ನು 'ಬಹುರೂಪಿ'ಗೆ ಅತಿಥಿಗಳನ್ನಾಗಿ ಕರೆಸಿದ್ದಾರೆ. ಆಗೆಲ್ಲಾ ಈಗಿನಂತೆ ಎಡಪಂಥೀಯ, ಬಲಪಂಥೀಯ ಎಂಬಂಥ ಸಂದರ್ಭಗಳೇ ಸೃಷ್ಟಿಯಾಗಿದ್ದಿಲ್ಲ. ಅವರನ್ನು ಕರೆಸಿದ್ಯಾಕೆ, ಇವರನ್ನು ಕರೆಸುವುದಿಲ್ಲವೇಕೆ ಎಂದೆಲ್ಲ ಬಲಪಂಥೀಯರು ಯಾರೂ ಅವರಿಗೆ ತಾಕೀತು ಮಾಡಲಿಲ್ಲ. ಕರೆಸಿದವರನ್ನು ಒಪ್ಪಿಕೊಂಡು ಅವರ ಮಾತನ್ನು ಕೇಳಿದ್ದಾರೆ. ಈಗ ಮಾತ್ರ ಯಾಕೆ ಇಂತಹ ವಿರೋಧ?

ಅಡ್ಡಂಡ ಕಾರ್ಯಪ್ಪ ಅವರ ನೇತೃತ್ವದಲ್ಲಿ ಕಳೆದ ವರ್ಷ 'ಗಾಂಧಿ' ವಸ್ತುವಿಷಯವನ್ನಿಟ್ಟು ನಡೆಸಿದ 'ಬಹುರೂಪಿ' ಎಲ್ಲರ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಯಿತು. ಆದರೆ ಈ ವರ್ಷ ಕಾರ್ಯಪ್ಪ ಅವರು ಪತ್ರಿಕಾಗೋಷ್ಠಿಯಲ್ಲಿ ಅತಿಥಿಗಳ ಹೆಸರುಗಳನ್ನು ಪ್ರಸ್ತಾಪಿಸುತ್ತಿದ್ದಂತೆಯೇ ವಿವಾದದ ಕಿಡಿ ಹೊತ್ತಿದೆ. ಅವರನ್ನು ಕರೆಸಿದ ಮಾತ್ರಕ್ಕೆ ರಂಗಾಯಣವೇನೂ ಮುಳುಗಿಹೋಗುವುದಿಲ್ಲ, ಕಾರ್ಯಕ್ರಮಗಳು ನಿಲ್ಲುವುದಿಲ್ಲ, ಚಟುವಟಿಕೆಗಳು ಎಂದಿನಂತೆ ಸಾಗುವುದು ತಪ್ಪುವುದಿಲ್ಲ.

ಇಂತಹವರನ್ನೆಲ್ಲ ಕರೆಸಬೇಡಿ ಎಂದು ಈಗ ನೀವು ಹೇಳುತ್ತಾ ಹೋದರೆ, ಮುಂದೆ ಯಾರನ್ನು ಕರೆಸಬೇಕು ಎಂಬುದನ್ನೂ ಹೇಳುತ್ತೀರಿ. ಆಗ ನಿಮ್ಮನ್ನೆಲ್ಲಾ ಕರೆದೇ ಎಲ್ಲವನ್ನೂ ತೀರ್ಮಾನಿಸಬೇಕಾಗುತ್ತದೆ. ಅದರ ಅಗತ್ಯ ಇದೆಯೇ?

ಹೇಳಿಕೇಳಿ ರಂಗಭೂಮಿ ಎಲ್ಲರೂ ಜೊತೆಗೂಡಿ ಕೆಲಸ ಮಾಡುವಂತಹ ಕ್ಷೇತ್ರ. ಎಲ್ಲರನ್ನೂ ಸಮರ್ಥಿಸಿಕೊಂಡು, ಒಗ್ಗೂಡಿಸಿಕೊಂಡು ಪ್ರೀತಿ, ವಿಶ್ವಾಸದಿಂದ ಕೆಲಸ ಮಾಡುವಂಥವರು ನಾವು. ನಮ್ಮ 'ಕಲಾಗಂಗೋತ್ರಿ' ತಂಡವನ್ನೇ ಉದಾಹರಿಸುವುದಾದರೆ, 50 ವರ್ಷಗಳಿಂದಲೂ ನಾಟಕಗಳನ್ನು ಮಾಡುತ್ತಾ ಬಂದಿದ್ದೇವೆ, 'ಸಮುದಾಯ'ದ ಜೊತೆಗೂಡಿಯೂ ಕೆಲಸ ಮಾಡಿದ್ದೇವೆ. ಆ ಸ್ನೇಹಿತರೆಲ್ಲ ನಮ್ಮ ತಂಡದಲ್ಲಿ ಅಭಿನಯ ಮಾಡಿದ್ದಾರೆ, ನಮ್ಮ ಕಲಾವಿದರು ಅವರ ತಂಡದಲ್ಲಿ ಅಭಿನಯಿಸಿದ್ದಾರೆ. ಆದರೆ ಈಗ ಮಾತ್ರ ಇಷ್ಟೊಂದು ಅಸಹನೆ ವ್ಯಕ್ತಪಡಿಸುವ, ಸಿಟ್ಟಿಗೇಳುವ ಅಗತ್ಯವೇನಿದೆ ಎಂಬುದೇ ಅರ್ಥವಾಗದ ಸಂಗತಿ.

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶ ಇರುತ್ತದೆ. ಎರಡು ದಶಕಗಳ ಇತಿಹಾಸವಿರುವ 'ಬಹುರೂಪಿ'ಯಲ್ಲಿ ಅನೇಕ ಮಂದಿ ಅತಿಥಿಗಳಾಗಿ ಪಾಲ್ಗೊಂಡಿದ್ದಾರೆ. ಅವರನ್ನೆಲ್ಲ, ಅವರು ಎಡ– ಇವರು ಬಲ ಎಂದು ಪಟ್ಟ ಮಾಡಿಕೊಂಡು ಕೂರುವುದಕ್ಕೆ ಆಗುತ್ತದೆಯೇ? ಉತ್ಸವದ ವಸ್ತುವಿಷಯಕ್ಕೆ ತಕ್ಕಂತೆ ಅತಿಥಿಗಳನ್ನು ಆಹ್ವಾನಿಸಲಾಗುತ್ತದೆ.

ಮಾಳವಿಕಾ ಕಲಾವಿದರು, ವಕೀಲರು. ಕರ್ನಾಟಕ ಮಾತ್ರವಲ್ಲದೆ ದೇಶದ ವಿಷಯಗಳೆಲ್ಲವನ್ನೂ ಅರಿತವರು. ಕಲಾವಿದರೆಂದರೆ ರಂಗಭೂಮಿಯವರೇ ಆಗಿರಬೇಕು ಎಂದೇನಿಲ್ಲ. ಸೂಲಿಬೆಲೆ ಅವರು ಸಾಂಸ್ಕೃತಿಕ ಚಿಂತಕರು. ಅವರ ಮಾತಿನ ಧಾಟಿ, ವಸ್ತುವಿಷಯ ಬೇರೆ ಇರಬಹುದು. ಆದರೆ ಅವರು ಏನು ಹೇಳುತ್ತಾರೆ ಎನ್ನುವುದನ್ನು ನೀವು ಇನ್ನೂ ಕೇಳಿಯೇ ಇಲ್ಲವಲ್ಲ? ಅವರ ಅಭಿಪ್ರಾಯ ಮಂಡನೆಗೆ ಅವಕಾಶವನ್ನೇ ಕೊಡದೆ, ಬರಲೇಬೇಡಿ, ಸೇರಿಸಲೇಬೇಡಿ, ಕರೆಯಲೇಬೇಡಿ ಎನ್ನುವುದೇಕೆ?

ನಮ್ಮವರೇ ಆಗಿ ನಮ್ಮ ನಡುವೆಯೇ ಕೆಲಸ ಮಾಡುತ್ತಿರುವ ಅವರು, ಮಹತ್ವದ ಸ್ಥಾನಗಳಲ್ಲಿ ಇರುವಂಥವರು. ಅವರ ಪಾಡಿಗೆ ಅವರು ಬಂದು ಸಾಂಸ್ಕೃತಿಕ ಉತ್ಸವಕ್ಕೆ ಏನು ಬೇಕೋ ಅದನ್ನು ಹೇಳುತ್ತಾರೆ. ಕೇಳಿಸಿಕೊಳ್ಳಿ. ಕೇಳುವ ಒಂದು ಸಹನೆಯೂ ನಿಮಗೆ ಇಲ್ಲ ಎಂದರೆ ಕಷ್ಟವಾಗುತ್ತದೆ. ಯಾರ ಮೇಲೂ ಯಾರೂ ಯಾವುದೇ ರೀತಿಯ ಒತ್ತಾಯವನ್ನಂತೂ ಹೇರುವುದಿಲ್ಲ. ಕೇಳಲು ಇಷ್ಟವಿರುವವರು ಕೇಳಬಹುದು ಅಥವಾ ಅವರ ಪಾಡಿಗೆ ಉತ್ಸವದಲ್ಲಿ ಪಾಲ್ಗೊಂಡು ಹೋಗಬಹುದು. ಗಲಾಟೆ ಮಾಡುವ ಅವಶ್ಯಕತೆ ಇಲ್ಲ.

ರಂಗಭೂಮಿ ಎಲ್ಲ ಬಗೆಯ ಜನರಿಗೂ ಮುಕ್ತವಾದ ಕ್ಷೇತ್ರ. ಒಂದು ರಂಗತಂಡದಲ್ಲಿ ಇಂತಹವರೇ ಇರಬೇಕು, ನಿರ್ದಿಷ್ಟವಾಗಿ ಇಂತಹುದೇ ಕೆಲಸ ಮಾಡಬೇಕು ಎಂಬ ಯಾವ ನಿರ್ಬಂಧವೂ ಇರುವುದಿಲ್ಲ. ಒಂದು ತಂಡವಾಗಿ ನಾಟಕ ಮಾಡುವುದೊಂದೇ ನಮ್ಮ ಪರಮೋದ್ದೇಶ. ಉದಾಹರಣೆಗೆ, 'ಮುಖ್ಯಮಂತ್ರಿ' ನಾಟಕವನ್ನು ಸುಮಾರು 42 ವರ್ಷಗಳಿಂದಲೂ ಆಡುತ್ತಲೇ ಬಂದಿದ್ದೇವೆ. 750ಕ್ಕೂ ಹೆಚ್ಚು ಪ್ರದರ್ಶನ ಕಂಡಿರುವ ಅದರಲ್ಲಿ ಎಲ್ಲ ಬಗೆಯ ಕಲಾವಿದರೂ ಭಾಗವಹಿಸುತ್ತಾರೆ. ಎಲ್ಲೆಡೆ ಪ್ರದರ್ಶನಗಳು ನಡೆಯುತ್ತವೆ.

ಇನ್ನು 'ಬಹುರೂಪಿ'ಯಂತೂ ಮೂರ್ನಾಲ್ಕು ತಂಡಗಳಿಗೆ ಸೀಮಿತವಾದ ಭೂಮಿಕೆ ಅಲ್ಲವೇ ಅಲ್ಲ. ದೇಶದಾದ್ಯಂತ ನಾನಾ ಭಾಷೆಗಳ ಬಹಳಷ್ಟು ತಂಡಗಳು ಬಂದು ನಾಟಕ ಪ್ರದರ್ಶಿಸುತ್ತವೆ. ಬಹಳ ಉತ್ತಮವಾಗಿ ನಡೆಯುವಂತಹ ಈ ಬಹುದೊಡ್ಡ ಉತ್ಸವದಲ್ಲಿ ಯಾವ ಪಂಥದ ಮುಲಾಜಿಗೂ ಒಳಗಾಗದೆ ಇಡೀ ಮೈಸೂರಿನ ಜನ ಪಾಲ್ಗೊಳ್ಳುತ್ತಾರೆ. ಅವರೆಲ್ಲಾ ಸ್ವತಂತ್ರ ಆಲೋಚನೆಯುಳ್ಳ ನಾಗರಿಕರು. ಹೀಗಾಗಿ ಯಾರ ಮೇಲೆ ಯಾರೂ ಸಿದ್ಧಾಂತಗಳನ್ನು ಹೇರಲು ಸಾಧ್ಯವಿಲ್ಲ. ಅಂತಹ ಪ್ರಯತ್ನಕ್ಕೆ ಮುಂದಾದರೆ ಅವರು ಬರುವುದನ್ನೇ ನಿಲ್ಲಿಸುತ್ತಾರೆ. ಅತಿಥಿಗಳನ್ನು ಕರೆಯುವುದು ಸಿದ್ಧಾಂತಗಳನ್ನು ಹೇರಲು ಅಲ್ಲ ಮತ್ತು ಅದಕ್ಕಾಗಿ ನಾವು ಜಗಳ ಮಾಡಿಕೊಳ್ಳಬೇಕಾಗಿಯೂ ಇಲ್ಲ.

ಮಾವೊವಾದಿಗಳ ಬಗ್ಗೆ ಮಾತನಾಡುವಂತಹ ಸಂದರ್ಭ ಸಹ ಈಗ ಸೃಷ್ಟಿಯಾಗಿಲ್ಲ. ಮಾವೊ ಸಿದ್ಧಾಂತ ಹಳೆಯ ದಾಯಿತು. ಅಂತಹ ಸಿದ್ಧಾಂತಗಳೆಲ್ಲಾ ಬದಲಾಗಿ ಈಗ ಕಾರ್ಪೊರೇಟ್ ಸಿದ್ಧಾಂತ ಬಂದಿದೆ. ಬಹಳಷ್ಟು ಬದಲಾವಣೆ ಆಗಿದೆ. ಇಂಥ ಸಂದರ್ಭದಲ್ಲಿ ಮಾನವೀಯತೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾದುದು ನಮ್ಮ ಕರ್ತವ್ಯ.

ಉತ್ತಮ ವ್ಯವಸ್ಥೆಯ ನಡುವೆ ಆದ ಸಣ್ಣ ಫಜೀತಿಯು ಮಾತಿಗೆ ಮಾತು ಬೆಳೆದು ದೊಡ್ಡ ವಿವಾದವನ್ನು ಸೃಷ್ಟಿಸಿದೆ. 'ಓಮೈಕ್ರಾನ್' ಸಾಂಕ್ರಾಮಿಕದ ಕಾರಣದಿಂದ ಜನವರಿ ನಂತರ ಉತ್ಸವವನ್ನು ಆಯೋಜಿಸುವಂತೆ ಸರ್ಕಾರ ಸೂಚಿಸಿದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ, ಅಡ್ಡಂಡ ಕಾರ್ಯಪ್ಪ ಅವರು ಮೈಸೂರಿನ ಎಲ್ಲ ರಂಗತಂಡಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಕೂತು ಚರ್ಚಿಸಿ, ಸಮಾಧಾನಕರವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಒಳ್ಳೆಯದು.

ರಂಗಭೂಮಿ ಅಂದರೆ ಮೊದಲೇ ಗಟ್ಟದನಿ. ಕಿರುಚಾಡುತ್ತೇವೆ, ಕೂಗಾಡುತ್ತೇವೆ, ಹಾರಾಡುತ್ತೇವೆ. ಇದೆಲ್ಲ ಇದ್ದದ್ದೇ ನಮ್ಮ ಹಣೆಬರಹ. ರಂಗಭೂಮಿಯಲ್ಲಿ ಸಂಘರ್ಷ ಬಹಳ ಮುಖ್ಯ. ಆದರೆ ಅದೇನಿದ್ದರೂ ನಮ್ಮ ನಾಟಕಗಳಿಗೆ ಸೀಮಿತ. ಸಮಾರಂಭ ನಡೆಸುವಾಗ ಸಂಘರ್ಷದ ಅಗತ್ಯ ಇಲ್ಲ. ಇಲ್ಲಿ ಬೇಕಾಗಿರುವುದು ಸಮನ್ವಯ ಮಾತ್ರ. ಎಲ್ಲರ ಪ್ರಯತ್ನದಿಂದಷ್ಟೇ ಅದು ಕೈಗೂಡಲು ಸಾಧ್ಯ.

**ಲೇಖಕ:** ರಂಗಕಲಾವಿದ, ಮೈಸೂರು ರಂಗಾಯಣದ ಮಾಜಿ ನಿರ್ದೇಶಕ

**ನಿರೂಪಣೆ:** ನೀಲಾ ಎಂ.ಎಚ್.

---

ಪ್ರಜಾವಾಣಿ ಚರ್ಚೆ

# ಅತಿಥಿಗಳ ಆಹ್ವಾನ: ಹಟಮಾರಿತನ ಸಲ್ಲದು

● ಐ.ಕೆ. ಬೊಳುವಾರು

ರಂಗಭೂಮಿಯ ಬೆಳವಣಿಗೆಯ ದಿಸೆಯಲ್ಲಿ ಕಾರ್ಯಪ್ಪನವರು ಮಾಡುತ್ತಿರುವ ಎಲ್ಲ ವಿವಾದಗಳನ್ನೂ, ಎದುರಿಸುತ್ತಿರುವ ಆರೋಪಗಳನ್ನೂ, ಗಮನಿಸಿ ಸರ್ಕಾರ ಅವರನ್ನು ನಿರ್ದೇಶಕ ಸ್ಥಾನದಿಂದ ವಜಾಗೊಳಿಸಬೇಕು. ಅದಕ್ಕಿಂತ ಮೊದಲು ತಾವಾಗಿಯೇ ರಾಜೀನಾಮೆ ನೀಡಿ ಇನಿತಾದರೂ ರಂಗಭೂಮಿಯ ಗೌರವವನ್ನು ಉಳಿಸಿಕೊಳ್ಳುವುದು ಲೇಸು

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿವಾದಗಳ ಮೂಟೆಗಳನ್ನು ಮೈಮೇಲೆ ಬೀಳಿಸಿಕೊಂಡು ಅದರಿಂದ ಹೊರ ಬರುವ ಪ್ರಯತ್ನದಲ್ಲಿ ಇನ್ನಷ್ಟು ತಪ್ಪು ತಪ್ಪಾದ ಹೇಳಿಕೆಗಳನ್ನು ನೀಡುವುದರ ಮೂಲಕ ಸುದ್ದಿಯಲ್ಲಿದ್ದಾರೆ. ಅವರು ನಿರ್ದೇಶಕರಾಗಿ ಬಂದ ಬಳಿಕ ಎಲ್ಲ ನೀತಿ ನಿಯಮಗಳನ್ನು ದೂರತಳ್ಳಿ ತಮ್ಮಿಚ್ಛೆಯಂತೆ ಅಧಿಕಾರ ಚಲಾಯಿಸತೊಡಗಿದ್ದಾರೆ. ತಾವು ಇಂತಹ ಸಂಘಟನೆ, ಇಂತಹ ಪಕ್ಷದ ಕಾರ್ಯಕರ್ತ ಎಂದು ಹೇಳಿಕೊಳ್ಳುತ್ತಲೇ ಉಳಿದ ಎಲ್ಲರನ್ನೂ ನಿಂದಿಸುವ ರಭಸದಲ್ಲಿ ತಪ್ಪುಗಳ ಸಂಖ್ಯೆಗಳನ್ನು ಹೆಚ್ಚಿಸುತ್ತಲೇ ಹೋಗಿದ್ದಾರೆ.

ಕಾರ್ಯಪ್ಪರ ಕಾರ್ಯವೈಖರಿಯನ್ನು ಅವಲೋಕಿಸುವ ಮೊದಲು ರಂಗಾಯಣ ಮೈಸೂರು ನಡೆದು ಬಂದ ದಾರಿ ಮತ್ತು ರಂಗಭೂಮಿಯ ಅಭಿವೃದ್ಧಿಗೆ ರಂಗಾಯಣದ ಈ ಹಿಂದಣ ನಿರ್ದೇಶಕರು ಕೈಗೊಂಡ ಕ್ರಮಗಳನ್ನೂ ಗಮನಿಸಬೇಕು. ಆಧುನಿಕ ರಂಗಭೂಮಿಗೆ ರೆಪರ್ಟರಿ ನೀಡಬಹುದಾದ ಬಹುಮುಖಿ ಸಾಧ್ಯತೆಗಳ ಬಗ್ಗೆ ಅಪಾರ ಅರಿವಿದ್ದ ಬಿ.ವಿ. ಕಾರಂತರು ಕರ್ನಾಟಕದಾದ್ಯಂತ ಸುತ್ತಾಟ ನಡೆಸಿ 25 ಕಲಾವಿದರನ್ನು ಆಯ್ಕೆ ಮಾಡುತ್ತಾರೆ. ಅವರಿಗೆ ನಿರಂತರ ತರಬೇತಿ ಕೊಡುವುದರ ಮೂಲಕ ಅವರೆಲ್ಲರನ್ನೂ ಅತ್ಯುತ್ತಮ ಕಲಾವಿದರನ್ನಾಗಿ ಮಾಡುತ್ತಾರೆ.

ಬಿ.ವಿ. ಕಾರಂತರ ನಂಬುಗೆಯಂತೆ ಈ ರಂಗ ಕಲಾವಿದರು ಯಾವತ್ತೂ ರಂಗಭೂಮಿಯ ಬೆಳವಣಿಗೆಗೆ ನಿಷ್ಠೆಯಿಂದ ಕೆಲಸ ಮಾಡಬೇಕೇ ಹೊರತು ಸಂಬಳದ ಹಣಕ್ಕಾಗಿ ಅಲ್ಲ ಎಂದು ಪ್ರತಿಪಾದಿಸುತ್ತಾರೆ. ರಂಗಾಯಣದ ಕಲಾವಿದರನ್ನು ಜಗದಗಲದ ಅರಿವು ಮೂಡಿಸುವುದಕ್ಕಾಗಿ ವಿದೇಶಗಳಿಗೂ ಕರೆದೊಯ್ಯುತ್ತಾರೆ. ಕೆಲಸ, ಸಂಬಳ ಏರಿಕೆ, ಭದ್ರತೆ ಇತ್ಯಾದಿ ವಿಚಾರಗಳಲ್ಲಿ ಕಾರಂತರಿಗೂ ನಟ, ನಟಿಯರಿಗೂ ಮನಸ್ತಾಪ ಉಂಟಾಗುತ್ತದೆ. ಕಾರಂತರು ಬೇಸರದಿಂದಲೇ ರಂಗಾಯಣ ತೊರೆದು ಹೊರ ಬರುತ್ತಾರೆ.

ಕಾರಂತರು ರಂಗಾಯಣ ತೊರೆದರು ಎಂದು ರಂಗಾಯಣ ತನ್ನ ಚಟುವಟಿಕೆ ನಿಲ್ಲಿಸುವುದಿಲ್ಲ. ನಂತರ, ಸಿ. ಬಸವಲಿಂಗಯ್ಯ ನಿರ್ದೇಶಕರಾಗುತ್ತಾರೆ. ಹೊಸಬಗೆಯ ರಂಗ ಪ್ರಯೋಗಗಳನ್ನು ನಡೆಸುತ್ತಾರೆ. ಇವರ ಅವಧಿಯಲ್ಲಿ ನಡೆಸಿದ ಚಿಣ್ಣರ ಮೇಳಗಳು, ಮಲೆಗಳಲ್ಲಿ ಮದುಮಗಳು ಅಂತಹ ದೀರ್ಘಾವಧಿ ರಂಗ ಪ್ರಯೋಗಗಳು ಜನ ಮೆಚ್ಚುಗೆ ಗಳಿಸುತ್ತವೆ. ರಾಷ್ಟ್ರದಾದ್ಯಂತ ಹೆಸರಾಗುತ್ತದೆ.

ನಂತರ ಬಂದ ಪ್ರಸನ್ನ ತನ್ನದೇ ಆದ ರೀತಿಯ ಕೆಲಸ ಕಾರ್ಯಗಳ ಮೂಲಕ ರಂಗಾಯಣವನ್ನು ಇನ್ನಷ್ಟು ಆಕರ್ಷಕಗೊಳಿಸಿದರು. ಇಂದಿಗೂ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆರಂಭವಾಗುವುದಕ್ಕೆ ಪ್ರಸನ್ನರೇ ಕಾರಣವೆಂದು ಹೇಳಬಹುದು. ಹೀಗಾಗಿ ಕನ್ನಡದ ಪ್ರೇಕ್ಷಕರಿಗೆ ಅದರಲ್ಲಿಯೂ ಮುಖ್ಯವಾಗಿ ಮೈಸೂರಿನ ಪ್ರೇಕ್ಷಕರಿಗೆ ರಾಷ್ಟ್ರದ ಅತ್ಯುತ್ತಮ ರಂಗಪ್ರಯೋಗಗಳನ್ನು ನೋಡುವ ಅವಕಾಶ ಉಂಟಾಗಿದೆ. ಭಾರತೀಯ ರಂಗಭೂಮಿಯ ನಿರ್ದೇಶಕರನ್ನು, ನಾಟಕಕಾರರನ್ನು ರಂಗಾಯಣಕ್ಕೆ ಆಹ್ವಾನಿಸಿ ಮೈಸೂರಿಗರು ಅವರೊಂದಿಗೆ ಮುಕ್ತವಾಗಿ ಮಾತುಕತೆ ನಡೆಸುವ ಹಾಗೆ ಮಾಡುತ್ತಾರೆ. ಈ ಎಲ್ಲ ಚಟುವಟಿಕೆಗಳಿಗೆ ರಂಗಸಮಾಜ ಮತ್ತು ಸರ್ಕಾರ ಬೆಂಬಲ ನೀಡಿದೆ ಎನ್ನುವುದನ್ನು ಮರೆಯಬಾರದು. ಪ್ರಸನ್ನ ಅವಧಿಯ ಬಳಿಕ ಬಂದ ಚಿದಂಬರರಾವ್ ಜಂಬೆ, ಬಿ.ವಿ. ರಾಜಾರಾಂ, ಲಿಂಗದೇವರು ಹಳೆಮನೆ, ಕಾ.ತ.ಚಿಕ್ಕಣ್ಣ, ಜನಾರ್ದನ (ಜನ್ನಿ) ಭಾಗೀರಥಿ ಬಾಯಿ ಕದಂ ತಮ್ಮ ಆಡಳಿತಾವಧಿಯಲ್ಲಿ ತಮ್ಮದೇ ಆದ ಬಗೆಯಲ್ಲಿ ಎಲ್ಲರೊಡನೆಯೂ ಮಾತನಾಡುತ್ತಾ ಹೊಸಬಗೆಯ ರಂಗಪ್ರಯೋಗಗಳನ್ನು ನಡೆಸಿದ್ದಾರೆ.

ಈ ನಿರ್ದೇಶಕರೆಲ್ಲರೂ ತಮ್ಮ ಆಡಳಿತಾವಧಿಯಲ್ಲಿ ತಾವೂ ರಂಗಾಯಣಕ್ಕೆ ನಾಟಕ ನಿರ್ದೇಶಿಸಿದ್ದಲ್ಲದೇ ಪ್ರಸಿದ್ಧ ರಂಗ ನಿರ್ದೇಶಕರನ್ನು ಕರೆಸಿ ರಂಗ ಚಟುವಟಿಕೆಗಳನ್ನು ಮುನ್ನಡೆಸಿದ್ದರು. ಎಲ್ಲರಿಗೂ ತಮ್ಮದೇ ಆದ ರಾಜಕೀಯ ಚಿಂತನೆಗಳು, ಒಲವುಗಳು ಇದ್ದರೂ, ರಂಗಭೂಮಿ ಇವೆಲ್ಲವನ್ನೂ ಮೀರಿದ್ದು ಅಥವಾ ಇವೆಲ್ಲವನ್ನೂ ಒಳಗೊಂಡದ್ದು ಎಂಬ ದೃಢ ನಂಬಿಕೆಯಿಂದ ಪಂಥರಹಿತವಾದ ಚಟುವಟಿಕೆಗಳನ್ನೇ ನಡೆಸಿದ್ದರು.

ಮುಖ್ಯವಾಗಿ, ಈ ಬಾರಿಯ ಬಹುರೂಪಿ ನಾಟಕೋತ್ಸವಕ್ಕೆ ರಂಗಭೂಮಿಯ ಜೊತೆಗೆ ಯಾವತ್ತೂ ಸಂಬಂಧ ಇರಿಸಿಕೊಂಡಿರದ ಚಕ್ರವರ್ತಿ ಸೂಲಿಬೆಲೆ, ಸಿನಿಮಾ ನಟಿ ಮಾಳವಿಕ ಅವರನ್ನು ಅತಿಥಿಗಳಾಗಿ ಆಹ್ವಾನಿಸಲಾಗಿದೆ. ಈ ಕುರಿತು ಸಾರ್ವಜನಿಕರು ಎತ್ತಿರುವ ಆಕ್ಷೇಪಗಳಿಗೆ ಕಾರ್ಯಪ್ಪ ಅವರು ಸಮರ್ಪಕ ಸ್ಪಷ್ಟನೆ ನೀಡಿಲ್ಲ. ಬದಲಿಗೆ, ತಮ್ಮ ನಡೆಯ ಬಗ್ಗೆ ಉದ್ವೇಗಭರಿತರಾಗಿ ಮಾತನಾಡಿದ್ದಾರೆ. 'ನಾನು ಮಾಡುವುದು ಹಾಗೆಯೇ ಬೇಕಿದ್ದರೆ ಬನ್ನಿ, ಇಲ್ಲದಿದ್ದರೆ ಬರಬೇಡಿ' ಎಂದೆಲ್ಲ ಹೇಳುವುದು ನಿಜವಾಗಿಯೂ ಸರಿಯಲ್ಲ. ರಂಗಭೂಮಿ ಎಂದರೆ ದೇಶದ ರಾಜಕೀಯವನ್ನು ಸಾರ್ವಜನಿಕವಾಗಿ ಮಾತನಾಡುವ ಸ್ಥಳ. ಸಂಭಾಷಣೆ ಮೂಲಕ ಕಟ್ಟಲ್ಪಟ್ಟ ನಾಟಕವು ಚಿಂತನೆಗಳನ್ನು ವಿಸ್ತರಿಸುವ ಹಾಗೆ ಮಾಡುತ್ತದೆಯೇ ಹೊರತು ಕೋಪಾವೇಶಗಳನ್ನು ಹೆಚ್ಚಿಸುವುದಿಲ್ಲ. ರಂಗಭೂಮಿಯಲ್ಲಿ ಖಳನಾಯಕ ಪಾತ್ರಧಾರಿಗಳು ಮಾತ್ರ ಭಾವಾವೇಶಕ್ಕೆ ಒಳಗಾಗಿ ಅತಿಅಭಿನಯದ ನಟನೆ ಮಾಡುತ್ತಾರೆ. ನಾಟಕದ ಕೊನೆಯಲ್ಲಿ ಸೋಲನ್ನೋ ಸಾವನ್ನೋ ಪಡೆಯುತ್ತಾರೆ. ಇದು ನಿಜ ಜೀವನದಲ್ಲಿ ಉಂಟಾಗಬಾರದು.

ಬಹುರೂಪಿಯ ಹಿಂದಣ ಉತ್ಸವಗಳಲ್ಲಿ ದೇಶದ ಖ್ಯಾತ ರಂಗ ವಿದ್ವಾಂಸರಲ್ಲದೆ ಜನಪ್ರತಿನಿಧಿಗಳು ಎಂಬ ನೆಲೆಯಲ್ಲಿ ಯಡಿಯೂರಪ್ಪ, ಸಿದ್ದರಾಮಯ್ಯ, ಶೋಭಾ ಕರಂದ್ಲಾಜೆ, ಪ್ರತಾಪಸಿಂಹ ಮುಂತಾದವರು ಭಾಗವಹಿಸಿದ ಉದಾಹರಣೆಗಳಿವೆ. ಅವರನ್ನು ಒಂದು ಪಕ್ಷಕ್ಕೆ ಸೀಮಿತವಾಗಿ ನೋಡದೆ ಎಲ್ಲ ಜನರ ಚುನಾಯಿತ ಪ್ರತಿನಿಧಿಗಳು ಎಂದು ಒಪ್ಪಿಕೊಳ್ಳಬೇಕು.

ಭೈರಪ್ಪನವರ ಪರ್ವ ಕಾದಂಬರಿಯನ್ನು ರಂಗಕೃತಿಯಾಗಿಸಿದಾಗ, ಪ್ರಕಾಶ್ ಬೆಳವಾಡಿ ಅವರು ಎಡಪಂಥೀಯ ಧೋರಣೆಯಲ್ಲಿಯೇ ಕಟ್ಟಿ ಕೊಟ್ಟಿದ್ದಾರೆ.

ಅವರು ಒಪ್ಪಿಕೊಳ್ಳಲಿ ಅಥವಾ ಬಿಡಲಿ. ಪರ್ವ ಕಾದಂಬರಿ, ಅದರ ರಂಗಪ್ರಯೋಗ ಹಾಗೂ ನಿರ್ದೇಶಕರ ವಿಚಾರಗಳು ಎಡಪಂಥೀಯ ಚಿಂತನೆಯನ್ನೇ ಒಳಗೊಂಡಿದೆ ಎಂಬುದನ್ನು ಕಾರ್ಯಪ್ಪ ಮನಗಾಣಬೇಕು. ಪ್ರಕಾಶ್ ಬೆಳವಾಡಿಯವರು ರಂಗಾಯಣಕ್ಕೆ ನಿರ್ದೇಶಿಸಿದ ಅತ್ಯುತ್ತಮವಾದ ರಂಗ ಪ್ರಯೋಗಗಳಾದ ರವೀಂದ್ರನಾಥ ಟ್ಯಾಗೋರರ ಗೋರಾ ಮತ್ತು ಯಶವಂತ ಚಿತ್ತಾಲರ ಶಿಕಾರಿಯ ನಾಟಕ ರೂಪಗಳನ್ನು ಬಲಪಂಥೀಯ ಎಂದು ಪರಿಗಣಿಸುತ್ತಾರೆಯೇ? ರಂಗಾಯಣದಲ್ಲಿ ಪ್ರದರ್ಶಿತವಾದ ಬಸವಲಿಂಗಯ್ಯನವರು ನಿರ್ದೇಶಿಸಿದ ಕುಸುಮಬಾಲೆ, ಪ್ರಸನ್ನ ನಿರ್ದೇಶನದ ಪುಗಲೇಂದಿ ಪ್ರಹಸನ, ಹ್ಯಾಮ್ಲೆಟ್, ಜಂಬೆಯವರ ತುಘಲಕ್, ಕಿಂಗ್ ಲಿಯರ್, ಜೆನ್ನಿಯವರ ಸಂಸ್ಕಾರ, ಬಿ. ವಿ. ರಾಜಾರಾಂ ಅವರ ಶಿಖರಸೂರ್ಯ ನಾಟಕಗಳನ್ನು ಯಾವ ಪಂಥಕ್ಕೆ ಸೇರ್ಪಡೆ ಮಾಡಬೇಕು? ರಾಷ್ಟ್ರೀಯ ನಾಟಕೋತ್ಸವದಲ್ಲಿ ಭಾಗಿಯಾಗಲು ಪ್ರಸಿದ್ಧ ನಿರ್ದೇಶಕರನ್ನು, ಆ ವರ್ಷದ 'ಥೀಮ್'ಗೆ ಸಂಬಂಧಪಟ್ಟ ನಾಟಕಗಳನ್ನು ಆಹ್ವಾನಿಸುವುದು ಒಂದು ಪದ್ಧತಿ. ಇಲ್ಲೊಂದು ಅಲಿಖಿತ ಒಪ್ಪಂದವಿರುತ್ತದೆ. ನಾಟಕೋತ್ಸವದಲ್ಲಿ ಒಬ್ಬ ನಾಟಕಕಾರರ ಒಂದು ನಾಟಕ, ಓರ್ವ ನಿರ್ದೇಶಕರ ಒಂದು ನಾಟಕ, ಒಂದು ಸಂಸ್ಥೆಯ ಒಂದು ನಾಟಕ ಇತ್ಯಾದಿ. ಇದು ಹೆಚ್ಚಿನವರಿಗೆ ಅವಕಾಶ ಸಿಗಲಿ ಎಂಬ ಕಾರಣಕ್ಕೆ ಮಾಡಿಕೊಳ್ಳುವ ಒಂದು ಸರಳ ಒಪ್ಪಂದ.

ಆದರೆ, ಈ ಬಾರಿ ಈ ನಿಯಮವನ್ನು ಪಾಲಿಸಲಾಗಿಲ್ಲ. ಒಬ್ಬರಿಗೇ ಒಂದಕ್ಕಿಂತ ಹೆಚ್ಚು ನಾಟಕಗಳನ್ನು ಪ್ರದರ್ಶಿಸಲು ಅವಕಾಶ ನೀಡಲಾಗಿದೆ. ರಾಷ್ಟ್ರೀಯ ನಾಟಕೋತ್ಸವದಲ್ಲಿ ಬೇರೆಬೇರೆ ಭಾಷೆಗಳ ನಾಟಕಗಳನ್ನು ಪ್ರದರ್ಶಿಸುವ ಕ್ರಮವಿದೆ. ಆದರೆ, ಈ ಬಾರಿ ಮಹಾರಾಷ್ಟ್ರ ರಾಜ್ಯದವರಿಗೆ ತುಳುವಿನಲ್ಲಿ, ದೆಹಲಿ ತಂಡದವರಿಗೆ ಗುಜರಾತಿ ಭಾಷೆಯಲ್ಲಿ ಮತ್ತು ಕೇರಳದ ತಂಡದವರಿಂದ ಕೊಂಕಣಿಯಲ್ಲಿ ನಾಟಕ ಪ್ರದರ್ಶನ ಮಾಡಲು ಆಹ್ವಾನಿಸಿದ ಸೋಜಿಗವೂ ನಡೆದು ಹೋಗಿದೆ.

2018ರ ಬಹುರೂಪಿ ಉತ್ಸವದ ಸಂದರ್ಭದಲ್ಲಿ 'ಥೀಮ್' ಆಗಿ 'ವಲಸೆ'ಯನ್ನು ಆಯ್ಕೆ ಮಾಡಲಾಗಿತ್ತು. ವಲಸೆಯ ವಿಚಾರದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವೂ ನಡೆದಿತ್ತು. ಅದರ ಮುಖ್ಯ ನಿರ್ವಹಣಕಾರರು ಪ್ರಕಾಶ್ ಬೆಳವಾಡಿಯವರೇ ಆಗಿದ್ದರು. ಆದರೆ ಇದನ್ನು ಮರೆತಿರುವ ಕಾರ್ಯಪ್ಪನವರು ಭಾಗೀರಥಿ ಬಾಯಿಯವರನ್ನು ಅವಮಾನಿಸುವ ಉತ್ಸಾಹದಲ್ಲಿ ಅವರು ಮುಸ್ಲಿಮನನ್ನು ಮದುವೆಯಾಗಿರುವುದು, ಆತ ಅಸ್ಸಾಂ ನಾಡಿನವನಾಗಿರುವುದರ ಕುರಿತು ಮಾತನಾಡಿದ್ದಾರೆ. ರೋಹಿಂಗ್ಯಾ ಸಮುದಾಯಕ್ಕೆ, ಅವರ ಅಕ್ರಮಗಳಿಗೆ ಇವರೆಲ್ಲ ಬೆಂಬಲ ನೀಡಿದ್ದಾರೆ ಎಂದೆಲ್ಲ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದು ಕಾರ್ಯಪ್ಪನವರ ಚಿಂತನೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಈ ಬಾರಿ 'ತಾಯಿ' ಶೀರ್ಷಿಕೆಯಲ್ಲಿ ನಾಟಕೋತ್ಸವ ನಡೆಯುತ್ತದೆ. ಆದರೆ ಎಲ್ಲರೂ ಗೌರವದಿಂದ ಕಾಣಬಯಸುವ ತಾಯಿ ಶೀರ್ಷಿಕೆಗೆ ಪೂರಕವಾದ ಎಷ್ಟು ನಾಟಕಗಳನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಶ್ನಿಸಿದರೆ ಸರಿಯಾದ ಉತ್ತರ ಸಿಗಲಾರದು.

ಒಟ್ಟಿನಲ್ಲಿ ರಂಗಭೂಮಿಯ ಬೆಳವಣಿಗೆಯ ದಿಸೆಯಲ್ಲಿ ಕಾರ್ಯಪ್ಪನವರು ಮಾಡುತ್ತಿರುವ ಎಲ್ಲ ವಿವಾದಗಳನ್ನೂ, ಎದುರಿಸುತ್ತಿರುವ ಆರೋಪಗಳನ್ನೂ, ಗಮನಿಸಿ ಸರ್ಕಾರ ಅವರನ್ನು ನಿರ್ದೇಶಕ ಸ್ಥಾನದಿಂದ ವಜಾಗೊಳಿಸಬೇಕು. ಅದಕ್ಕೆ ಮೊದಲು ತಾವಾಗಿಯೇ ರಾಜೀನಾಮೆ ನೀಡಿ ಇನಿತಾದರೂ ರಂಗಭೂಮಿಯ ಗೌರವವನ್ನು ಉಳಿಸಿಕೊಳ್ಳುವುದು ಲೇಸು.

**ಲೇಖಕ:** ರಂಗ ನಿರ್ದೇಶಕ

---

## ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

# ಬಡತನ ಶಾಪವಲ್ಲ, ವರ

ಬಡತನ ತಮಗೆ ಅಂಟಿದ ಶಾಪ ಅಂತಾನೇ ಎಲ್ಲರೂ ಭಾವಿಸುತ್ತಾರೆ. ಬಡತನದಿಂದಾಗಿಯೇ ತಾವು ಸಾಧನೆ ಮಾಡಲಾಗಲಿಲ್ಲ ಅಂತ ಕೊರಗುವವರೂ ಇದ್ದಾರೆ. ಬಡತನವೇ ತಮ್ಮೆಲ್ಲ ಸುಖವನ್ನು ಕಿತ್ತುಕೊಂಡಿತು ಅಂತ ದುಃಖಿಸುವವರೂ ಇದ್ದಾರೆ. ಇವರಿಗೆ ಬಡತನವೇ ಈ ಜಗತ್ತನ್ನು ಪೊರೆದಿದೆ ಎಂಬ ಸತ್ಯ ತಿಳಿದಿಲ್ಲ. ಬಡತನದಿಂದ ಉತ್ತಮ ಬದುಕು ಕಟ್ಟಿಕೊಂಡವರು ಬಹಳಷ್ಟು ಜನರಿದ್ದಾರೆ. ಅದೇ ಶ್ರೀಮಂತಿಕೆಯಿಂದ ನೆಮ್ಮದಿಯ ಬದುಕು ಕಟ್ಟಿಕೊಂಡವರು ವಿರಳ. ಏಕೆಂದರೆ, ಬಡತನ ಕಲಿಸುವಷ್ಟು ಜೀವನಪಾಠವನ್ನು ಶ್ರೀಮಂತಿಕೆ ಕಲಿಸಲಾರದು. ಹೊಟ್ಟೆಯಲ್ಲಿನ ಹಸಿವು ಬುದ್ಧಿಗೆ, ಭುಜಕ್ಕೆ ಕಸುವು ತುಂಬುತ್ತದೆ. ಅದೇ ಹೊಟ್ಟೆ ತುಂಬಿದವರಿಗೆ ಅದ್ಯಾವ ಕಸುಬು ಗೊತ್ತಿರುವುದಿಲ್ಲ. ಇದರಿಂದಾಗಿಯೇ, ಸಾಧಕನ ಮಗ ಸಾಧಕನಾಗಲಾರ. ಸಾಮಾನ್ಯನ ಮಗ ಅಸಾಮಾನ್ಯ ಸಾಧನೆ ಮಾಡುತ್ತಾನೆ. ಹಸಿವಿನ ಶಕ್ತಿ ಅಷ್ಟರ ಮಟ್ಟಿಗೆ ವ್ಯಕ್ತಿಯ ಬದುಕನ್ನು ಉದ್ದೀಪಿಸುತ್ತದೆ. ಹೀಗಾಗಿ ಬಡತನ ಶಾಪವಲ್ಲ, ಅದೊಂದು ವರ.

ಬಡತನ ಶಾಪ ಅಂದುಕೊಂಡರೆ ಅದು ಶಾಪವಾಗಿಯೇ ಕಾಡುತ್ತೆ. ಬಡತನ ಭಗವಂತ ನಮಗೆ ಕೊಟ್ಟಿರುವ ಸವಾಲು ಅಂತ ಸ್ವೀಕರಿಸಿದರೆ ವರವಾಗುತ್ತೆ. ಬಡವನಿರಲಿ, ಶ್ರೀಮಂತನಿರಲಿ ಬದುಕಲು ಬೇಕಿರುವುದು ಛಲ. ನೋವನ್ನು ನುಂಗಿ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಛಲ ಹುಟ್ಟುವುದೇ ಬಡವರಲ್ಲಿ. ಎಲ್ಲಾ ಇದ್ದವನಿಗೆ ಏನೂ ಬೇಕೆನಿಸುವುದಿಲ್ಲ. ಬೇಕು ಎನ್ನುವ ಛಲವೇ ಬದುಕಿಗೆ ಬಲ. ಸಾಕು ಅನ್ನುವುದೇ ಬದುಕಿನ ದೌರ್ಬಲ್ಯ. ಹಸಿವು ಎಲ್ಲವನ್ನೂ ಕಲಿಸುತ್ತದೆ. ಅನ್ನ ಹುಟ್ಟಿಸುವುದರಿಂದ ಅದನ್ನು ಹಂಚುವವರೆಗೂ ಬದುಕಿನ ಪಾಠ ಕಲಿಸುತ್ತದೆ. ಇದರಿಂದಾಗಿಯೇ, ಬಡತನದಲ್ಲಿ ಬೆಳೆಯುವ ಮಕ್ಕಳು ಸಾಧನೆಯ ಶಿಖರದಲ್ಲಿ ಮಿಂಚುತ್ತಾರೆ. ಅದಕ್ಕೆ ಪೂರಕವಾದ ವಾತಾವರಣ ಮತ್ತು ಅವಕಾಶವನ್ನು ಸಮಾಜ ಕಲ್ಪಿಸಿಕೊಡಬೇಕಷ್ಟೆ.

ಬಹಳಷ್ಟು ಬಡಮಕ್ಕಳು ಬಡತನದ ಕೀಳರಿಮೆಯಿಂದಲೇ ಹಿಂದುಳಿಯುತ್ತಿದ್ದಾರೆ. ಇಂಥ ಮಕ್ಕಳಲ್ಲಿ ಆತ್ಮಬಲ ತುಂಬಿ ಬೆಳೆಸಿದರೆ ಈ ದೇಶಕ್ಕೆ ಬಹುದೊಡ್ಡ ಕೊಡುಗೆ ಕೊಡಬಲ್ಲರು. ಏಕೆಂದರೆ ಬಡ-ಮಧ್ಯಮ ವರ್ಗದ ಮಕ್ಕಳಿಂದಲೇ ನಮ್ಮ ದೇಶ ಒಂದಿಷ್ಟು ಸಾಧನೆ ಮಾಡುತ್ತಿದೆ. ಶ್ರೀಮಂತ ಮಕ್ಕಳಿಂದ ದೇಶದ ಪ್ರಗತಿಗೆ ನೀಡುತ್ತಿರುವ ಕಾಣಿಕೆ ಅತ್ಯಲ್ಪ. ಬಡಮಕ್ಕಳಲ್ಲಿ ಉತ್ತಮ ಬದುಕು ಕಟ್ಟಬೇಕೆಂಬ ತುಡಿತವಿರುತ್ತದೆ. ತುಡಿತದ ಒತ್ತಡ ಇದ್ದಾಗಷ್ಟೆ ಮನುಷ್ಯ ಮೇಲೇಳುತ್ತಾನೆ. ಸ್ಥಿತಿವಂತನಾಗಬೇಕೆಂಬ ಒತ್ತಡ ಬಡಮಕ್ಕಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಏಕೆಂದರೆ, ಎಲ್ಲಿ ಕೊರತೆ ಇರುತ್ತದೋ, ಅಲ್ಲಿ ಒರತೆಗೆ ಕಿಚ್ಚು ಹಚ್ಚುತ್ತೆ.

ಪರಿಶ್ರಮದಿಂದಷ್ಟೇ ಸಾಧನೆ ಸಾಧ್ಯ ಅನ್ನೋದನ್ನ ವಿಜ್ಞಾನವೂ ಒಪ್ಪುತ್ತದೆ, ಧರ್ಮಜ್ಞಾನವೂ ಮನಗಾಣುತ್ತದೆ. ಕುಂತಲ್ಲೇ ಸುಖ ಬಯಸುವ ಶ್ರೀಮಂತರ ಮಕ್ಕಳಿಂದ ಸಾಧನೆ ನಿರೀಕ್ಷಿಸುವುದು ಹಾಸ್ಯಾಸ್ಪದ. ಕೂತುಣ್ಣುವವರಿಗೆ ರೋಗಬಾಧೆ ಹೆಚ್ಚುವಂತೆ, ಸುಖದಲ್ಲಿರುವವರಿಗೆ ಸೋಮಾರಿತನದ ಬಾಧೆ ಹೆಚ್ಚಿರುತ್ತದೆ. ಅದೇ ಹಸಿವಿದ್ದವನಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹಂಬಲ ಹೆಚ್ಚಿರುತ್ತದೆ. ಉಳಿ ಪೆಟ್ಟು ತಿಂದಷ್ಟು ಸುಂದರ ಮೂರ್ತಿಯಾಗುವಂತೆ, ಬಡತನದ ಬೇಗೆಯಲ್ಲಿ ಬೆಂದಷ್ಟು ಸಾಧನೆಯ ಅಂಚು ಹರಿತವಾಗಿರುತ್ತದೆ. 'ಗುಡಿಸಲಲ್ಲಿ ಅರಳಿದ ಕಲೆ ಅರಮನೆಯಲ್ಲಿ ಅಳಿಯುತ್ತೆ' ಅನ್ನೋ ಮಾತು ಅಕ್ಷರಶಃ ನಿಜ. ಎಲ್ಲಿ ಶ್ರೀಮಂತಿಕೆ ಇರುತ್ತೋ ಅಲ್ಲಿ ಸಾಧನೆ ಕ್ಷೀಣಿಸುತ್ತೆ. ಎಲ್ಲಿ ಬಡತನ ಇರುತ್ತೋ ಅಲ್ಲಿ ಪ್ರಗತಿಯ ಹೆಜ್ಜೆ ಕಾಣಿಸುತ್ತೆ. ಛಲ-ಬಲವುಳ್ಳ ಮಕ್ಕಳಿಗೆ ಹಣದ ಕಾರಣಕ್ಕಾಗಿ ವಿದ್ಯೆ ವಂಚಿಸಬಾರದು. ಹಣದ ಕೊರತೆಯಿಂದ ಬಡಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದು ದೇಶದ ಅಭಿವೃದ್ಧಿಗೆ ಮಾರಕ. ಪ್ರತಿಭಾವಂತ ಮಕ್ಕಳನ್ನು ಪೋಷಿಸಿ ಬೆಳೆಸಿದಾಗಷ್ಟೆ ಸಾಧನೆಯ ಪೂರಕ ವಾತಾವರಣದಲ್ಲಿ 'ಸಚ್ಚಿದಾನಂದ'ದ ಬದುಕು ಅನಾವರಣವಾಗುತ್ತದೆ. ●

---

## ಪದಬಂಧ 4811

– ವಿದ್ಯಾ ವಿನಯ್

| | | | | | | | | |
|---|---|---|---|---|---|---|---|---|
| 1 | | 2 | ■ | ■ | 3 | | | 4 |
| | ■ | | ■ | ■ | | ■ | ■ | |
| 5 | 6 | | ■ | ■ | | ■ | ■ | ■ |
| ■ | | ■ | ■ | 7 | | | 8 | ■ |
| ■ | | ■ | ■ | | ■ | ■ | | ■ |
| ■ | 9 | | 10 | | ■ | ■ | | ■ |
| ■ | ■ | ■ | | ■ | ■ | 11 | | 12 |
| 13 | ■ | ■ | | ■ | ■ | | ■ | |
| 14 | | | | ■ | ■ | 15 | | |

**ಎಡದಿಂದ ಬಲಕ್ಕೆ**

1.ಪ್ರಾಧಿಕಾರದ ಹತ್ತಿರವಿರುವ ಗೋಡೆ! (3)
3.ಕುದುರೆಯ ಮೇಲೆ ಕುಳಿತಿರುವವನು (4)
5.ಇದು ಹೊಸದು (3)
7.ಉತ್ತೇಜನ ಕೊಡುವವನು (4)
9. ಹಾರವನ ವ್ಯಾಪಾರ! (4)
11.ಮಗನ ಹತ್ತಿರವಿರುವ ಪುತ್ರಿ (3)
14.ಆಟದ ಬಯಲು (4)
15.ಕಲೆಸಿದ ಗೋಧಿಹಿಟ್ಟು (3)

**ಮೇಲಿಂದ ಕೆಳಕ್ಕೆ**

1.ಹಿಂದಿನ ಕಾಲದ್ದು (3)
2.ದ್ರವ ಒಸರುವ ಜೆಷ್ಠ (3)
3.ಭಗವಂತನ ಸಾಕ್ಷಾತ್ಕಾರ ಮಾಡುವುದು (4)
4.ಮಹಿಮಾವಂತನಿಗೆ ಕಾಣಿಸಿದ ಮಂಜು (2)
6.ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
7.ಹರನನ್ನು ಕೊನೆಗಿಟ್ಟು ಸ್ತುತಿಸಿದರೂ ಬಿದ್ದ ಹೊಡೆತ! (3)
8.ವಾಡಿಕೆಯಂತೆ ಗೊಲ್ಲ ಬಂದಿರುವನಲ್ಲಾ! (4)
10.ಅತಿ ಘೋರವಾದ ವಿಷ (4)
11.ಮಧುಕರನು ತೋರಿಸಿದ ದಯೆ (3)
12.ಪಚನಾಂಗ ಉಲ್ಟಾ ಪಲ್ಟಾ ಆಗಿಬಿಟ್ಟದೆ (3)
13.ತಿರುವುಮುರುವಾಗಿರುವ ಸೊತ್ತು (2)

### 4810ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅಪರಂಜಿ3.ಅಸ್ತಿಭಾರ5.ದಿವಾನ
7.ಹವನ9.ಮಯೂರ
10.ರಮಣ11.ಪ್ರಕಟ
15.ಮೃಗಜಲ
16.ತಾರುಮಾರು

**ಮೇಲಿಂದ ಕೆಳಕ್ಕೆ:**
1.ಅನಾದಿ2.ಜಿಲ್ಲೆ
3.ಅಸಹಕಾರ4.ರದ್ದಿ
6.ವಾಗ್ಗೇಯಕಾರ
8.ನಯವಂಚಕ
9.ಮರಣಕಾಲ
12.ಟಗರು13.ದುಮ್ಮ
14.ತಾತಾ

## ಸುಡೊಕು 5197

| | | | | | | | | |
|---|---|---|---|---|---|---|---|---|
| 7 | | 4 | | 5 | | | | 3 |
| | | | 1 | | 9 | 6 | | 5 |
| 6 | | 5 | | 3 | | | 1 | |
| 2 | | | | | 4 | 1 | | 9 |
| | 7 | 1 | | 8 | | | | |
| 4 | | | 9 | | 2 | 3 | | 7 |
| | 4 | | 3 | | 7 | | 2 | 1 |
| | | | | | | 7 | | |
| 1 | 3 | | | 2 | | | 6 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5196 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 9 | 6 | 2 | 1 | 3 | 4 | 5 |
| 3 | 2 | 6 | 5 | 4 | 8 | 9 | 1 | 7 |
| 1 | 4 | 5 | 9 | 7 | 3 | 2 | 8 | 6 |
| 2 | 6 | 8 | 1 | 3 | 5 | 4 | 7 | 9 |
| 9 | 3 | 1 | 7 | 8 | 4 | 5 | 6 | 2 |
| 4 | 5 | 7 | 2 | 9 | 6 | 1 | 3 | 8 |
| 6 | 9 | 2 | 3 | 1 | 7 | 8 | 5 | 4 |
| 7 | 1 | 4 | 8 | 5 | 9 | 6 | 2 | 3 |
| 5 | 8 | 3 | 4 | 6 | 2 | 7 | 9 | 1 |

## ಗುಂಡಣ್ಣ

## ದಿನ ಭವಿಷ್ಯ

ಶನಿವಾರ ಡಿಸೆಂಬರ್ 18, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮೃಗಶಿರ (ಧನುರ್ಮಾಸ) ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಮೂಲ ಪೂರ್ಣಿಮಾ ಗಂ. 60-00 (ದಿನಪೂರ್ತಿ) ಶನಿವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 16-29 (ಹ. 1-17) ಸಾಧ್ಯ ನಾಮ ಯೋಗ ಗಂ. 6-54 ಭದ್ರೆ ಕರಣ ಗಂ. 31-33 ವಿಷ ಗಂ. 32-1 ಅಮೃತ ಗಂ. 7-45 ಪುನರಮೃತ ಗಂ. 58-38 :** ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-39 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 2, 7

**ಮೇಷ:** ಪ್ರಯಾಣದಿಂದಾದ ದೇಹಾಯಾಸ ನಿವಾರಣೆಯಾಗಲಿದೆ. ಸಾಧನೆಯ ಬಗ್ಗೆ ಹೆಮ್ಮೆಪಡುವಿರಿ. ಸ್ವಲ್ಪ ಮಟ್ಟಿನ ಆಲಸ್ಯ. ವಿಷಯ ಸಂಗ್ರಹಕ್ಕಾಗಿ ಗ್ರಂಥಾಲಯಕ್ಕೆ ಭೇಟಿ ನೀಡುವ ಸಾಧ್ಯತೆ. ಗಣ್ಯರ ಆಗಮನದಿಂದ ಸಂತಸ.

**ವೃಷಭ:** ಸುತ್ತಮುತ್ತಲಿನ ಸೂಕ್ಷ್ಮವಾದ ವಿಷಯಗಳ ಬಗ್ಗೆ ಗಮನ ಹರಿಸುವ ಸಾಧ್ಯತೆ. ಮಕ್ಕಳ ವಿವಾಹ ಸಂಬಂಧಕ್ಕಾಗಿ ಮಾತುಕತೆಗೆ ಮುಂದಾಗುವಿರಿ. ಏಕದಳ ಧಾನ್ಯಗಳ ವ್ಯಾಪಾರಸ್ಥರಿಗೆ ವ್ಯಾಪಾರದಲ್ಲಿ ವೃದ್ಧಿ.

**ಮಿಥುನ:** ಪ್ರತಿಭಾವಂತರಿಗೆ ಯೋಗ್ಯ ವೇದಿಕೆ ದೊರೆತು ಬೆಳಕು ಕಾಣುವಿರಿ. ಕ್ರೀಡೆ, ಕರಕುಶಲಿಗಳಿಗೆ ಉತ್ತಮ ಅವಕಾಶ. ಅಚ್ಚರಿ ಮೂಡಿಸುವ ವಿಷಯವೊಂದನ್ನು ಕೇಳುವ ಸಾಧ್ಯತೆ. ವಿದೇಶ ಪ್ರಯಾಣದ ಅವಕಾಶ.

**ಕರ್ಕಾಟಕ:** ಸಿದ್ಧ ಉಡುಪು ವ್ಯಾಪಾರಿಗಳಿಗೆ ಹೊಸ ಮಾದರಿಗಾಗಿ ಬೇಡಿಕೆ ಹೆಚ್ಚಾಗುವ ಸಾಧ್ಯತೆ. ವ್ಯಾಪಾರದಲ್ಲಿ ಲಾಭ. ಮಗಳ ವಿದ್ಯಾಭ್ಯಾಸ ಉತ್ತಮಗೊಳ್ಳುವುದು. ವಿವಾಹ ಸಂಬಂಧಗಳು ಕೂಡಿಬರುವವು. ಜೀವನದಲ್ಲಿ ನೆಮ್ಮದಿ.

**ಸಿಂಹ:** ಎದುರಾದ ಸಮಸ್ಯೆಗಳು ಪರಿಹಾರ ಕಂಡುಕೊಳ್ಳಲಿವೆ. ಸಂತಸ ತರುವಂತಹ ಫಲಿತಾಂಶ ಹೊರಬೀಳಲಿದೆ. ಯಾವುದೇ ನಿರ್ಧಾರಗಳಿಗೆ ಆತುರತೆ ಸಲ್ಲದು. ಮನೆಯವರ ಆರೋಗ್ಯದಲ್ಲಿ ಸುಧಾರಣೆ.

**ಕನ್ಯಾ:** ಸರ್ಕಾರಿ ಅಧಿಕಾರದಲ್ಲಿರುವವರಿಗೆ ಬಡ್ತಿ ಸಾಧ್ಯತೆ. ವಸ್ತ್ರ ವಿನ್ಯಾಸಕಾರರು, ದರ್ಜಿಗಳು ಮುಂತಾದವರಿಗೆ ಬೇಡಿಕೆ ಅಧಿಕಗೊಂಡು ಉತ್ತಮ ವರಮಾನ ಲಭಿಸಲಿದೆ. ಪ್ರಯಾಣದಿಂದ ಲಾಭ. ಸಂಶೋಧನಾ ಕೆಲಸಗಳಲ್ಲಿ ಪ್ರಗತಿ.

**ತುಲಾ:** ವಾದ–ವಿವಾದಗಳಿಗೆ ಸಂಬಂಧಿಸಿದಂತೆ ಒಪ್ಪಂದ ಅಥವಾ ರಾಜಿ ಉತ್ತಮ. ಇಷ್ಟಾರ್ಥಗಳು ಈಡೇರುವ ಸಾಧ್ಯತೆ. ಕುಟುಂಬ ಸಮೇತ ವಿನೋದ, ಮನರಂಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಖರ್ಚು.

**ವೃಶ್ಚಿಕ:** ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಬಂಧುಗಳಿಂದ ಸಹಾಯಹಸ್ತ. ವಾಹನ ದುರಸ್ತಿ ಮಾಡುವವರಿಗೆ ಉತ್ತಮ ಲಾಭ. ಮಕ್ಕಳಿಗೆ ಉದ್ಯೋಗ ಅಥವಾ ಬಡ್ತಿ ಸಾಧ್ಯತೆ. ಆತ್ಮವಿಶ್ವಾಸದ ನಡೆ ನುಡಿಗಳು ಕಂಡುಬರಲಿವೆ.

**ಧನು:** ಹೊಸದೊಂದು ಭಾರೀ ಯೋಜನೆ ರೂಪಿತಗೊಳ್ಳುವ ಸಾಧ್ಯತೆ. ವಾಣಿಜ್ಯ ಅಧಿಕಾರಿಗಳು ಮತ್ತು ಸರ್ಕಾರದಿಂದ ಕೆಲಸಗಳಿಗೆ ಸಂಪೂರ್ಣ ಸಹಕಾರ ದೊರೆಯಲಿದೆ. ಆಧ್ಯಾತ್ಮದೆಡೆಗೆ ಮನಸ್ಸನ್ನು ಹರಿಯ ಬಿಡುವ ಸಾಧ್ಯತೆ.

**ಮಕರ:** ಸಾರಿಗೆ, ವಾಹನ, ಪ್ರವಾಸಿ ಉದ್ಯಮದಲ್ಲಿ ತೊಡಗಿದವರಿಗೆ ಉತ್ತಮ ಸಂಪಾದನೆ. ಹೊಸ ಉದ್ಯಮಗಳಲ್ಲಿ ತೊಡಗಿದವರಿಗೆ ಅಭಿವೃದ್ಧಿಯ ಮಾರ್ಗ ಗೋಚರವಾಗುವುದು. ಆರ್ಥಿಕ ಸ್ಥಿತಿಯಲ್ಲಿ ಧನಾತ್ಮಕ ಬದಲಾವಣೆ.

**ಕುಂಭ:** ಮದುವೆ ಮುಂತಾದ ಮಂಗಳಕಾರ್ಯಗಳ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ. ಮನೆಯವರ ಆಶಯದಂತೆ ಹೊಸ ವ್ಯಾಪಾರ ಪ್ರಾರಂಭಿಸುವಿರಿ. ವಿಹಾರ ವಿನೋದಗಳಲ್ಲಿ ಎಚ್ಚರಿಕೆ ಅಗತ್ಯ.

**ಮೀನ:** ದ್ವಿದಳ ಧಾನ್ಯ ಮಾರಾಟಗಾರರಿಗೆ ಸಮಾಧಾನಕರ ಲಾಭ. ತಂದೆಯವರ ಕಣ್ಣಿನ ದೋಷಕ್ಕೆ ಸೂಕ್ತ ಚಿಕಿತ್ಸೆಯಿಂದಾಗಿ ಚೇತರಿಕೆ. ಕೆಲಸಗಳು ಉತ್ತಮವಾಗಿ ನಡೆಯುವವು. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

**ನಿಮ್ಮ ಜನ್ಮದಿನ 18-ಡಿಸೆಂಬರ್** ಇಂದು ಅತ್ಯಂತ ಶುಭದಾಯಕ. ಭೂಮಿ ಮತ್ತು ಸ್ಥಿರಾಸ್ತಿ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭ. ಸಾಂಸಾರಿಕ ಸಂಬಂಧಗಳು ಉತ್ತಮಗೊಂಡು ಉತ್ತಮ ಜೀವನಕ್ಕೆ ನಾಂದಿಯಾಗಲಿದೆ. ರಾಜಕೀಯದಲ್ಲಿ ತೊಡಗಿಕೊಳ್ಳುವ ವಿಪುಲ ಅವಕಾಶ ಹಾಗೂ ಸಾಧ್ಯತೆಗಳು ಗೋಚರವಾಗುತ್ತಿವೆ. ರಾಜಕೀಯ ವ್ಯಕ್ತಿಗಳಿಗೆ ಹೆಚ್ಚಿನ ಪ್ರಚಾರ.

# ಅತ್ಯಾಚಾರ ಹೇಳಿಕೆಗೆ ಆಕ್ರೋಶ

ಒಂದನೇ ಪುಟದಿಂದ

'ಸ್ಪೀಕರ್ ಪೀಠದ ಮುಂದೆ ನಿಂತಿರುವವರು ತಮ್ಮ ರಾಜಕೀಯ ಸಂಘಟನೆಗಳಿಗೆ ಹೋಗಿ, ಆ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಿ. ನಂತರ, ಮಹಿಳೆ ಮತ್ತು ಮಕ್ಕಳ ವಿರುದ್ಧ ಈ ದೇಶದಲ್ಲಿ ಯಾರು ಮಾತನಾಡುತ್ತಾರೆ ಎಂಬುದನ್ನು ನೋಡೋಣ' ಎಂದು ಸಚಿವೆ ಹೇಳಿದರು.

ಬಿಜೆಪಿ ಮುಖಂಡರಾದ ಅನಿಲ್ ಬಲೂನಿ, ರಾಜೀವ್ ಚಂದ್ರಶೇಖರ್ ಮತ್ತು ರಾಜ್ಯವರ್ಧನ ರಾಥೋಡ್ ಅವರು ಮಾಧ್ಯಮಗೋಷ್ಠಿ ನಡೆಸಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. 'ಇದು ಅತ್ಯಂತ ನಾಚಿಕೆಗೇಡು ಮತ್ತು ದುಃಖಕರ. ಮಹಿಳೆಯರ ಮೇಲೆ ಕಳಂಕ ಹೇರಿದ ಇತಿಹಾಸವೇ ಕಾಂಗ್ರೆಸ್‌ಗೆ ಇದೆ' ಎಂದು ಬಿಜೆಪಿಯ ಮುಖ್ಯ ವಕ್ತಾರ ಬಲೂನಿ ಹೇಳಿದರು. 'ಮಹಿಳೆಯರ ಮೇಲೆ ಎಸಗಲಾಗುವ ಅತ್ಯಾಚಾರದಂತಹ ಅಪರಾಧವು ವಿನೋದದ ವಿಚಾರ ಎಂದು ಶಾಸಕ ರಮೇಶ್ ಕುಮಾರ್ ಅವರು ಭಾವಿಸಿದ್ದಾರೆ. ಅಂಥವರನ್ನು ರಾಹುಲ್ ಮತ್ತು ಪ್ರಿಯಾಂಕಾ ಅವರು ವಿಧಾನಸಭೆಯ ಸ್ಪೀಕರ್ ಸ್ಥಾನದಂತಹ ಸಾಂವಿಧಾನಿಕ ಹುದ್ದೆಗೆ ಆಯ್ಕೆ ಮಾಡಿದ್ದರು' ಎಂದು ರಾಜೀವ್ ಚಂದ್ರಶೇಖರ್ ಟ್ವೀಟ್ ಮಾಡಿದ್ದಾರೆ.

ರಮೇಶ್ ಕುಮಾರ್ ಅವರ ಮಾತಿಗೆ ಜೋರಾಗಿ ನಕ್ಕ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ವರ್ತನೆಯನ್ನು ಬಿಜೆಪಿ ವಕ್ತಾರೆ ಅಪರ್ಣಾ ಸಾರಂಗಿ ಅವರು ಪ್ರಶ್ನಿಸಿದ್ದಾರೆ. 'ಅಂತಹ ಆಕ್ಷೇಪಾರ್ಹ ಮಾತಿನ ಬಳಿಕವೂ ಸ್ಪೀಕರ್ ಏನನ್ನೂ ಹೇಳಿಲ್ಲ ಎಂಬುದು ಬೇಸರದ ಸಂಗತಿ. ಅಷ್ಟೇ ಅಲ್ಲದೆ, ಅವರು ಜೋರಾಗಿ ನಕ್ಕುಬಿಟ್ಟರು' ಎಂದು ಸಾರಂಗಿ ಹೇಳಿದ್ದಾರೆ.

## ಕೀಳು ಅಭಿರುಚಿಯ ಮಾತು ತಪ್ಪು: ಡಿಕೆಶಿ

ಬೆಂಗಳೂರು: 'ಕಾಂಗ್ರೆಸ್ ಪಕ್ಷವು ಲಿಂಗ ಸಮಾನತೆ ಪ್ರತಿಪಾದಿಸುತ್ತಾ, ಮಹಿಳೆಯರ ಘನತೆಯನ್ನು ಎತ್ತಿಹಿಡಿಯುತ್ತಾ ಬಂದಿದೆ. ಹಾಗಿರುವಾಗ, ನಮ್ಮ ಶಾಸಕರೊಬ್ಬರು ಮಹಿಳೆಯರ ಬಗ್ಗೆ ಕೀಳು ಅಭಿರುಚಿಯಲ್ಲಿ ಮಾತನಾಡಿರುವುದು ತಪ್ಪು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಶಾಸಕ ಕೆ.ಆರ್. ರಮೇಶ್‌ಕುಮಾರ್ ಹೆಸರು ಉಲ್ಲೇಖಿಸದೇ ಸರಣಿ ಟ್ವೀಟ್ ಮಾಡಿರುವ ಅವರು, 'ಶಾಸಕರ ಮಾತುಗಳು ವೈಯಕ್ತಿಕವಾಗಿಯೂ ನನಗೆ ಆಘಾತ ತಂದಿದೆ. ಈ ಘಟನೆಗಾಗಿ ನಾಡಿನ ಮಹಿಳಾ ಸಮುದಾಯದ ಕ್ಷಮೆ ಕೇಳುತ್ತೇನೆ. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುತ್ತೇನೆ' ಎಂದಿದ್ದಾರೆ. 'ಆಡಿದ ಮಾತಿಗಾಗಿ ಸಂಬಂಧಪಟ್ಟ ಶಾಸಕರು ಈಗಾಗಲೇ ಸದನದ ಮೂಲಕವೇ ಕ್ಷಮೆಯಾಚಿಸಿದ್ದಾರೆ. ಸಾರ್ವಜನಿಕ ಬದುಕಿನಲ್ಲಿರುವ ನಮ್ಮೆಲ್ಲರ ನಡವಳಿಕೆ ಸಮಾಜಕ್ಕೆ ಮಾದರಿಯಾಗಿರಬೇಕು' ಎಂದು ಅವರು ಪ್ರತಿಪಾದಿಸಿದ್ದಾರೆ. 'ಶಾಸನಸಭೆ ಪ್ರಜಾತಂತ್ರದ ದೇಗುಲ. ಜನಪ್ರತಿನಿಧಿಗಳಾಗಿ ಸದನದಲ್ಲಿ ನಮ್ಮ ಮಾತು, ನಡವಳಿಕೆ ಶುದ್ಧವಾಗಿರಬೇಕು. ಆದರ್ಶದ ನಡವಳಿಕೆಯನ್ನು ರಾಜಕೀಯ ಬದುಕಿನಲ್ಲಿರುವ ನಾವೆಲ್ಲರೂ ಎಚ್ಚರಿಕೆಯಿಂದ ಪಾಲನೆ ಮಾಡಬೇಕು' ಎಂದು ಅವರು ತಿಳಿಸಿದ್ದಾರೆ.

### ಸಾಲದ ಮೊತ್ತ ₹ 4.57 ಲಕ್ಷ ಕೋಟಿಗೆ ಏರಿಕೆ

# ಕೇಂದ್ರ ಹೇಳಿದ್ದು ₹24 ಸಾವಿರ ಕೋಟಿ ರಾಜ್ಯಕ್ಕೆ ಕೊಟ್ಟಿದ್ದು ₹9,488 ಕೋಟಿ

ಪ್ರಜಾವಾಣಿ ವಾರ್ತೆ

**ಬೆಳಗಾವಿ (ಸುವರ್ಣ ವಿಧಾನಸೌಧ):** ಕೇಂದ್ರ ತೆರಿಗೆಗಳಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಿದ್ದ ₹24,273 ಕೋಟಿಯಲ್ಲಿ ಸೆಪ್ಟೆಂಬರ್‌ವರೆಗೆ ಕೇವಲ ₹ 9,488 ಕೋಟಿ ಮೊತ್ತವನ್ನಷ್ಟೇ ಕೇಂದ್ರ ಸರ್ಕಾರ ಕೊಟ್ಟಿದೆ. 15ನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ ಇಷ್ಟು ಮೊತ್ತವನ್ನು ಕೇಂದ್ರ ನೀಡಬೇಕಿತ್ತು. ಆದರೆ, ಶೇ 39ರಷ್ಟನ್ನು ಮಾತ್ರ ಕೇಂದ್ರ ನೀಡಿದೆ.

ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದ 'ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನೆ' ವರದಿಯಲ್ಲಿ ಈ ವಿವರಗಳಿವೆ.

ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ಮತ್ತು ಸಹಾಯಧನ ಇಳಿಮುಖವಾಗಿದೆ. 2021–22ರಲ್ಲಿ ಸಹಾಯಧನ ₹15,538 ಕೋಟಿ ಬರಬೇಕಿತ್ತು. ಆದರೆ ವರ್ಷದ ಮೊದಲಾರ್ಧದಲ್ಲಿ ₹10,938 ಕೋಟಿ ಸ್ವೀಕೃತವಾಗಿದ್ದು, ಒಟ್ಟು ಶೇ 70.4ರಷ್ಟಾಗಿದೆ ಎಂದೂ ವರದಿ ಹೇಳಿದೆ.

**ತೆರಿಗೆ:** ₹3,105 ಕೋಟಿ ಕೊರತೆ

ಕೋವಿಡ್ ಎರಡನೇ ಅಲೆಯ ಪರಿಣಾಮ ರಾಜ್ಯದ ಸ್ವಂತ ತೆರಿಗೆ ಸಂಗ್ರಹದಲ್ಲಿ ₹3,105 ಕೋಟಿ ಕೊರತೆಯಾಗಿದೆ.

ಈ ವರ್ಷದ ಸೆಪ್ಟೆಂಬರ್‌ವರೆಗೆ ರಾಜಸ್ವ ಸ್ವೀಕೃತಿಗಳ ಆಯವ್ಯಯದ ಗುರಿ ₹ 86,136 ಕೋಟಿಯಷ್ಟಿದ್ದು, ₹ 83,031 ಕೋಟಿ ಸಂಗ್ರಹವಾಗಿದೆ. ಕೋವಿಡ್ ಹರಡುವಿಕೆ ಕಡಿಮೆ ಆಗಿದ್ದರಿಂದಾಗಿ ಎರಡನೇ ತ್ರೈಮಾಸಿಕ ಅವಧಿಯಲ್ಲಿ ಚೇತರಿಕೆ ಕಾಣಿಸಿದೆ ಎಂದೂ ವರದಿ ಉಲ್ಲೇಖಿಸಿದೆ.

ವಿವಿಧ ಆರ್ಥಿಕ ಚಟುವಟಿಕೆಯ ಮೇಲೆ ನಿರ್ಬಂಧ ವಿಧಿಸಿದ್ದರಿಂದಾಗಿ ನೋಂದಣಿ ಮತ್ತು ಮುದ್ರಾಂಕ, ಮೋಟಾರು ವಾಹನ ತೆರಿಗೆ ಸಂಗ್ರಹಣೆಯೂ ಕುಂಠಿತಗೊಂಡಿದೆ. ಅದರ ಜತೆಗೆ, ನೆರೆ ಸಂತ್ರಸ್ತ ಜಿಲ್ಲೆಗಳಲ್ಲಿ ವಿಪತ್ತು ನಿರ್ವಹಣೆಗಾಗಿ ಬದ್ಧ (ಅನಿವಾರ್ಯವಾಗಿ ಮಾಡಲೇಬೇಕಾದ) ವೆಚ್ಚ ಹೆಚ್ಚಾಗಿದೆ.

ಬದ್ಧ ವೆಚ್ಚದಲ್ಲಿ ಅನಿರೀಕ್ಷಿತ ಹೆಚ್ಚಳವನ್ನು ತಡೆಯಬೇಕು. ಅದರ ಜತೆಗೆ, ಎರಡನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸುಗಳನ್ನು ಅನುಷ್ಠಾನ ಮಾಡಬೇಕು. ಇಲಾಖೆಗಳಲ್ಲಿರುವ ಅನವಶ್ಯಕ ಹುದ್ದೆಗಳನ್ನು ರದ್ದುಗೊಳಿಸುವುದರೊಂದಿಗೆ ಇಲಾಖೆಗಳನ್ನು ಮರುವಿನ್ಯಾಸ ಅಥವಾ ವಿಲೀನಗೊಳಿಸಿದರೆ ಆರ್ಥಿಕ ಸ್ಥಿತಿ ಸುಧಾರಿಸಬಹುದು ಎಂದು ವರದಿ ಹೇಳಿದೆ.

2021–22ರ ಆರ್ಥಿಕ ವರ್ಷದ ಅಂತ್ಯಕ್ಕೆ(ಮಾರ್ಚ್) ರಾಜ್ಯದ ಒಟ್ಟು ಸಾಲವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ 26.66ರಷ್ಟಾಗಲಿದೆ. ಅಂದರೆ, 2021ರ ಮಾರ್ಚ್‌ನಲ್ಲಿ ಬಾಕಿ ಇದ್ದ ₹3,36,692 ಕೋಟಿಯಷ್ಟು ಸಾಲದ ಹೊರೆ, 2022ರ ಮಾರ್ಚ್ ವೇಳೆಗೆ ₹ 4,45,899 ಕೋಟಿಗೆ ಏರಲಿದೆ ಎಂದು ವರದಿ ಅಂದಾಜಿಸಿದೆ.

### ಪಿಡಬ್ಲ್ಯುಡಿ: ವೆಚ್ಚ 8 ಪಟ್ಟು ಹೆಚ್ಚಳ

ನೀರಾವರಿ, ಲೋಕೋಪಯೋಗಿ ಇಲಾಖೆಗಳ ಬದ್ಧ ವೆಚ್ಚವು ಬಜೆಟ್‌ನಲ್ಲಿ ಅನುಮೋದನೆ ನೀಡಿದ ಮೊತ್ತಕ್ಕಿಂತ 5ರಿಂದ 8 ಪಟ್ಟು ವೆಚ್ಚ ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ. ವಿವಿಧ ಕಾಮಗಾರಿಗಳಿಗೆ ಇಂತಿಷ್ಟು ಮೊತ್ತ ಎಂದು ಹಂಚಿಕೆ ಮಾಡಿ ಬಜೆಟ್‌ನಲ್ಲಿ ಒಪ್ಪಿಗೆ ನೀಡಲಾಗಿತ್ತು. ಈಗ ಅದಕ್ಕಿಂತ ಹೆಚ್ಚಾಗಿದೆ. ಬಜೆಟ್ ಅನುಮೋದಿತ ವೆಚ್ಚದ ಅನುಪಾತವನ್ನು ಸಮದೂಗಿಸುವವರೆಗೆ ಯಾವುದೇ ಹೊಸ ಕಾಮಗಾರಿಗಳನ್ನು ಮಂಜೂರು ಮಾಡದಂತೆ ವರದಿ ಸೂಚಿಸಿದೆ.

### 'ಜಮೀನು ವಾಪಸ್'

ಬೆಳಗಾವಿ: ಹಲವು ವರ್ಷ ಕಳೆದರೂ ಕೈಗಾರಿಕೆ ಆರಂಭಿಸದ 500ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಜಮೀನು ಹಿಂಪಡೆಯಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ವಿಧಾನಸಭೆಯಲ್ಲಿ ತಿಳಿಸಿದರು. ಭೂಮಿ ಹಂಚಿಕೆಯಾಗಿ 20 ವರ್ಷ ಕಳೆದರೂ ಕೈಗಾರಿಕೆಯನ್ನು ಆರಂಭಿಸಿಲ್ಲ. ಈಗಾಗಲೇ ಅಂತಹ ಜಮೀನು ಗುರುತಿಸಲಾಗಿದೆ ಎಂದರು.

## ಸುದ್ದಿ 2 ನಿಮಿಷ

### 'ಪಿಡಿಒಗಳಿಗೆ ವಸತಿ ಯೋಜನೆ'

ಬೆಳಗಾವಿ (ಸುವರ್ಣ ವಿಧಾನಸೌಧ): ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ಕೇಂದ್ರ ಸ್ಥಾನದಲ್ಲೇ ವಸತಿ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಶುಕ್ರವಾರ ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಪ್ರಶ್ನೆ ಕೇಳಿದ ಬಿಜೆಪಿಯ ಸದಸ್ಯ ಡಾ.ತಳವಾರ ಸಾಬಣ್ಣ, 'ಪಿಡಿಒಗಳು, ಗ್ರಾಮಲೆಕ್ಕಿಗರು ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ. ಈ ಬಗ್ಗೆ 2016ರಲ್ಲೇ ಆದೇಶಹೊರಡಿಸಿದ್ದರೂ ಪಾಲನೆ ಆಗುತ್ತಿಲ್ಲ' ಎಂದರು.

ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಪಿಡಿಒಗಳ ವಾಸ್ತವ್ಯಕ್ಕೆ ಕಟ್ಟಡ ನಿರ್ಮಿಸುವಂತೆ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ನೀಡಿದರು.

ಸಚಿವರು, 'ಪಿಡಿಒಗಳ ವಸತಿಗೆ ಕಟ್ಟಡ ನಿರ್ಮಿಸಲು ಯೋಜನೆ ರೂಪಿಸಲಾಗುವುದು. ಇಲಾಖೆಯಿಂದ ಹಣ ಹೊಂದಿಸಲು ಆಗದಿದ್ದರೆ ವಿಶೇಷ ಅನುದಾನ ನೀಡಲು ಮುಖ್ಯಮಂತ್ರಿಯವರಿಗೆ ಕೋರಲಾಗುವುದು' ಎಂದರು.

**2,318 ಹುದ್ದೆ ಖಾಲಿ:** ಕಾಂಗ್ರೆಸ್‌ನ ಕೆ.ಹರೀಶ್ ಕುಮಾರ್ ಅವರ ಪ್ರಶ್ನೆಗೆ ಸಚಿವರು, 'ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳ 2,318 ಹುದ್ದೆಗಳು ಖಾಲಿ ಇವೆ. 727 ಪಿಡಿಒಗಳು, 635 ಕಾರ್ಯದರ್ಶಿ ಗ್ರೇಡ್–1 ಮತ್ತು 956 ಕಾರ್ಯದರ್ಶಿ ಗ್ರೇಡ್– 2 ಹುದ್ದೆಗಳು ಖಾಲಿ ಇವೆ' ಎಂದು ತಿಳಿಸಿದರು.



ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಕೆಲವು ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಪ್ರಕ್ರಿಯೆ ನಡೆಸಲಿದ್ದು, ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದರು.

### 41.91 ಲಕ್ಷ ಮನೆಗಳಿಗೆ ನಳ ಸಂಪರ್ಕ

'ಜಲ ಜೀವನ್ ಮಿಷನ್ ಯೋಜನೆಯಡಿ 41.91 ಲಕ್ಷ ಮನೆಗಳಿಗೆ ನಳದ ಮೂಲಕ ಕುಡಿಯುವ ನೀರು ಪೂರೈಕೆ ಸಂಪರ್ಕ ಕಲ್ಪಿಸಲಾಗಿದೆ. ಇನ್ನೂ 56 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸುವುದು ಬಾಕಿ ಇದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 97.91 ಲಕ್ಷ ಮನೆಗಳಿವೆ. 2024ರ ವೇಳೆಗೆ ಎಲ್ಲ ಮನೆಗಳಿಗೂ ನಳದ ಮೂಲಕ ಕುಡಿಯುವ ನೀರು ಪೂರೈಸುವ ಗುರಿ ಇದೆ' ಎಂದರು.

ಪ್ರಸಕ್ತ ವರ್ಷ 25 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸುವ ಗುರಿ ಇದೆ. ಈಗಾಗಲೇ 14 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. 2022–23ರಲ್ಲಿ 25 ಲಕ್ಷ ಮನೆಗಳು ಮತ್ತು 2023–24ರಲ್ಲಿ 16 ಲಕ್ಷ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ತಿಳಿಸಿದರು.

**ಕಾಂಗ್ರೆಸ್ ಪ್ರತಿಭಟನೆ**

ಕಾಂಗ್ರೆಸ್ ನಡೆಸಿದ ಟ್ರ್ಯಾಕ್ಟರ್ ರ್‍ಯಾಲಿಯನ್ನು ಸಚಿವ ನಾರಾಯಣ ಗೌಡ ಟೀಕಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಸಭಾಪತಿ ಪೀಠದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು

-ಪ್ರಜಾವಾಣಿ ಚಿತ್ರ/ ರಂಜು ಪಿ

# ಅತ್ಯಾಚಾರ ಕುರಿತ ಮಾತು: ರಮೇಶ್‌ಕುಮಾರ್ ಕ್ಷಮೆ

ಪ್ರಜಾವಾಣಿ ವಾರ್ತೆ

**ಬೆಳಗಾವಿ(ಸುವರ್ಣ ವಿಧಾನಸೌಧ):** ಅತ್ಯಾಚಾರದ ಕುರಿತು ಗುರುವಾರ ಸದನದಲ್ಲಿ ತಾವು ಆಡಿದ ಮಾತಿನ ಬಗ್ಗೆ ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್ ವಿಷಾದ ವ್ಯಕ್ತಪಡಿಸಿ, ಕ್ಷಮೆಯನ್ನೂ ಕೇಳಿದರು.

ಶುಕ್ರವಾರ ಕಲಾಪ ಆರಂಭವಾಗುತ್ತಿದ್ದಂತೆ ಸಮಜಾಯಿಷಿ ನೀಡಿದ ಅವರು, 'ನಾನು ನಿನ್ನೆ ಮಾಡಿದ ಉಲ್ಲೇಖವು ಹೆಣ್ಣಿಗೆ ಅಪಮಾನ ಮಾಡುವುದಾಗಿರಲಿಲ್ಲ ಅಥವಾ ದುರುದ್ದೇಶದಿಂದ ಕೂಡಿದ್ದಲ್ಲ. ನಾನು ಯಾವ ಸನ್ನಿವೇಶದಲ್ಲಿ ಹೇಳಿದೆ ಎಂಬುದನ್ನು ಅರ್ಥ ಮಾಡಿಕೊಂಡಿಲ್ಲ. ಈ ವಿಷಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದಿಲ್ಲ' ಎಂದರು.

'ನನ್ನ ಮಾತಿನಿಂದ ದೇಶದ ಯಾವುದೇ ಭಾಗದ ಹೆಣ್ಣು ಮಕ್ಕಳಿಗೆ ನೋವಾಗಿದ್ದಾರೆ ಶುದ್ಧ ಹೃದಯದಿಂದ ವಿಷಾದಿಸುತ್ತೇನೆ. ನನ್ನಿಂದ ಅಪರಾಧ ಆಗಿದೆ ಎಂದು ತೀರ್ಪು ಕೊಟ್ಟಾಗಿದೆ. ಆದ್ದರಿಂದ ಕ್ಷಮೆ ಕೇಳುತ್ತೇನೆ' ಎಂದು ರಮೇಶ್ ಕುಮಾರ್ ಹೇಳಿದರು.

ಈ ವಿಷಯವಾಗಿ ಮಾತನಾಡಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ನಾವೆಲ್ಲರೂ ಪರಸ್ಪರ ಭಾವನಾತ್ಮಕ ಸಂಬಂಧ ಹೊಂದಿರುವವರು. ರಮೇಶ್‌ಕುಮಾರ್ ಅವರು ಗುರುವಾರ ಸಾಂದರ್ಭಿಕವಾಗಿ ಮಾತನ್ನು ಪ್ರಸ್ತಾಪಿಸಿದ್ದರು. ಈ ಸದನದಲ್ಲಿರುವ ನಾವೆಲ್ಲರೂ ಮಹಿಳೆಯರ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ' ಎಂದು ತೆರೆ ಎಳೆದರು. ಬೇರೆ ಯಾವುದೇ ಸದಸ್ಯರಿಗೂ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಲಿಲ್ಲ.

## ಅವರದ್ದೇ ಭಾಷೆಯಲ್ಲಿ ಹೇಳಿದ್ದಾರೆ: ಇಬ್ರಾಹಿಂ

'ಸರ್ಕಾರಕ್ಕೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹೇಳಿದರೆ ಅರ್ಥ ಆಗುವುದಿಲ್ಲ. ಹೀಗಾಗಿ, ಅವರದ್ದೇ ಭಾಷೆಯಲ್ಲಿ ರಮೇಶ್‌ಕುಮಾರ್ ಹೇಳಿದ್ದಾರೆ' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

ಅತ್ಯಾಚಾರದ ಕುರಿತು ವಿಧಾನಸಭೆಯಲ್ಲಿ ಗುರುವಾರ ಕೆ.ಆರ್. ರಮೇಶ್‌ಕುಮಾರ್ ಆಡಿದ್ದ ಮಾತಿಗೆ ಪ್ರತಿಕ್ರಿಯಿಸಿದ ಇಬ್ರಾಹಿಂ, 'ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದವರು ಪಕ್ಕದಲ್ಲಿ ಕುಳಿತಿದ್ದಾರೆ. ಶಿಸ್ತಿನ ಕೇಸರಿ ನಾಯಕರು, ಹನ್ನೆರಡು ಪತಿವ್ರತ ಮಹಾಜನರು ಯಾಕೆ ಸುಮ್ಮನಿದ್ದಾರೆ' ಎಂದು ತಮ್ಮದೇ ಧಾಟಿಯಲ್ಲಿ ಪರೋಕ್ಷವಾಗಿ ಬಿಜೆಪಿಯ ಸಚಿವರನ್ನು ಪ್ರಶ್ನಿಸಿದರು.

'ರಮೇಶ್‌ಕುಮಾರ್ ಯಾವ ಅರ್ಥದಲ್ಲಿ ಹೇಳಿದ್ದಾರೆಂದು ಗೊತ್ತಿಲ್ಲ. ಪೀಠದಲ್ಲಿದ್ದ ಸ್ಪೀಕರ್ ಅದನ್ನು ತೆಗೆದುಹಾಕಬೇಕಿತ್ತು' ಎಂದ ಅವರು, 'ರಮೇಶ್‌ಕುಮಾರ್ ಬ್ರಾಹ್ಮಣರು. ಆದರೆ, ಅವರು ಕೇಶವ ಕೃಪಾ ಮತ್ತು ಬಸವಾದಿ ಶರಣರ ನಡುವೆ ಇದ್ದಾರೆ' ಎಂದರು.

'ಸಂಸದ ಸದಾನಂದಗೌಡರ ವಿಡಿಯೊ ಇದೆ. ಸದಾನಂದಗೌಡ ಸದಾ ನಗುತ್ತಾ ಇರುತ್ತಾರೆ. ಅವರು ನ್ಯಾಯಾಲಯದಿಂದ ಯಾಕೆ ತಡೆಯಾಜ್ಞೆ ತಂದರು. ಬಿಜೆಪಿ ಮತ್ತು ಕೇಶವ ಕೃಪಾದವರು ಯಾಕೆ ಸುಮ್ಮನಿದ್ದಾರೆ' ಎಂದು ಟೀಕಿಸಿದರು.

> **ಯಾರು ಕೂಡ ಹೀಗೆ ಮಾತನಾಡಬಾರದು. ಇದು ಬಿಜೆಪಿ, ಕಾಂಗ್ರೆಸ್ ವಿಚಾರ ಎಂದಲ್ಲ. ಇಂಥ ಹೇಳಿಕೆಗಳಿಂದ ಮಹಿಳೆಯರಿಗೆ ನೋವಾಗುತ್ತದೆ**
> **ಅಂಜಲಿ ನಿಂಬಾಳ್ಕರ್,** ಕಾಂಗ್ರೆಸ್ ಶಾಸಕಿ

ಕರ್ನಾಟಕ ಸರ್ಕಾರ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ–ಕರ್ನಾಟಕ, ವಿಜಯಪುರ
ಟೆಂಡರ್ ಪ್ರಕಟಣೆ
ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕೆ.ಜಿ.ಬಿ.ವ್ಹಿ. ಟೈಪ್–1 ವಸತಿ ಶಾಲೆಗಳಿಗೆ ಆಹಾರ ಪೂರೈಕೆ ಮತ್ತು ಆಹಾರ ತಯಾರಿಸಲು ಸಿಬ್ಬಂದಿ ಪೂರೈಸಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಈ ಮಾಹಿತಿಯನ್ನು http:www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08352–250151, 9448999389 ಕ್ಕೆ ಸಂಪರ್ಕಿಸಬಹುದು.
ಸಹಿ/– ಉಪನಿರ್ದೇಶಕರು (ಆಡಳಿತ), ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ–ಕರ್ನಾಟಕ, ವಿಜಯಪುರ
ವಾಸಾಸಂಇ/ವಿಜಯಪುರ/389/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:28/2021–22/1210
ದಿನಾಂಕ: 16–12–2021.
ಅಲ್ಪಾವಧಿ ಟೆಂಡರ ಪ್ರಕಟಣೆ (1ನೇ ಹಾಗೂ 2ನೇ ಕರೆ)
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
NRDWP JJM ಯೋಜನೆಯಡಿ ಬ್ಯಾಡಗಿ, ಹಾನಗಲ್ಲ, ಹಾವೇರಿ, ಸವಣೂರ ಮತ್ತು ಶಿಗ್ಗಾಂವ ತಾಲೂಕುಗಳಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ. (1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 28–12–2021 ರ 17:30 ಗಂಟೆವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 1 ರಿಂದ 13) ತಾಂತ್ರಿಕ ಬಿಡ್ ತೆರೆಯುವ (ಕ್ರ.ಸಂ 14 ರಿಂದ 24) (ಸಾಧ್ಯವಾದಲ್ಲಿ) ದಿನಾಂಕ : 30–12–2021ರ 10:00 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 14 ರಿಂದ 24) (ಸಾಧ್ಯವಾದಲ್ಲಿ) ದಿನಾಂಕ : 01–01–2022ರ 10:30 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. ದಿನಾಂಕ : 23–12–2021 ರಂದು ಬೆಳಿಗ್ಗೆ 11:00 ಗಂಟೆಗೆ
ಇಂಡೆಂಟ್ ನಂ : (1) 36966, (2) 36967, (3) 36140, (4) 36886, (5) 36968, (6) 36888, (7) 36139, (8) 36204, (9) 36782, (10) 36483 (SC), (11) 36787 (SC), (12) 36887 (SC), (13) 36786 (ST), (14) 36205, (15) 36969, (16) 36482, (17) 36785, (18) 36779, (19) 36260, (20) 36266, (21) 36783, (22) 36889, (23) 35602/CALL-2, (24) 36775.
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/306/2021–22

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

## ಸರ್ಕಾರಕ್ಕೆ ಚಾಟಿ ಬೀಸಿದ ಸಭಾಧ್ಯಕ್ಷ

ಪ್ರಜಾವಾಣಿ ವಾರ್ತೆ

**ಬೆಳಗಾವಿ(ಸುವರ್ಣ ವಿಧಾನಸೌಧ):** 'ಸರ್ಕಾರದಲ್ಲಿ ಕೆಲಸಗಳು ಆಗುತ್ತಿಲ್ಲ, ಆಡಳಿತದಲ್ಲಿ ಹಿಡಿತ ತಪ್ಪುತ್ತಿರುವ ಭಾವನೆ ಮೂಡುತ್ತಿದೆ. ನಮ್ಮ ಕೆಲಸಗಳೇ ಆಗುತ್ತಿಲ್ಲ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು.

ನಗರೋತ್ಥಾನ ಮೂರನೇ ಹಂತದ ಯೋಜನೆಗಳಲ್ಲಿ ಕೆಲಸ ಬದಲಾವಣೆಗೆ ಸಂಬಂಧಿಸಿ ಶಾಸಕರ ಬೇಡಿಕೆಗಳನ್ನು ಕಡೆಗಣಿಸುತ್ತಿರುವ ಬಗ್ಗೆ ಅವರು ಸಚಿವರು ಮತ್ತು ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ ಅವರ ಪ್ರಶ್ನೆಗೆ ಪೌರಾಡಳಿತ ಸಚಿವ ಎಂ.ಟಿ. ಬಿ.ನಾಗರಾಜ್ ಅವರು ಉತ್ತರಿಸುವಾಗ ಸಭಾಧ್ಯಕ್ಷರು ಅಧಿಕಾರಿಗಳ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದರು. 'ಸಚಿವರು ಈ ಬಗ್ಗೆ ಏಕೆ ಗಮನಹರಿಸುತ್ತಿಲ್ಲ' ಎಂದೂ ಪ್ರಶ್ನಿಸಿದರು.

'ಎರಡು ವರ್ಷಗಳಿಂದ ಕೆಲಸ ಬದಲಾವಣೆಗೆ ಸಂಬಂಧಿಸಿ ಕಡತಗಳು ನಮ್ಮ ಕ್ಷೇತ್ರದಿಂದ ಜಿಲ್ಲಾಧಿಕಾರಿ ಕಚೇರಿಗೂ, ಅಲ್ಲಿಂದ ವಿಧಾನಸೌಧಕ್ಕೂ ಬರುತ್ತವೆ. ಆದರೆ, ಕೆಲಸ ಆಗುವುದಿಲ್ಲ. ವಿಧಾನಸೌಧದಿಂದ ಮತ್ತೆ ವಾಪಸ್ ಬರುತ್ತವೆ. ಎರಡು ವರ್ಷದಿಂದ ಇದೇ ನಡೆಯುತ್ತಿದೆ. ಬೆಂಗಳೂರಿನಲ್ಲಿ ಕೊಕ್ಕೆ ಹಾಕಿ ಕೂರುತ್ತಾರೆ. ಸಚಿವರ ಗಮನಕ್ಕೂ ಇದು ಬರುವುದಿಲ್ಲ' ಎಂದು ಕಾಗೇರಿ ಸಿಟ್ಟಿನಿಂದ ನುಡಿದರು. ಪಕ್ಷಭೇದ ಮರೆತು ಸದಸ್ಯರು ಧ್ವನಿಗೂಡಿಸಿದರು.

### ಮುಖ್ಯಮಂತ್ರಿ ಬೊಮ್ಮಾಯಿ ಕನಸಿನ ರೈತ ವಿದ್ಯಾನಿಧಿಗೆ ₹100 ಕೋಟಿ

# ₹3,574 ಕೋಟಿ ಹೆಚ್ಚುವರಿ ವೆಚ್ಚ

ಪ್ರಜಾವಾಣಿ ವಾರ್ತೆ

**ಬೆಳಗಾವಿ (ಸುವರ್ಣ ವಿಧಾನಸೌಧ):** ಬಜೆಟ್‌ನಲ್ಲಿ ಅನುಮೋದನೆ ಪಡೆದಿದ್ದಕ್ಕಿಂತ ₹10,265.33 ಕೋಟಿ ಹೆಚ್ಚುವರಿ ವೆಚ್ಚ ಮಾಡಲು ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ಸದನದ ಒಪ್ಪಿಗೆ ಪಡೆದಿದ್ದ ರಾಜ್ಯ ಸರ್ಕಾರ, ಈಗ ಮತ್ತೆ ₹3574.67 ಕೋಟಿ ವೆಚ್ಚ ಮಾಡಲು ಈ ವರ್ಷದ ಎರಡನೇ ಪೂರಕ ಅಂದಾಜನ್ನು ಮಂಡಿಸಿದೆ.

ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದರು.

**ಯಾವುದಕ್ಕೆ ವೆಚ್ಚ:**

- ಪಂಚಾಯತ್ ರಾಜ್ ಇಲಾಖೆಯ ಉಸ್ತುವಾರಿಯಲ್ಲಿರುವ ಗ್ರಂಥಾಲಯಗಳ ಮೇಲ್ವಿಚಾರಕರ ಗೌರವ ಸಂಭಾವನೆಗಾಗಿ ₹26.90 ಕೋಟಿ ಅನುದಾನ
- ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಪ್ರತಿನಿಧಿಸುವ ಚಿಕ್ಕಬಳ್ಳಾಪುರದಲ್ಲಿ ನಿರ್ಮಿಸಲಾಗುತ್ತಿರುವ ವೈದ್ಯಕೀಯ ಕಾಲೇಜಿಗೆ ಕೇಂದ್ರದ ಪಾಲು ₹50 ಕೋಟಿ ಹಾಗೂ ರಾಜ್ಯದ ₹33.32 ಕೋಟಿ ಸೇರಿ 83.32 ಕೋಟಿ ಒದಗಿಸಲಾಗಿದೆ. ಈ ಪೈಕಿ ₹10 ಕೋಟಿ ಪರಿಶಿಷ್ಟ ಜಾತಿ ವಿಶೇಷ ಯೋಜನೆ ಹಾಗೂ ಗಿರಿಜನ ಉಪಯೋಜನೆಯಿಂದ ಒದಗಿಸಲಾಗಿದೆ.
- ಕೋವಿಡ್‌ನಿಂದ ಮೃತಪಟ್ಟ ಪ್ರತಿಯೊಬ್ಬ ವ್ಯಕ್ತಿಯ ಕುಟುಂಬಕ್ಕೆ ತಲಾ ₹50 ಸಾವಿರದಂತೆ ಪರಿಹಾರ ಪಾವತಿಸಲು ₹224.73 ಕೋಟಿ
- ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘಕ್ಕೆ ₹100 ಕೋಟಿ ಹೆಚ್ಚುವರಿ ಅನುದಾನ
- ಅಬಕಾರಿ ಸಬ್ ಇನ್‌ಸ್ಪೆಕ್ಟರ್‌ಗಳು ಓಡಾಡಲು 316 ದ್ವಿಚಕ್ರ ವಾಹನ ಖರೀದಿಗೆ ₹2.41 ಕೋಟಿ
- ವಿಧಾನ ಪರಿಷತ್ತಿನ ಚುನಾವಣೆ ವೆಚ್ಚಕ್ಕಾಗಿ ₹7.5 ಕೋಟಿ
- 2021ರಲ್ಲಿ ನಡೆದ ಉಪಚುನಾವಣೆ ವೇಳೆ ಮತಗಟ್ಟೆ ಅಧಿಕಾರಿಗಳಾಗಿ ಪಾಲ್ಗೊಂಡು, ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಲು ₹2.10 ಕೋಟಿ
- ಮತದಾರರ ಗುರುತಿನ ಚೀಟಿಯನ್ನು ತ್ವರಿತ ಅಂಚೆಸೇವೆ ಮೂಲಕ ಮತದಾರರ ವಿಳಾಸಕ್ಕೆ ಕಳಿಸಲು ₹4.25 ಕೋಟಿ
- ಡಿ.ಜೆ.ಹಳ್ಳಿ–ಕೆ.ಜಿ. ಹಳ್ಳಿ ಗಲಭೆಯಲ್ಲಿ ನಷ್ಟಕ್ಕೆ ಒಳಗಾದವರಿಗೆ ಪರಿಹಾರ ನೀಡಲು ರಚಿಸಲಾಗಿರುವ ಕ್ಲೇಮ್ ಕಮಿಷನರ್ ಕಚೇರಿ ವೆಚ್ಚಕ್ಕೆ ₹50 ಲಕ್ಷ, ಮಹದಾಯಿ ಕ್ಲೇಮ್ ಕಮಿಷನರ್ ಕಚೇರಿ ವೆಚ್ಚಕ್ಕೆ ₹33.87 ಲಕ್ಷ
- ಸಾರಿಗೆ ಸಂಸ್ಥೆಗಳ ನಷ್ಟ ಭರಿಸಲು ಬಿಎಂಟಿಸಿಗೆ ₹51.73 ಕೋಟಿ ಸೇರಿದಂತೆ ಒಟ್ಟು ನಾಲ್ಕು ಸಂಸ್ಥೆಗಳಿಗೆ ₹135.19 ಕೋಟಿ
- ಪರಿಹಾರಾತ್ಮಕ ನೆಡುತೋಪು ನಿರ್ವಹಣೆ ಯೋಜನೆಗಾಗಿ ಅರಣ್ಯ ಇಲಾಖೆಗೆ ₹156 ಕೋಟಿ
- ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ನೀಡಲು ₹31.10 ಕೋಟಿ
- ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರಿಗೆ ಕೋವಿಡ್–2 ಪ್ಯಾಕೇಜ್‌ನಡಿ ಒಂದು ಬಾರಿ ತಲಾ ₹2 ಸಾವಿರ ಪರಿಹಾರ ನೀಡಲು ಹೆಚ್ಚುವರಿಯಾಗಿ ₹24.70ಕೋಟಿ
- ವಿಜಯ ನಗರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣಕ್ಕೆ ಪೀಠೋಪಕರಣ ಖರೀದಿಗೆ ₹4.76 ಕೋಟಿ, ಹೆಚ್ಚುವರಿ ಮೊತ್ತ ₹3.73 ಕೋಟಿ, ಜಿಲ್ಲಾಡಳಿತ ಭವನ, ಇತರೆ ಕಚೇರಿ, ವಸತಿ ಗೃಹಗಳ ಭೂಮಿ ಖರೀದಿಗೆ ₹10 ಕೋಟಿ ಸೇರಿ ಹೆಚ್ಚುವರಿಯಾಗಿ ₹73.90 ಕೋಟಿ ಹಾಗೂ ವಿವಿಧ ಕಚೇರಿಗಳಿಗಾಗಿ ಗುರುತಿಸಿರುವ ಕಟ್ಟಡಗಳ ದುರಸ್ತಿಗಾಗಿ ₹41.69 ಕೋಟಿ ಸೇರಿ ₹134 ಕೋಟಿ ಒದಗಿಸಲಾಗಿದೆ.

### ಸಿ.ಎಂ ದಾವೋಸ್ ಭೇಟಿಗೆ ₹4 ಕೋಟಿ

ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳುವ ನಿಯೋಗದ ವೆಚ್ಚಕ್ಕಾಗಿ ₹4 ಕೋಟಿ ಭರಿಸಲು ಪೂರಕ ಅಂದಾಜಿನಲ್ಲಿ ಪ್ರಸ್ತಾವಿಸಲಾಗಿದೆ.

2022ರ ಜನವರಿಯಲ್ಲಿ ಸಭೆ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸಚಿವರು, ಅಧಿಕಾರಿಗಳಿರುವ ನಿಯೋಗ ಇದರಲ್ಲಿ ಭಾಗಿಯಾಗಲಿದೆ. ಅದಕ್ಕಾಗಿ ಹೆಚ್ಚುವರಿ ಮೊತ್ತವನ್ನು ಅಂದಾಜಿನಲ್ಲಿ ಸೇರಿಸಲಾಗಿದೆ.

# ಕಾಂಗ್ರೆಸ್ ಶಾಸಕರಿಗೆ ಅಡ್ಡಿ: ಹಕ್ಕುಚ್ಯುತಿ ಸಮಿತಿಗೆ

**ಬೆಳಗಾವಿ (ಸುವರ್ಣ ವಿಧಾನಸೌಧ):** ಟ್ರ್ಯಾಕ್ಟರ್‌ನಲ್ಲಿ ವಿಧಾನಮಂಡಲ ಅಧಿವೇಶನಕ್ಕೆ ಬರುತ್ತಿದ್ದ ಶಾಸಕರನ್ನು ಗುರುವಾರ ಮೂರು ಗಂಟೆ ತಡೆದು ನಿಲ್ಲಿಸಿದ್ದ ಆರೋಪದಡಿ ಬೆಳಗಾವಿ ನಗರ ಪೊಲೀಸ್ ಕಮಿಷನರ್ ಕೆ.ತ್ಯಾಗರಾಜನ್ ಮತ್ತು ಉತ್ತರ ವಲಯ ಐಜಿಪಿ ಸತೀಶ್ ಕುಮಾರ್ ವಿರುದ್ಧ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಹಕ್ಕುಚ್ಯುತಿ ನಿರ್ಣಯ ಮಂಡಿಸಿದೆ.

ಶುಕ್ರವಾರ ನಿರ್ಣಯ ಮಂಡಿಸಿದ್ದ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, 'ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ನಾವು ಟ್ರ್ಯಾಕ್ಟರ್‌ನಲ್ಲಿ ಬರುತ್ತಿದ್ದೆವು. ಸದನದ ಕಲಾಪಕ್ಕೆ ಹೊರಟಿರುವುದು ಗೊತ್ತಿದ್ದರೂ ಅಧಿಕಾರಿಗಳು ತಡೆದರು ಎಂದು ತಿಳಿಸಿದರು.

ಅಧಿವೇಶನದ ಅವಧಿಯಲ್ಲಿ ಶಾಸಕರು ಕಲಾಪಕ್ಕೆ ಬಾರದಂತೆ ತಡೆಯುವುದನ್ನು ಸಹಿಸಲಾಗದು. ಸದನದ ಕಲಾಪದಲ್ಲಿ ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪೊಲೀಸರು ಕಿತ್ತುಕೊಂಡಿದ್ದಾರೆ. ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

**ಸಮಿತಿಗೆ ಪರಿಶೀಲನೆ:** ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, 'ಈ ವಿಚಾರದಲ್ಲಿ ಪ್ರತಿಪಕ್ಷದ ನಾಯಕರ ಮಾತನ್ನು ನಾನೂ ಬೆಂಬಲಿಸುವೆ. ಶಾಸಕರನ್ನು ಪೊಲೀಸರು ತಡೆದಿರುವ ಮಾಹಿತಿ ಬರುತ್ತಿದ್ದಂತೆ ನಾನು ಮುಖ್ಯಮಂತ್ರಿ, ಗೃಹ ಸಚಿವರು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಜತೆ ಮಾತನಾಡಿದ್ದೆ. ತಕ್ಷಣ ಶಾಸಕರ ಪ್ರವೇಶಕ್ಕೆ ಅವಕಾಶ ನೀಡಲು ಸೂಚಿಸಿದ್ದೆ, ಆ ಬಳಿಕವೂ ತಡೆದಿದ್ದಾರೆ. ಇದು ಸರಿಯಲ್ಲ' ಎಂದರು.

ವಿರೋಧ ಪಕ್ಷದ ನಾಯಕರು ಮಂಡಿಸಿರುವ ಹಕ್ಕುಚ್ಯುತಿ ನಿರ್ಣಯದ ಪ್ರಸ್ತಾವವನ್ನು ಪರಿಶೀಲನೆಗಾಗಿ ಹಕ್ಕುಚ್ಯುತಿ ಸಮಿತಿಗೆ ವರ್ಗಾಯಿಸುತ್ತಿರುವುದಾಗಿ ಸಭಾಪತಿ ಪ್ರಕಟಿಸಿದರು.

**ತಕ್ಷಣ ಕ್ರಮಕ್ಕೆ ಆಗ್ರಹ:** ಜೆಡಿಎಸ್‌ನ ಮರಿತಿಬ್ಬೇಗೌಡ, 'ಅಧಿವೇಶನದ ಅವಧಿಯಲ್ಲೇ ಪೊಲೀಸರು ಶಾಸಕರ ಹಕ್ಕಿಗೆ ಧಕ್ಕೆ ತಂದಿದ್ದಾರೆ. ಈ ಪ್ರಕರಣವನ್ನು ಸಾಮಾನ್ಯ ಪ್ರಕರಣದಂತೆ ಹಕ್ಕುಚ್ಯುತಿ ಸಮಿತಿಗೆ ವರ್ಗಾಯಿಸಬಾರದು. ತಕ್ಷಣವೇ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಹಲವು ಸದಸ್ಯರೂ ಇದೇ ಬೇಡಿಕೆ ಮುಂದಿಟ್ಟರು. ಆದರೆ, ಸಭಾಪತಿ ನಿರ್ಧಾರ ಬದಲಿಸಲಿಲ್ಲ.

# ಬೈರತಿ ರಾಜೀನಾಮೆಗೆ 'ಕೈ' ಪಟ್ಟು

ಒಂದನೇ ಪುಟದಿಂದ

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಎರಡೂ ಪ್ರಕರಣಗಳ ಸ್ವರೂಪ ಬೇರೆ ಬೇರೆ. ಬೈರತಿ ಅವರ ಮೇಲಿನ ಪ್ರಕರಣ ಖಾಸಗಿ ಭೂಮಿಯ ವರ್ಗಾವಣೆ ಕುರಿತದ್ದಾಗಿದೆ. ಆದರೆ ಗಣಪತಿ ಪ್ರಕರಣ, ಕೊಲೆ ಶಂಕೆಯದ್ದಾಗಿತ್ತು. ಆದ್ದರಿಂದ ಎರಡೂ ಪ್ರಕರಣಗಳ ಹೋಲಿಕೆ ಸರಿಯಲ್ಲ' ಎಂದರು.

'ಬೈರತಿ ಬಸವರಾಜ ಜನಪ್ರತಿನಿಧಿ ಆಗುವುದಕ್ಕೆ ಮೊದಲಿನ ಪ್ರಕರಣವೊಂದನ್ನು ಸದನದಲ್ಲಿ ಪ್ರಸ್ತಾಪಿಸುವುದು ಮತ್ತು ಅದಕ್ಕಾಗಿ ನಿಯಮ 60ರಡಿ ಪ್ರಸ್ತಾಪಕ್ಕೆ ಒತ್ತಾಯಿಸುವುದು ಶೋಭೆ ತರುವುದಿಲ್ಲ. ಎಫ್‌ಐಆರ್ ಹಾಕಿದ ತಕ್ಷಣ ಅಪರಾಧಿ ಆಗುವುದಿಲ್ಲ. ಇಲ್ಲಿ ನೈತಿಕತೆಗಿಂತ ಕಾನೂನು, ನಿಯಮಾವಳಿಗಳ ಮೂಲಕ ಸದನ ನಡೆಸುವುದು ಮುಖ್ಯವಾಗುತ್ತದೆ. ರಾಜೀನಾಮೆ ಕೇಳುವುದೂ ಸರಿಯಲ್ಲ. ಭೂವರ್ಗಾವಣೆ ಪ್ರಕರಣವನ್ನು ನ್ಯಾಯಾಲಯ ವಿಚಾರಣೆ ಮಾಡಲಿ, ನಾವು ಇಲ್ಲಿ ವಿಚಾರಣೆ ನಡೆಸುವುದು ಬೇಡ' ಎಂದು ಬೊಮ್ಮಾಯಿ ಹೇಳಿದರು.

ನ್ಯಾಯಾಲಯದಲ್ಲಿ ಇರುವ ಪ್ರಕರಣವನ್ನು ನಿಯಮಾವಳಿ ಮೀರಿ ಯಾವುದೇ ಕಾರಣಕ್ಕೂ ಸದನದಲ್ಲಿ ಚರ್ಚೆಗೆ ಅವಕಾಶ ನೀಡಬಾರದು ಎಂದು ಸಂಸದೀಯ ವ್ಯವಹಾರಗಳ ಸಚಿವರ ಜೆ.ಸಿ.ಮಾಧುಸ್ವಾಮಿ ಮುಖ್ಯಮಂತ್ರಿಯವರ ಬೆಂಬಲಕ್ಕೆ ನಿಂತರು.

ಎರಡು ಕಡೆಯ ವಾದ ಮತ್ತು ಪ್ರತಿವಾದ ಆಲಿಸಿದ ಸಭಾಧ್ಯಕ್ಷ ಕಾಗೇರಿ, 'ಈ ವಿಷಯ ನ್ಯಾಯಾಲಯದಲ್ಲಿ ಇರುವುದರಿಂದ ನಿಯಮಾವಳಿ 62(7) ಅ ಅನ್ವಯ ಪ್ರಸ್ತಾಪಿಸಲು ಅವಕಾಶ ಇಲ್ಲ' ಎಂದು ರೂಲಿಂಗ್ ನೀಡಿದರು. ಇದನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು. ಗದ್ದಲ ನಿಯಂತ್ರಣಕ್ಕೆ ಬಾರದ್ದರಿಂದ ಸಭಾಧ್ಯಕ್ಷರು ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು. ಭೋಜನ ವಿರಾಮದ ಬಳಿಕ ವಿಧಾನಪರಿಷತ್‌ನಲ್ಲೂ ಈ ವಿಷಯ ಪ್ರಸ್ತಾಪಕ್ಕೆ ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದಾಗ ಸಭಾಪತಿ ಬಸವರಾಜ ಹೊರಟ್ಟಿ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

## 'ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ'

'ಸಚಿವ ಬೈರತಿ ಬಸವರಾಜ, ವಿಧಾನ ಪರಿಷತ್ ಸದಸ್ಯ ಆರ್. ಶಂಕರ್ ಮತ್ತು ಇತರ ಮೂವರು ದಾಖಲೆಗಳನ್ನು ಸೃಷ್ಟಿಸಿ ಕೆ.ಆರ್.ಪುರದ ಕಲ್ಕೆರೆಯಲ್ಲಿ ನೂರಾರು ಕೋಟಿ ಮೌಲ್ಯದ ಭೂಮಿ ಕಬಳಿಸಿದ್ದಾರೆ. ಈ ಪ್ರಕರಣವನ್ನು ನಾವು (ಕಾಂಗ್ರೆಸ್) ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುವರ್ಣವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚೆಗೆ ಸಭಾಧ್ಯಕ್ಷರು ಅವಕಾಶ ನಿರಾಕರಿಸಿದರು. ಆದರೆ, ನಮ್ಮ ಹೋರಾಟ ಮುಂದುವರಿಸುತ್ತೇವೆ' ಎಂದರು.

'ಭೂಕಬಳಿಕೆ ಬಗ್ಗೆ ದೂರು ನೀಡಿದ್ದರೂ ಪೊಲೀಸರು 'ಬಿ' ರಿಪೋರ್ಟ್ ಹಾಕಿದ್ದರು. ಅದನ್ನು ಭೂ ಮಾಲೀಕರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು.

ನ್ಯಾಯಾಲಯ ಐವರು ಆರೋಪಿಗಳ ವಿರುದ್ಧ ಕ್ರಿಮಿನಲ್ ಅಪರಾಧಗಳಡಿ ಎಫ್‌ಐಆರ್ ದಾಖಲಿಸುವಂತೆ ಆದೇಶಿಸಿದೆ. ಪ್ರಕರಣದಲ್ಲಿ ಮಾದಪ್ಪ, ಪಿಳ್ಳ ಮಾದಪ್ಪ, ಬೈರತಿ ಬಸವರಾಜ, ಆರ್. ಶಂಕರ್, ಅರುಣ್ ಎಂಬವರು ಆರೋಪಿಗಳು. ಈ ಐವರು ಕ್ರಿಮಿನಲ್ ಷಡ್ಯಂತ್ರ ನಡೆಸಿ, ಅಣ್ಣಯ್ಯಪ್ಪ ಎಂಬವರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡು 22.43 ಎಕರೆ ಜಮೀನಿಗೆ ಕ್ರಯಪತ್ರ ಮಾಡಿದ್ದಾರೆ' ಎಂದು ಆರೋಪಿಸಿದರು.

### ಸುಧಾಕರ್ ಸಂಧಾನ ಯತ್ನಕ್ಕೆ ಟೀಕೆ

'ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರು ಭೂಹಗರಣದಲ್ಲಿ ಭಾಗಿಯಾಗಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ನನ್ನ ಜೊತೆ ಸಂಧಾನಕ್ಕೆ ಮುಂದಾಗಿದ್ದರು' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಎಂ. ನಾರಾಯಣಸ್ವಾಮಿ ಹೇಳಿದರು.

ಸುವರ್ಣವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಇಂದು (ಶುಕ್ರವಾರ) ಬೆಳಿಗ್ಗೆ ಸಚಿವರೊಬ್ಬರು ನನ್ನನ್ನು ಭೇಟಿ ಮಾಡಿ ಈ ವಿಷಯದಲ್ಲಿ ಸಂಧಾನ ಮಾಡುವುದಕ್ಕೆ ಪ್ರಯತ್ನಿಸಿದರು. ಸಿದ್ದರಾಮಯ್ಯ ಜೊತೆಗೂ ಮಾತನಾಡಲು ಸುಧಾಕರ್ ಯತ್ನಿಸಿದ್ದರು. ಆದರೆ, ಸಿದ್ದರಾಮಯ್ಯ ಮಾತನಾಡಿಲ್ಲ' ಎಂದರು. 'ಈ ಬಗ್ಗೆ ಗುರುವಾರ ಬೆಳಿಗ್ಗೆ ಸಭಾಪತಿ ಸಂಧಾನ ಮಾಡಿದ್ದರು. ಬೇರೆ ರೂಪದಲ್ಲಿ ವಿಷಯ ಪ್ರಸ್ತಾಪಿಸಿದರೆ ಅವಕಾಶ ಕೊಡುತ್ತೇನೆ ಎಂದಿದ್ದಾರೆ. ಈ ಆರೋಪವನ್ನು ನ್ಯಾಯಾಲಯ ಕೂಡ ಎತ್ತಿ ಹಿಡಿದಿದೆ' ಎಂದರು.

'ಬೈರತಿ ವಿರುದ್ಧ ಷಡ್ಯಂತ್ರ ಮಾಡುತ್ತಿಲ್ಲ. ಎಫ್‌ಐಆರ್ ದಾಖಲಿಸುವಂತೆ ಕೋರ್ಟ್ ಆದೇಶಿಸಿದೆ. ಡಿ.ಕೆ. ಶಿವಕುಮಾರ್ ಮೇಲೆ ಯಾವ ಕೇಸೂ ಇಲ್ಲ. ಆದರೆ, ಬೈರತಿ ಮೇಲೆ ವಂಚನೆ ಕೇಸ್ ದಾಖಲಾಗಿದೆ. ಹೀಗಾಗಿ ಅವರ ಮೇಲೆ ಕ್ರಮ ಜರುಗಿಸಬೇಕು' ಎಂದರು.

# ದತ್ತ: ಅಖಂಡತೆಯ ಅವಧೂತ

• ಎಸ್. ಸೂರ್ಯಪ್ರಕಾಶ ಪಂಡಿತ್

ದತ್ತಾತ್ರೇಯ

ಇಂದು ದತ್ತ ಜಯಂತಿ

ಸರ್ವಂ ಜಗದ್ವಿದ್ಧಿ ನಿರಾಕೃತೀದಂ
ಸರ್ವಂ ಜಗದ್ವಿದ್ಧಿ ವಿಕಾರಹೀನಮ್
ಸರ್ವಂ ಜಗದ್ವಿದ್ಧಿ ವಿಶುದ್ಧದೇಹಂ
ಸರ್ವಂ ಜಗದ್ವಿದ್ಧಿ ಶಿವೈಕರೂಪಮ್

ಇದು 'ಅವಧೂತಗೀತೆ'ಯ ಒಂದು ಪದ್ಯ. ಸಾಕ್ಷಾತ್ ದತ್ತಾತ್ರೇಯನೇ ಉಪದೇಶಿಸಿದ್ದು ಈ ಗೀತೆ ಎಂಬ ನಂಬಿಕೆ ಪರಂಪರೆಯಲ್ಲಿದೆ.

ದತ್ತಾತ್ರೇಯ ಅವಧೂತಗುರು. ಅವಧೂತ ಎಂದರೆ ಎಲ್ಲ ಬಗೆಯ ರಾಗ–ದ್ವೇಷಗಳನ್ನೂ ಬಿಟ್ಟವನು; ಯಾವುದಕ್ಕೂ ಅಂಟಿಕೊಂಡವನಲ್ಲ. ಹೀಗಾಗಿಯೇ ಅವನು ಲೋಕದ ಕಣ್ಣಿಗೆ ವಿಚಿತ್ರವಾಗಿ ಕಾಣುತ್ತಾನೆ – ಬಾಲನಂತೆ, ಹುಚ್ಚನಂತೆ, ಪಿಶಾಚದಂತೆ – ಅವನು ನಮ್ಮ ಕಣ್ಣಿಗೆ ಕಾಣುತ್ತಾನೆ. ನಮಗೆ ಯಾವುದು ಪೂಜ್ಯವೋ ಅದು ಅವನಿಗೆ ತ್ಯಾಜ್ಯವಾಗಿರಬಲ್ಲದು, ನಮಗೆ ಯಾವುದು ತ್ಯಾಜ್ಯವೋ ಅದು ಅವನಿಗೆ ಪೂಜ್ಯವಾಗಿರಬಹುದು. ಒಟ್ಟಿನಲ್ಲಿ ಅವಧೂತ ನಮ್ಮ ಎಣಿಕೆಗೆ ಸಿಗುವವನಲ್ಲ ಎಂಬುದು ತಾತ್ಪರ್ಯ.

ಅವಧೂತತತ್ತ್ವದ ಕಲ್ಪನೆ ಭಾರತೀಯ ಪರಂಪರೆಯ ವಿಶಿಷ್ಟ ಚಿಂತನೆ. ನಮ್ಮ ದಿಟವಾದ ಇರವು ಎಂದರೆ ಆನಂದವೇ ಹೌದು ಎಂಬುದು ವೇದಾಂತದ ನಿಲುವು. ಈ ಆನಂದಕ್ಕೆ ಮೂಲವೇ ನಮ್ಮತನದ ಅರಿವು ಎಂದು ಅದು ಘೋಷಿಸುತ್ತದೆ. ಹಾಗಾದರೆ ಈ ಅರಿವನ್ನು ಹೇಗೆ ಪಡೆಯುವುದು? ಅರಿವಿನ ಮೂಲ ಒಂದೇ ಅಲ್ಲವಷ್ಟೆ! 'ಇದೊಂದೇ ಅರಿವಿನ ಮೂಲ' ಎಂಬ ಚೌಕಟ್ಟನ್ನು ಹಾಕಿದ ಕೂಡಲೇ ಅರಿವಿನ ಲಕ್ಷಣಕ್ಕೆ ಮಿತಿಯನ್ನು ಹೇಳಿದಂತಾಗುತ್ತದೆ. ಅರಿವು ನಮ್ಮ ಎಣಿಕೆಯ ಬಂಧನಕ್ಕೆ ಸಿಕ್ಕಿಹಾಕಿಕೊಂಡಿರುವಂಥದ್ದಲ್ಲ; ಅದು ಎಲ್ಲೆಲ್ಲಿಯೂ ಎಲ್ಲದರಲ್ಲೂ ಎಲ್ಲರಲ್ಲೂ ಎಲ್ಲ ಕಾಲದಲ್ಲಿಯೂ ಇರುವಂಥದ್ದು. ಮಾತ್ರವಲ್ಲ, ಅರಿವು ಬೇರೆ ಅಲ್ಲ, ಆನಂದ ಬೇರೆ ಅಲ್ಲ; ನಮ್ಮ ಇರವು ಕೂಡ ಬೇರೆ ಅಲ್ಲ. ಇಂಥ ವಿಶಾಲ ತತ್ತ್ವದ ಪಾತಳಿಯಲ್ಲಿ ಮೈದೋರಿಕೊಂಡ ಸಿದ್ಧಾಂತವೇ ಅವಧೂತತತ್ತ್ವ.

ಮೇಲೆ ಉಲ್ಲೇಖಿಸಿದ ಪದ್ಯದ ತಾತ್ಪರ್ಯವನ್ನು ಇಲ್ಲಿ ನೋಡಬಹುದು: 'ನಮಗೆ ಕಾಣುತ್ತಿರುವ ಈ ಜಗತ್ತೆಲ್ಲವೂ ದಿಟವಾಗಿ ಆಕಾರ ಇಲ್ಲದ್ದು ಎಂದು ತಿಳಿದುಕೋ. ಈ ವಿಶ್ವಜಗತ್ತು ವಿಕಾರವೂ ಇಲ್ಲದ್ದು ಎಂದೂ ತಿಳಿದುಕೋ. ಈ ಜಗತ್ತು ಪರಮಾತ್ಮನ ಶುದ್ಧದೇಹ ಎಂದೂ ತಿಳಿದುಕೋ. ಈ ಜಗತ್ತು ಕೇವಲ ಮಂಗಳರೂಪವಾದುದು ಎಂದು ತಿಳಿದುಕೋ.'

ನಮ್ಮಲ್ಲಿಯೇ ಇರುವ ಅರಿವನ್ನೂ ನಲವನ್ನೂ ಕಂಡುಕೊಳ್ಳಲು ಬೇಕಾದ ಸಾಧನವನ್ನು ಈ ಪದ್ಯ ಸೊಗಸಾಗಿ ನಿರೂಪಿಸುತ್ತಿದೆ. ಈ ಪದ್ಯವೊಂದರ ಬಗ್ಗೆ ಚಿಂತನೆ ನಡೆದು, ಅದರ ಮಥಿತಾರ್ಥ ನಮ್ಮ ಭಾವಬುದ್ಧಿಗಳಲ್ಲಿ ಒಂದಾದರೆ ಖಂಡಿತವಾಗಿಯೂ ಸಮಾಜದಲ್ಲಿರುವ ಭೇದಬುದ್ಧಿ, ಪೂರ್ವಗ್ರಹಗಳು, ರಾಗ–ದ್ವೇಷಗಳು ಮರೆಯಾಗುವುದರಲ್ಲಿ ಸಂಶಯವಿಲ್ಲ.

ಭಾರತೀಯ ವೇದಾಂತದ ಸಾರವೇ ಅಖಂಡತೆಯನ್ನು ಪ್ರತಿಪಾದಿಸುವುದು; ಒಡಕುತನ ಅದಕ್ಕೆ ಸಲ್ಲದ ಸಂಗತಿ. 'ಅವಧೂತಗೀತೆ'ಯ ಇನ್ನೊಂದು ಪದ್ಯವನ್ನು ನೋಡಿ:

ವೇದಾಃ ನ ಲೋಕಾಃ ನ ಸುರಾ
ನ ಯಜ್ಞಾಃ
ವರ್ಣಾಶ್ರಮೋ ನೈವ ಕುಲಂ
ಚ ಜಾತಿಃ
ನ ಧೂಮಮಾರ್ಗೋ ನ
ಚ ದೀಪ್ತಿಮಾರ್ಗೋ
ಬ್ರಹ್ಮೈಕ ರೂಪಂ
ಪರಮಾರ್ಥತತ್ತ್ವಮ್

ಎಂದರೆ, 'ವೇದಗಳಾಗಲೀ ಲೋಕಗಳಾಗಲೀ ದೇವಗಣಗಳಾಗಲೀ ಯಜ್ಞಗಳಾಗಲೀ ವರ್ಣಾಶ್ರಮವಾಗಲೀ ಕುಲಜಾತಿಗಳಾಗಲೀ ಯಾವುದೂ ಇಲ್ಲ; ಹೀಗೆಯೇ ಧೂಮ ಮಾರ್ಗವೂ ಜ್ಯೋತಿರ್ಮಾಗವೂ ಇಲ್ಲ; ಇರುವುದು ಒಂದೇ ಬ್ರಹ್ಮ, ಅದು ಎಲ್ಲ ಇರವುಗಳ ಇರವು, ಎಲ್ಲ ಅರಿವುಗಳ ಅರಿವು.'

ಈ ಅಖಂಡಸ್ವರೂಪದ ಅನುಸಂಧಾನಕ್ಕೆ ದತ್ತ ಜಯಂತಿ ನಮ್ಮೆಲ್ಲರಿಗೂ ಸ್ಫೂರ್ತಿಯನ್ನು ಒದಗಿಸಲಿ.

ಓಮೈಕ್ರಾನ್: ಹೊಸ ವರ್ಷಾಚರಣೆ ಸಣ್ಣ ಪ್ರಮಾಣದಲ್ಲಿರಲಿ– ಕೇಂದ್ರ ಸರ್ಕಾರದ ಸಲಹೆ

# 'ಅನಗತ್ಯ ಜನಸಂಚಾರ ತಪ್ಪಿಸಿ'

ನವದೆಹಲಿ (ಪಿಟಿಐ/ರಾಯಿಟರ್ಸ್): 'ಯೂರೋಪ್ ಮತ್ತು ವಿಶ್ವದ ಬೇರೆಡೆ ಕೊರೊನಾ ವೈರಾಣುವಿನ ಓಮೈಕ್ರಾನ್ ರೂಪಾಂತರ ತಳಿಯು ತೀವ್ರವಾಗಿ ಹರಡುತ್ತಿದೆ. ಹೀಗಾಗಿ ದೇಶದ ಜನರು ಅನಗತ್ಯ ಪ್ರಯಾಣವನ್ನು ತಪ್ಪಿಸಬೇಕು. ಹೊಸ ವರ್ಷಾಚರಣೆ ಸಣ್ಣ ಪ್ರಮಾಣದಲ್ಲಿ ಇರಬೇಕು' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.

'ದೇಶದಲ್ಲಿ 20 ದಿನಗಳಿಂದ ಪ್ರತಿ ದಿನ ಪತ್ತೆಯಾಗುತ್ತಿರುವ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ 10,000 ಕ್ಕಿಂತಲೂ ಕಡಿಮೆ ಇದೆ. ಬೇರೆ ದೇಶಗಳಲ್ಲಿ ಕೋವಿಡ್ ಮತ್ತು ಓಮೈಕ್ರಾನ್ ಪ್ರಕರಣಗಳ ಸಂಖ್ಯೆಯಲ್ಲಿ ಆಗುತ್ತಿರುವ ಏರಿಕೆ ಗಮನಿಸಿದರೆ, ನಾವು ಬಹಳ ಎಚ್ಚರಿಕೆಯಿಂದ ಇರಬೇಕಾದ ಅಗತ್ಯವಿದೆ. ಓಮೈಕ್ರಾನ್ ರೂಪಾಂತರ ತಳಿಯು, ಡೆಲ್ಟಾಗಿಂತಲೂ ಬಹಳ ವೇಗವಾಗಿ ಹರಡುತ್ತಿದೆ. ಸಮುದಾಯಕ್ಕೆ ಸೋಂಕು ತಗುಲಿಸುವಲ್ಲಿ ಓಮೈಕ್ರಾನ್, ಡೆಲ್ಟಾವನ್ನು ಮೀರಿಸಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಸರ್ಕಾರ ಹೇಳಿದೆ.

'ದೇಶದ 19 ಜಿಲ್ಲೆಗಳಲ್ಲಿ, ಒಂದು ವಾರದಿಂದ ಕೋವಿಡ್ ದೃಢಪಡುವ ಪ್ರಮಾಣವು ಶೇ 5–10ಕ್ಕೆ ಏರಿಕೆಯಾಗಿದೆ. ಐದು ಜಿಲ್ಲೆಗಳಲ್ಲಿ ಈ ಪ್ರಮಾಣವು ಶೇ 10ಕ್ಕಿಂತಲೂ ಹೆಚ್ಚು ಇದೆ. ಈ ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವ ಪ್ರಮಾಣವು ಶೇ 5ಕ್ಕಿಂತ ಕಡಿಮೆಯಾಗುವವರೆಗೆ ಕಠಿಣ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ' ಎಂದು ಸರ್ಕಾರವು ಮಾಹಿತಿ ನೀಡಿದೆ.

## ಪ್ರಕರಣ 101ಕ್ಕೆ ಏರಿಕೆ

ದೇಶದಲ್ಲಿ ಓಮೈಕ್ರಾನ್ ರೂಪಾಂತರ ತಳಿಯ ಕೋವಿಡ್ ಪ್ರಕರಣಗಳ ಸಂಖ್ಯೆ ಶುಕ್ರವಾರ 101ಕ್ಕೆ ಏರಿಕೆಯಾಗಿದೆ. ದೇಶದ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ ಎಂದು ಸರ್ಕಾರವು ಹೇಳಿದೆ.

'ಮಹಾರಾಷ್ಟ್ರದಲ್ಲಿ 32, ದೆಹಲಿಯಲ್ಲಿ 22, ರಾಜಸ್ಥಾನದಲ್ಲಿ 17, ತೆಲಂಗಾಣದಲ್ಲಿ 8, ಕರ್ನಾಟಕದಲ್ಲಿ 8, ಗುಜರಾತ್‌ನಲ್ಲಿ 5, ಕೇರಳದಲ್ಲಿ 5, ಆಂಧ್ರಪ್ರದೇಶ ಚಂಡೀಗಡ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ ಒಂದು ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ ಎಂದು ಸರ್ಕಾರವು ಮಾಹಿತಿ ನೀಡಿದೆ.



'ಮಹಾರಾಷ್ಟ್ರದಲ್ಲಿ ಶುಕ್ರವಾರ ಓಮೈಕ್ರಾನ್‌ನ 8 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದರಿಂದ ರಾಜ್ಯದಲ್ಲಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 48ಕ್ಕೆ ಏರಿಕೆಯಾಗಿದೆ' ಎಂದು ಮಹಾರಾಷ್ಟ್ರ ಸರ್ಕಾರ ಹೇಳಿದೆ. ಕೇರಳದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 7ಕ್ಕೆ ಏರಿದೆ ಎಂದು ಕೇರಳ ಸರ್ಕಾರ ಹೇಳಿದೆ. ಮಹಾರಾಷ್ಟ್ರ ಮತ್ತು ಕೇರಳ ಸರ್ಕಾರ ನೀಡಿರುವ ಸಂಖ್ಯೆಯನ್ನು ಪರಿಗಣಿಸಿದರೆ ದೇಶದಲ್ಲಿ ಪತ್ತೆಯಾದ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 119 ಆಗುತ್ತದೆ.

'ಓಮೈಕ್ರಾನ್ ವ್ಯಾಪಕವಾಗಿರುವ ಮತ್ತು ಓಮೈಕ್ರಾನ್ ಇಲ್ಲದ ದೇಶಗಳಿಂದ ಚೆನ್ನೈಗೆ ಬಂದಿಳಿದಿರುವ 28 ಜನರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಅಷ್ಟೂ ಜನರ ಮೂಗು ಮತ್ತು ಗಂಟಲ ದ್ರವದ ಮಾದರಿಯಲ್ಲಿ ಕೋವಿಡ್ ದೃಢಪಡಿಸುವ ಎಸ್ ವಂಶವಾಹಿಯ ಸಂಖ್ಯೆ ತೀರಾ ಕಡಿಮೆ ಇದೆ. ಅವರಿಗೆ ಓಮೈಕ್ರಾನ್ ತಗುಲಿರುವ ಅಪಾಯವಿದೆ. ಮಾದರಿಗಳನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಕಳುಹಿಸಲಾಗಿದೆ' ಎಂದು ತಮಿಳುನಾಡು ಆರೋಗ್ಯ ಇಲಾಖೆ ಶುಕ್ರವಾರ ಹೇಳಿದೆ.

## ತುರ್ತು ಬಳಕೆ: 'ಕೋವೊವ್ಯಾಕ್ಸ್'ಗೆ ಅನುಮತಿ

ಭಾರತದಲ್ಲಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸುತ್ತಿರುವ ಕೋವಿಡ್ ಲಸಿಕೆ 'ಕೋವೊವ್ಯಾಕ್ಸ್' ಅನ್ನು ತುರ್ತು ಸಂದರ್ಭದಲ್ಲಿ ಬಳಸಲು ವಿಶ್ವ ಆರೋಗ್ಯ ಸಂಸ್ಥೆ ಶುಕ್ರವಾರ ಅನುಮೋದನೆ ನೀಡಿದೆ. ಅಮೆರಿಕದ ಕಂಪನಿ ನೋವಾವ್ಯಾಕ್ಸ್ ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ.

## ಬ್ರಿಟನ್‌ನಲ್ಲಿ 93 ಸಾವಿರ ಪ್ರಕರಣ

ಬ್ರಿಟನ್‌ನಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರವಾಗಿ ಏರಿಕೆಯಾಗುತ್ತಿದೆ. ಗುರುವಾರ ಒಂದೇ ದಿನ ಕೋವಿಡ್‌ನ 93,045 ಹೊಸ ಪ್ರಕರಣಗಳು ದೃಢಪಟ್ಟಿವೆ.

ಡಿಸೆಂಬರ್ 1ನ್ನು ಹೊರತುಪಡಿಸಿ ಈವರೆಗೆ, ಈ ಎಲ್ಲಾ ದಿನಗಳಲ್ಲೂ ಬ್ರಿಟನ್‌ನಲ್ಲಿ ಪ್ರತಿದಿನ 50 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ.

ದೇಶದಲ್ಲಿ ಈಗ ದೃಢಪಟ್ಟ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 1.10 ಕೋಟಿಯನ್ನು ದಾಟಿದೆ. ಇದರಲ್ಲಿ 97 ಲಕ್ಷದಷ್ಟು ಜನರು ಗುಣಮುಖರಾಗಿದ್ದಾರೆ. ಒಟ್ಟು 12.92 ಲಕ್ಷ ಸಕ್ರಿಯ ಪ್ರಕರಣಗಳಿವೆ. ಕಳೆದ 15 ದಿನಗಳಲ್ಲಿ ಕೋವಿಡ್‌ನಿಂದ ಪ್ರತಿದಿನ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

- ವಿಶ್ವದ 91 ದೇಶಗಳಲ್ಲಿ ಓಮೈಕ್ರಾನ್ ಹರಡಿದ್ದು, ಒಟ್ಟು 27,000 ಪ್ರಕರಣಗಳು ವರದಿಯಾಗಿವೆ. ಬ್ರಿಟನ್‌ನಲ್ಲಿ 12,000 ಮತ್ತು ಡೆನ್ಮಾರ್ಕ್‌ನಲ್ಲಿ 9,000 ಪ್ರಕರಣಗಳು ಪತ್ತೆಯಾಗಿವೆ
- ಓಮೈಕ್ರಾನ್ ಹರಡುವುದನ್ನು ತಡೆಯುವ ಉದ್ದೇಶದಿಂದ ಡೆನ್ಮಾರ್ಕ್ ಸರ್ಕಾರವು ಸಿನಿಮಾ ಮಂದಿರಗಳನ್ನು ಮುಚ್ಚಲು ಆದೇಶಿಸಿದೆ. ಹೆಚ್ಚಿನ ಸಂಖ್ಯೆಯ ಜನರು ಗುಂಪುಗೂಡುವುದನ್ನು ನಿರ್ಬಂಧಿಸಿದೆ
- ಪೋರ್ಚುಗಲ್‌ನಲ್ಲಿ ಈಗ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಓಮೈಕ್ರಾನ್ ಪ್ರಕರಣಗಳ ಪ್ರಮಾಣವು ಶೇ 20ಕ್ಕೆ ಏರಿಕೆಯಾಗಿದೆ. ವರ್ಷಾಂತ್ಯದ ವೇಳೆಗೆ ಇದು ಶೇ 80ಕ್ಕೆ ಏರಿಕೆಯಾಗುವ ಬಗ್ಗೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ
- ರಷ್ಯಾದ ಸ್ಪುಟ್ನಿಕ್–ವಿ, ಅಮೆರಿಕದ ಜಾನ್ಸನ್ ಅಂಡ್ ಜಾನ್ಸನ್ ಮತ್ತು ಚೀನಾದ ಕೋವಿಡ್ ಲಸಿಕೆಗಳು ಓಮೈಕ್ರಾನ್ ರೂಪಾಂತರ ತಳಿಯ ವಿರುದ್ಧ ಕೆಲಸ ಮಾಡುವುದಿಲ್ಲ ಎಂದು ವಾಷಿಂಗ್ಟನ್ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ನಡೆದ ಅಧ್ಯಯನ ವರದಿಯು ಹೇಳಿದೆ
- 2021ರ ವಿಶ್ವ ಸುಂದರಿ ಸ್ಪರ್ಧೆಯ ಭಾರತದ ಸ್ಪರ್ಧಿ ಮಾನಸ ವಾರಾಣಸಿ ಸೇರಿದಂತೆ ಹಲವರಿಗೆ ಕೋವಿಡ್ ದೃಢಪಟ್ಟಿರುವುದರಿಂದ ಅಂತಿಮ ಸುತ್ತಿನ ಸ್ಪರ್ಧೆಯನ್ನು ಮುಂದೂಡಲಾಗಿದೆ
- ಜಪಾನ್‌ನಲ್ಲಿ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡುವುದಕ್ಕೆ ವೇಗ ನೀಡಲು ನಿರ್ಧರಿಸಲಾಗಿದೆ

# ಪಿಎಂಒದಲ್ಲಿ ಚುನಾವಣಾ ಆಯುಕ್ತ ಜತೆ ಸಭೆಗೆ ಕಾಂಗ್ರೆಸ್ ಟೀಕೆ

ನವದೆಹಲಿ (ಪಿಟಿಐ): ಚುನಾವಣೆ ಸುಧಾರಣಾ ಕ್ರಮಗಳಿಗೆ ಸಂಬಂಧಿಸಿ ಚರ್ಚಿಸಲು ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರೆ ಆಯುಕ್ತರೊಂದಿಗೆ ಪ್ರಧಾನಮಂತ್ರಿಗಳ ಕಚೇರಿಯ (ಪಿಎಂಒ) ಹಿರಿಯ ಅಧಿಕಾರಿಗಳು ಅನೌಪಚಾರಿಕವಾಗಿ ಸಭೆ ನಡೆಸಿರುವುದನ್ನು ಕಾಂಗ್ರೆಸ್ ಶುಕ್ರವಾರ ಟೀಕಿಸಿದೆ.

'ಚುನಾವಣಾ ಆಯೋಗವನ್ನು ಪಿಎಂಒ ತನ್ನ ಅಧೀನ ಸಂಸ್ಥೆಯಂತೆ ನಡೆಸಿಕೊಳ್ಳುತ್ತಿದೆ' ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಟ್ವಿಟ್ಟರ್‌ನಲ್ಲಿ ಟೀಕಿಸಿದ್ದಾರೆ.

'ಚುನಾವಣಾ ಆಯೋಗವನ್ನು ತನ್ನ ಅಧೀನ ಸಂಸ್ಥೆ ಎಂಬಂತೆ ನಡೆಸಿಕೊಂಡಿರುವುದು, ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಸ್ವಾಯತ್ತ ಸಂಸ್ಥೆಗಳನ್ನು ನಾಶ ಮಾಡಿರುವುದಕ್ಕೆ ಮತ್ತೊಂದು ನಿದರ್ಶನ' ಎಂದೂ ಅವರು ಟ್ವೀಟ್ ಮೂಲಕ ಟೀಕಾಪ್ರಹಾರ ಮಾಡಿದ್ದಾರೆ.

ಸುಧಾರಣಾ ಕ್ರಮಗಳ ಕುರಿತಾಗಿ ಚುನಾವಣಾ ಆಯೋಗವು ಹಿಂದೆ ಬರೆದಿದ್ದ ಪತ್ರಗಳ ಹಿನ್ನೆಲೆಯಲ್ಲಿ ಈ ಸಭೆಯನ್ನು ಆಯೋಜಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಸುಶೀಲ್‌ಚಂದ್ರ, ಆಯುಕ್ತರಾದ ರಾಜೀವ್‌ಕುಮಾರ್ ಹಾಗೂ ಅನೂಪಚಂದ್ರ ಪಾಂಡೆ ಅವರು ಪಿಎಂಒ ಪ್ರಧಾನ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಅವರೊಂದಿಗೆ ನವೆಂಬರ್ 16ರಂದು ವರ್ಚುವಲ್ ಸಭೆ ನಡೆಸಿದ್ದರು.

'ಏಕರೂಪದ ಮತದಾರರ ಪಟ್ಟಿಗೆ ಸಂಬಂಧಿಸಿ ಚರ್ಚಿಸಲಾಗುತ್ತಿದ್ದು, ಈ ಸಭೆಯಲ್ಲಿ ಸುಶೀಲ್‌ಚಂದ್ರ ಅವರೂ ಪಾಲ್ಗೊಳ್ಳಬೇಕು ಎಂಬುದಾಗಿ ಪಿಎಂಒ ಪ್ರಧಾನ ಕಾರ್ಯದರ್ಶಿ ಮಿಶ್ರಾ ಅವರ ನಿರೀಕ್ಷೆಯಾಗಿದೆ' ಎಂಬುದಾಗಿ ಕಾನೂನು ಸಚಿವಾಲಯವು ಚುನಾವಣಾ ಆಯೋಗಕ್ಕೆ ಪತ್ರ ಬರೆದಿತ್ತು.

ಆದರೆ, ಆಯೋಗವು ಸ್ವಾಯತ್ತ ಸಂಸ್ಥೆಯಾಗಿರುವ ಕಾರಣ ಸಿಇಸಿ ಅವರು ಈ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ. ಆಯೋಗದ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ನಂತರ, ಸಿಇಸಿ ಹಾಗೂ ಚುನಾವಣಾ ಆಯುಕ್ತರು ಮಿಶ್ರಾ ಅವರೊಂದಿಗೆ ಅನೌಪಚಾರಿಕ ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ.

# ಉತ್ತರ ಪ್ರದೇಶ: ಪ್ರಚಾರದಿಂದ ಮಿಶ್ರಾಗೆ ಕೊಕ್

ಪ್ರಜಾವಾಣಿ ವಾರ್ತೆ

ಲಖನೌ: ವಿಪಕ್ಷಗಳು ರಾಜೀನಾಮೆಗೆ ಆಗ್ರಹಿಸುತ್ತಿದ್ದರೂ ಸಚಿವ ಸ್ಥಾನದಲ್ಲಿ ಮುಂದುವರಿದಿರುವ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಬಿಜೆಪಿ ಉತ್ತರ ಪ್ರದೇಶ ವಿಧಾನಸಭೆ ಚುನಾವಣಾ ಪ್ರಚಾರದಿಂದ ಹೊರಗಿಟ್ಟಿದೆ.

ಅಜಯ್ ಮಿಶ್ರಾ

ಲಖಿಂಪುರ ಖೇರಿಯಲ್ಲಿ ನಡೆದ ರೈತರ ಹತ್ಯೆ ಪ್ರಕರಣದಲ್ಲಿ ಅವರ ಮಗ ಆರೋಪಿಯಾಗಿರುವ ಕಾರಣ ಅವರು ವಿಪಕ್ಷಗಳಿಂದ ಭಾರಿ ಟೀಕೆಗೆ ಗುರಿಯಾಗಿದ್ದಾರೆ. ಮಿಶ್ರಾ ಹೊರತುಪಡಿಸಿ ಉತ್ತರ ಪ್ರದೇಶದಿಂದ ಆಯ್ಕೆ ಆಗಿರುವ ಕೇಂದ್ರ ಸಂಪುಟದ ಇತರ ಸಚಿವರು ಚುನಾವಣೆಗೆ ಸಂಬಂಧಿಸಿದ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಕಳೆದ ತಿಂಗಳು ಲಖನೌನಲ್ಲಿ ನಡೆದಿದ್ದ ಅಖಿಲ ಭಾರತ ಪೊಲೀಸ್ ಮಹಾನಿರ್ದೇಶಕರ ಸಮಾವೇಶ ಉದ್ಘಾಟನೆ ವೇಳೆ ಮಿಶ್ರಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೊತೆ ವೇದಿಕೆ ಹಂಚಿಕೊಂಡಿದ್ದರು.ಆದರೆ, ಚುನಾವಣೆಗೆ ಸಂಬಂಧಿಸಿದ ತಂತ್ರಗಾರಿಕೆ ರೂಪಿಸಲು ಆಯೋಜಿಸಲಾಗುವ ಸಭೆಗಳಿಗೆ ರಾಜ್ಯ ಬಿಜೆಪಿ, ಅವರಿಗೆ ಆಮಂತ್ರಣ ನೀಡುತ್ತಿಲ್ಲ. ಮಿಶ್ರಾ ಅವರ ಲೋಕಸಭೆ ಕ್ಷೇತ್ರ ಲಖಿಂಪುರ ಖೇರಿ ಪಕ್ಕದ ಜಿಲ್ಲೆ ಶಾಜಹಾನ್‌ಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಸಾರ್ವಜನಿಕ ಸಭೆ ನಡೆಸಲಿದ್ದಾರೆ. ಆ ಸಭೆಯಲ್ಲಿ ಮಿಶ್ರಾ ಪಾಲ್ಗೊಳ್ಳುವ ಕುರಿತು ಖಚಿತ ಮಾಹಿತಿ ಇಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ. ಲಖಿಂಪುರಖೇರಿ ಹಿಂಸಾಚಾರದಲ್ಲಿ ಮಿಶ್ರಾ ಅವರ ಮಗನ ಪಾತ್ರ ಇರುವುದರಿಂದ ಅವರ ಜೊತೆ ಪ್ರಧಾನಿ ಮೋದಿ ವೇದಿಕೆ ಹಂಚಿಕೊಳ್ಳಬಾರದು ಎಂದು ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ನಾಯಕರು ಆಗ್ರಹಿಸಿದ್ದಾರೆ.

'ನಮಗೆ ಯಾವುದೇ ವಿವಾದ ಬೇಡ. ಮಿಶ್ರಾ ಅವರನ್ನು ಚುನಾವಣಾ ಪ್ರಚಾರದಲ್ಲಿ ಸೇರಿಸಿಕೊಳ್ಳುವುದರಿಂದ ವಿಪಕ್ಷಗಳು ಮತ್ತು ಇತರರಿಂದ ಟೀಕೆ ವ್ಯಕ್ತವಾಗುತ್ತವೆ' ಎಂದು ಉತ್ತರ ಪ್ರದೇಶ ಬಿಜೆಪಿ ಹಿರಿಯ ಮುಖಂಡರೊಬ್ಬರು ಪ್ರಜಾವಾಣಿಗೆ ಹೇಳಿದ್ದಾರೆ.

ಮಿಶ್ರಾ ಅವರನ್ನು ಮಾಧ್ಯಮಗಳು ಮುಜುಗರಕ್ಕೀಡು ಮಾಡುವುದು ನಮಗೆ ಬೇಕಿಲ್ಲ. ವಿಶೇಷವಾಗಿ, ಲಖಿಂಪುರ ಖೇರಿ ಘಟನೆ ಸಂಬಂಧಿಸಿದಂತೆ ಎಸ್‌ಐಟಿ ನೀಡಿರುವ ವರದಿ ಕುರಿತು ವರದಿಗಾರರೊಬ್ಬರು ಪ್ರಶ್ನಿಸಿದ ವೇಳೆ ಮಿಶ್ರಾ ಅವರು ವರದಿಗಾರರ ಜೊತೆ ಆಕ್ಷೇಪಾರ್ಹ ರೀತಿಯಲ್ಲಿ ನಡೆದುಕೊಂಡಿದ್ದರು.

## ಬಿಜೆಪಿ–ಅಮರಿಂದರ್ ಮೈತ್ರಿ ಅಂತಿಮ

ನವದೆಹಲಿ (ಪಿಟಿಐ): ಕಾಂಗ್ರೆಸ್ ತೊರೆದು ಸ್ವತಂತ್ರ ಪಕ್ಷ ಸ್ಥಾಪಿಸಿರುವ ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು, ರಾಜ್ಯದ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದಾರೆ.

ಈ ಸಂಬಂಧ ಪಂಜಾಬ್ ಬಿಜೆಪಿ ಉಸ್ತುವಾರಿ ಗಜೇಂದ್ರ ಸಿಂಗ್ ಶೆಖಾವತ್ ಅವರ ಜತೆ ನಡೆಸಿದ ಮಾತುಕತೆಯಲ್ಲಿ, ಬಿಜೆಪಿ ಮತ್ತು ಅಮರಿಂದರ್ ಸಿಂಗ್ ಅವರ ಪಂಜಾಬ್ ಲೋಕ ಕಾಂಗ್ರೆಸ್‌ನ ಮೈತ್ರಿಯನ್ನು ಅಂತಿಮಗೊಳಿಸಲಾಗಿದೆ.

ಅಮರಿಂದರ್ ಸಿಂಗ್ ಅವರು ಕಾಂಗ್ರೆಸ್ ತೊರೆದಾಗಲೇ ಬಿಜೆಪಿ ಸೇರುತ್ತಾರೆ ಅಥವಾ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅವರು ಪಕ್ಷವನ್ನು ಸ್ಥಾಪಿಸಿದ್ದರು. ಜತೆಗೆ, 'ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದರೆ ಮಾತ್ರ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುತ್ತೇವೆ' ಎಂದು ಹೇಳಿದ್ದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾವಪೂರ್ಣ ಶ್ರದಾಂಜಲಿ

ಶ್ರೀಮತಿ ಎಸ್.ವಿಶಾಲಾಕ್ಷಮ್ಮ
ಜನನ : 01-06-1953 ಮರಣ :16-12-2021
ಸರ್ಕಾರದ ಜಂಟಿ ಕಾರ್ಯದರ್ಶಿಗಳು (ನಿವೃತ್ತ), ಕರ್ನಾಟಕ ಸರ್ಕಾರ
ಶ್ರೀ ಕೆ.ವಿಜಯೇಂದ್ರರಾವ್ ಇವರ ಧರ್ಮಪತ್ನಿ,
ಇವರು ದಿನಾಂಕ : 16-12-2021ರ ಗುರುವಾರ ಬೆಳಗ್ಗೆ 10:50 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖತಪ್ತರು :
ಶ್ರೀ ಕೆ. ವಿಜಯೇಂದ್ರರಾವ್,
ಶ್ರೀಮತಿ ಚೈತ್ರ ವಿ. IAS (ಮಗಳು) ಮತ್ತು ಕುಟುಂಬವರ್ಗದವರು.

LOOKING FOR JOB OPPORTUNITY
Refer Classifieds on Wednesday

# ಅಮೆಜಾನ್‌ಗೆ ಸಿಸಿಐನಿಂದ ₹ 202 ಕೋಟಿ ದಂಡ

ನವದೆಹಲಿ (ಪಿಟಿಐ): ಫ್ಯೂಚರ್ ಕೂಪನ್ಸ್ ಪ್ರೈವೇಟ್ ಲಿಮಿಟೆಡ್‌ನ ಷೇರು ಸ್ವಾಧೀನ ಮಾಡಿಕೊಳ್ಳಲು ಅಮೆಜಾನ್ ಕಂಪನಿ ಮಾಡಿಕೊಂಡಿದ್ದ ಒಪ್ಪಂದಕ್ಕೆ ಎರಡು ವರ್ಷಗಳ ಹಿಂದೆ ನೀಡಿದ್ದ ಅನುಮತಿಯನ್ನು ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಶುಕ್ರವಾರ ರದ್ದುಪಡಿಸಿದೆ. ಅಲ್ಲದೆ, ಕೆಲವು ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಮೆಜಾನ್‌ಗೆ ಒಟ್ಟು ₹ 202 ಕೋಟಿ ದಂಡ ವಿಧಿಸಿದೆ.

ರಿಲಯನ್ಸ್ ರಿಟೇಲ್ ವೆಂಚರ್ ಲಿಮಿಟೆಡ್ (ಆರ್‌ಆರ್‌ವಿಎಲ್) ಜೊತೆಗೆ ಫ್ಯೂಚರ್ ಸಮೂಹ ಮಾಡಿಕೊಂಡಿರುವ ₹ 24,713 ಕೋಟಿ ಮೊತ್ತದ ಒಪ್ಪಂದದ ವಿಚಾರವಾಗಿ ಅಮೆಜಾನ್ ಮತ್ತು ಫ್ಯೂಚರ್ ಸಮೂಹದ ನಡುವೆ ಕಾನೂನು ಸಮರ ನಡೆಯುತ್ತಿರುವ ಹೊತ್ತಿನಲ್ಲಿಯೇ ಸಿಸಿಐ ಈ ಆದೇಶ ಹೊರಡಿಸಿದೆ.

ಶುಕ್ರವಾರ 57 ಪುಟಗಳ ಆದೇಶ ಹೊರಡಿಸಿರುವ ಸಿಸಿಐ 'ಅಮೆಜಾನ್ ಮತ್ತು ಫ್ಯೂಚರ್ ಕೂಪನ್ ನಡುವಿನ ಒಪ್ಪಂದಕ್ಕೆ ನೀಡಿದ್ದ ಅನುಮತಿಯನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ' ಎಂದು ಹೇಳಿದೆ.

ಕಂಪನಿಗಳ ನಡುವಿನ ಹೊಂದಾಣಿಕೆಯ ನೈಜ ವ್ಯಾಪ್ತಿ ಮತ್ತು ಉದ್ದೇಶವನ್ನು ಮುಚ್ಚಿಡಲು ಅಮೆಜಾನ್ ಯತ್ನಿಸಿದ ಕಾರಣದಿಂದಾಗಿ ಕೆಲವು ಉಲ್ಲಂಘನೆಗಳು ಆಗಿವೆ ಎಂದು ಹೇಳಿರುವ ಸಿಸಿಐ, ಇದಕ್ಕಾಗಿ ಅಮೆಜಾನ್‌ಗೆ ₹ 2 ಕೋಟಿ ದಂಡ ವಿಧಿಸಿದೆ. ಕಂಪನಿಗಳ ನಡುವಣ ಹೊಂದಾಣಿಕೆಯನ್ನು ನಿರ್ದಿಷ್ಟ ಕ್ರಮದಲ್ಲಿ ತಿಳಿಸಲು ವಿಫಲವಾಗಿದ್ದಕ್ಕಾಗಿ ಅಮೆ ಜಾನ್‌ಗೆ ₹ 200 ಕೋಟಿ ದಂಡ ವಿಧಿಸಿದೆ.

ಸಿಸಿಐ ಆದೇಶದ ಕುರಿತು ಪ್ರತಿಕ್ರಿಯೆ ನೀಡಿರುವ ಅಮೆಜಾನ್ ವಕ್ತಾರರು, 'ಆದೇಶವನ್ನು ನಾವು ಪರಿಶೀಲಿಸುತ್ತಿದ್ದೇವೆ. ಮುಂದಿನ ಕ್ರಮದ ಕುರಿತು ನಿರ್ಧರಿಸುತ್ತೇವೆ' ಎಂದು ಹೇಳಿದ್ದಾರೆ. ಸ್ವಾಧೀನ ಮಾಡಿಕೊಳ್ಳುವ ಸಂಸ್ಥೆ ನೀಡಿರುವ ಮಾಹಿತಿ ತಪ್ಪಾಗಿದ್ದರೆ, ಅನುಮತಿ ಆದೇಶ ಹಿಂಪಡೆಯಲಾಗುವುದು ಎಂದು 2019ರಲ್ಲಿ ಸಿಸಿಐ ಹೇಳಿತ್ತು.

ಫ್ಯೂಚರ್ ಕೂಪನ್ಸ್‌ನಲ್ಲಿನ ಶೇಕಡ 49ರಷ್ಟು ಷೇರುಗಳನ್ನು ಖರೀದಿಸಲು ಅಮೆಜಾನ್ 2019ರ ಆಗಸ್ಟ್‌ನಲ್ಲಿ ಒಪ್ಪಿತ್ತು. 2020ರ ಆಗಸ್ಟ್‌ನಲ್ಲಿ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ ಕಂಪನಿಯು, ಫ್ಯೂಚರ್ ಸಮೂಹದ ರಿಟೇಲ್ ವಹಿವಾಟು, ಸಗಟು ವಹಿವಾಟು, ಸರಕು ಸಾಗಣೆ ಮತ್ತು ಗೋದಾಮು ವಹಿವಾಟುಗಳನ್ನು ಸ್ವಾಧೀನ ಮಾಡಿಕೊಳ್ಳುವುದಾಗಿ ಪ್ರಕಟಿಸಿತು. ಇದನ್ನು ಅಮೆಜಾನ್ ಪ್ರಶ್ನಿಸಿತ್ತು.

## ಎಸ್‌ಬಿಐ ಬಡ್ಡಿದರ ಶೇ 0.1ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಾಲದ ಮೇಲಿನ ಮೂಲ ಬಡ್ಡಿ ದರವನ್ನು ಶೇಕಡ 0.1ರಷ್ಟು ಹೆಚ್ಚಿಸಿದೆ. ಎಸ್‌ಬಿಐ ಕೈಗೊಂಡಿರುವ ಈ ಕ್ರಮವನ್ನು ಇತರ ಬ್ಯಾಂಕ್‌ಗಳೂ ಅನುಸರಿಸುವ ಸಾಧ್ಯತೆ ಇದೆ.

ಈ ಹೆಚ್ಚಳದ ಪರಿಣಾಮವಾಗಿ ಮೂಲ ಬಡ್ಡಿ ದರವು ಶೇ 7.55ಕ್ಕೆ ಹೆಚ್ಚಳ ಕಾಣಲಿದೆ. ಹೊಸ ಬಡ್ಡಿ ದರವು ಡಿ.15ರಿಂದ ಜಾರಿಗೆ ಬಂದಿದೆ. 2019ರ ಜನವರಿ ನಂತರ ಸಾಲ ಪಡೆದವರಿಗೆ ಈ ಹೆಚ್ಚಳದಿಂದ ಯಾವುದೇ ಬದಲಾವಣೆ ಆಗುವುದಿಲ್ಲ, 2019ರ ಜನವರಿಗೂ ಮೊದಲು ಸಾಲ ಪಡೆದವರಿಗೆ ಇದರ ಪರಿಣಾಮ ಆಗಲಿದೆ.

₹ 2 ಕೋಟಿಗಿಂತ ಹೆಚ್ಚಿನ ಮೊತ್ತದ ಅವಧಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಕೂಡ ಶೇ 0.1ರಷ್ಟು ಹೆಚ್ಚಳ ಮಾಡಲಾಗಿದೆ.

### ಮಾರುಕಟ್ಟೆಗೆ ಉತ್ಪನ್ನ ಆವಕ ಇಳಿಮುಖ: ಸಾರ್ವಕಾಲಿಕ ಗರಿಷ್ಠ ದರ ದಾಖಲು

# ದ್ವಿತಳಿಯ ರೇಷ್ಮೆಗೂಡಿಗೆ ಬಂಪರ್ ಬೆಲೆ!

● ಆರ್. ಜಿತೇಂದ್ರ

ರಾಮನಗರ: ಏಷ್ಯಾದ ದೊಡ್ಡ ರೇಷ್ಮೆಗೂಡು ಮಾರುಕಟ್ಟೆ ಎಂಬ ಖ್ಯಾತಿಯ ಇಲ್ಲಿನ ಗೂಡು ಮಾರುಕಟ್ಟೆಯಲ್ಲಿ ರೇಷ್ಮೆಗೂಡಿಗೆ ಗರಿಷ್ಠ ದರದಲ್ಲಿ ಹರಾಜು ನಡೆದಿದೆ. ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ಗುರುವಾರ ದ್ವಿತಳಿಯ (ಬೈವೋಲ್ಟನ್) ಗೂಡು ಪ್ರತಿ ಕೆ.ಜಿ.ಗೆ ಗರಿಷ್ಠ ₹ 900ರವರೆಗೂ ಹರಾಜು ನಡೆಯಿತು. ಅಲ್ಲದೇ, 50ಕ್ಕೂ ಹೆಚ್ಚು ಲಾಟ್‌ಗಳು ಪ್ರತಿ ಕೆ.ಜಿ.ಗೆ ₹800ಕ್ಕೂ ಹೆಚ್ಚಿನ ದರಕ್ಕೆ ಹರಾಜಾದವು. ಗೂಡಿಗೆ ಈ ಪ್ರಮಾಣದ ಬೆಲೆ ಸಿಕ್ಕಿದ್ದು ಇದೇ ಮೊದಲು ಎನ್ನುತ್ತಾರೆ ರೇಷ್ಮೆ ಬೆಳೆಗಾರರು.

ರಾಮನಗರದ ರೇಷ್ಮೆಗೂಡು ಮಾರುಕಟ್ಟೆ

ಸಾಮಾನ್ಯವಾಗಿ ಚಳಿಗಾಲದಲ್ಲಿ ರೋಗಬಾಧೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಕುಂಠಿತದಿಂದಾಗಿ ರೇಷ್ಮೆಗೂಡು ಉತ್ಪಾದನೆಯೂ ಕುಸಿಯುತ್ತದೆ. ಇದರಿಂದ ಸಹಜವಾಗಿಯೇ ಗೂಡಿನ ಬೆಲೆ ಏರಿಕೆ ಆಗುತ್ತದೆ ಎನ್ನುತ್ತಾರೆ ರೈತರು.

> ದ್ವಿತಳಿ ರೇಷ್ಮೆಗೂಡಿಗೆ ಈ ದರ ಸಿಕ್ಕಿದ್ದು ಇದೇ ಮೊದಲು. ಬೆಳೆ ವಿಫಲ, ಸೊಪ್ಪಿನ ಉತ್ಪಾದನೆ ಕುಂಠಿತದಿಂದ ಸಂಕಷ್ಟದಲ್ಲಿರುವ ಬೆಳೆಗಾರರಿಗೆ ಇದರಿಂದ ಅನುಕೂಲ ಆಗಲಿದೆ
> **ರವಿ,** ರೇಷ್ಮೆ ಬೆಳೆಗಾರ, ರಾಮನಗರ

ಕಳೆದ ವರ್ಷ ಇದೇ ಅವಧಿಯಲ್ಲಿ ಬೈವೋಲ್ಟನ್ ಗೂಡು ಪ್ರತಿ ಕೆ.ಜಿ.ಗೆ ₹500ರಿಂದ ₹ 550 ದರದಲ್ಲಿ ಮಾರಾಟ ಆಗಿತ್ತು. ಈ ಪ್ರತಿ ಕೆ.ಜಿ.ಗೆ ₹250ರಿಂದ ₹ 300ರಷ್ಟು ಏರಿಕೆ ಆಗಿದೆ. ಬೆಳೆಗಾರರ ಆದಾಯವೂ ದುಪ್ಪಟ್ಟಾಗಿದೆ.

ಕರ್ನಾಟಕದ ಜೊತೆಗೆ ನೆರೆಯ ಆಂಧ್ರಪ್ರದೇಶ, ತಮಿಳುನಾಡಿನಿಂದಲೂ ಇಲ್ಲಿಗೆ ಹೆಚ್ಚಿನ ಪ್ರಮಾಣದಲ್ಲಿ ದ್ವಿತಳಿ ಗೂಡು ಬರುತ್ತಿದೆ. ಸದ್ಯ ದಿನವೊಂದಕ್ಕೆ ಸರಾಸರಿ 11–12 ಟನ್‌ನಷ್ಟು ಗೂಡು ಮಾತ್ರ ಮಾರುಕಟ್ಟೆಗೆ ಬರುತ್ತಿದೆ.

ಹಳೇ ಮೈಸೂರು ಭಾಗದಲ್ಲಿ ಮಿಶ್ರತಳಿಯ (ಸಿ.ಬಿ) ಗೂಡನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಬೇಸಿಗೆಯಲ್ಲಿ ಇಲ್ಲಿನ ಮಾರುಕಟ್ಟೆಗೆ ನಿತ್ಯ ಸರಾಸರಿ 25–30 ಟನ್‌ನಷ್ಟು ಗೂಡು ಬರುತ್ತದೆ.

ಈಗ ಈ ಪ್ರಮಾಣವು 3ರಿಂದ 4 ಟನ್‌ಗೆ ಇಳಿಕೆ ಆಗಿದೆ. ಇದರಿಂದ ಬೆಲೆಯೂ ಏರುತ್ತಿದೆ. ಪ್ರತಿ ಕೆ.ಜಿ. ಗೂಡಿಗೆ ಸರಾಸರಿ ₹650 ಧಾರಣೆ ಸಿಗುತ್ತಿದೆ.

# ಹಣದುಬ್ಬರದ ಕಡೆ ಗಮನ, ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ): ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿ ದರ ಹೆಚ್ಚಿಸಬಹುದು ಎಂಬ ಲೆಕ್ಕಾಚಾರ ಹಾಗೂ ಒಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವುದು ದೇಶಿ ಷೇರುಪೇಟೆಗಳಲ್ಲಿ ಶುಕ್ರವಾರ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 889 ಅಂಶ ಇಳಿಕೆ ಕಂಡಿತು. ದಿನದ ಕೊನೆಯಲ್ಲಿ 57,011 ಅಂಶಗಳಲ್ಲಿ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 263 ಅಂಶ ಇಳಿಕೆಯಾಗಿ 16,985 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂತೆಗೆತವನ್ನು ಮುಂದುವರಿಸಿದ್ದು ಕೂಡ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ. 'ಸಾಂಕ್ರಾಮಿಕ ಶುರುವಾದ ನಂತರದಲ್ಲಿ ಇದೇ ಮೊದಲ ಬಾರಿಗೆ ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿ ದರ ಹೆಚ್ಚಿಸುವ ತೀರ್ಮಾನ ಕೈಗೊಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಮಾರಾಟವನ್ನು ಮುಂದುವರಿಸಿರುವುದು ದೇಶಿ ಹೂಡಿಕೆದಾರರ ತಲೆಬಿಸಿಗೆ ಕಾರಣವಾಗಿದೆ. ಐ.ಟಿ. ಹೊರತುಪಡಿಸಿ ಮತ್ತೆಲ್ಲ ವಲಯಗಳ ಉದ್ಯಮದ ಷೇರುಗಳ ಮೌಲ್ಯ ಇಳಿಕೆಯಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಜಗತ್ತಿನ ಹೆಚ್ಚಿನ ಕಡೆಗಳಲ್ಲಿ ಹಣದುಬ್ಬರ ಜಾಸ್ತಿ ಆಗುತ್ತಿದೆ. ಹೀಗಾಗಿ ಎಲ್ಲರ ಗಮನ ಬೇರೆ ಬೇರೆ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಕೈಗೊಳ್ಳುವ ತೀರ್ಮಾನದ ಕಡೆ ನೆಟ್ಟಿದೆ' ಎಂದು ಕೋಟಕ್ ಮಹೀಂದ್ರ ಆಸ್ತಿ ನಿರ್ವಹಣಾ ಕಂಪನಿಯ ಹಿರಿಯ ಅಧಿಕಾರಿ ಶಿಬಾನಿ ಕುರಿಯನ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 1.48ರಷ್ಟು ಇಳಿಕೆಯಾಗಿದ್ದು ಪ್ರತಿ ಬ್ಯಾರೆಲ್‌ಗೆ 73.91 ಡಾಲರ್‌ಗೆ ತಲುಪಿದೆ.

## 'ತಮಿಳ್‌ತಾಯ್ ವಾಳ್ತು' ತಮಿಳುನಾಡಿನ ನಾಡಗೀತೆ

ಚೆನ್ನೈ (ಪಿಟಿಐ): ತಮಿಳು ಭಾಷೆಯ ಹಿರಿಮೆಯನ್ನು ಶ್ಲಾಘಿಸುವ ಸ್ವಾಗತ ಗೀತೆ 'ತಮಿಳ್ ತಾಯ್ ವಾಳ್ತು' ಅನ್ನು ನಾಡಗೀತೆಯಾಗಿ ತಮಿಳುನಾಡು ಸರ್ಕಾರ ಶುಕ್ರವಾರ ಘೋಷಿಸಿದೆ.

'ಗೀತೆಯ ಅವಧಿ 55 ಸೆಕೆಂಡ್. ನಾಡಗೀತೆಯ ಸ್ಥಾನಮಾನ ನೀಡಿರುವ ಕಾರಣ ಗಾಯನದ ವೇಳೆ ಅಂಗವಿಕಲರನ್ನು ಹೊರತುಪಡಿಸಿ, ಹಾಜರಿರುವ ಎಲ್ಲರೂ ಎದ್ದುನಿಂತು ಗೌರವ ಸಲ್ಲಿಸಬೇಕು' ಎಂದು ಸರ್ಕಾರ ಸೂಚಿಸಿದೆ.

ಮದ್ರಾಸ್ ಹೈಕೋರ್ಟ್ ಇತ್ತೀಚೆಗೆ 'ತಮಿಳ್ ತಾಯ್ ವಾಳ್ತು' ಕೇವಲ ಪ್ರಾರ್ಥನಾ ಗೀತೆ. ಅದು, ರಾಷ್ಟ್ರಗೀತೆಯಲ್ಲ. ಹೀಗಾಗಿ, ಅದರ ಗಾಯನದ ವೇಳೆ ಎಲ್ಲರೂ ಎದ್ದುನಿಲ್ಲುವ ಅಗತ್ಯವಿಲ್ಲ ಎಂದು ಹೇಳಿತ್ತು.

ಇದರ ಹಿಂದೆಯೇ ರಾಜ್ಯ ಸರ್ಕಾರ ಉಲ್ಲೇಖಿತ ಗೀತೆಗೆ ನಾಡಗೀತೆಯ ಸ್ಥಾನಮಾನವನ್ನು ನೀಡಿ ಆದೇಶ ಹೊರಡಿಸಿದೆ.

## ವರುಣ್ ಸಿಂಗ್ ಅಂತ್ಯಕ್ರಿಯೆ

ಭೋಪಾಲ್ (ಪಿಟಿಐ): ಡಿ. 8ರಂದು ನಡೆದಿದ್ದ ಸೇನಾ ಹೆಲಿಕಾಪ್ಟರ್ ಅವಘಡದಲ್ಲಿ ತೀವ್ರವಾಗಿ ಗಾಯಗೊಂಡು, ಬುಧವಾರ ಮೃತಪಟ್ಟಿದ್ದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅಂತ್ಯಕ್ರಿಯೆ ಸೇನಾ ಗೌರವಗಳೊಂದಿಗೆ ಶುಕ್ರವಾರ ಇಲ್ಲಿ ನಡೆಯಿತು.

ತ್ರಿವರ್ಣಧ್ವಜ ಹೊದಿಸಿದ್ದ ಪಾರ್ಥಿವ ಶರೀರವನ್ನು, ಪುಷ್ಪಾಲಂಕೃತ ಸೇನಾ ವಾಹನದಲ್ಲಿ ಮಿಲಿಟರಿ ಆಸ್ಪತ್ರೆಯಿಂದ ಇಲ್ಲಿನ ಬೈರಾಗರ್‌ನಲ್ಲಿರುವ ಸ್ಮಶಾನಕ್ಕೆ ತರಲಾಯಿತು. ಸೇನಾ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು.

ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಸೇನೆಯ ಹಿರಿಯ ಅಧಿಕಾರಿಗಳು ಸೇರಿದಂತೆ ವಿವಿಧ ಪ್ರಮುಖರು ಗೌರವ ಸಲ್ಲಿಸಿದರು. ವರುಣ್ ಅವರ ತಂದೆ ಕರ್ನಲ್ ಕೆ.ಪಿ. ಸಿಂಗ್ (ನಿವೃತ್ತ), ತಾಯಿ ಉಮಾ, ಪತ್ನಿ, 11 ವರ್ಷದ ಮಗ, 8 ವರ್ಷದ ಮಗಳು ಹಾಗೂ ವರುಣ್ ತಮ್ಮ ತನುಜ್ ಸಿಂಗ್ ಕೂಡಾ ಹಾಜರಿದ್ದರು.

## ಪ್ರಧಾನಿ ಮೋದಿಗೆ ಭೂತಾನ್‌ನ ಅತ್ಯುನ್ನತ ನಾಗರಿಕ ಪುರಸ್ಕಾರ ಘೋಷಣೆ

ಥಿಂಪು, ಭೂತಾನ್(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭೂತಾನ್‌ನ ಅತ್ಯುನ್ನತ ನಾಗರಿಕ ಪುರಸ್ಕಾರವನ್ನು ಶುಕ್ರವಾರ ಘೋಷಿಸಲಾಗಿದೆ.

ಭೂತಾನ್‌ನ 114ನೇ 'ರಾಷ್ಟ್ರೀಯ ದಿನಾಚರಣೆ' ಸಂದರ್ಭದಲ್ಲಿ ಈ ಪುರಸ್ಕಾರ ಘೋಷಿಸಲಾಗಿದೆ. ಈ ಕುರಿತು ಪ್ರಧಾನಿ ಲೊಟೆ ಶೇರಿಂಗ್ ಸಾಮಾಜಿಕ ಮಾಧ್ಯಮಗಳಲ್ಲಿ ಈ ಮಾಹಿತಿ ನೀಡಿದ್ದಾರೆ.



ನರೇಂದ್ರ ಮೋದಿ

'ದೇಶದ ಅತ್ಯುನ್ನತ ನಾಗರಿಕ ಗೌರವ ಪುರಸ್ಕಾರ 'ಡ್ರುಕ್ ಗ್ಯಾಲ್ಪೊ'ಕ್ಕೆ ಘನತೆವೆತ್ತ ಪ್ರಧಾನಿ ನರೇಂದ್ರ ಮೋದಿ ಜೀ ಅವರ ಹೆಸರನ್ನು ಘೋಷಣೆ ಮಾಡಲು ಹರ್ಷಗೊಂಡಿದ್ದೇನೆ' ಎಂದು ಪ್ರಧಾನಿ ಕಾರ್ಯಾಲಯ ಟ್ವೀಟ್ ಮಾಡಿದೆ.

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,248 |
| ಇಂದಿನ ಅಂತ್ಯ | 16,985 |
| ▼ | 263 |
| ದಿನದ ಗರಿಷ್ಠ | 17,298 |

### ವಿನಿಮಯ ದರ

| | |
|---|---|
| $ ಡಾಲರ್ | 76.06 |
| £ ಪೌಂಡ್ | 101.58 |
| € ಯುರೊ | 86.42 |
| ¥ ಯೆನ್ (100ಕ್ಕೆ) | 67.15 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | | |
|---|---|---|
| ಬೆಂಗಳೂರು | 100 ಮೊಟ್ಟೆಗೆ | ₹520 |
| | 12 ಮೊಟ್ಟೆಗೆ | ₹68 |
| ಮೈಸೂರು | 100 ಮೊಟ್ಟೆಗೆ | ₹518 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1310 (1300) |
| ಸೋಯಾ (ರಿಫೈನ್ಡ್) | ₹1188 (1190) |
| ಸೂರ್ಯಕಾಂತಿ (ರಿಫೈನ್ಡ್) | ₹1250 (1250) |
| ಪಾಮೋಲಿನ್ | ₹1158 (1155) |

### ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

| | |
|---|---|
| ದೊಡ್ಡ | ₹2500-3000 |
| ಮಧ್ಯಮ | ₹1500-2500 |
| ಸಣ್ಣ | ₹500-1500 |

### ಕೊಬ್ಬರಿ ಧಾರಣೆ

| | |
|---|---|
| ಅರಸೀಕೆರೆ | ₹14000-17850 |
| | ₹--- |
| ತುರುವೇಕೆರೆ | ₹17500-17500 |

### ಮುಂಬೈ ಧಾರಣೆ

**ಶೇಂಗಾ**

17-12-2021

| | |
|---|---|
| ಜಾವಾ 70/80(ಹೊಸ) | 10700-10750 |
| ಜಾವಾ 80/90(ಹೊಸ) | 10300-10350 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10050 |
| ದಪ್ಪ ಗುಜರಾತ್(ಹೊಸ) | 8600-8700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1320 (1310) |
| ಒಂದು ವಾರದ ಡೆಲಿವರಿ | 1315 (1305) |
| ಸೋಯಾ ಕಚ್ಚಾ | 1150 (1150) |
| ಪಾಮ್ ವಾರದ ಡೆಲಿವರಿ | 1156 (1153) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1170 (1170) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
48,650 (48,200)
ಬೆಳ್ಳಿ ಕೆ.ಜಿ
61,800 (61,075)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಮುಷ್ಕರ ಅಂತ್ಯ

ನವದೆಹಲಿ (ಪಿಟಿಐ): ಸರ್ಕಾರಿ ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ, ಸರ್ಕಾರಿ ಬ್ಯಾಂಕ್‌ಗಳ ನೌಕರರ ಸಂಘಟನೆಗಳು ನಡೆಸಿದ 2 ದಿನಗಳ ಮುಷ್ಕರ ಶುಕ್ರವಾರ ಅಂತ್ಯವಾಗಿದೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ;** | |
| ಕೂಳೆ | 500- 550 |
| ನಡುಗೋಲು | 600-650 |
| ರಾಶಿ | 700-800 |
| ರಾಶಿ ಉತ್ತಮ | 800-900 |
| ಜರಡಿ | 1000 -1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 750-850 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 510 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಚಿತ್ರದುರ್ಗ** | |
| ಆಪಿ | 46600-47000 |
| ಬೆಟ್ಟೆ | 38400-39800 |
| ಕೆಂಪುಗೋಟು | 32200-32600 |
| ರಾಶಿ | 46100-46500 |
| **ಹೊಸನಗರ** | |
| ಚಾಲಿ | 43269-43269 |
| ಕೆಂಪುಗೋಟು | 32569-39219 |
| ರಾಶಿ | 43820-48199 |
| **ಕಾರ್ಕಳ** | |
| ಹೊಸತು | 40000-45000 |
| ಹಳತು | 46000-53000 |
| **ಕುಮಟಾ** | |
| ಚಿಪ್ಪು | 25869-40999 |
| ಕೋಕ | 21089-37019 |
| ಫ್ಯಾಕ್ಟರಿ | 13019-18699 |
| ಹಳೆಚಾಲಿ | 49019-50781 |
| ಹೊಸಚಾಲಿ | 38509-42811 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಶಿವಮೊಗ್ಗ** | |
| ಬೆಟ್ಟೆ | 46898-53810 |
| ಗೊರಬಲು | 17560-37899 |
| ರಾಶಿ | 43899-47499 |
| ಸರಕು | 51709-72799 |
| **ಸಿದ್ದಾಪುರ** | |
| ಬಿಳಿಗೋಟು | 32699-42899 |
| ಚಾಲಿ | 46899-50599 |
| ಕೋಕ | 24799-36899 |
| ಹೊಸಚಾಲಿ | 32099-41000 |
| ಕೆಂಪುಗೋಟು | 31699-34199 |
| ರಾಶಿ | 46809-48809 |
| ತಟ್ಟಿಬೆಟ್ಟೆ | 36059-47609 |
| **ಶಿರಸಿ** | |
| ಬೆಟ್ಟೆ | 21899-46819 |
| ಬಿಳಿಗೋಟು | 26400-44519 |
| ಚಾಲಿ | 38069-50938 |
| ರಾಶಿ | 37699-50399 |
| **ಯಲ್ಲಾಪುರ** | |
| ಬಿಳಿಗೋಟು | 29871-39000 |
| ಚಾಲಿ | 40799-50760 |
| ಕೋಕ | 22171-34679 |
| ಕೆಂಪುಗೋಟು | 30072-34719 |
| ರಾಶಿ | 45899-53161 |
| ತಟ್ಟಿಬೆಟ್ಟೆ | 38969-44689 |
| **ರೇಷ್ಮೆಗೂಡು ಮಾರುಕಟ್ಟೆ** | |
| **ರಾಮನಗರ** | |
| ಮಿಶ್ರತಳಿ (ಸಿ.ಬಿ.): | 350-689 |
| ದ್ವಿತಳಿ (ಬಿ.ವಿ.): | 692-900 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15,500 | 15,450 | 15,250 | 236.85 ಸೆಂಟ್ಸ್ |
| ಎಸಿ | 6,900 | 6,600 | 6,450 | |
| ಆರ್‌ಪಿ | 6,300 | 6,500 | -- | ಲಂಡನ್ |
| ಆರ್‌ಸಿ | 3,875 | 3,800 | --- | 2,431 ಡಾಲರ್ಸ್ |

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

★ಶ್ರೇಯಸ್ ಟೂರ್ಸ್★ 28.12.2021 15ದಿನಗಳು 32,000 (ಇಂದೋರ್‌ನಿಂದ) ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಸಹಿತ). 28.12.2021 16ದಿನಗಳು 32,000 ಅಖಂಡ ಆಂಧ್ರ ತೆಲಂಗಾಣ ರಾಜ್ಯದ 49ಸ್ಥಳಗಳು. 21.01.2022 13ದಿನಗಳು 28,000 (ಅಹಮದಾಬಾದ್‌ನಿಂದ)ಅಖಂಡ ಗುಜರಾತ್ ರಾಜ್ಯ ಪ್ರವಾಸ (ಕಚ್‌ಬುಜ್ ಸಹಿತ). 15.02.2022 6ದಿನಗಳು 26,000 (ಡೆಹ್ರಾಡೂನ್‌ನಿಂದ) ಸ್ನೋಸ್ಪೆಷಲ್,ಔಲಿ,ನೈನಿತಾಲ್, ಭೀಮ್‌ತಾಲ್,ಅಲ್ಮೋರಾ, ಜಾಗೇಶ್ವರ,ಮುಕ್ತೇಶ್ವರ,ಜಿಮ್ ಕಾರ್ಬೆಟ್.22.02.2022 10ದಿನಗಳು 30,000 (ಬೆಂಗಳೂರಿನಿಂದ)ಪುರಿ, ಕೋನಾರ್ಕ್,ಭುವನೇಶ್ವರ, ಜಾಜ್‌ಪುರ,ಕಟಕ್,ಕೊಲ್ಕತ್ತಾ, ಗಂಗಾಸಾಗರ್. 01.03.2022 12ದಿನಗಳು 34,000 (ಬೆಂಗಳೂರಿನಿಂದ) ಚಂಡೀಗಡ್, ಶಿಮ್ಲಾ,ಕುಲುಮನಾಲಿ, 5ದೇವಿಯರು,ಡಾಲ್‌ಹೌಸಿ, ಕಟ್ರಾವೈಷ್ಣೋದೇವಿ,ಜಮ್ಮು, ಅಮೃತಸರ್,ಕುರುಕ್ಷೇತ್ರ. 01.03.2022 10ದಿನಗಳು 50,000 (ಬೆಂಗಳೂರಿನಿಂದ) ಅಖಂಡ ನೇಪಾಳರಾಷ್ಟ್ರ (ಮುಕ್ತಿನಾಥಸಹಿತ) 9743351212, 9206979202, 9902050065, 7406112334

ಶಿವರಾತ್ರಿ ಪ್ರಯುಕ್ತ 21.02.2022, 11 ದಿನಗಳು ನೈಮಿಶಾರಣ್ಯ, ಕಾಶಿ,ಗಯಾ, ಅಯೋಧ್ಯ. 21.02.2022, 11 ದಿನಗಳು. ಉಜ್ಜಯಿನಿ ಪಟೇಲ್ ಪ್ರತಿಮೆ, ದ್ವಾರಕಾ, ಸೋಮನಾಥ್, ನಿಷ್ಕಳಂಕಮಾಹದೇವ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್. 9342287551, 8050629305

30.12.2021 ಗೋವಾ, ದುದ್‌ಸಾಗರ್ 4 ದಿನಗಳು. 06.01.2022 ನವಗ್ರಹ ಸಹಿತ ತಮಿಳುನಾಡು 7 ದಿನಗಳು. 24.1.2022 ಶಿರಡಿ ಪ್ರವಾಸ 7 ದಿನಗಳು 24.01.2022 ಕಾಶಿ, ಅಯೋಧ್ಯಾ, ಅಲಹಾಬಾದ್ 6 ದಿನಗಳು. 27.01.2022 ದೆಹಲಿ, ಆಗ್ರಾ,ಕಾಶಿ 10 ದಿನಗಳು. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9880847001, 9342848791

29/1/2022 ರಿಂದ 17 ದಿನಗಳ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್, ದ್ವಾರಕಾ, ಪಟೇಲ್ ಪ್ರತಿಮೆ, ಶಿರಡಿ. ಶಿವರಾತ್ರಿ ಪ್ರಯುಕ್ತ 17/2/2022 ರಿಂದ 22 ದಿನಗಳ ಪುರಿ, ಕೋಲ್ಕತ್ತಾ, ನೇಪಾಳ, ಹರಿದ್ವಾರ್, ಕಾಶಿ, ದೆಹಲಿ ಇತ್ಯಾದಿ ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್(S) ಆರ್.ವಿ.ರಸ್ತೆ #164/3, ಮಿನರ್ವ ಬಸ್‌ಸ್ಟಾಪ್ ಎದುರು, ಬೆಂಗಳೂರು4, 08026565085. 9480182865, 8105657052

ಉದ್ಯೋಗಾವಕಾಶ
Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

General

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/-. 8884666597, 8884666594.

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಬಿಲ್ಡರ್ ಎಸೆನ್ಷಿಯಲ್
Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Farm House/ Land/ Resorts
General

FOR SALE Residential Plot 6400 Sq.Ft. Complete with Pucca Boundary Wall at R. K. Farm Area, Anekal Taluk Marasuru Village Kasaba Hobli. Clear Title. Single Owner: 9823013496 best Offers, Immediate Deal.

EDUCATION CORNER

ಸ್ಪರ್ಧಾಚೈತ್ರ ತರಬೇತಿ ಕೇಂದ್ರ SINCE 1999
ವಿಜಯನಗರದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾದ 22 ವರ್ಷಗಳ ಪ್ರತಿಷ್ಠಿತ ತರಬೇತಿ ಸಂಸ್ಥೆ
ತರಬೇತಿ ಪ್ರಾರಂಭ – Sunday, 19th Dec. @ 11:30 am
KAS, PSI, FDA, B.Ed (CET), Group-C, Banking, RRB, SSC
Spardha Chaitra New Building
FACILITIES OFFERED :
- New Infrastructure with well equipped classrooms
- 24/7 Library (100 seats), Wi-Fi facility
- Hostel for Boys and Girls
- Study Centre, Newspaper and Magazine Section
- Individual care by Faculties
- Free Test Series (Online/Offline)
- Canteen Facility for All Students
ವಿಶೇಷ: ಹೊಸ ಕಟ್ಟಡದಲ್ಲಿ ಸ್ಪರ್ಧಾಚೈತ್ರ
No.78/6, Opp. Veeresh Theatre, Behind NBP PU College, Magadi Main Road Agrahara Dasarahalli, Bangalore - 79.
Ph: 080-23112563 / 81973 07328

ಸ್ಪರ್ಧಾಮಿತ್ರ Academy
IAS / KAS
PSI / FDA / SDA
IBPS - BANK
Online / Offline Classes - Admission Open
Near Attiguppe Metro Station, Opp. Maruthi Medicals, Vijayanagar, Blore-40
9535111133 / 9535111199

ಶಿಕ್ಷಣ
Coaching Classes

ನೇರ ಪರೀಕ್ಷೆಗಳು DIRECT EXAMS
ಮನೆಯಲ್ಲಿ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC,SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್(ರಿ)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
9740258276

ಭವಿಷ್ಯ
Astrology

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷ ಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

ಸ್ತ್ರೀ ಪುರುಷ ವಶೀಕರಣ ಸ್ಪೆಷಲಿಸ್ಟ್. ನಿಮ್ಮ ಏನೇ ಕಠಿಣ ಸಮಸ್ಯೆ ಇದ್ದರೂ ಉಚಿತ ಭವಿಷ್ಯ ಖಚಿತ ಪರಿಹಾರ. 9448327541 .

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವಾದುದ್ದು ಇಲ್ಲಿ ಸಾಧ್ಯ 9535883556

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs. 1999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007/ 8892501007

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

| Per word | Ordinary | Bold | Ordinary Semi Display | Bold Semi Display |
|---|---|---|---|---|
| | 60 | 85 | 70 | 115 |
| CD Per Sqcm | Single Col | Double Col | Multi Col | |
| | 430 | 450 | 475 | |

| SPECIAL OFFER | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಗೋಲು ಗಳಿಸಿದ ಭಾರತದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

### ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಹರ್ಮನ್‌ಪ್ರೀತ್ 'ಡಬಲ್ ಸ್ಟ್ರೈಕ್'

# ಭಾರತಕ್ಕೆ ಮಣಿದ ಪಾಕ್

ಢಾಕಾ (ಪಿಟಿಐ): ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಎರಡು ಗೋಲುಗಳ ಬಲದಿಂದ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ತನ್ನ ಬದ್ಧ ಎದುರಾಳಿ ಪಾಕಿಸ್ತಾನದ ಎದುರು ಜಯಭೇರಿ ಬಾರಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಪಾರಮ್ಯ ಮೆರೆದ ಭಾರತ ತಂಡವು 3–1 ಗೋಲುಗಳಿಂದ ಪಾಕ್ ತಂಡವನ್ನು ಹಣಿಯಿತು. ಹರ್ಮನ್‌ಪ್ರೀತ್ (8ನೇ ನಿ ಮತ್ತು 53ನೇ ನಿ) ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿದ್ದು ತಂಡದ ಜಯದಲ್ಲಿ ಪ್ರಮುಖ ಕಾರಣವಾದವು. ಆಕಾಶದೀಪ್ ಸಿಂಗ್ 42ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಪಾಕ್ ತಂಡದ ಏಕೈಕ ಗೋಲನ್ನು ಜುನೈದ್ ಮಂಜೂರ್ 45ನೇ ನಿಮಿಷದಲ್ಲಿ ಗಳಿಸಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದು ಐತಿಹಾಸಿಕ ದಾಖಲೆ ಮಾಡಿದ್ದ ಭಾರತ ತಂಡವು ಈ ಟೂರ್ನಿಯಲ್ಲಿ ಸತತ ಎರಡನೇ ಪಂದ್ಯದಲ್ಲಿ ಜಯಿಸಿ ಸೆಮಿಫೈನಲ್ ಪ್ರವೇಶದತ್ತ ದಾಪುಗಾಲಿಟ್ಟಿದೆ. ಎರಡನೇ ಪಂದ್ಯದಲ್ಲಿ ಆತಿಥೇಯ ಬಾಂಗ್ಲಾ ವಿರುದ್ಧ ಭಾರಿ ಜಯ ಗಳಿಸಿತ್ತು. ಮೊದಲ ಪಂದ್ಯದಲ್ಲಿ ಕೊರಿಯಾ ಎದುರು ಡ್ರಾ ಮಾಡಿಕೊಂಡಿತ್ತು.

ಆದರೆ ಪಾಕ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಜಪಾನ್ ಎದುರು ಡ್ರಾ ಮಾಡಿಕೊಂಡಿತ್ತು. ಭಾರತ ತಂಡವು ಏಳು ಪಾಯಿಂಟ್‌ಗಳೊಂದಿಗೆ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದೆ. ಭಾನುವಾರ ನಡೆಯುವ ಪಂದ್ಯದಲ್ಲಿ ಭಾರತವು ಜಪಾನ್ ಎದುರು ಸೆಣಸಲಿದೆ.

ಹೋದ ಸಲ ಮಸ್ಕತ್‌ನಲ್ಲಿ ನಡೆದಿದ್ದ ಟೂರ್ನಿಯ ಫೈನಲ್ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಆದ್ದರಿಂದ ಭಾರತ ಮತ್ತು ಪಾಕ್ ಪ್ರಶಸ್ತಿ ಹಂಚಿಕೊಂಡಿದ್ದವು.

ಈ ಪಂದ್ಯದಲ್ಲಿ ಭಾರತ ತಂಡವು ಎಂಟನೇ ನಿಮಿಷದಲ್ಲಿಯೇ ಪಾಕ್ ರಕ್ಷಣಾ ಗೋಡೆಯನ್ನು ದಾಟುವಲ್ಲಿ ಭಾರತದ ಸ್ಟ್ರೈಕರ್ ಹರ್ಮನ್‌ಪ್ರೀತ್ ಯಶಸ್ವಿಯಾದರು. ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಕೆಳಮಟ್ಟದ ಫ್ಲಿಕ್ ಮೂಲಕ ಗೋಲುಪೆಟ್ಟಿಗೆ ಸೇರಿಸುವಲ್ಲಿ ಯಶಸ್ವಿಯಾದರು.

ಪಂದ್ಯದ ಎರಡೂ ಕ್ವಾರ್ಟರ್‌ಗಳಲ್ಲಿ ಭಾರತದ ಆಟಗಾರರೇ ಚೆಂಡಿನ ಮೇಲೆ ಹೆಚ್ಚು ಸಮಯ ನಿಯಂತ್ರಣ ಸಾಧಿಸಿದ್ದರು. ಅದರಲ್ಲೂ ಹರ್ಮನ್‌ಪ್ರೀತ್ ಪದೇ ಪದೇ ನಡೆಸಿದ ದಾಳಿಯನ್ನು ತಡೆಯುವಲ್ಲಿ ಪಾಕ್ ರಕ್ಷಣಾ ಪಡೆಯು ಬಹಳಷ್ಟು ಬೆವರು ಹರಿಸಿತು. ಅದರಲ್ಲೂ ಪಾಕ್ ತಂಡದ ಗೋಲ್ ಕೀಪರ್ ಮಝರ್ ಅಬ್ಬಾಸ್ ಅವರ ಆಟ ಅಮೋಘವಾಗಿತ್ತು. ಅರ್ಧವಿರಾಮಕ್ಕೆ ಭಾರತವು 1–0ಯಿಂದ ಮುಂದಿತ್ತು.

42ನೇ ನಿಮಿಷದಲ್ಲಿ ಆಕಾಶದೀಪ್ ಲೆಫ್ಟ್ ಫ್ಲ್ಯಾಂಕ್‌ನಿಂದ ಸುಮಿತ್ ಡ್ರೈವ್ ಮಾಡಿದ ಚೆಂಡನ್ನು ರಿವರ್ಸ್ ಹಿಟ್ ಮಾಡುವ ಮೂಲಕ ಗೋಲು ಪೆಟ್ಟಿಗೆ ಸೇರಿಸಿದರು. ಇದರಿಂದಾಗಿ ಗೋಲು ಅಂತರ ಹೆಚ್ಚಾಯಿತು. ಮೂರು ನಿಮಿಷಗಳ ನಂತರ ಪಾಕ್ ಕೂಡ ತಿರುಗೇಟು ನೀಡಿತು. ಇದರ ನಂತರ ಭಾರತದ ರಕ್ಷಣಾ ಪಡೆ ಮತ್ತಷ್ಟು ಚುರುಕಾಯಿತು. ಅದರಿಂದಾಗಿ ಪಾಕ್ ಬಳಗವು ಗೋಲು ಗಳಿಸಲು ಪರದಾಡಿತು. ಈ ಒತ್ತಡವನ್ನು ಸಮರ್ಥವಾಗಿ ಬಳಸಿಕೊಂಡ ಹರ್ಮನ್‌ಪ್ರೀತ್ ಮತ್ತೊಂದು ಪೆನಾಲ್ಟಿಯಲ್ಲಿ ಗೋಲು ಬಾರಿಸಿದರು.

| ಪಾಯಿಂಟ್ಸ್ ಪಟ್ಟಿ | | | | | |
|---|---|---|---|---|---|
| ತಂಡ | ಪಂದ್ಯ | ಗೆಲುವು | ಡ್ರಾ | ಸೋಲು | ಪಾಯಿಂಟ್ಸ್ |
| ಭಾರತ | 3 | 2 | 1 | 0 | 7 |
| ದಕ್ಷಿಣ ಕೊರಿಯಾ | 2 | 0 | 2 | 0 | 2 |
| ಜಪಾನ್ | 2 | 0 | 2 | 0 | 2 |
| ಪಾಕಿಸ್ತಾನ | 2 | 0 | 1 | 1 | 1 |
| ಬಾಂಗ್ಲಾದೇಶ | 1 | 0 | 0 | 1 | 0 |

*ಮಲೇಷ್ಯಾ ಟೂರ್ನಿಯಿಂದ ಹಿಂದೆ ಸರಿದಿದೆ

# ಸೆಮಿಗೆ ಶ್ರೀಕಾಂತ್; ಲಕ್ಷ್ಯ ಎದುರಾಳಿ

### ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಪ್ರಶಸ್ತಿ ಉಳಿಸಿಕೊಳ್ಳಲು ಸಿಂಧು ವಿಫಲ

ವೆಲ್ವಾ, ಸ್ಪೇನ್ (ಪಿಟಿಐ): ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತದ ಕಿದಂಬಿ ಶ್ರೀಕಾಂತ್ ಹಾಗೂ ಲಕ್ಷ್ಯ ಸೇನ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಇದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿಗೆ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎರಡು ಪದಕಗಳು ದೇಶಕ್ಕೆ ದೊರೆಯುವುದು ಖಚಿತವಾಗಿದೆ. ಆದರೆ ಪಿ.ವಿ. ಸಿಂಧು ಅವರ ಪ್ರಶಸ್ತಿ ಉಳಿಸಿಕೊಳ್ಳುವ ಕನಸು ನನಸಾಗಲಿಲ್ಲ.

ಪುರುಷರ ಸಿಂಗಲ್ಸ್ ಎಂಟರ ಘಟ್ಟದ ಹಣಾಹಣಿಯಲ್ಲಿ ಶುಕ್ರವಾರ 12ನೇ ಶ್ರೇಯಾಂಕದ ಶ್ರೀಕಾಂತ್ 21-8, 21–7ರಿಂದ ನೆದರ್ಲೆಂಡ್ಸ್‌ನ ಮಾರ್ಕ್ ಕಾಲ್ಜೊ ಸವಾಲು ಮೀರಿದರು. ಕೇವಲ 26 ನಿಮಿಷಗಳಲ್ಲಿ ಭಾರತದ ಆಟಗಾರನಿಗೆ ಗೆಲುವು ಒಲಿಯಿತು.

ಇನ್ನೊಂದು ಕ್ವಾರ್ಟರ್‌ಫೈನಲ್ ಸೆಣಸಾಟದಲ್ಲಿ ಲಕ್ಷ್ಯ ಸೇನ್ ಅವರು 21–15, 15–21, 22–20ರಿಂದ ಚೀನಾದ ಜುನ್ ಪೆಂಗ್ ಜಾವೊ ಅವರನ್ನು ಮಣಿಸಿದರು. ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಲಕ್ಷ್ಯ ಹಾಗೂ ಶ್ರೀಕಾಂತ್ ಮುಖಾಮುಖಿಯಾಗುವರು.

ಆದರೆ ಎಚ್.ಎಸ್.ಪ್ರಣಯ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ 14–21, 12–21ರಿಂದ ಸಿಂಗಪುರದ ಕೀನ್ ಯೆವ್ ಲೊಹ್ ಎದುರು ಸೋತರು.

ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಕಾಶ್ ಪಡುಕೋಣೆ (1983) ಮತ್ತು ಬಿ.ಸಾಯಿ ಪ್ರಣೀತ್ (2019) ಕಂಚಿನ ಪದಕ ಗೆದ್ದುಕೊಂಡಿದ್ದರು. ಇವರಿಬ್ಬರ ಸಾಲಿಗೆ ಲಕ್ಷ್ಯ ಹಾಗೂ ಶ್ರೀಕಾಂತ್ ಸೇರಲಿದ್ದಾರೆ.

ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಸಿಂಧು ಐದು ಪದಕಗಳ ಒಡತಿಯಾಗಿದ್ದರೆ, ಸೈನಾ ನೆಹ್ವಾಲ್ ಎರಡು ಪದಕಗಳನ್ನು ಗಳಿಸಿದ್ದಾರೆ. 2011ರಲ್ಲಿ ಮಹಿಳಾ ಡಬಲ್ಸ್‌ನಲ್ಲಿ ಜ್ವಾಲಾ ಗುಟ್ಟಾ ಹಾಗೂ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಕಂಚು ಜಯಿಸಿದ್ದರು.

ಶ್ರೀಕಾಂತ್, ಈ ಪಂದ್ಯದ ಮೊದಲ ಗೇಮ್‌ನ ಆರಂಭದಲ್ಲಿ 11–5ರಿಂದ ಮುಂದಿದ್ದರು. ಬಳಿಕ ಇದು 14–8ಕ್ಕೆ ತಲುಪಿತು. ನಂತರ ಸತತ ಏಳು ಪಾಯಿಂಟ್ಸ್ ಕಲೆಹಾಕಿ ಗೇಮ್ ಕೈವಶ ಮಾಡಿಕೊಂಡರು. 2ನೇ ಗೇಮ್‌ನಲ್ಲೂ ಹೆಚ್ಚೇನೂ ವ್ಯತ್ಯಾಸವಾಗಲಿಲ್ಲ. ಸುಲಭವಾಗಿ ಗೇಮ್ ಮತ್ತು ಪಂದ್ಯ ಗೆದ್ದರು.

ಕಿದಂಬಿ ಶ್ರೀಕಾಂತ್ ಆಟದ ಭಂಗಿ– ಎಎಫ್‌ಪಿ ಚಿತ್ರ

### ತೈಜು ಎದುರು ಮಂಕಾದ ಸಿಂಧು

ಪಿ.ವಿ. ಸಿಂಧು ಪ್ರಶಸ್ತಿ ಉಳಿಸಿಕೊಳ್ಳುವ ಆಸೆಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, ಚೀನಾ ತೈಪೆ ಆಟಗಾರ್ತಿ ತೈ ಜು ಯಿಂಗ್ ತಣ್ಣೀರೆರೆಚಿದರು.

ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ತೈ ಜು 21–17, 21–15ರಿಂದ ಭಾರತದ ಆಟಗಾರ್ತಿಗೆ ಸೋಲುಣಿಸಿದರು. 42 ನಿಮಿಷಗಳ ಹಣಾಹಣಿಯಲ್ಲಿ ಸಿಂಧು ಹಲವು ಲೋಪಗಳನ್ನು ಎಸಗಿದ್ದು ಮುಳುವಾಯಿತು.

ಸಿಂಧು ಎದುರು ತೈ ಜುಗೆ ಒಲಿದ 15ನೇ ಗೆಲುವು ಇದು. ಚೀನಾ ತೈಪೆ ಆಟಗಾರ್ತಿ ವಿರುದ್ಧ ಸಿಂಧು ಐದು ಬಾರಿ ಮೇಲುಗೈ ಸಾಧಿಸಿದ್ದರು.

ಪಂದ್ಯದಲ್ಲಿ ತೈ ಜು ಅವರ ವೇಗ ಹಾಗೂ ಚುರುಕಿನ ಆಟಕ್ಕೆ ಸಮನಾಗಿ ನಿಲ್ಲಲು ಹಾಗೂ ಅಂಗಣ 'ಕವರ್' ಮಾಡುವಲ್ಲಿ ಸಿಂಧು ವಿಫಲರಾದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ, ಎರಡು ಒಲಿಂಪಿಕ್ಸ್ ಪದಕ ವಿಜೇತೆ, ಟೋಕಿಯೊ ಒಲಿಂಪಿಕ್ಸ್‌ನ ಸೆಮಿಫೈನಲ್‌ನಲ್ಲೂ ತೈ ಜು ಎದುರು ಎಡವಿದ್ದರು. 2019ರಲ್ಲಿ ಸಿಂಧು, ತೈ ಜು ಅವರನ್ನು ಮಣಿಸಿಯೇ ವಿಶ್ವ ಚಾಂಪಿಯನ್‌ಷಿಪ್ ಕಿರೀಟ ಧರಿಸಿದ್ದರು.

ಮೊದಲ ಗೇಮ್‌ನ ಆರಂಭದಲ್ಲಿ ತೈ ಜು 11–6ರಿಂದ ಮುನ್ನಡೆ ಸಾಧಿಸಿದ್ದರು. ಚೇತರಿಸಿಕೊಂಡ ಸಿಂಧು 16–18ಕ್ಕೆ ಹಿನ್ನಡೆಯನ್ನು ತಗ್ಗಿಸಿಕೊಂಡರು. ಆದರೆ ಅದೇ ಲಯ ಮುಂದುವರಿಸುವಲ್ಲಿ ವಿಫಲರಾಗಿ 17 ನಿಮಿಷಗಳ ಗೇಮ್‌ನಲ್ಲಿ ನಿರಾಸೆ ಅನುಭವಿಸಿದರು. ಎರಡನೇ ಗೇಮ್‌ನಲ್ಲಿ ಸಿಂಧು ಹೆಚ್ಚು ಪ್ರತಿರೋಧ ತೋರಿದರೂ ಪಂದ್ಯ ತೈಪೆ ಆಟಗಾರ್ತಿಯ ಕೈವಶವಾಗುವುದನ್ನು ತಪ್ಪಿಸಲಾಗಲಿಲ್ಲ.

ತೈ ಜು ಯಿಂಗ್ –ಎಎಫ್‌ಪಿ ಚಿತ್ರ

**ತಿದ್ದುಪಡಿ:** ಶುಕ್ರವಾರದ ಸಂಚಿಕೆಯ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ವರದಿಯಲ್ಲಿ ಚೈನಿಸ್ ತೈಪೆಯ ತೈ ಜು ಯೀಂಗ್ ಚಿತ್ರದ ಬದಲಿಗೆ ಪ್ರಮಾದವಶಾತ್ ಥಾಯ್ಲೆಂಡ್‌ನ ಇಂಟನಾನ್ ರಚಾನಕ್ ಚಿತ್ರವು ಪ್ರಕಟವಾಗಿದೆ.

### ಆ್ಯಷಸ್ ಟೆಸ್ಟ್: ಸ್ಮಿತ್–ಕ್ಯಾರಿ ಮಿಂಚು; ಆಸ್ಟ್ರೇಲಿಯಾ ಪಾರಮ್ಯ

# ಶತಕ ಸಿಡಿಸಿದ ಲಾಬುಷೇನ್

ಅಡಿಲೇಡ್ (ರಾಯಿಟರ್ಸ್): ಹೊನಲು ಬೆಳಕಿನಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ದ್ವಿತೀಯ ಟೆಸ್ಟ್‌ನಲ್ಲಿ ಆತಿಥೇಯ ಆಸ್ಟ್ರೇಲಿಯಾದ ಪಾರಮ್ಯ ಶುಕ್ರವಾರವೂ ಮುಂದುವರಿಯಿತು.

ಲಾಬುಷೇನ್ ಶತಕ, ಸ್ಟೀವನ್ ಸ್ಮಿತ್ ಮತ್ತು ಅಲೆಕ್ಸ್ ಕ್ಯಾರಿಯ ಮಿಂಚಿನ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾವು 9 ವಿಕೆಟ್‌ಗಳಿಗೆ 473 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ದಿನದಾಟದ ಕೊನೆಗೆ ಇಂಗ್ಲೆಂಡ್ ತಂಡವು 8.4 ಓವರ್‌ಗಳಲ್ಲಿ 17 ರನ್ ಗಳಿಸುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿತು.

ಮಿಚೆಲ್ ಸ್ಟಾರ್ಕ್ ಮತ್ತು ಮಿಚೆಲ್ ನೆಸರ್ ತಲಾ ಒಂದು ವಿಕೆಟ್ ಗಳಿಸಿದರು. ಹಸೀಬ್ ಹಮೀದ್ ಮತ್ತು ರೋರಿ ಬರ್ನ್ಸ್ ಇಬ್ಬರೂ ಅಗ್ಗಕ್ಕೆ ಔಟಾದರು. ಡೇವಿಡ್ ಮಲಾನ್ (ಬ್ಯಾಟಿಂಗ್ 1) ಮತ್ತು ನಾಯಕ ಜೋ ರೂಟ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

**ಲಾಬುಷೇನ್ ಶತಕ:** ಮೊದಲ ದಿನ ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ್ದ ಆಸ್ಟ್ರೇಲಿಯಾ ಡೇವಿಡ್ ವಾರ್ನರ್ (95) ಮತ್ತು ಲಾಬುಷೇನ್ ಶತಕದ ಜೊತೆಯಾಟದಿಂದ 89 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 221 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಲಾಬುಷೇನ್ ಎರಡನೇ ದಿನದ ಬೆಳಿಗ್ಗೆ ತಮ್ಮ ಶತಕಕ್ಕೆ ಅಗತ್ಯವಿದ್ದ ಐದು ರನ್ ಸೇರಿಸಿದರು. 21ನೇ ಟೆಸ್ಟ್ ಆಡುತ್ತಿರುವ ಅವರಿಗೆ ಇದು ಏಳನೇ ಶತಕ.

ಆದರೆ, ದಿನದಾಟದ ಒಂಬತ್ತನೇ ಓವರ್‌ನಲ್ಲಿಯೇ ಲಾಬುಷೇನ್ ಇನಿಂಗ್ಸ್‌ಗೆ ಒಲಿ ರಾಬಿನ್ಸನ್ ತೆರೆ ಎಳೆದರು. ಲಾಬುಷೇನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇನ್ನೊಂದೆಡೆ ಇದ್ದ ಸ್ಟೀವನ್ ಸ್ಮಿತ್ ಇನಿಂಗ್ಸ್ ಕಟ್ಟುವ ಹೊಣೆಯನ್ನು ತಮ್ಮ ಮೇಲೆಳೆದುಕೊಂಡರು. ಟ್ರಾವಿಸ್ ಹೆಡ್ (18) ಮತ್ತು ಗ್ರೀನ್ (2 ರನ್) ಅವರು ಹೆಚ್ಚು ಹೊತ್ತು ನಿಲ್ಲದೇ ಮರಳಿದರು. ಈ ಹಂತದಲ್ಲಿ ಸ್ಮಿತ್ ಜೊತೆಗೂಡಿದ ಅಲೆಕ್ಸ್ ಕ್ಯಾರಿ (51; 107ಎ, 5ಬೌಂಡರಿ) ಐದನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿದರು. ತಮ್ಮ ಶತಕಕ್ಕೆ ಏಳು ರನ್‌ಗಳ ಅಗತ್ಯವಿದ್ದ ಸಂದರ್ಭದಲ್ಲಿ ಸ್ಮಿತ್ (93; 201ಎ, 12ಬೌಂಡರಿ, 1ಸಿಕ್ಸರ್) ಜೇಮ್ಸ್ ಆ್ಯಂಡರ್ಸನ್ ಅವರ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು.

ಎರಡು ಓವರ್‌ಗಳ ನಂತರ ಕ್ಯಾರಿ ಕೂಡ ಔಟಾದರು. ಕೊನೆಯ ಹಂತದಲ್ಲಿ ಮಿಂಚಿದ ಸ್ಟಾರ್ಕ್ (ಔಟಾಗದೆ 39; 39ಎ, 5ಬೌಂಡರಿ) ಮತ್ತು ಮಿಚೆಲ್ ನೆಸರ್ (35; 24ಎ,5ಬೌಂಡರಿ, 1ಸಿಕ್ಸರ್) ತಂಡದ ಮೊತ್ತವನ್ನು ಹೆಚ್ಚಿಸಿದರು. ದಿನದಾಟದ ಮುಕ್ತಾಯಕ್ಕೆ ಸ್ವಲ್ಪ ಸಮಯಕ್ಕೆ ಮುಂದೆ ಹಂಗಾಮಿ ನಾಯಕ ಸ್ಮಿತ್ ಡಿಕ್ಲೇರ್ ಘೋಷಿಸಿದರು.

ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಮೂರು ವಿಕೆಟ್ ಗಳಿಸಿದರು. ಜೇಮ್ಸ್ ಎರಡು ವಿಕೆಟ್ ಪಡೆದರು.

ಶತಕ ಗಳಿಸಿದ ಮಾರ್ನಸ್ ಲಾಬುಷೇನ್ ಅವರನ್ನು ಅಭಿನಂದಿಸಿದ ಸ್ಟೀವನ್ ಸ್ಮಿತ್ –ಎಎಫ್‌ಪಿ ಚಿತ್ರ

### ಸ್ಕೋರ್ ಕಾರ್ಡ್

**ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 9ಕ್ಕೆ 473 ಡಿಕ್ಲೇರ್ಡ್ (150.4 ಓವರ್) (ಗುರುವಾರ 89 ಓವರ್‌ಗಳಲ್ಲಿ 2 ವಿಕೆಟ್‌ಗೆ 221)**

ಲಾಬುಷೇನ್ ಎಲ್‌ಬಿಡಬ್ಲ್ಯು ರಾಬಿನ್ಸನ್ 103 (305ಎ, 4X8), ಸ್ಮಿತ್ ಎಲ್‌ಬಿಡಬ್ಲ್ಯು ಆ್ಯಂಡರ್ಸನ್ 93 (201ಎ, 4X12, 6X1), ಟ್ರಾವಿಸ್ ಬಿ ರೂಟ್ 18 (36ಎ, 4X3), ಗ್ರೀನ್ ಬಿ ಸ್ಟೋಕ್ಸ್ 2 (5ಎ), ಕ್ಯಾರಿ ಸಿ ಹಮೀದ್ ಬಿ ಆ್ಯಂಡರ್ಸನ್ 51 (107ಎ, 4X5), ಸ್ಟಾರ್ಕ್ ಔಟಾಗದೆ 39 (39ಎ, 4X5), ನಾಸೆರ್ ಸಿ ಬ್ರಾಡ್ ಬಿ ಸ್ಟೋಕ್ಸ್ 35 (24ಎ, 4X5, 6X1), ರಿಚರ್ಡ್ಸನ್ ಸಿ ಬಟ್ಲರ್ ಬಿ ವೋಕ್ಸ್ 9 (3ಎ, 6X1)

**ಇತರೆ** (ಲೆಗ್‌ಬೈ 9, ವೈಡ್ 5, ನೋಬಾಲ್ 11) 25

**ವಿಕೆಟ್ ಪತನ:** 3-241 (ಮಾರ್ನಸ್ ಲಾಬುಷೇನ್, 97.5), 4-291 (ಟ್ರಾವಿಸ್ ಹೆಡ್, 110.3), 5-294 (ಕ್ಯಾಮರಾನ್ ಗ್ರೀನ್, 111.3 ), 6-385 (ಸ್ಟೀವನ್ ಸ್ಮಿತ್, 138.6), 7-390 (ಅಲೆಕ್ಸ್ ಕ್ಯಾರಿ, 140.4), 8-448 (ಮಿಚೆಲ್ ನಾಸೆರ್, 149.1), 9-473 (ಜಾಯ್ ರಿಚರ್ಡ್ಸನ್, 150.4)

**ಬೌಲಿಂಗ್:** ಜೇಮ್ಸ್ ಆ್ಯಂಡರ್ಸನ್ 29–10–58–2, ಸ್ಟುವರ್ಟ್ ಬ್ರಾಡ್ 26–6–73–1, ಕ್ರಿಸ್ ವೋಕ್ಸ್ 23.4–6–103–1, ಒಲಿ ರಾಬಿನ್ಸನ್ 27–13–45–1, ಬೆನ್ ಸ್ಟೋಕ್ಸ್ 25–2–113–3, ಜೋ ರೂಟ್ 20–2–72–1

**ಇಂಗ್ಲೆಂಡ್ ಮೊದಲ ಇನಿಂಗ್ಸ್ 2ಕ್ಕೆ 17 (8.4 ಓವರ್)**

ಹಮೀದ್ ಸಿ ಸ್ಟಾರ್ಕ್ ಬಿ ನಾಸೆರ್ 6 (21ಎ), ಬರ್ನ್ಸ್ ಸಿ ಸ್ಮಿತ್ ಬಿ ಸ್ಟಾರ್ಕ್ 4 (3ಎ, 4X1), ಮಲಾನ್ ಬ್ಯಾಟಿಂಗ್ 1 (19ಎ), ರೂಟ್ ಬ್ಯಾಟಿಂಗ್ 5 (9ಎ)

**ಇತರೆ** (ಲೆಗ್‌ಬೈ 1) 1

**ವಿಕೆಟ್ ಪತನ:** 1–7 (ರೋರಿ ಬರ್ನ್ಸ್, 2.1), 2–12 (ಹಸೀಬ್ ಹಮೀದ್, 6.2)

**ಬೌಲಿಂಗ್:** ಮಿಚೆಲ್ ಸ್ಟಾರ್ಕ್ 3–1–11–1, ಜಾಯ್ ರಿಚರ್ಡ್ಸನ್ 4–3–1–0, ಮಿಚೆಲ್ ನಾಸೆರ್ 1.4–0–4–1

### ಇಂಗ್ಲೆಂಡ್‌ಗೆ ದಂಡ: ಎಂಟು ಡಬ್ಲ್ಯುಟಿಸಿ ಪಾಯಿಂಟ್ ಕಡಿತ

ದುಬೈ (ಪಿಟಿಐ): ಆ್ಯಷಸ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ನಿಧಾನಗತಿಯ ಓವರ್ ರೇಟ್ ಹೊಂದಿದ್ದ ಕಾರಣಕ್ಕೆ ಕಡಿತ ಮಾಡಿದ್ದು ಐದು ಡಬ್ಲ್ಯುಟಿಸಿ ಪಾಯಿಂಟ್‌ಗಳಲ್ಲ. ಒಟ್ಟು ಎಂಟು ಅಂಕ ಕಡಿತ ಮಾಡಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ತಿಳಿಸಿದೆ.

ಬ್ರಿಸ್ಬೇನ್‌ನಲ್ಲಿ ನಡೆದಿದ್ದ ಮೊದಲ ಟೆಸ್ಟ್‌ನಲ್ಲಿ ಇಂಗ್ಲೆಂಡ್ ನಿಗದಿಯ ಸಮಯದಲ್ಲಿ ಎಂಟು ಓವರ್‌ಗಳಷ್ಟು ಕಡಿಮೆ ಬೌಲಿಂಗ್ ಮಾಡಿತ್ತು. ಆದ್ದರಿಂದ ಪೂರ್ಣ ಪಂದ್ಯ ಶುಲ್ಕ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ನ ಎಂಟು ಪಾಯಿಂಟ್‌ಗಳನ್ನು ಕಡಿತ ಮಾಡಲಾಗುವುದು ಎಂದು ತಿಳಿಸಿದೆ. ಈ ಮೊದಲು ಐದು ಪಾಯಿಂಟ್ಸ್ ಕಡಿತ ಮಾಡಲಾಗಿದೆ ಎಂದೂ ಐಸಿಸಿ ತಿಳಿಸಿತ್ತು.

### ಸ್ನೇಹಿತೆ ಜೀವ ಉಳಿಸಿದ ಟ್ರಾಫಿಕ್ ಪೊಲೀಸ್‌ಗೆ ಸಚಿನ್ ಕೃತಜ್ಞತೆ

ಮುಂಬೈ (ಪಿಟಿಐ): ಅಪಘಾತವೊಂದರಲ್ಲಿ ಗಾಯಗೊಂಡಿದ್ದ ತಮ್ಮ ಸ್ನೇಹಿತರೊಬ್ಬರ ಪ್ರಾಣ ಉಳಿಸಲು ಸಹಾಯ ಮಾಡಿದ ಸಂಚಾರ ವಿಭಾಗದ ಪೊಲೀಸ್ ಕಾನ್ಸ್‌ಟೇಬಲ್ ಅವರನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ವಿಷಯವನ್ನು ಟ್ವೀಟ್ ಮಾಡಿರುವ ಸಚಿನ್, 'ಇಂತಹ ಒಳ್ಳೆಯ ವ್ಯಕ್ತಿಗಳು ಇರುವುದರಿಂದಲೇ ಜಗತ್ತು ಸುಂದರವಾಗಿದೆ. ಕೆಲವು ದಿನಗಳ ಹಿಂದೆ ನನ್ನ ಸ್ನೇಹಿತೆಯೊಬ್ಬರು ರಸ್ತೆ ಅಪಘಾತಕ್ಕೊಳಗಾದರು. ಆಗ ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸ್ ಕಾನ್ಸ್‌ಟೇಬಲ್ ತೀವ್ರವಾಗಿ ಗಾಯಗೊಂಡಿದ್ದ ಸ್ನೇಹಿತೆಯನ್ನು ಆಸ್ಪತ್ರೆಗೆ ಸೇರಿಸಲು ಸಹಾಯ ಮಾಡಿದರು. ತಾವೇ ಆಸ್ಪತ್ರೆಗೂ ತೆರಳಿ, ಆಕೆಗೆ ಸಕಾಲಕ್ಕೆ ಚಿಕಿತ್ಸೆ ಸಿಗುವಂತೆ ನೋಡಿಕೊಂಡರು. ಆಕೆಯ ಬೆನ್ನುಹುರಿಗೆ ಬಲವಾದ ಏಟು ಬಿದ್ದಿತ್ತು. ಆದರೆ, ಸಕಾಲಿಕ ಚಿಕಿತ್ಸೆಯಿಂದ ಜೀವ ಉಳಿಯಿತು. ಅದಕ್ಕೆ ಕಾರಣವಾದವರು ಪೊಲೀಸ್ ಕಾನ್ಸ್‌ಟೇಬಲ್' ಎಂದಿದ್ದಾರೆ.

'ಅವರನ್ನು (ಪೊಲೀಸ್) ನಾನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದೆ. ತಮ್ಮ ಕರ್ತವ್ಯದ ವ್ಯಾಪ್ತಿಯಾಚೆಗೆ ಅವರು ಈ ಸಹಾಯ ಮಾಡಿದ್ದಾರೆ. ಸಾರ್ವಜನಿಕರ ಒಳಿತಿಗಾಗಿ ತುಡಿಯುವ ಮತ್ತು ದುಡಿಯುವ ಇಂತಹ ವ್ಯಕ್ತಿಗಳನ್ನು ಕಂಡಾಗ ಕೃತಜ್ಞತೆ ಸಲ್ಲಿಸುವುದನ್ನು ಯಾರೂ ಮರೆಯಬಾರದು. ಕೆಲವರಂತೂ ತಮ್ಮದೇ ಆದ ರೀತಿಯಲ್ಲಿ ಶಾಂತವಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಲೇ ಇರುತ್ತಾರೆ' ಎಂದು ಸಚಿನ್ ಬರೆದಿದ್ದಾರೆ.

'ಭಾರತದಾದ್ಯಂತ ಇರುವ ಸಂಚಾರ ಪೊಲೀಸರ ಕಾರ್ಯತತ್ಪರತೆಯನ್ನು ಅಭಿನಂದಿಸುತ್ತೇನೆ. ಜನರ ಸುರಕ್ಷತೆಗಾಗಿ ಅವರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಸಾರ್ವಜನಿಕರು, ವಾಹನ ಸಂಚಾರರು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಪೊಲೀಸರನ್ನು ಗೌರವಿಸಿ' ಎಂದು ಬ್ಯಾಟಿಂಗ್ ಚಾಂಪಿಯನ್ ಉಲ್ಲೇಖಿಸಿದ್ದಾರೆ.

ಸಚಿನ್ ತೆಂಡೂಲ್ಕರ್

### ಬೆಂಗಳೂರಿನಲ್ಲಿರುವ ಎನ್‌ಸಿಎ ಪುನಶ್ಚೇತನ ಶಿಬಿರಕ್ಕೆ ಜಡೇಜ

# ಯುವ ಆಟಗಾರರಿಗೆ ರೋಹಿತ್ 'ಪಾಠ'

ಬೆಂಗಳೂರು: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ 19 ವರ್ಷದೊಳಗಿನ ಭಾರತ ತಂಡದ ಆಟಗಾರರ ಸಂತಸಕ್ಕೆ ಪಾರವೇ ಇರಲಿಲ್ಲ.

ಭಾರತ ಸೀಮಿತ ಓವರ್‌ಗಳ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರೊಂದಿಗೆ ಒಂದಷ್ಟು ಸಮಯ ಕಳೆಯಲು ಸಿಕ್ಕಿದ್ದು ಅವರ ಆನಂದಕ್ಕೆ ಕಾರಣವಾಗಿತ್ತು.

ಸ್ನಾಯುಸೆಳೆತದಿಂದ ಬಳಲಿರುವ ರೋಹಿತ್ ಅವರನ್ನು ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟೆಸ್ಟ್ ಸರಣಿಯಿಂದ ಕೈಬಿಡಲಾಗಿತ್ತು. ಈಚೆಗೆ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಗಾಯಗೊಂಡಿದ್ದ ಜಡೇಜ ಕೂಡ ಚಿಕಿತ್ಸೆಯಲ್ಲಿದ್ದಾರೆ. ಇಬ್ಬರೂ ಶುಕ್ರವಾರ ಬೆಂಗಳೂರಿನ ಎನ್‌ಸಿಎಯಲ್ಲಿ ಪುನಶ್ಚೇತನ ಶಿಬಿರಕ್ಕೆ ಸೇರ್ಪಡೆಯಾಗಿದ್ದಾರೆ.

'ತಮ್ಮ ಆರೈಕೆಯ ಸಮಯದ ಬಹುತೇಕ ಭಾಗವನ್ನು ರೋಹಿತ್ ಅವರು 19 ವರ್ಷದೊಳಗಿನ ತಂಡದ ಆಟಗಾರರೊಂದಿಗೆ ಕಳೆದರು. ಯುವ ಆಟಗಾರರಿಗೆ ಸಲಹೆಗಳನ್ನು ನೀಡಿದರು' ಎಂದು ಬಿಸಿಸಿಐ ಟ್ವೀಟ್ ಮಾಡಿದೆ.

19 ವರ್ಷದೊಳಗಿನವರ ತಂಡದ ನಾಯಕ ಯಶ್ ಧುಳ್ ಕೂಡ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ರೋಹಿತ್ ಮತ್ತು ಜಡೇಜ ಅವರೊಂದಿಗೆ ಮಾತನಾಡುತ್ತಿರುವ ಚಿತ್ರಗಳನ್ನು ಹಾಕಿಕೊಂಡಿದ್ದಾರೆ.

ಇದೇ 23ರಿಂದ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಯಶ್ ಧುಳ್ ಬಳಗವು ಆಡಲಿದೆ. ಅದಕ್ಕಾಗಿ ಪೂರ್ವಭಾವಿ ತರಬೇತಿಗಾಗಿ ಎನ್‌ಸಿಎನಲ್ಲಿದೆ.

19 ವರ್ಷದೊಳಗಿನ ಭಾರತ ತಂಡದ ಆಟಗಾರರಿಗೆ ಸಲಹೆ ನೀಡಿದ ರೋಹಿತ್ ಶರ್ಮಾ

# ಉದ್ದೀಪನ ಮದ್ದು ಸೇವನೆ ತಡೆ: ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಭಾರತದ ಕ್ರೀಡಾಕ್ಷೇತ್ರದಲ್ಲಿ ಉದ್ದೀಪನ ಮದ್ದು ಸೇವನೆಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತಡೆಯಲು ರೂಪಿಸಲಾಗಿದೆಯೆನ್ನಲಾದ ನೂತನ ಮಸೂದೆಯನ್ನು ಶುಕ್ರವಾರ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಲೋಕಸಭೆಯಲ್ಲಿ ಮಂಡಿಸಿದರು.

ಲಖೀಂಪುರ ಖೇರಿ ಪ್ರಕರಣದ ಕುರಿತು ನಡೆದಿದ್ದ ಗೊಂದಲ, ಮಾತಿನ ಚಕಮಕಿಯ ಸಂದರ್ಭದಲ್ಲಿಯೇ ಠಾಕೂರ್ ಮಸೂದೆಯನ್ನು ಮಂಡಿಸಿದರು. 'ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ), ರಾಷ್ಟ್ರೀಯ ಉದ್ದೀಪನ ಮದ್ದು ಪರೀಕ್ಷೆ ಪ್ರಯೋಗಾಲಯ (ಎನ್‌ಡಿಟಿಎಲ್) ಮತ್ತು ಇನ್ನಿತರ ಮದ್ದು ಪರೀಕ್ಷಾ ಪ್ರಯೋಗಾಲಯಗಳ ಕಾರ್ಯಕ್ಷಮತೆಯನ್ನು ವೃದ್ಧಿಸುವ ಕ್ರಮಗಳನ್ನು ಜಾರಿಗೊಳಿಸುವ ಉದ್ದೇಶ ಈ ಮಸೂದೆಯಲ್ಲಿದೆ. ದೇಶದಲ್ಲಿ ಮದ್ದು ಸೇವನೆ ಪ್ರಕರಣಗಳನ್ನು ತಡೆಯುವ ಬಗ್ಗೆ ಹೆಚ್ಚು ಕಾರ್ಯಕ್ರಮ ರೂಪಿಸಿ, ಕ್ರೀಡಾಕ್ಷೇತ್ರವನ್ನು ಸದೃಢಗೊಳಿಸುವುದು ಪ್ರಮುಖ ಗುರಿ' ಎಂದು ಠಾಕೂರ್ ಹೇಳಿದ್ದಾರೆ.

ಇದಕ್ಕೂ ಮುನ್ನ ನಾಡಾ ಅಧಿಕಾರಿಗಳಿಗೆ ಉದ್ದೀಪನ ಮದ್ದು ಸೇವನೆ ಪತ್ತೆ ಹಚ್ಚಲು ದಾಳಿ ನಡೆಸುವ ಅಧಿಕಾರ ಇರಲಿಲ್ಲ. ಆದರೆ ಈ ಮಸೂದೆ ಅಂಗೀಕಾರವಾದರೆ ದಾಳಿ ಮಾಡುವ ಅಧಿಕಾರ ಸಿಗಲಿದೆ.

'ಉದ್ದೀಪನ ಮದ್ದು ತಡೆ ನಿಯಮ ಉಲ್ಲಂಘನೆ ಕುರಿತು ದೂರು ಅಥವಾ ಅನುಮಾನ ಬಂದಾಗ ದಾಳಿ ಮಾಡಿ ಮುಂದಿನ ಕ್ರಮ ಜರುಗಿಸು ಅಧಿಕಾರ ನಾಡಾದಿಂದ ಅಧಿಕೃತ ಮಾನ್ಯತೆ ಪಡೆದ ವ್ಯಕ್ತಿಗೆ ಇರುತ್ತದೆ' ಎಂದು ಠಾಕೂರ್ ಹೇಳಿದ್ದಾರೆ.

ನಾಡಾದ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿ ಸದೃಢಗೊಳಿಸಬೇಕು ಎಂದು ಬಹಳಷ್ಟು ಕ್ರೀಡಾ ಫೆಡರೇಷನ್‌ಗಳು ಮತ್ತು ಮಾಜಿ ಅಥ್ಲೀಟ್‌ಗಳು ಆಗ್ರಹಿಸಿದ್ದರು.

ಅನುರಾಗ್ ಠಾಕೂರ್

# ಐಎಸ್‌ಎಲ್: ನಾರ್ತ್‌ಈಸ್ಟ್ ಜಯಭೇರಿ

ಫಟೋರ್ಡಾ (ಪಿಟಿಐ): ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವನ್ನು 2–0ಯಿಂದ ಮಣಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪರ ವಿ.ಪಿ.ಸುಹೈರ್ (61ನೇ ನಿಮಿಷ) ಮತ್ತು ಪ್ಯಾಟ್ರಿಕ್ ಫ್ಲಾಟ್‌ಮನ್ (68ನೇ ನಿಮಿಷ) ಗೋಲು ಗಳಿಸಿದರು.

ಶನಿವಾರ ಎರಡು ಪಂದ್ಯಗಳು ನಡೆಯಲಿವೆ. ವಾಸ್ಕೋದ ತಿಲಕ್ ಮೈದಾನ ಕ್ರೀಡಾಂಗಣದಲ್ಲಿ ರಾತ್ರಿ 7.30ಕ್ಕೆ ನಡೆಯುವ ಮೊದಲ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ–ಒಡಿಶಾ ಎಫ್‌ಸಿ ಸೆಣಸಲಿದ್ದರೆ, ರಾತ್ರಿ 9.30ಕ್ಕೆ ಬ್ಯಾಂಬೊಲಿಮ್‌ನಲ್ಲಿ ಆರಂಭವಾಗುವ ಪಂದ್ಯದಲ್ಲಿ ಎಫ್‌ಸಿ ಗೋವಾ– ಹೈದರಾಬಾದ್ ಎಫ್‌ಸಿ ಆಡಲಿವೆ.

### ಆರಿಫ್ ನಿಧನ

ಬೆಂಗಳೂರು: ಬ್ಯಾಸ್ಕೆಟ್‌ಬಾಲ್ ಮಾಜಿ ಆಟಗಾರ ನಾಸೆರ್ ಆರಿಫ್ (65) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ.

ಯಂಗ್ ಒರಾಯನ್ಸ್ ಮತ್ತು ಐಟಿಐ ಸ್ಪೋರ್ಟ್ಸ್ ಕ್ಲಬ್ ತಂಡಗಳನ್ನು ಆರಿಫ್ ಪ್ರತಿನಿಧಿಸಿದ್ದರು. ಆರಿಫ್, ಕರ್ನಾಟಕ ತಂಡಗಳ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

# ಮೆಸ್ಸಿಯ ಆಗಸದೆತ್ತರ ಕಲಾಕೃತಿ

ರೊಸಾರಿಯೊ (ಪಿಟಿಐ): ಫುಟ್‌ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿಯ 69 ಮೀಟರ್ಸ್ ಎತ್ತರದ ವರ್ಣಚಿತ್ರವನ್ನು ಅವರ ತವರೂರು ರೊಸಾರಿಯೊದಲ್ಲಿ ಅಳವಡಿಸಲಾಗಿದೆ.

ವಿಶ್ವದ ಅಗ್ರಮಾನ್ಯ ಫುಟ್‌ಬಾಲ್ ತಾರೆಯರಲ್ಲಿ ಒಬ್ಬರಾಗಿರುವ ಅರ್ಜೆಂಟಿನಾದ ಮೆಸ್ಸಿಗೆ ತವರೂರಿನ ಅಭಿಮಾನಿಗಳು ಈ ಗೌರವ ನೀಡಿದ್ದಾರೆ. ಸ್ಥಳೀಯ ಕಲಾವಿದರಾದ ಮಾರ್ಲಿನ್ ಝುರೈಗಾ ವೈ ಲಿಸಾಂಡ್ರೊ ಆರ್ಟಿಗಾ ಈ ಬೃಹತ್ ಕಲಾಕೃತಿಯನ್ನು ರಚಿಸಿದ್ದಾರೆ.

ತಾವು ನಾಯಕರಾಗಿರುವ ಅರ್ಜೆಂಟಿನಾ ತಂಡದ ಪೋಷಾಕು ಧರಿಸಿರುವ ಮೆಸ್ಸಿಯ ಚಿತ್ರ ಇದಾಗಿದೆ. ಎದೆಯ ಮೇಲೆ ಅವರ ಕ್ರಮಾಂಕ 10 ಮುದ್ರಿತವಾಗಿದೆ. ಸೂರ್ಯನ ಪ್ರಕಾಶಮಾನ ಕಿರಣಗಳ ಪ್ರಭಾವಳಿ ಆವರಿಸಿರುವ ಚಿತ್ರ ಇದು.

'ಅನ್ಯಗ್ರಹದವರು, ಆದರೂ ನಮ್ಮ ನಗರದವರು' ಎಂಬ ಗೀಚು ಬರಹವೂ ಈ ಚಿತ್ರದ ಮೇಲೆ ಇದೆ. ಫುಟ್‌ಬಾಲ್‌ನಲ್ಲಿ ಅವರು ಸಾಧಿಸಿದ ದಾಖಲೆ ಮತ್ತು ಎತ್ತರವು ಈ ಗ್ರಹದಲ್ಲಿ ಜನಿಸಿದವರಿಂದ ಸಾಧ್ಯವಿಲ್ಲ ಎಂಬರ್ಥದ ಒಕ್ಕಣೆ ಇದಾಗಿದೆ. ಈ ಕಲಾಕೃತಿಯನ್ನು ನಗರದ ಬಹಳಷ್ಟು ಕಟ್ಟಡಗಳ ಮೇಲೆ ಅಳವಡಿಸಲು ಯೋಜನೆ ರೂಪಿಸಲಾಗಿದೆ. ಚಿತ್ರದ ಅನಾವರಣ ಕಾರ್ಯಕ್ರಮಕ್ಕೆ ಸ್ಥಳೀಯ ಶಾಲೆಗಳ ಮಕ್ಕಳನ್ನು ಆಹ್ವಾನಿಸಲಾಗಿತ್ತು.

ಅರ್ಜೆಂಟಿನಾದ ರೊಸಾರಿಯೊದಲ್ಲಿ ಕಟ್ಟಡವೊಂದಕ್ಕೆ ಅಳವಡಿಸಲಾಗಿರುವ ಫುಟ್‌ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿಯ ಕಲಾಕೃತಿ –ಎಎಫ್‌ಪಿ ಚಿತ್ರ

## ಸಂಕ್ಷಿಪ್ತ ಸುದ್ದಿ

### ಐಪಿಎಲ್: ಲಖನೌ ತಂಡಕ್ಕೆ ಫ್ಲವರ್ ಮುಖ್ಯ ಕೋಚ್

ಕೋಲ್ಕತ್ತ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಲಖನೌ ಫ್ರ್ಯಾಂಚೈಸಿಯ ಮುಖ್ಯ ಕೋಚ್ ಹುದ್ದೆಗೆ ಜಿಂಬಾಬ್ವೆಯ ಆ್ಯಂಡಿ ಫ್ಲವರ್ ಅವರನ್ನು ನೇಮಕ ಮಾಡಲಾಗಿದೆ.

ಕಳೆದೆರಡು ಋತುಗಳಲ್ಲಿ ಫ್ಲವರ್ ಪಂಜಾಬ್ ಕಿಂಗ್ಸ್ ತಂಡದಲ್ಲಿ ಸಹಾಯಕ ಕೋಚ್ ಆಗಿದ್ದರು. ಪಂಜಾಬ್ ತಂಡದ ನಾಯಕರಾಗಿದ್ದ ಕೆ.ಎಲ್. ರಾಹುಲ್ ಕೂಡ ಸಂಜೀವ್ ಗೊಯೆಂಕಾ ಒಡೆತನದ ಫ್ರ್ಯಾಂಚೈಸಿಗೆ ಸೇರ್ಪಡೆಯಾಗುವ ಸಾಧ್ಯತೆ ಇದೆ.

ಆ್ಯಂಡಿ ಫ್ಲವರ್ –ಟ್ವಿಟರ್ ಚಿತ್ರ

### ಎಂಸಿಎ ಮ್ಯೂಸಿಯಂನಲ್ಲಿ 'ದಶ ವಿಕೆಟ್' ಚೆಂಡು

ಮುಂಬೈ (ಪಿಟಿಐ): ನ್ಯೂಜಿಲೆಂಡ್ ತಂಡದ ಸ್ಪಿನ್ ಬೌಲರ್ ಎಜಾಜ್ ಪಟೇಲ್ ಈಚೆಗೆ ವಾಂಖೆಡೆ ಕ್ರೀಡಾಂಗಣದಲ್ಲಿ 10 ವಿಕೆಟ್ ಪಡೆದ ಚೆಂಡನ್ನು ಮುಂಬೈ ಕ್ರಿಕೆಟ್ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿ ವಿಶೇಷ ಸ್ಥಾನಮಾನದೊಂದಿಗೆ ಇರಿಸಲಾಗುವುದು ಎಂದು ಅಧ್ಯಕ್ಷ ವಿಜಯ್ ಪಾಟೀಲ ತಿಳಿಸಿದ್ದಾರೆ.

'ಪಟೇಲ್ ಅವರ ಸಾಧನೆಯು ಅಮೋಘವಾದದ್ದು. ವಾಂಖೆಡೆ ಕ್ರೀಡಾಂಗಣದ ಗರಿಮೆಯಾಗಿ ಈ ಸಾಧನೆಯು ಸೇರ್ಪಡೆಗೊಂಡಿದೆ. ಪ್ರೈಡ್ ಆಫ್ ದ ಪ್ಲೇಸ್ ಗೌರವದೊಂದಿಗೆ ಆ ಚೆಂಡನ್ನು ಇಲ್ಲಿ ಕಾಪಿಡಲಾಗುವುದು. ಭವಿಷ್ಯದ ಆಟಗಾರರಿಗೆ ಇದು ಪ್ರೇರಣೆಯಾಗಿರಲಿದೆ' ಎಂದು ತಿಳಿಸಿದ್ದಾರೆ. ಜಿಮ್ ಲೇಖರ್ ಮತ್ತು ಅನಿಲ್ ಕುಂಬ್ಳೆಯವರ ನಂತರ ಇನಿಂಗ್ಸ್‌ವೊಂದರಲ್ಲಿ ಹತ್ತು ವಿಕೆಟ್ ಸಾಧನೆ ಮಾಡಿದ ಬೌಲರ್ ಎಂಬ ಹೆಗ್ಗಳಿಕೆಗೆ ಪಟೇಲ್ ಪಾತ್ರರಾಗಿದ್ದಾರೆ.

ಪಟೇಲ್

# ವೇಟ್‌ಲಿಫ್ಟಿಂಗ್: ಪೂರ್ಣಿಮಾಗೆ ಚಿನ್ನ

ಪೂರ್ಣಿಮಾ ಪಾಂಡೆ– ಫೇಸ್‌ಬುಕ್ ಚಿತ್ರ

ತಾಷ್ಕೆಂಟ್ (ಪಿಟಿಐ): ಭಾರತದ ಪೂರ್ಣಿಮಾ ಪಾಂಡೆ ಅವರು ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಮಹಿಳೆಯರ 87+ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು, ಪದಕದ ಹಾದಿಯಲ್ಲಿ ಎಂಟು ರಾಷ್ಟ್ರೀಯ ದಾಖಲೆಗಳನ್ನು ಬರೆದರು.

ಪೂರ್ಣಿಮಾ, ಒಟ್ಟು 229 ಕೆ.ಜಿ (102 ಕೆ.ಜಿ. ಸ್ನ್ಯಾಚ್ ಹಾಗೂ 127 ಕೆ.ಜಿ. ಕ್ಲೀನ್ ಆ್ಯಂಡ್ ಜರ್ಕ್) ಭಾರ ಎತ್ತುವ ಮೂಲಕ ಮುಂದಿನ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ ನೇರ ಅರ್ಹತೆ ಗಿಟ್ಟಿಸಿಕೊಂಡರು.

ಸ್ನ್ಯಾಚ್ ವಿಭಾಗದಲ್ಲಿ ಎರಡು ಮತ್ತು ಕ್ಲೀನ್ ಹಾಗೂ ಜರ್ಕ್ ವಿಭಾಗದಲ್ಲಿ ತಲಾ ಮೂರು ರಾಷ್ಟ್ರೀಯ ದಾಖಲೆಗಳನ್ನು ಪೂರ್ಣಿಮಾ ಬರೆದರು.

ಪುರುಷರ 109 ಕೆ.ಜಿ ವಿಭಾಗದಲ್ಲಿ 348 ಕೆ.ಜಿ (161 ಕೆ.ಜಿ. + 187 ಕೆ.ಜಿ.) ಸಾಧನೆ ಮಾಡಿದ ಲವ್‌ಪ್ರೀತ್ ಸಿಂಗ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಏಷ್ಯನ್ ಯೂತ್ ಹಾಗೂ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲವ್‌ಪ್ರೀತ್, ಸ್ನ್ಯಾಚ್ ವಿಭಾಗದಲ್ಲಿ ಮೂರು ಮತ್ತು ಕ್ಲೀನ್ ಹಾಗೂ ಜರ್ಕ್ ವಿಭಾಗದಲ್ಲಿ ತಲಾ ಒಂದು ದಾಖಲೆ ಬರೆದರು. ಮಹಿಳೆಯರ 87 ಕೆ.ಜಿ ವಿಭಾಗದಲ್ಲಿ ಅನುರಾಧಾ ಪವುನ್‌ರಾಜ್ ಒಟ್ಟು 195 ಕೆ.ಜಿ. (90 ಕೆ.ಜಿ. + 105 ಕೆ.ಜಿ.) ಭಾರ ಎತ್ತಿ ಕಂಚಿನ ಪದಕ ಗೆದ್ದರು.

# ಟಿಟಿ: ಹೆಂಡ್ ಜಾಜಾ ಮಣಿಸಿದ ಹನ್ಸಿನಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಅತಿ ಕಿರಿಯ ಅಥ್ಲೀಟ್ ಹೆಂಡ್ ಜಾಜಾ ಅವರನ್ನು ಮಣಿಸಿದ ಭಾರತದ ಹನ್ಸಿನಿ ಮದನ್ ರಾಜನ್ ಅವರು ಹೋಪ್ಸ್ ಆ್ಯಂಡ್ ಚಾಲೆಂಜ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆದ ಟೂರ್ನಿಯ 12 ವರ್ಷದೊಳಗಿನವರ ವಿಭಾಗದಲ್ಲಿ ಹನ್ಸಿನಿ 11-6, 11-8, 6-11, 11-6ರಿಂದ ಸಿರಿಯಾದ ಜಾಜಾ ಅವರನ್ನು ಮಣಿಸಿದರು.

ಹನ್ಸಿನಿ ಕೆಡೆಟ್ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ.

## ಬೆಂಗಳೂರು ರೇಸ್

### ಲೇಕ್ ಟಾಹೊ ಗೆಲ್ಲುವ ನಿರೀಕ್ಷೆ

ಕರ್ನಾಟಕ ಪೋಲಿಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲೇಕ್ ಟಾಹೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಪ್ರೈಮ್ ಸ್ಟಾರ್ 11, ಫ್ಲೋರೆನ್ಸಿಯಾ 3, ರಾ ಗೋಲ್ಡ್ 1
2ನೇ ರೇಸ್: ಮಿಲ್‌ಬ್ರೂಕ್ 8, ಸ್ಟ್ರಿಬ್ಲಿಂಗ್ ಹಾಪರ್ 3, ಅಹರ್ನೆ 1
3ನೇ ರೇಸ್: ರೂಲ್ ಆಫ್ ಎಂಗೇಜ್‌ಮೆಂಟ್ 7, ಆಲ್‌ಅಬೌಟ್‌ಹರ್ 3, ತ್ರೀ ಏಸಸ್ 2
4ನೇ ರೇಸ್: ಶಾನೇ 5, ಡೆಬೊನೇರ್ 1, ಸ್ಟ್ರೈಕಿಂಗ್ ಮೆಲೋಡಿ 10
5ನೇ ರೇಸ್: ಆಂಟೀಸ್ 2, ಅಲ್ಕಮಾಖ್ 4
6ನೇ ರೇಸ್: ಲೇಕ್ ಟಾಹೊ 1, ಬೆಲ್ಲಾಟರ್ 2, ಎಲೆಕ್ಟ್ರಾ 4
7ನೇ ರೇಸ್: ಥೌಸಂಡ್ ವರ್ಡ್ಸ್ 1, ದಿ ಇನ್‌ಹೆರಿಟರ್ 8, ಓಷನ್ ಡ್ಯೂನ್ಸ್ 3
8ನೇ ರೇಸ್: ಜು ಜು ಜೆಸ್ಟ್ 7, ಸದರ್ನ್ ಪವರ್ 3, ಕಮಾಂಡ್‌ಪೋಸ್ಟ್ 4.

ಉತ್ತಮ ಬೆಟ್: ಮಿಲ್‌ಬ್ರೂಕ್

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

# ಡಬ್ಲ್ಯುಎಂಎಸ್‌ಸಿ: ಸ್ಥಾನ ಕಳೆದುಕೊಂಡ ಭಾರತ

ನವದೆಹಲಿ (ಪಿಟಿಐ) ಮೂರು ದಶಕಗಳ ನಂತರ ಮೊದಲ ಬಾರಿಗೆ ಭಾರತವು ಎಫ್‌ಐಎಯ ವಿಶ್ವ ಮೋಟಾರ್ ಸ್ಪೋರ್ಟ್ ಕೌನ್ಸಿಲ್‌ನಲ್ಲಿ (ಡಬ್ಲ್ಯುಎಂಎಸ್‌ಸಿ) ನಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡಿದೆ.

ನಾಮಸೂಚಕ ಸದಸ್ಯರಿಗೆ ಮೀಸಲಾಗಿದ್ದ ಡಬ್ಲ್ಯುಎಂಎಸ್‌ಸಿ 14 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಗೌತಮ್ ಸಿಂಘಾನಿಯಾ ಸೋತಿದ್ದಾರೆ. ಮೊಹಮ್ಮದ್ ಬೆನ್ ಸುಲಯೆಂ ಅವರನ್ನು ಎಫ್‌ಐಎ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

## ಡ್ರೀಮ್ ಯುನೈಟೆಡ್ ಎಫ್‌ಸಿ ಜಯಭೇರಿ

ಬೆಂಗಳೂರು: ನಿಮಾ ಲೆಪ್‌ಚಾ ಅವರು ಪೆನಾಲ್ಟಿ ಅವಕಾಶದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು ಜಯ ಗಳಿಸಿತು. ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 1–0ಯಿಂದ ಎಡಿಇ ಎಫ್‌ಸಿ ತಂಡವನ್ನು ಮಣಿಸಿತು.

ನಿಮಾ 88ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಇನ್ನೊಂದು ಪಂದ್ಯದಲ್ಲಿ ಯಂಗ್ ಚಾಲೆಂಜರ್ಸ್ ಎಫ್‌ಸಿ 1–0ಯಿಂದ ಕೊಡಗು ಎಫ್‌ಸಿಯನ್ನು ಸೋಲಿಸಿತು.

# ಐಒಎ ಸಭೆ ಸ್ಥಳಾಂತರ

ನವದೆಹಲಿ (ಪಿಟಿಐ): ಇದೇ 19ರಂದು ಗುವಾಹಟಿಯಲ್ಲಿ ಆಯೋಜಿಸಲಾಗಿರುವ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು ರಾಷ್ಟ್ರ ರಾಜಧಾನಿಗೆ ಸ್ಥಳಾಂತರಿಸುವಂತೆ ದೆಹಲಿ ಹೈಕೋರ್ಟ್ ಶುಕ್ರವಾರ ಸೂಚನೆ ನೀಡಿದೆ.

ಇದರಿಂದಾಗಿ ಸಭೆಯನ್ನು ನಿಗದಿತ ದಿನಾಂಕದಂದು ನವದೆಹಲಿಯ ಐಒಎ ಭವನದಲ್ಲಿ ಆಯೋಜಿಸಲಾಗುತ್ತಿದೆ.

ಐಒಎ ಚುನಾವಣೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ದೂರಿನ ವಿಚಾರಣೆಯ ಸಂದರ್ಭದಲ್ಲಿ ಹೈಕೋರ್ಟ್‌ನ ವಿಶೇಷ ಪೀಠದ ನ್ಯಾಯಮೂರ್ತಿ ಮನಮೋಹನ್ ಮತ್ತು ನಜ್ಮಿ ವಜೀರಿ ಅವರು ಈ ನಿರ್ದೇಶನ ನೀಡಿದ್ದಾರೆ. ಮುಂದಿನ ವಿಚಾರಣೆ ಯನ್ನು ಇದೇ 23ರಂದು ಪೀಠವು ನಡೆಸಲಿದೆ.

MARUTI SUZUKI ARENA
ವಿನಿಮಯ ಮಾಡಿಕೊಳ್ಳಿ. ವರ್ಧಿಸಿಕೊಳ್ಳಿ. ಆನಂದಿಸಿ.
ಮಾರುತಿ ಸುಜುಕಿಯೊಂದಿಗೆ ಲೀಡಿಂಗ್-ಎಜ್ ಟೆಕ್ನಾಲಜಿಗೆ ಅಪ್‌ಗ್ರೇಡ್ ಆಗಿ, ಆಕರ್ಷಕ ಎಕ್ಸ್‌ಚೇಂಜ್ ಕೊಡುಗೆಗಳನ್ನು ಒದಗಿಸಲಾಗುತ್ತಿದೆ.

ALTO SAVE UP TO ₹52 000*
WAGONR SAVE UP TO ₹27 000*
CELERIO SAVE UP TO ₹15 000*

ALTO WAGONR CELERIO

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, PH: 8884442299. VARUN MOTORS: MALLESHWARAM, HEBBAL, 78991 00200, HESARAGHATTA: 7338286713. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069, AECS LAYOUT: 9742289865. KALYANI: MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. VARTHUR : 9900077265, CHANNAPATNA : 9900599934, ITI LAYOUT: 9740000211, RBI LAYOUT: 9740000226. KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077, VIDYARANAYAPURA : 9900591346. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199, KASAVANAHALLI: 9686529082. RNS MOTORS: YESHWANTHPUR, BOMMANAHALLI, NELAMANGALA, PH: 9538965804, BEGUR MAIN ROAD: 7259023506. HEBBAL: 9606457024, TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. The terms and conditions are subject to change without any prior notice. Accessories and features shown in the pictures may not be part of the standard equipment and may vary according to the variant. Images are for illustration purpose only. Colors shown may vary from actual body colors due to printing on paper. Black Glass Shade on the vehicle is due to the lighting effect. Offers vary across variants. Maruti Suzuki India Limited reserves the right to discontinue offers without notice. Above offers are valid till 31st December, 2021.

Advt

KPSC KAS ಮೆಗಾ ಸ್ಕಾಲರ್ಷಿಪ್ ಡ್ರೈವ್ (18 -19 ಡಿಸೆಂಬರ್)

ಕರ್ನಾಟಕ ಲೋಕಸೇವಾ ಆಯೋಗದ ಕರ್ನಾಟಕ ಆಡಳಿತ ಸೇವೆಗೆ (KPSC KAS) ಪ್ರವೇಶ ಪರೀಕ್ಷೆಯನ್ನು ಮುಂದಿನ ವರ್ಷದ ಆರಂಭದಲ್ಲಿ ನಡೆಸುವ ಸಾಧ್ಯತೆಯಿದೆ. ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿರುವುದರಿಂದ ಸ್ಪರ್ಧೆಯ ಕಠಿಣತೆ ತೀವ್ರವಾಗಿರುತ್ತದೆ.

ಆಲಿವ್‌ಬೋರ್ಡ್ (www.oliveboard.in), ಭಾರತದ ಅತ್ಯಂತ ವಿಶ್ವಾಸಾರ್ಹ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಾಥಮಿಕ ವೇದಿಕೆಯಾಗಿದ್ದು, 2021 ರ ಡಿಸೆಂಬರ್ 18 ಮತ್ತು 19 ರಂದು ಮೆಗಾ ಸ್ಕಾಲರ್ಷಿಪ್ ಡ್ರೈವ್ ಪ್ರಾರಂಭಿಸುತ್ತಿದೆ. KPSC KAS ಆಕಾಂಕ್ಷಿಗಳು ಪರೀಕ್ಷೆಯ ಮಾದರಿಯಲ್ಲಿ ಉಚಿತ ವಿದ್ಯಾರ್ಥಿವೇತನ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

Scan and download App

ವಿದ್ಯಾರ್ಥಿವೇತನ ಪರೀಕ್ಷೆಯನ್ನು ತೆಗೆದುಕೊಳ್ಳುವ ಪ್ರತಿಯೊಬ್ಬರೂ ಅವರ ಅಂಕಗಳ ಆಧಾರದ ಮೇಲೆ ಆಲಿವ್‌ಬೋರ್ಡ್‌ನ KPSC KAS ಕೋರ್ಸ್ ಗಳ ಮೇಲೆ ವಿದ್ಯಾರ್ಥಿವೇತನವನ್ನು ಪಡೆಯುವ ಭರವಸೆ ನೀಡುತ್ತೇವೆ.

ಸ್ಕಾಲರ್ಷಿಪ್ ಪರೀಕ್ಷೆಗೆ ಹಾಜರಾಗಲು, ಆಕಾಂಕ್ಷಿಗಳು www.oliveboard.in/kas-exam/ ನಲ್ಲಿ ನೋಂದಾಯಿಸಿಕೊಳ್ಳಬೇಕು (ಅಥವಾ) QR ಕೋಡ್ ಮೂಲಕ ಆಲಿವ್‌ಬೋರ್ಡ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಬೇಕು.

ಎಷ್ಟೇ ಹಳೆಯ ಉದರವ್ಯಾದಿ ಸಮಸ್ಯೆಗಳಿದ್ದರೂ ಎಲ್ಲದಕ್ಕೂ ಅತ್ಯಂತ ಪರಿಣಾಮಕಾರಿ ಔಷಧಿ.
ಹೊಟ್ಟೆನೋವು, ಅಸಿಡಿಟಿ, ಗ್ಯಾಸ್ಟ್ರಬಲ್
ಅಮೃತ ಬಿಂದು

ಹೊಟ್ಟೆನೋವು, ಗ್ಯಾಸ್ ಟ್ರಬಲ್, ಆ್ಯಸಿಡಿಟಿ, ಅಜೀರ್ಣ, ವಾಂತಿ, ಎದೆ ಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನುನೋವು, ಕೆಲಸದಲ್ಲಿ ನಿರಾಸಕ್ತಿ ಎಲ್ಲ ತರದ ಉದರ ವ್ಯಾದಿ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯ ಕುಟುಂಬದ ಪರಿಣಾಮಕಾರಿ ದಿವ್ಯ ಔಷಧಿ ಅಮೃತ ಬಿಂದು. ಅಮೃತ ಬಿಂದುವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ.

ದೂ. 8762226000
aj_healthcare@yahoo.co.in
ಎಲ್ಲಾ ಮೆಡಿಕಲ್ ಅಂಗಡಿಗಳಲ್ಲಿ ದೊರೆಯುತ್ತದೆ.

8 ಪರಿಣಾಮಕಾರಿ ಆಯುರ್ವೇದಿಕ ತೈಲಗಳ ಮಿಶ್ರಣ

WORLD'S GREATEST BRANDS 2015-16 IUA
Dr. Juneja's
ಡಾ.ಆರ್ಥೋ®
Ayurvedic Oil, Capsules, Spray & Ointment
NO. 1 BRAND INDIA 2014

1 ಜ್ಯೋತಿಷ್ಮತಿ ತೈಲ
ಉರಿಯೂತವನ್ನು ಪ್ರಚೋದಿಸುವ ಅಂಶಗಳನ್ನು ನಿವಾರಿಸಲು ಸಹಕಾರಿಯಾಗಿದೆ

2 ಗಂಧಪುರ ತೈಲ
ವಿವಿಧ ಕೀಲುಗಳ ನೋವು, ಸ್ನಾಯು ನೋವು ಮತ್ತು ರ್ಹುಮಾಟಿಸ್ಮ್ ನಿವಾರಣೆಗೆ ಉಪಯುಕ್ತ

3 ನಿರಗುಂದಿ ತೈಲ
ನ್ಯೂರಾಲ್ಜಿಯಾ, ಏಕ್ಸ್ ಮತ್ತು ನೋವುಗಳ ನಿವಾರಣೆಗೆ ಉಪಯುಕ್ತವಾಗಿದೆ

4 ಟರ್ಪೀನ್ ತೈಲ
ಕೀಲುಗಳ ನೋವು, ಊತ ಮತ್ತು ನೋವಿಗೆ ಅತ್ಯುತ್ತಮ ಪರ್ಯಾಯ

5 ಪುದಿನಾ ತೈಲ
ದೀರ್ಘಕಾಲಿನ ನೋವುಗಳ ನಿವಾರಣೆಗೆ ಅತ್ಯಂತ ಸಹಕಾರಿಯಾಗಿದೆ

6 ಕರ್ಪೂರ ತೈಲ
ವಿಭಿನ್ನ ಕೀಲುಗಳ ನೋವು ಮತ್ತು ನಿರಂತರ ನೋವುಗಳ ನಿವಾರಣೆಗೆ ಬಹು ಉಪಯುಕ್ತ

7 ತಿಲ ತೈಲ
ಸ್ನಾಯುಗಳು, ಕೀಲುಗಳು ಮತ್ತು ಭುಜಗಳಿಗ ಸಂಬಂಧಿತ ನೋವುಗಳನ್ನು ಕಡಿಮೆಗೊಳಿಸುತ್ತದೆ

8 ಅಲಸಿ ತೈಲ
ಕೀಲು ಮತ್ತು ಸ್ನಾಯುಗಳಲ್ಲಿನ ಉರಿಯೂತವನ್ನು ನಿವಾರಿಸುತ್ತದೆ

BUY NOW
24x7 Helpline: 7876977777 | www.drorthooil.com

ಸುಮಾರು 8 ಆಯುರ್ವೇದಿಕ ತೈಲಗಳ ಸಮ್ಮಿಶ್ರಣದಿಂದ ಇದನ್ನು ತಯಾರಿಸಲಾಗಿದ್ದು, ಇದು ಕೀಲುಗಳ ಆಳಕ್ಕೆ ಇಳಿಯುವ ಜೊತೆಗೆ ಕೀಲುಗಳಲ್ಲಿನ ನೋವನ್ನು ಶಮನಗೊಳಿಸುತ್ತದೆ. ಇದರ ಆಯುರ್ವೇದಿಕ ಸ್ವರೂಪವು ದೀರ್ಘಕಾಲಿನ ಫಲಿತಾಂಶಗಳನ್ನು ನೀಡುತ್ತದೆಯೆ ಹೊರತು ತಾತ್ಕಾಲಿಕ ಫಲಿತಾಂಶಗಳನ್ನಲ್ಲ. ಇದೇ ರೀತಿಯ ಹೆಸರು ಮತ್ತು ಜಾಹೀರಾತುಗಳ ಬಗ್ಗೆ ಎಚ್ಚರದಿಂದಿರಿ

ಕೀಲುಗಳ ಮತ್ತು ಸ್ನಾಯುಗಳ ನೋವಿಗೆ ಅತ್ಯಂತ ಪ್ರಯೋಜನಕಾರಿ ಔಷಧ

ಆಯುರ್ವೇದಿಕ ಔಷಧಿ
ಚತುರ್ಭುಜ® ತೈಲ ಮತ್ತು ಟ್ಯಾಬ್ಲೆಟ್



ಕೀಲು ಮತ್ತು ಸ್ನಾಯುಗಳ ನೋವು, ಮಂಡಿ ನೋವು, ಸೊಂಟ ನೋವು, ತಲೆ ನೋವು, ಸೆಳೆತ, ಉಳುಕು, ಊತ, ಹಳೆಯ ಏಟಿನ ನೋವು, ಕತ್ತು ಸೆಳೆತ, ಮೀನಗಂಡ ನೋವು, ಭುಜದ ನೋವು, ಹಿಮ್ಮಡಿ ನೋವು, ಮಣಿಕಟ್ಟು ನೋವು, ನರಗಳಿಗೆ ಸಂಬಂಧಿತ ತೊಂದರೆಗಳು, ಶೀತದಿಂದ ಉಂಟಾಗುವ ನೋವು, ಹಳೆಯ ನೋವುಗಳಿಗೆ ಕೂಡ ಇದು ಪ್ರಯೋಜನಕಾರಿ.

ಬಳಸುವ ವಿಧಾನ : ಪ್ರತಿದಿನ ಮೂರು ಬಾರಿ 8–10 ಮಿ.ಲೀ. ತೈಲದಿಂದ 15–20 ನಿಮಿಷಗಳ ಕಾಲ ಮಾಲಿಶ್ ಮಾಡಿರಿ, ತೈಲವನ್ನು ಧಾರಾಳವಾಗಿ ಬಳಸಲು ಹಿಂಜರಿಯದಿರಿ. ನೋವುಗಳು ತ್ವಚೆಯ ಮೇಲ್ಭಾಗದಲ್ಲಿ ಇರುವುದಿಲ್ಲ, ಮೂಳೆ ಮತ್ತು ಸ್ನಾಯುಗಳಲ್ಲಿ ಹುದುಗಿರುತ್ತದೆ. ಹೀಗಾಗಿ, ಸಾಕಷ್ಟು ಪ್ರಮಾಣದ ತೈಲದಿಂದ ಮಾಲಿಶ್ ಮಾಡುವುದರಿಂದ ತೈಲವು ಆಳಕ್ಕೆ ಇಳಿದು ಆರಾಮ ನೀಡುತ್ತದೆ. ಕಡಿಮೆ ತೈಲ ಬಳಸುವುದರಿಂದ ಆಳಕ್ಕೆ ತಲುಪುವುದಿಲ್ಲ. ಅಧಿಕ ಪರಿಣಾಮ ಪಡೆಯಲು ಚತುರ್ಭುಜ ತೈಲದ ಜೊತೆಗೆ ನಿಯಮಿತವಾಗಿ ಬೆಳಗ್ಗೆ 1 ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಕೂಡ ಸೇವಿಸಿರಿ. ನಿಯಮಿತವಾಗಿ ಉಪಯೋಗಿಸಿದ ಬಹುತೇಕ ರೋಗಿಗಳಿಗೆ ಸಾಕಷ್ಟು ಲಾಭವಾಗಿದೆ.

ಸೂಚನೆ: ಸಾರ್ವಜನಿಕರ ಪ್ರಯೋಜನಕ್ಕಾಗಿ ಈ ಮಾಹಿತಿ ನೀಡಲಾಗುತ್ತಿದ್ದು, ಕೀಲುಗಳ ನೋವಿನಿಂದ ಮುಕ್ತರಾಗಿರಿ.
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ.